ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ನಾವು ತಿನ್ನುವ ಆಹಾರದ ಮೂಲಕವೇ ಬೇಸಿಗೆಯ ಬೇಗೆಯನ್ನು ನಿವಾರಿಸಿಕೊಳ್ಳಬಹುದು

ಆಳ-ಅಗಲ
ಕತ್ತಲಿನ 'ಮಾಯಾಲೋಕ' ದಾರಿ ತಪ್ಪಿದ ಸುರಕ್ಷಾ ವ್ಯವಸ್ಥೆ

ರೇಷ್ಮೆಗೂಡು ಧಾರಣೆ ಹೆಚ್ಚಳ 10

ಎನ್‌ಇಪಿ: ಪ್ರಧಾನ್–ಡಿಎಂಕೆ ಜಟಾಪಟ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
74,115	22,460	₹90,580 (ಬೆಂಗಳೂರು)	₹1.02 ಲಕ್ಷ (ಬೆಂಗಳೂರು)	87.31

ವಿಧಾನಸಭೆಯಲ್ಲಿ ಪ್ರತಿಧ್ವನಿಸಿದ ಚಿನ್ನ ಕಳ್ಳಸಾಗಣೆ ಪ್ರಕರಣ • ಸಚಿವರ ಹೆಸರು ಬಹಿರಂಗಕ್ಕೆ ಒತ್ತಾಯ

ರನ್ಯಾ ನಂಟು: ಯಾರಿಗೆ ಉಂಟು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರಿ ಮೊತ್ತದ ಚಿನ್ನ ಕಳ್ಳಸಾಗಾಣಿಕೆ ಪ್ರಕರಣದಲ್ಲಿ ಬಂಧಿತರಾಗಿರುವ ನಟಿ ರನ್ಯಾ ರಾವ್ ಹಿಂದೆ ಇರುವ ಇಬ್ಬರು 'ಪ್ರಭಾವಿ' ಸಚಿವರು, ಮಾಜಿ ಸಚಿವರು ಯಾರು ಎಂಬ ವಿಷಯ ಸೋಮವಾರ ಇಡೀ ದಿನ ದೊಡ್ಡಮಟ್ಟದ ಸದ್ದು ಮಾಡಿತು.

ಚಿನ್ನ ಕಳ್ಳ ಸಾಗಣೆ: ಸಚಿವರಿಬ್ಬರ 'ಕೈ' ಶೀರ್ಷಿಕೆಯಡಿ 'ಪ್ರಜಾವಾಣಿ'ಯ ಸೋಮವಾರದ ಸಂಚಿಕೆಯಲ್ಲಿ ಪ್ರಕಟವಾಗಿದ್ದ ವರದಿಯು ರಾಜಕೀಯ ವಲಯದಲ್ಲಿ ಕಂಪನವನ್ನೇ ಸೃಷ್ಟಿಸಿತು.

ರನ್ಯಾ ರಾವ್

ವಿಧಾನಸಭೆಯ ಒಳ–ಹೊರಗೆ ಈ ಪ್ರಶ್ನೆಯನ್ನು ಎತ್ತಿದ ಬಿಜೆಪಿ ನಾಯಕರು, ಸಚಿವರ ಹೆಸರು ಬಹಿರಂಗಪಡಿಸಿ ಎಂದು ಆಗ್ರಹಿಸಿದರು. ವಿಧಾನಸಭೆಯ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ವಿ. ಸುನಿಲ್ ಕುಮಾರ್, 'ಪ್ರಜಾವಾಣಿ' ಸಂಚಿಕೆಯನ್ನು ಪ್ರದರ್ಶಿಸಿ, ಸರ್ಕಾರದ ಗಮನ ಸೆಳೆದರು.

ವಿರೋಧ ಪಕ್ಷದ ಸದಸ್ಯರು ಸದನದಲ್ಲಿ ವಿಷಯ ಪ್ರಸ್ತಾಪಿಸಿದ್ದರಿಂದ ಸಚಿವರು ಮುಜುಗರಕ್ಕೆ ಈಡಾಗುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಈ ಬಗ್ಗೆ ತನಿಖೆ ನಡೆಸುವುದಾಗಿ ಗೃಹ ಸಚಿವ ಜಿ. ಪರಮೇಶ್ವರ ಸದನಕ್ಕೆ ತಿಳಿಸಿದರು.

'ರನ್ಯಾ ಅವರ ತಂದೆ ಪೊಲೀಸ್ ಮಹಾ ನಿರ್ದೇಶಕರಾಗಿದ್ದಾರೆ. ಆದ್ದರಿಂದ ಆಕೆಗೆ ಪ್ರತಿ ಬಾರಿಯೂ ಪೊಲೀಸ್ ಪ್ರೊಟೋಕಾಲ್ ಒದಗಿಸಲಾಗುತ್ತಿತ್ತು ಎಂಬ ಆರೋಪ ಇದೆ. ಈ ವಿಷಯದ ಬಗ್ಗೆಯೂ ತನಿಖೆ ಆಗಬೇಕು. ಇದರಲ್ಲಿ ಇಬ್ಬರು ಸಚಿವರ ಕೈವಾಡ ಇದೆ ಎಂಬ ವಿಚಾರ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಈ ಜಾಲದ ಹಿಂದೆ ಯಾವ ಸಚಿವರು ಮತ್ತು ಅಧಿಕಾರಿಗಳು ಇದ್ದಾರೆ ಎಂಬುದು ರಾಜ್ಯದ ಜನರಿಗೆ ಗೊತ್ತಾಗಬೇಕು ಎಂದರು.

4ನೇ ಪುಟ ನೋಡಿ

ಸಚಿವರು ಭಾಗಿಯಾಗಿದ್ದರೆ ಸಿಬಿಐ ಪತ್ತೆ ಮಾಡುತ್ತೆ: ಜಿ. ಪರಮೇಶ್ವರ

ಚಿತ್ರ ನಟಿ ರನ್ಯಾ ರಾವ್ ಅವರಿಂದ ನಡೆದಿರುವ ಚಿನ್ನ ಕಳ್ಳ ಸಾಗಣಿಕೆಯ ಪ್ರಕರಣದಲ್ಲಿ ಪ್ರಭಾವಿ ಸಚಿವರ ಕೈವಾಡವಿದ್ದರೆ ಸಿಬಿಐ ತನಿಖೆ ನಡೆಸಿ ಪತ್ತೆ ಹಚ್ಚುತ್ತದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಸುನಿಲ್‌ಕುಮಾರ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಕಳ್ಳಸಾಗಣೆ ಮಾಡುತ್ತಿದ್ದ ರನ್ಯಾ ರಾವ್ ಅವರಿಗೆ ಪೊಲೀಸರು ನೆರವಾಗಿದ್ದರೆ, ಆ ಬಗ್ಗೆ ತನಿಖೆ ನಡೆಸಲಾಗುವುದು. ಕಳ್ಳ ಸಾಗಾಣಿಕೆ ಪ್ರಕರಣದಲ್ಲಿ ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಮಾಹಿತಿ ಇಲ್ಲ' ಎಂದರು.

'ಈ ಪ್ರಕರಣವನ್ನು ಸಿಬಿಐ ತನಿಖೆ ನಡೆಸುತ್ತಿದೆ ಎಂದು ಗೊತ್ತಾಗಿದೆ. ಈ ಮೊದಲೆಲ್ಲಾ ಸಿಬಿಐ ತನಿಖೆ ನಡೆಸುವುದಾದರೆ ರಾಜ್ಯ ಸರ್ಕಾರಕ್ಕೆ ಮಾಹಿತಿ ನೀಡಲಾಗುತ್ತಿತ್ತು. ರನ್ಯಾ ಪ್ರಕರಣದಲ್ಲಿ ಸಿಬಿಐ ನಮ್ಮ ಅನುಮತಿ ಕೇಳಿಲ್ಲ. ಈ ಎಲ್ಲ ವಿಚಾರವನ್ನು ಮಾಧ್ಯಮದಲ್ಲಿ ಓದಿ ತಿಳಿದುಕೊಂಡಿದ್ದೇನೆ. ಪೊಲೀಸ್ ವಾಹನದಲ್ಲಿ ರನ್ಯಾ ಓಡಾಡಿದ್ದರೆ ತನಿಖೆ ಮಾಡುತ್ತೇವೆ' ಎಂದರು.

ಸಿ.ಎಂ ಮಾಹಿತಿ ಬಹಿರಂಗ ಮಾಡಲಿ: ವಿಜಯೇಂದ್ರ

'ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪೊಲೀಸ್ ಅಧಿಕಾರಿಯ ಮಗಳು ರನ್ಯಾ ರಾವ್‌ಗೆ ಪ್ರೊಟೊಕಾಲ್ ಸಿಗುತ್ತದೆ, ಭದ್ರತಾ ತಪಾಸಣೆ ಆಗುವುದಿಲ್ಲ ಎಂದಾದರೆ, ಅವರ ಹಿಂದೆ ಕೆಲವು ಸಚಿವರೂ ಇದ್ದಾರೆ ಎಂಬುದು ನಿಶ್ಚಿತ. ಆ ಸಚಿವರ ಹೆಸರು ಬಯಲಿಗೆ ಬರಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ, ಇ.ಡಿ ತನಿಖೆ ನಡೆಯುತ್ತಿದೆ. ಈ ಪ್ರಕರಣದ ಹಿಂದಿರುವವರ ಮಾಹಿತಿ ಮುಖ್ಯಮಂತ್ರಿ ಅವರಿಗೆ ಇದ್ದೇ ಇರುತ್ತದೆ. ಒಬ್ಬ ಹಿರಿಯ ಐಪಿಎಸ್ ಅಧಿಕಾರಿಯ ಮಗಳ ನೇತೃತ್ವದಲ್ಲಿ ಇಷ್ಟು ದೊಡ್ಡ ಪ್ರಮಾಣದ ಚಿನ್ನ ಕಳ್ಳ ಸಾಗಣೆ ಪ್ರಕರಣ ನಾವೆಂದೂ ಕೇಳಿರಲಿಲ್ಲ. ಇದು ಗಂಭೀರ ಸ್ವರೂಪ ಪಡೆದುಕೊಂಡಿದೆ. ಮುಖ್ಯಮಂತ್ರಿಯವರು ಪ್ರಕರಣದ ಮಾಹಿತಿಯನ್ನು ಬಹಿರಂಗಪಡಿಸಲಿ' ಎಂದು ವಿಜಯೇಂದ್ರ ಒತ್ತಾಯಿಸಿದರು.

ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ನಮ್ಮ ಯಾವ ಸಚಿವರೂ ಭಾಗಿಯಾಗಿಲ್ಲ. ನಮಗೂ ಅದಕ್ಕೂ ಸಂಬಂಧ ಇಲ್ಲ. ಕೇಂದ್ರ ಸರ್ಕಾರದವರು ತನಿಖೆ ಮಾಡುತ್ತಿದ್ದಾರೆ, ಮಾಡಲಿ

ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

ಒಬ್ಬ ಅಧಿಕಾರಿಯ ಮಗಳಿಗೆ ಪ್ರೊಟೋಕಾಲ್ ಕೊಡಲು ಹೇಗೆ ಸಾಧ್ಯ? ಪ್ರತಿ ಬಾರಿಯೂ ಯಾವುದೇ ತಪಾಸಣೆ ಇಲ್ಲದೇ ಹೇಗೆ ಬಿಡಲಾಗುತ್ತಿತ್ತು. ಪೊಲೀಸ್ ವಾಹನದಲ್ಲಿ ಆಕೆ ಸಂಚರಿಸಿರುವ ಬಗ್ಗೆ ಸಮಗ್ರ ತನಿಖೆಯಾಗಲಿ

ಆರ್. ಅಶೋಕ, ವಿರೋಧ ಪಕ್ಷದ ನಾಯಕ

ಚಿನ್ನ: ಉದ್ಯಮಿ ಪುತ್ರನ ಬಂಧನ

ನಟಿ ರನ್ಯಾ ರಾವ್ ಚಿನ್ನ ಕಳ್ಳ ಸಾಗಣೆ ಪ್ರಕರಣದಲ್ಲಿ ರೆವಿನ್ಯೂ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು ನಗರದ ಉದ್ಯಮಿಯೊಬ್ಬರ ಪುತ್ರ ತರುಣ್ ರಾಜು ಅವರನ್ನು ಬಂಧಿಸಿದ್ದಾರೆ. ಅಲ್ಲದೇ ನಟಿಯ ಜತೆ ದುಬೈಗೆ ತೆರಳಿದ್ದ ಮತ್ತೊಬ್ಬ ವ್ಯಕ್ತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ ಎಂಬುದು ಗೊತ್ತಾಗಿದೆ.

ರನ್ಯಾ–ತರುಣ್ ಹಲವು ವರ್ಷಗಳಿಂದ ಸ್ನೇಹಿತರು. ರನ್ಯಾ ಜತೆ ನಿರಂತರ ಸಂಪರ್ಕ ಇರಿಸಿಕೊಂಡಿರುವುದು, ಈಕೆಯ ಮೂಲಕ ದುಬೈನಿಂದ ಚಿನ್ನ ತರಿಸಿಕೊಂಡಿರುವುದು ಹಾಗೂ ಇಬ್ಬರೂ ವಿದೇಶ ಪ್ರವಾಸಕ್ಕೆ ಹೋಗಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.

ತರುಣ್ ಅವರನ್ನು ನ್ಯಾಯಾಲಯಕ್ಕೆ ಸೋಮವಾರ ಸಂಜೆ ಹಾಜರುಪಡಿಸಿದ್ದು, ಮಾರ್ಚ್ 15ರವರೆಗೆ ಡಿಆರ್‌ಐ ವಶಕ್ಕೆ ನೀಡಲಾಗಿದೆ.

4ನೇ ಪುಟ ನೋಡಿ

ಗೌರವ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ನಟಿ ಶಬಾನಾ ಆಜ್ಮಿ ಅವರಿಗೆ 'ಜೀವಮಾನ ಸಾಧನೆಯ ಪ್ರಶಸ್ತಿ'ಯನ್ನು ಪ್ರದಾನ ಮಾಡಿದರು. ಈಚೆಗೆ ನಡೆದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಸಂದರ್ಭದಲ್ಲಿ ಈ ಪ್ರಶಸ್ತಿಯನ್ನು ಘೋಷಿಸಲಾಗಿತ್ತು. ₹ 10 ಲಕ್ಷ ನಗದನ್ನೂ ಈ ಗೌರವ ಒಳಗೊಂಡಿದೆ

'₹1.95 ಲಕ್ಷ ಕೋಟಿ ವಂಚನೆ'

ಜಿಎಸ್‌ಟಿ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಏಪ್ರಿಲ್–ಜನವರಿಯಲ್ಲಿ ಕೇಂದ್ರದ ಜಿಎಸ್‌ಟಿ ಅಧಿಕಾರಿಗಳು ₹1.95 ಲಕ್ಷ ಕೋಟಿ ಮೊತ್ತದ ತೆರಿಗೆ ವಂಚನೆಯನ್ನು ಪತ್ತೆ ಮಾಡಿದ್ದಾರೆ ಎಂದು ಕೇಂದ್ರ ಸರ್ಕಾರವು ಲೋಕಸಭೆಗೆ ಸೋಮವಾರ ತಿಳಿಸಿದೆ.

ಕಳೆದ ಐದು ವರ್ಷಗಳಲ್ಲಿ 86,711 ವಂಚನೆ ಪ್ರಕರಣ ಪತ್ತೆಯಾಗಿದ್ದು, ಇದರ ಒಟ್ಟು ಮೊತ್ತ ₹6.79 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ಪ್ರಸಕ್ತ ಆರ್ಥಿಕ ವರ್ಷದಿಂದ ಜನವರಿವರೆಗೆ ಒಟ್ಟು 25,397 ವಂಚನೆ ಪ್ರಕರಣಗಳು ಪತ್ತೆ ಆಗಿವೆ. ವಂಚನೆಯ ಮೊತ್ತ ₹1.95 ಲಕ್ಷ ಕೋಟಿಯಷ್ಟಾಗಿದ್ದು, ಈ ಪೈಕಿ ₹21,520 ಕೋಟಿ ಜಮೆ ಆಗುವಂತೆ ನೋಡಿಕೊಳ್ಳಲಾಗಿದೆ ಎಂದು ವಿವರಿಸಿದೆ.

ಇದೇ ಅವಧಿಯಲ್ಲಿ ಒಟ್ಟು 13,018 ನಕಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ಪ್ರಕರಣ ಪತ್ತೆ ಹಚ್ಚಲಾಗಿದ್ದು, ಇದರ ಮೊತ್ತ ₹46,472 ಕೋಟಿಯಾಗಿದೆ. ₹2,211 ಕೋಟಿ ಮಾತ್ರ ಪಾವತಿಯಾಗಿದೆ.

2023–24ರ ಆರ್ಥಿಕ ವರ್ಷದಲ್ಲಿ ₹2.30 ಲಕ್ಷ ಕೋಟಿ ಮೌಲ್ಯದ 20,582 ವಂಚನೆ ಪ್ರಕರಣಗಳು ಪತ್ತೆ ಆಗಿವೆ. 2022–23ರಲ್ಲಿ ₹1.32 ಲಕ್ಷ ಕೋಟಿ, 2021–22ರಲ್ಲಿ ₹73,238 ಕೋಟಿ ಮತ್ತು 2020–21ರಲ್ಲಿ ₹49,384 ಕೋಟಿ ಮೊತ್ತದ ಜಿಎಸ್‌ಟಿ ವಂಚನೆ ಪ್ರಕರಣಗಳು ನಡೆದಿದ್ದವು ಎಂದು ಸರ್ಕಾರ ತಿಳಿಸಿದೆ.

'ತೆರಿಗೆ ವಂಚನೆಯನ್ನು ತಡೆಗಟ್ಟಲು ಕೇಂದ್ರ ಸರ್ಕಾರ ಮತ್ತು ಜಿಎಸ್‌ಟಿಎನ್ ವಿವಿಧ ಕ್ರಮಗಳನ್ನು ತೆಗೆದುಕೊಂಡಿವೆ' ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಹೇಳಿದರು.

ವಿರೋಧ ಪಕ್ಷಗಳ ಸಭಾತ್ಯಾಗದ ಮಧ್ಯೆಯೇ ಒಪ್ಪಿಗೆ

ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆ–ಮಸೂದೆ ಅಂಗೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಗ್ರ ಬೆಂಗಳೂರಿನ ಆಡಳಿತ ನಿರ್ವಹಣೆಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚಿಸಲು ಹಾಗೂ ಬಿಬಿಎಂಪಿಯ ವ್ಯಾಪ್ತಿಯನ್ನು ಹಿಗ್ಗಿಸಿ ಏಳು ನಗರ ಪಾಲಿಕೆಗಳನ್ನು ಸೃಜಿಸಲು ಅವಕಾಶ ಕಲ್ಪಿಸುವ 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ–2025'ಕ್ಕೆ ವಿರೋಧ ಪಕ್ಷಗಳ ಸಭಾತ್ಯಾಗದ ಮಧ್ಯೆಯೇ ವಿಧಾನಸಭೆಯು ಸೋಮವಾರ ಅಂಗೀಕಾರ ನೀಡಿತು.

ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಂಡಿಸಿದ ಮಸೂದೆ ಕುರಿತು ಸದನದಲ್ಲಿ ಸುದೀರ್ಘ ಚರ್ಚೆ ನಡೆಯಿತು. ಬಿಬಿಎಂಪಿ ವಿಭಜಿಸದಂತೆ ಬಿಜೆಪಿಯ ಹಲವು ಸದಸ್ಯರು ಆಗ್ರಹಿಸಿದರು. ವಿಭಜಿಸುವುದಾದರೆ ಸಂಪನ್ಮೂಲದ ಸಮಾನ ಹಂಚಿಕೆ ಮತ್ತು ಅಧಿಕಾರ ವಿಕೇಂದ್ರೀಕರಣಕ್ಕೆ ಆದ್ಯತೆ ನೀಡುವಂತೆ ಕೆಲವರು ಸಲಹೆ ನೀಡಿದರು. ಬಿಜೆಪಿಯ ಎಸ್‌.ಟಿ. ಸೋಮಶೇಖರ್ ಮಸೂದೆಗೆ ಬೆಂಬಲ ಸೂಚಿಸಿದರು.

ವಿರೋಧ ಪಕ್ಷಗಳ ಸದಸ್ಯರ ಆಕ್ಷೇಪಗಳಿಗೆ ಉತ್ತರ ನೀಡಿದ ಶಿವಕುಮಾರ್, 'ಈಗ ಇರುವ ಸ್ಥಿತಿಯಲ್ಲಿ ಬೆಂಗಳೂರಿನ ಸ್ಥಳೀಯ ಆಡಳಿತವನ್ನು ನಡೆಸಲಾಗದು ಎಂಬುದನ್ನು ಎಲ್ಲರೂ ಒಪ್ಪಿಕೊಂಡಿದ್ದೀರಿ. ಬೆಂಗಳೂರಿನ ಬೆಳವಣಿಗೆಯನ್ನು ತಡೆಯಲು ಸಾಧ್ಯವಿಲ್ಲ. ಈಗ ನಾವು ಬಿಬಿಎಂಪಿಯನ್ನು ಛಿದ್ರಗೊಳಿಸುತ್ತಿಲ್ಲ, ಗಟ್ಟಿಗೊಳಿಸುತ್ತಿದ್ದೇವೆ' ಎಂದರು.

ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಮಸೂದೆ ಅಂಗೀಕಾರದ ಪ್ರಸ್ತಾವವನ್ನು ಧ್ವನಿಮತಕ್ಕೆ ಹಾಕಲು ಮುಂದಾಗುತ್ತಿದ್ದಂತೆಯೇ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು. ಗದ್ದಲದ ಮಧ್ಯೆಯೇ ಮಸೂದೆಗೆ ಸದನದ ಅಂಗೀಕಾರ ಪಡೆಯಲಾಯಿತು.

ಶ್ರಮಿಕರು ಬಂದರು, ಸ್ವಚ್ಛತೆ ತಂದರು

ಶೌಚಾಲಯಗಳಾದವು ಸ್ವಚ್ಛಾಲಯಗಳು– ಸರ್ಕಾರಿ ಶಾಲೆಗಳಲ್ಲಿ ಸ್ವಯಂ ಸೇವೆ

• ಸಂಧ್ಯಾ ಹೆಗಡೆ

ಮಂಗಳೂರು: ಶ್ರಮಿಕ ವರ್ಗದವರೇ ರಚಿಸಿಕೊಂಡಿರುವ ತಂಡವೊಂದು ಸರ್ಕಾರಿ ಶಾಲೆ ಶೌಚಾಲಯಗಳನ್ನು ಸ್ವಚ್ಛಗೊಳಿಸುವ ಅಭಿಯಾನವನ್ನು ಕೈಗೆತ್ತಿಕೊಂಡಿದ್ದು, ದಕ್ಷಿಣ ಕನ್ನಡ ಜಿಲ್ಲೆಯ 13 ಶಾಲೆಗಳಲ್ಲಿ 'ಸ್ವಚ್ಛಾಲಯ'ಗಳು ರೂಪುಗೊಂಡಿವೆ.

ಕಾರು ಚಾಲಕರು, ಎಲೆಕ್ಟ್ರೀಷಿಯನ್, ಪ್ಲಂಬರ್, ಕಟ್ಟಡ ಕೆಲಸಗಾರರು, ಸೆಕ್ಯುರಿಟಿ ಗಾರ್ಡ್ ಮತ್ತಿತರ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಸಮಾನ ಮನಸ್ಕ ಕಾರ್ಮಿಕರು ಸಮಾಜ ಸೇವೆ ಮಾಡುವ ಹಂಬಲದಿಂದ ಅಖಿಲ ಕರ್ನಾಟಕ ರಾಜಕೇಸರಿ ಟ್ರಸ್ಟ್ ಎಂಬ ಸಂಘಟನೆ ಅಡಿಯಲ್ಲಿ ಜನೋಪಯೋಗಿ ಕೆಲಸಗಳನ್ನು ಮಾಡುತ್ತಿದ್ದಾರೆ.

ಇದರ ಭಾಗವಾಗಿ ಸಂಘಟನೆಯ ಮಂಗಳೂರು ತಾಲ್ಲೂಕು ಘಟಕವು ಸರ್ಕಾರಿ ಶಾಲೆ ಶೌಚಾಲಯಗಳ 'ಸ್ವಚ್ಛಾಲಯ' ಅಭಿಯಾನವನ್ನು ಕಳೆದ ನವೆಂಬರ್‌ನಲ್ಲಿ ಪ್ರಾರಂಭಿಸಿದೆ.

11ನೇ ಪುಟ ನೋಡಿ

ಮಂಗಳೂರು ಪಂಪ್‌ವೆಲ್ ಸಮೀಪದ ಸರ್ಕಾರಿ ಶಾಲೆಯಲ್ಲಿ ರಾಜಕೇಸರಿ ಟ್ರಸ್ಟ್‌ನವರು ದುರಸ್ತಿಗೊಳಿಸಿರುವ ಶೌಚಾಲಯ

'ವಂತಿಗೆಯಿಂದ ₹1.5 ಲಕ್ಷ ವೆಚ್ಚ'

'ಒಂದು ಶಾಲೆಯ ಶೌಚಾಲಯಗಳ ದುರಸ್ತಿ, ಪೇಂಟಿಂಗ್ ಕಾರ್ಯಕ್ಕೆ ₹12 ಸಾವಿರ ವೆಚ್ಚ ಆಗುತ್ತದೆ. ಈವರೆಗೆ ಸುಮಾರು ₹1.5 ಲಕ್ಷ ಖರ್ಚಾಗಿದ್ದು, ಸಂಘಟನೆ ಸದಸ್ಯರ ವಂತಿಗೆಯಿಂದ ₹1 ಲಕ್ಷ ಸಂಗ್ರಹಿಸಿದ್ದೇವೆ. ನಮ್ಮ ಕಾರ್ಯ ಗಮನಿಸಿ, ಸುರತ್ಕಲ್ ರೋಟರಿ ಕ್ಲಬ್, ಬೆಂಗಳೂರಿನ ರಾಹುಲ್ ಮೆಮೊರಿಯಲ್ ಫೌಂಡೇಷನ್ ಆರ್ಥಿಕ ನೆರವು ನೀಡಲು ಮುಂದೆ ಬಂದಿವೆ' ಎಂದು ಸಂತೋಷ್ ಕೊಲ್ಯ ತಿಳಿಸಿದರು.

ಶಬರಿಮಲೆ: ಭಕ್ತರ ದರ್ಶನದ ಮಾರ್ಗ ಬದಲಿಗೆ ನಿರ್ಧಾರ

ತಿರುವನಂತಪುರ (ಪಿಟಿಐ): ಶಬರಿಮಲೆ ಭಕ್ತರ ಬಹುದಿನಗಳ ಬೇಡಿಕೆಯನ್ನು ಪರಿಗಣಿಸಿರುವ ತಿರುವಾಂಕೂರು ದೇವಸ್ವಂ ಮಂಡಳಿಯು (ಟಿಡಿಬಿ) ಶಬರಿಮಲೆಯಲ್ಲಿ 'ದರ್ಶನ'ದ ಮಾರ್ಗವನ್ನು ಬದಲಿಸಲು ನಿರ್ಧಾರ ಮಾಡಿದೆ.

ಇದರಿಂದ ಭಕ್ತರಿಗೆ ಸನ್ನಿಧಾನಂ ಪವಿತ್ರ 18 ಮೆಟ್ಟಿಲುಗಳನ್ನು ಹತ್ತಿದ ಕೂಡಲೇ ನೇರವಾಗಿ ದರ್ಶನದ ಭಾಗ್ಯ ದೊರೆಯಲಿದೆ.

ಮಾರ್ಚ್ 15ರಿಂದ ಆರಂಭವಾಗುವ ಮಾಸಿಕ ಪೂಜೆಯ ಸಮಯದಲ್ಲಿ ಈ ಬದಲಾವಣೆಯನ್ನು ಪ್ರಾಯೋಗಿಕವಾಗಿ ಜಾರಿಗೆ ತರಲಾಗುವುದು. ವಿಷು ಪೂಜಾ ಸಮಯದಲ್ಲೂ ಇದು ಮುಂದುವರಿಯುತ್ತದೆ ಎಂದು ಟಿಡಿಬಿ ಅಧ್ಯಕ್ಷ ಪಿ.ಎಸ್.ಪ್ರಶಾಂತ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೆನಡಾ: ಮುಂದಿನ ಪ್ರಧಾನಿ ಕಾರ್ನಿ

ಒಟ್ಟಾವ (ಎಎಫ್‌ಪಿ): ಕೆನಡಾದ ಆಡಳಿತಾರೂಢ ಲಿಬರಲ್ ಪಾರ್ಟಿಯು ಮಾರ್ಕ್ ಕಾರ್ನಿ ಅವರನ್ನು ದೇಶದ ಮುಂದಿನ ಪ್ರಧಾನಿಯಾಗಿ ಭಾರಿ ಬೆಂಬಲದೊಂದಿಗೆ ಆಯ್ಕೆ ಮಾಡಿದೆ.

ಪಕ್ಷದ ಹೊಸ ನಾಯಕ ಮತ್ತು ಪ್ರಧಾನಿ ಜಸ್ಟಿನ್ ಟ್ರುಡೊ ಅವರ ಉತ್ತರಾಧಿಕಾರಿಯ ಆಯ್ಕೆಗೆ ಭಾನುವಾರ ನಡೆದ ಚುನಾವಣೆಯಲ್ಲಿ 59 ವರ್ಷದ ಕಾರ್ನಿ ಅವರು ಮಾಜಿ ಉಪಪ್ರಧಾನಿ ಕ್ರಿಸ್ಟಿಯಾ ಫ್ರೀಲ್ಯಾಂಡ್ ಅವರನ್ನು ಮಣಿಸಿದರು. ಕಾರ್ನಿ ಸದ್ಯದಲ್ಲೇ ಟ್ರುಡೊ ಅವರಿಂದ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಈ ಹಿಂದೆ ಬ್ಯಾಂಕ್ ಆಫ್ ಕೆನಡಾ ಮತ್ತು ಬ್ಯಾಂಕ್ ಆಫ್ ಇಂಗ್ಲೆಂಡ್ ಎರಡನ್ನೂ ಮುನ್ನಡೆಸಿದ್ದ ಅವರು ಚಲಾವಣೆಯಾದ ಸುಮಾರು 1.52 ಲಕ್ಷ ಮತಗಳಲ್ಲಿ ಶೇ 85.9 ಮತಗಳನ್ನು ಪಡೆದರು. ಫ್ರೀಲ್ಯಾಂಡ್ ಅವರಿಗೆ ಕೇವಲ ಶೇ8ರಷ್ಟು ಮತಗಳು ದೊರೆತವು. ಅಕ್ಟೋಬರ್‌ನಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಅವರು ಲಿಬರಲ್ ಪಾರ್ಟಿಯನ್ನು ಮುನ್ನಡೆಸುವರು.

ಮಾರ್ಕ್ ಕಾರ್ನಿ

10ನೇ ಪುಟ ನೋಡಿ

ಟ್ರಂಪ್‌ಗೆ ತಿರುಗೇಟು

ಕೆನಡಾದ ಮುಂದಿನ ಪ್ರಧಾನಿಯಾಗಿ ಆಯ್ಕೆಯಾದ ಬೆನ್ನಲ್ಲೇ ಕಾರ್ನಿ ಅವರು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ತಿರುಗೇಟು ನೀಡಿದ್ದು, 'ಅಮೆರಿಕ ಸಾರಿರುವ ವ್ಯಾಪಾರ ಸಮರ'ವನ್ನು ಯಶಸ್ವಿಯಾಗಿ ಗೆಲ್ಲುವ ಪ್ರತಿಜ್ಞೆ ಮಾಡಿದ್ದಾರೆ.

'ನಾವು ಕಾದಾಟಕ್ಕೆ ಹೋಗುವವರಲ್ಲ. ಆದರೆ, ಯಾರಾದರೂ ಕಾಲು ಕೆರೆದು ಕೊಂಡು ನಮ್ಮೊಂದಿಗೆ ಕಾದಾಟಕ್ಕೆ ಇಳಿದರೆ ನಾವು ಕೆನಡಿಯನ್ನರು ಹೋರಾಡಲು ಸದಾ ಸಿದ್ಧರಾಗಿರುತ್ತೇವೆ. ಆದ್ದರಿಂದ ಅಮೆರಿಕನ್ನರು, ಯಾವುದೇ ತಪ್ಪು ಮಾಡಬಾರದು. ಕೆನಡಾವು ಹಾಕಿ ಕ್ರೀಡೆಯಲ್ಲಿ ಗೆಲುವು ಸಾಧಿಸುವಂತೆ ವ್ಯಾಪಾರ ಸಮರದಲ್ಲೂ ಗೆಲ್ಲುತ್ತದೆ' ಎಂದು ಒಟ್ಟಾವದಲ್ಲಿ ಪಕ್ಷದ ಬೆಂಬಲಿಗರನ್ನು ಉದ್ದೇಶಿಸಿ ಹೇಳಿದರು.

10ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಒಳಪುಟಗಳಲ್ಲಿ

ಅಪ್ಪು 'ಪಿಕ್ಚರ್ ಪೋಸ್ಟ್ ಕಾರ್ಡ್' ಬಿಡುಗಡೆ 7

ಮತ್ತೆ ಬಿಪಿಎಲ್ ಕಾರ್ಡ್‌ಗಳ ಪರಿಷ್ಕರಣೆ 4

ಸೀಮಿತ ಓವರ್‌ಗಳ ಕ್ರಿಕೆಟ್: ಭಾರತದ ಪಾರಮ್ಯ 12

ADVERTORIAL

ಮಂಡಿನೋವು

ಸರ್ಜರಿ ಇಲ್ಲದೇ ಉಪಶಮನ

10,000ಕ್ಕೂ ಹೆಚ್ಚು ಮಂದಿಗೆ ಅಲಿವಿಯೇಟ್‌ನಿಂದ ನೋವು ಮುಕ್ತ ಜೀವನ

ಕೇವಲ 30-60 ನಿಮಿಷದ ವಿಧಾನ | ಆಸ್ಪತ್ರೆ ವಾಸವಿಲ್ಲ | ವೇಗವಾದ ಚೇತರಿಕೆ

ಮೊಣಕಾಲಿನ ಅಸ್ಥಿಸಂಧಿವಾತದ ನೋವನ್ನು ಕೇವಲ ಔಷಧಿಗಳಿಂದ ಮಾತ್ರವೇ ಪರಿಣಾಮಕಾರಿಯಾಗಿ ನಿರ್ವಹಿಸುವುದು ಸಾಧ್ಯವೇ ಇಲ್ಲ. ಸಂಧಿವಾತವು ತೀವ್ರವಾಗಿರುವವರಿಗೆ ಶಸ್ತ್ರಚಿಕಿತ್ಸೆಯ ಅಗತ್ಯವಿದ್ದರೂ ಸಹ, ಬಹುಪಾಲು ಜನರು ಶಸ್ತ್ರಚಿಕಿತ್ಸೆಯಿಲ್ಲದ ನೋವಿನಿಂದ ಮುಕ್ತರಾಗಬಹುದು.

ರೇಡಿಯೊ ಫ್ರೀಕ್ವೆನ್ಸಿ ಅಬ್ಲೇಶನ್ (ಆರ್.ಎಫ್.ಎ), ಸರ್ಜರಿಯೇ ಇಲ್ಲದೇ ನೋವನ್ನು ಉಪಶಮಿಸುವ ಆಧುನಿಕ ಚಿಕಿತ್ಸಾ ವಿಧಾನಗಳಲ್ಲಿ ಒಂದಾಗಿದೆ.

ಈ ವಿಧಾನವು ಪೀಡಿತ ಪ್ರದೇಶದಲ್ಲಿನ ನೋವಿಗೆ ಕಾರಣವಾಗುವ ನರಗಳನ್ನು ಗುರುತಿಸಿ, ಅವು ಮೆದುಳಿಗೆ ನೋವಿನ ಸಂದೇಶ ನೀಡದಂತೆ ತಡೆಯುವ ಕೆಲಸ ಮಾಡುತ್ತದೆ. ಇದರಿಂದಾಗಿ ನೋವು ಹಂತ ಹಂತವಾಗಿ ಕಡಿಮೆಯಾಗುತ್ತದೆ.

ಮೊಣಕಾಲು ನೋವಿನ ಪ್ರಚೋದಕ ಸ್ಥಳವನ್ನು ಕಂಡುಹಿಡಿಯುತ್ತಿರುವ ವೈದ್ಯರು

RADIO FREQUENCY ABLATION FDA APPROVED

ಈ ಪ್ರಕ್ರಿಯೆಯು ಕನಿಷ್ಠ ಛೇದನವನ್ನು ಒಳಗೊಂಡಿರುವುದು ಮಾತ್ರವಲ್ಲದೇ, ಅತೀ ಕಡಿಮೆ ಚೇತರಿಕೆಯ ಸಮಯವನ್ನು ತೆಗೆದುಕೊಳ್ಳುತ್ತದೆ. ಹೆಚ್ಚಿನ ರೋಗಿಗಳು ಅದೇ ದಿನ ಮನೆಗೆ ತೆರಳಿ, ಮರುದಿನ ದಿಂದಲೇ ಸಾಮಾನ್ಯ ಚಟುವಟಿಕೆಗಳನ್ನು ಶುರು ಮಾಡಬಹುದು.

ಆರ್‌ಎಫ್‌ಎ ವಿಧಾನದ ಹಂತಗಳು :

1. ತಯಾರಿ: ವೈದ್ಯರು ಸ್ಥಳೀಯ ಅರಿವಳಿಕೆಯನ್ನು ನೋವು ಇರುವ ಜಾಗಕ್ಕೆ ಚುಚ್ಚಿ, ಮಂಡಿಯ ಪ್ರದೇಶ ನಿಷ್ಕ್ರಿಯಗೊಳಿಸುತ್ತಾರೆ.
2. ಚಿತ್ರಣ: ನೋವು ಉಂಟುಮಾಡುವ ನರಗಳನ್ನು ಪತ್ತೆಹಚ್ಚಲು ವೈದ್ಯರು ಎಕ್ಸ್–ರೇ ಅಥವಾ ಅಲ್ಟ್ರಾಸೌಂಡ್ ಅನ್ನು ಬಳಸುತ್ತಾರೆ.
3. ಪರೀಕ್ಷೆ: ಸರಿಯಾದ ನರವನ್ನು ಖಚಿತಪಡಿಸಲು ಸೂಜಿಯ ಮೂಲಕ ವಿದ್ಯುತ್ ಪ್ರವಾಹವನ್ನು ಕಳುಹಿಸಲಾಗುತ್ತದೆ, ಇದು ಜುಮ್ಮೆನಿಸುವಿಕೆ ಸಂವೇದನೆ ಉಂಟುಮಾಡುತ್ತದೆ.
4. ತಾಪನ: ರೇಡಿಯೋ ಆವರ್ತನದ ಮೂಲಕ ಉತ್ಪತ್ತಿಯಾಗುವ ಶಾಖವು ಪೀಡಿತ ಪ್ರದೇಶದ ನರಗಳಿಗೆ ನೀಡಲಾಗುತ್ತದೆ, ಇದು ನರಗಳಲ್ಲಿ ಸಣ್ಣ ಗಾಯವನ್ನು ಉಂಟುಮಾಡಿ ನೋವಿನ ಸಂಕೇತಗಳನ್ನು ಮೆದುಳಿಗೆ ಕಳುಹಿಸದಂತೆ ತಡೆಯುತ್ತದೆ.
5. ಪ್ರಕ್ರಿಯೆಯ ನಂತರ: ಸಣ್ಣ ಬ್ಯಾಂಡೇಜ್ ಅನ್ನು ಅನ್ವಯಿಸಲಾಗುತ್ತದೆ. ನೀವು ಸ್ವಲ್ಪ ವಿಶ್ರಾಂತಿ ಪಡೆದು ಮನೆಗೆ ತೆರಳಬಹುದು. ನಂತರ ನೋವು ಕ್ರಮ ಕ್ರಮವಾಗಿ ಉಪಶಮನಗೊಳ್ಳುತ್ತದೆ.

ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಕೂಡ ಅಲಿವಿಯೇಟ್‌ನಲ್ಲಿ ಸರ್ಜರಿ ಇಲ್ಲದೇ ಚಿಕಿತ್ಸೆ ಲಭ್ಯ

ನೋವು ಮುಕ್ತ ಜೀವನಕ್ಕೆ ಇಂದೇ ಸಂಪರ್ಕಿಸಿ
81475 50855
080 23614888

ಅಲಿವಿಯೇಟ್ ಪೇನ್ ಮ್ಯಾನೇಜ್‌ಮೆಂಟ್ ಕ್ಲಿನಿಕ್ಸ್
Google Reviews 4.8 ★★★★★ ಪೀಣ್ಯ ದಾಸರಹಳ್ಳಿ

ಇವರ ಕ್ಲಿನಿಕ್ಕುಗಳು ಬೆಂಗಳೂರಿನಲ್ಲಿ ಇಲ್ಲಿವೆ:
ಪೀಣ್ಯಾ ದಾಸರಹಳ್ಳಿ | ಸದಾಶಿವನಗರ | ವೈಟ್‌ಫೀಲ್ಡ್ | ಜಯನಗರ | ಇಂದಿರಾನಗರ

Muthoot Finance
ಗೋಲ್ಡ್ ಲೋನ್

ವಿಶ್ವಾಸಾರ್ಹ ಪಾಲುದಾರ
ನಿಮ್ಮ ಎಲ್ಲಾ ಹೊಸ ಆರಂಭದಲ್ಲಿ

ನಿಮ್ಮ ಚಿನ್ನದ ಸಾಲವನ್ನು ಹೆಚ್ಚಿನ ಪ್ರಯೋಜನಗಳಿಗಾಗಿ
ಮುತ್ತೂಟ್ ಫೈನಾನ್ಸ್‌ಗೆ ವರ್ಗಾಯಿಸಿ

- ಹೊಂದಿಸಿಕೊಳ್ಳಬಹುದಾದ ಭಾಗಶಃ ಪಾವತಿ ಮತ್ತು ಭಾಗಶಃ ಬಿಡುಗಡೆ
- ಪೂರಕ ಚಿನ್ನದ ವಿಮಾ ರಕ್ಷಣೆ
- ಪ್ರೊಸೆಸ್ಸಿಂಗ್ ಶುಲ್ಕ ಮತ್ತು ಮೌಲ್ಯಮಾಪನ ಶುಲ್ಕಗಳು ಶೂನ್ಯ
- ತೊಂದರೆ-ರಹಿತ ಮತ್ತು ಕಡಿಮೆ ದಾಖಲೆಗಳು ಅಗತ್ಯ
- ಪ್ರತಿ ವಹಿವಾಟಿನಲ್ಲೂ ಮಿಲಿಗ್ರಾಂ ಚಿನ್ನದ ಬಹುಮಾನಗಳನ್ನು ಗಳಿಸಿ*

1800 202 1212

ಹೆಚ್ಚಿನ ಮೊತ್ತ, ಕಡಿಮೆ ಬಡ್ಡಿ ದರ.*

*T & C apply.

A Muthoot M George Enterprise

ನಗರದಲ್ಲಿ ಇಂದು

ವಿಶ್ವ ಮಹಿಳಾ ದಿನಾಚರಣೆ ಪ್ರಯುಕ್ತ ಮಹಿಳಾ ಕ್ರೀಡಾಕೂಟ-2025: ಉದ್ಘಾಟನೆ: ಜಗದೀಶ ಜಿ., ಕೆ.ಎಸ್. ಲತಾ ಕುಮಾರಿ, ಸ್ಥಳ: ಕಂಠೀರವ ಕ್ರೀಡಾಂಗಣ, ಕಸ್ತೂರಬಾ ರಸ್ತೆ, ಬೆಳಿಗ್ಗೆ 9

'ಸಂಚಾರಿ ಆರೋಗ್ಯ ಘಟಕ' ವಾಹನಗಳ ಚಾಲನಾ ಕಾರ್ಯಕ್ರಮ: ಚಾಲನೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಉಪಸ್ಥಿತಿ: ಸಂತೋಷ್ ಎಸ್. ಲಾಡ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಸ್ಥಳ: ವಿಧಾನಸೌಧ ಪೂರ್ವದ್ವಾರದ ಬೃಹತ್ ಮೆಟ್ಟಿಲುಗಳ ಮೇಲೆ, ಬೆಳಿಗ್ಗೆ 10.30

'ಶಿವೋಹಂ' ನಾಟಕ ಪ್ರದರ್ಶನ: ನಿರ್ದೇಶನ: ಗಣೇಶ್ ಮಂದಾರ್ತಿ, ಆಯೋಜನೆ: ಕ್ರಾನಿಕಲ್ಸ್ ಆಫ್ ಇಂಡಿಯಾ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ನೈಋತ್ಯ ರೈಲ್ವೆ

ಇ-ಟೆಂಡರು ಸಂ.: CPMGSU-2024-11
ದಿನಾಂಕ: 06.03.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಮೈಸೂರು ರೈಲ್ವೆ ನಿಲ್ದಾಣದ ಅಭಿವೃದ್ಧಿಗಾಗಿ ಇಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಮತ್ತು ನಿರ್ಮಾಣ (ಇಪಿಸಿ) ಮಾದರಿಯಲ್ಲಿ ಸಿಬ್ಬಂದಿ ನಿವಾಸಗಳು ಮತ್ತು ಸರ್ವೀಸ್ ಕಟ್ಟಡಗಳು, ಕೆಲವು ಕಟ್ಟಡ ರಚನೆಗಳನ್ನು ಕಿತ್ತು ಹಾಕುವುದು, ಬ್ರಿಡ್ಜ್‌ಗಳ ವಿಸ್ತರಣೆ, ರೀಟೇನಿಂಗ್ ಗೋಡೆಗಳು ಮತ್ತು ಅದಕ್ಕೆ ಸಂಬಂಧಪಟ್ಟ ಕಾಮಗಾರಿಗಳು, ಎಲೆಕ್ಟ್ರಿಕಲ್ ಮತ್ತು ದೂರಸಂಪರ್ಕ ಕೆಲಸಗಳು ಸೇರಿದಂತೆ ಒಡ್ಡು ಹಾಕುವದಕ್ಕಾಗಿ ಭೂಮಿಯ ರಚನೆ ಇವೆಲ್ಲವುಗಳನ್ನು ಒಳಗೊಂಡಂತೆ ಸಿವಿಲ್, ಎಲೆಕ್ಟ್ರಿಕಲ್, ರೈಲ್ವೆ ವಿದ್ಯುತೀಕರಣ ಮತ್ತು ಸಿಗ್ನಲ್ & ದೂರಸಂಪರ್ಕ ಕಾಮಗಾರಿಗಳಿಗೆ ಸಂಬಂದಪಟ್ಟಂತೆ ಯೋಜನಾ ನಿರ್ವಹಣೆ ಸೇವೆಗಳ ಒದಗಿಸುವಿಕೆಗಾಗಿ ಅಧಿಕೃತ ಇಂಜಿನಿಯರ್‌ರ ನೇಮಕಾತಿಗಾಗಿ ಪ್ರಸ್ತಾವನೆಯ ಬೇಡಿಕೆ (ಆರ್‌ಎಫ್‌ಪ) ಪ್ರಕ್ರಿಯೆ.	ರೂ. 2,80,62,705.06

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15.04.2025, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಮುಖ್ಯ ಯೋಜನಾ ವ್ಯವಸ್ಥಾಪಕರು / ಗತಿ ಶಕ್ತಿ ಘಟಕ ಮೈಸೂರು
PUB/838/AAF/PRB/SWR/2024-25
South Western Railway - SWR | SWRRLY | SWRRLY

ಸಾರ್ವಜನಿಕ ಪ್ರಕಟಣೆ

ಮೆ. ಸತ್ತ್ವ ರೆಸಿ ಪ್ರೈವೇಟ್ ಲಿಮಿಟೆಡ್, ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಕರ್ನಾಟಕ ರಾಜ್ಯ ಪರಿಸರ ಪ್ರಭಾವ ಮೌಲ್ಯಮಾಪನ ಪ್ರಾಧಿಕಾರವು (ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಸ್ಥಾಪಿಸಲ್ಪಟ್ಟಿದೆ) ಸರ್ವೇ ನಂ. 15/2, 15/3 ಮತ್ತು 16/1 ಕೆಂಚೇನಹಳ್ಳಿ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು, ಬೆಂಗಳೂರು ಜಿಲ್ಲೆ. ಮೆ. ಸತ್ತ್ವ ರೆಸಿ ಪ್ರೈವೇಟ್ ಲಿಮಿಟೆಡ್ ರವರ ಉದ್ದೇಶಿತ ವಸತಿ ಕಟ್ಟಡ ನಿರ್ಮಾಣಕ್ಕಾಗಿ ಪರಿಸರ ಅನುಮತಿಯನ್ನು ನೀಡಿದ್ದು, ಫೈಲ್ ನಂಬರ್ ಎಸ್‌ಇಐಎಎ 137 ಸಿಓಎನ್ 2024, ದಿನಾಂಕ: 27/02/2025 ರಂದು ಮಂಜೂರಾಗಿದೆ, ಹಾಗೂ ಅನುಮತಿ ಪತ್ರದ ಪ್ರತಿಯನ್ನು ಪರಿವೇಶ್ ಪೋರ್ಟಲ್ - ಎಸ್‌ಇಐಎಎ ಕರ್ನಾಟಕ ವೆಬ್‌ಸೈಟ್ http://parivesh.nic.in ನಲ್ಲಿ ಕಾಣಬಹುದು.

ಸಾರ್ವಜನಿಕ ಪ್ರಕಟಣೆ

ಮೆ. ಸತ್ತ್ವ ಸಿಟಿ ಪ್ರೈವೇಟ್ ಲಿಮಿಟೆಡ್, ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಕರ್ನಾಟಕ ರಾಜ್ಯ ಪರಿಸರ ಪ್ರಭಾವ ಮೌಲ್ಯಮಾಪನ ಪ್ರಾಧಿಕಾರವು (ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಸ್ಥಾಪಿಸಲ್ಪಟ್ಟಿದೆ) ಸರ್ವೇ ನಂ. 4/2, 4/3, 5/2, 45, 67P ಮೀನುಕುಂಟೆ ಗ್ರಾಮ, ಮತ್ತು 43P, 167, 169/1, 169/2, 172/1, 172/2, 172/3, 176/1, 176/2, 177, 178/1, 178/2, 179, 180, 181/2, 185 ದೊಡ್ಡಜಾಲ ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. ಮೆ. ಸತ್ತ್ವ ಸಿಟಿ ಪ್ರೈವೇಟ್ ಲಿಮಿಟೆಡ್ ರವರ ಉದ್ದೇಶಿತ ವಸತಿ ಕಟ್ಟಡ ನಿರ್ಮಾಣಕ್ಕಾಗಿ ಪರಿಸರ ಅನುಮತಿಯನ್ನು ನೀಡಿದ್ದು, ಫೈಲ್ ನಂಬರ್ ಎಸ್‌ಇಐಎಎ 138 ಸಿಓಎನ್ 2024, ದಿನಾಂಕ: 03/03/2025 ರಂದು ಮಂಜೂರಾಗಿದೆ, ಹಾಗೂ ಅನುಮತಿ ಪತ್ರದ ಪ್ರತಿಯನ್ನು ಪರಿವೇಶ್ ಪೋರ್ಟಲ್ - ಎಸ್‌ಇಐಎಎ ಕರ್ನಾಟಕ ವೆಬ್ ಸೈಟ್ http://parivesh.nic.in ನಲ್ಲಿ ಕಾಣಬಹುದು.

ಬಿಬಿಎಂಪಿ ಗಾಜಿನ ಮನೆಯಲ್ಲಿ ಭಾರತಿ, ಜಯಮಾಲಾ, ಸರಿತಾ, ಅಂಬಿಕಾ ಗೀತಾಗೆ ಗೌರವ

ನಟಿಯರಿಗೆ 'ದಿಟ್ಟ ಮಹಿಳಾ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

'ದಿಟ್ಟ ಮಹಿಳಾ ಪ್ರಶಸ್ತಿ' ಸ್ವೀಕರಿಸಿದ ನಟಿಯರಾದ ಅಂಬಿಕಾ, ಸರಿತಾ, ಭಾರತಿ ವಿಷ್ಣುವರ್ಧನ್, ಜಯಮಾಲಾ, ಗೀತಾ, ನಿರ್ಮಾಪಕಿಯರಾದ ಪೂರ್ಣಿಮಾ ರಾಮ್‌ಕುಮಾರ್, ಲಕ್ಷ್ಮೀ ಗೋವಿಂದರಾಜು ಪ್ರಜಾವಾಣಿ ಚಿತ್ರ

ಬೆಂಗಳೂರು: 'ಮಹಿಳೆ ಸ್ವಾಭಿಮಾನಿಯಾಗಿ ಬದುಕುತ್ತಾಳೆ. ಒಂದು ಹೆಣ್ಣಿನ ಹಿಂದೆ ಪುರುಷರ ಸಹಕಾರ ಇರಬೇಕು. ಈ ನಿಟ್ಟಿನಲ್ಲಿ ವರನಟ ರಾಜ್‌ಕುಮಾರ್ ಹಾಗೂ ಪಾರ್ವತಮ್ಮ ಅವರನ್ನು ಮರೆಯುವಂತಿಲ್ಲ' ಎಂದು ನಟಿ ಸರಿತಾ ಹೇಳಿದರು.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸೋಮವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ 'ದಿಟ್ಟ ಮಹಿಳಾ ಪ್ರಶಸ್ತಿ' ಸ್ವೀಕರಿಸಿ ಅವರು ಮಾತನಾಡಿದರು.

'ಐಎಎಸ್, ಐಪಿಎಸ್‌ನಂತಹ ಉನ್ನತ ಹುದ್ದೆಗಳಲ್ಲಿ ಇಂದು ಮಹಿಳೆ ಪ್ರತಿದಿನ ಸಾಧನೆ ಮಾಡುತ್ತಿದ್ದಾಳೆ. ನನಗೂ ಉನ್ನತ ವ್ಯಾಸಂಗ ಮಾಡಬೇಕೆಂಬ ಹಂಬಲವಿತ್ತು. ಅದು ಸಾಧ್ಯವಾಗದೆ, ನಟಿಯಾದೆ' ಎಂದರು.

ನಟಿ ಭಾರತಿ ವಿಷ್ಣುವರ್ಧನ್ ಮಾತನಾಡಿ, 'ಮಹಿಳೆಯರಿಗೆ ದಿಟ್ಟತನ ಇರಬೇಕು, ಆಸೆಗಳ ಹಿಂದೆ ಹೋಗಬಾರದು. ಇರುವುದರಲ್ಲಿ ತೃಪ್ತಿ ಪಟ್ಟುಕೊಂಡು ಜೀವನ ಸಾಗಿಸಬೇಕು' ಎಂದು ಅಭಿಪ್ರಾಯಪಟ್ಟರು. '20 ವರ್ಷಗಳ ನಂತರ ಕನ್ನಡ ನಟಿಯರು, ನಿರ್ಮಾಪಕಿಯರನ್ನು ಒಂದೇ ವೇದಿಕೆಯಲ್ಲಿ ನೋಡುವ ಸೌಭಾಗ್ಯ ನನ್ನದಾಗಿದೆ. ಕನ್ನಡ ನಾಡಿನ ಜನರನ್ನು ನೋಡಿ ಬಹಳ ಸಂತೋಷವಾಯಿತು' ನಟಿ ಗೀತಾ ಹೇಳಿದರು.

ನಟಿ ಜಯಮಾಲಾ ಮಾತನಾಡಿ, 'ಬೆಳಿಗ್ಗೆ ಎದ್ದು ನಗರ ಸ್ವಚ್ಛ ಮಾಡುವ ಪೌರ ಕಾರ್ಮಿಕ ಮಹಿಳೆಯರು ಇನ್ನೊಬ್ಬರ ಬದುಕು ಹಸನು ಮಾಡುವ ಸ್ವಚ್ಛತಾ ವಾರಿಯರ್ಸ್' ಎಂದರು.

ಕನ್ನಡ ಚಲನಚಿತ್ರ ರಂಗದ ದಿಟ್ಟ ಮಹಿಳೆ ಪಾರ್ವತಮ್ಮ ರಾಜ್‌ಕುಮಾರ್ ಅವರು, ಅನೇಕ ಕಲಾವಿದರಿಗೆ ಅವಕಾಶ ನೀಡಿದ್ದರು ಎಂದು ನೆನಪಿಸಿಕೊಂಡರು.

ನಟಿ ಅಂಬಿಕಾ ಮಾತನಾಡಿ, 'ಒಬ್ಬ ಮಹಿಳೆ ಇನ್ನೊಬ್ಬ ಮಹಿಳೆಗೆ ಸಹಕಾರ, ಬೆಂಬಲ ನೀಡಬೇಕು' ಎಂದರು.

ನಿರ್ಮಾಪಕಿಯರಾದ ಲಕ್ಷ್ಮೀ ಗೋವಿಂದರಾಜು, ಪೂರ್ಣಿಮಾ ರಾಮ್ ಕುಮಾರ್, ಸಹಾಯಕ ಪೊಲೀಸ್ ಕಮಿಷನರ್ ಗೀತಾ, ದೂರದರ್ಶನದ ಮುಖ್ಯಸ್ಥೆ ಆರತಿ ಎಚ್.ಎನ್, ಪೊಲೀಸ್ ಇನ್‌ಸ್ಪೆಕ್ಟರ್ ಪ್ರಶೀಲ, ಬೆಂಗಳೂರು ನಗರ ಜಿಲ್ಲಾ ಚೆಸ್ ಅಸೋಸಿಯೇಷನ್ ಅಧ್ಯಕ್ಷೆ ಸೌಮ್ಯ, ವಕೀಲೆ ಶ್ರುತಿ, ಪತ್ರಕರ್ತೆಯರಾದ ಮಧು ನಾಗರಾಜ್, ಕಾವ್ಯಶ್ರೀ ರಾಘವಸೂರ್ಯ, ಪ್ರಗತಿ, ರ್‍ಯಾಪಿಡ್ ರಶ್ಮಿ, ಡಾ.ಪೂರ್ವಿ ಜಯರಾಜ್ ಅವರಿಗೂ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್, ನಟಿ ವಿನಯಪ್ರಸಾದ್ ಉಪಸ್ಥಿತರಿದ್ದರು. ಹಿನ್ನೆಲೆ ಗಾಯಕಿ ಅನುರಾಧ ಭಟ್ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಕೆಎಸ್‌ಆರ್‌ಟಿಸಿ, ಬಿಎಂಟಿಸಿಗೆ ಪ್ರಶಸ್ತಿ

ಬೆಂಗಳೂರು: ದೇಶದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಒಕ್ಕೂಟದ (ಎಎಸ್‌ಆರ್‌ಟಿಯು) 2023-24ನೇ ಸಾಲಿನ ಮೂರು ರಾಷ್ಟ್ರೀಯ ಪ್ರಶಸ್ತಿಗಳನ್ನು ಕೆಎಸ್‌ಆರ್‌ಟಿಸಿ ಮತ್ತು ಒಂದು ರಾಷ್ಟ್ರೀಯ ಪ್ರಶಸ್ತಿಯನ್ನು ಬಿಎಂಟಿಸಿ ಪಡೆದಿವೆ.

ದೇಶದ 62 ಸಾರಿಗೆ ಸಂಸ್ಥೆಗಳ ಸದಸ್ಯತ್ವ ಹೊಂದಿರುವ ಎಎಸ್‌ಆರ್‌ಟಿಯು ಭಾರತ ಸರ್ಕಾರದ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯದ ನಿರ್ದೇಶನದಂತೆ ಕಾರ್ಯ ನಿರ್ವಹಿಸುವ ಸಂಘಟನೆಯಾಗಿದೆ.

ಅಶ್ವಮೇಧ ಬ್ರ್ಯಾಂಡಿಂಗ್, ವರ್ಚಸ್ಸು ಅಭಿವೃದ್ಧಿ, ಕಾರ್ಮಿಕರ ಕಲ್ಯಾಣಕ್ಕಾಗಿ ಕೈಗೊಂಡಿರುವ ವಿನೂತನ ಯೋಜನೆಗಳು ಹಾಗೂ ಗಣಕೀಕರಣಕ್ಕಾಗಿ ಕೆಎಸ್‌ಆರ್‌ಟಿಸಿಗೆ ಮೂರು ಪ್ರಶಸ್ತಿಗಳು ಲಭಿಸಿವೆ.

ಮೆಟ್ರೊ ಫೀಡರ್ ಕ್ಯೂಆರ್ ಕೋಡ್ ಮೂಲಕ ಡಿಜಿಟಲ್ ಪ್ರಯೋಗಕ್ಕಾಗಿ ಬಿಎಂಟಿಸಿಗೆ ಪ್ರಶಸ್ತಿ ನೀಡಲಾಗಿದೆ. ನವದೆಹಲಿಯಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಕಿರಣ್ ಬೇಡಿ ಪ್ರಶಸ್ತಿ ಪ್ರದಾನ ಮಾಡಿದರು.

ಕೆಎಸ್‌ಆರ್‌ಟಿಸಿಯ ಉಪಮುಖ್ಯ ಸಂಚಾರ ವ್ಯವಸ್ಥಾಪಕ ಗುರುರಾಜ್ ಎಚ್, ಕಾರ್ಮಿಕ ಕಲ್ಯಾಣಾಧಿಕಾರಿ ರಾಧಾ, ಬಿಎಂಟಿಸಿಯ ಗಣಕ ಶಾಖೆಯ ಸಹಾಯಕ ಸಂಚಾರ ಅಧೀಕ್ಷಕಿ ಯಶೋದಾ ಪ್ರಶಸ್ತಿ ಸ್ವೀಕರಿಸಿದರು. ಕೆಎಸ್‌ಆರ್‌ಟಿಸಿಯಲ್ಲಿ 26 ವರ್ಷಗಳಿಂದ ಚಾಲಕ ಕಂ ನಿರ್ವಾಹಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸುಲೋಚನಾ ದೇವಿ, ಬಿಎಂಟಿಸಿಯಲ್ಲಿ ನಿರ್ವಾಹಕರಾಗಿರುವ ಸವಿತಾ, ಸಿ.ಎನ್. ಕುಸುಮಾ, ಮಂಜುಳಾ ಅವರನ್ನು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಸನ್ಮಾನಿಸಲಾಯಿತು.

6 ಕೃತಿಗೆ ದತ್ತಿನಿಧಿ ಬಹುಮಾನ, 4 ಕೃತಿಗೆ ಪುಸ್ತಕ ಪ್ರಶಸ್ತಿ

ತುಳು ಅಕಾಡೆಮಿ: ಪುಸ್ತಕ ಬಹುಮಾನ

ಪ್ರಜಾವಾಣಿ

ಮಂಗಳೂರು: ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ 2022ನೇ ಹಾಗೂ 2023ನೇ ಸಾಲಿನ ಪುಸ್ತಕ ಪ್ರಶಸ್ತಿ ಹಾಗೂ ದತ್ತಿ ನಿಧಿ ಪುಸ್ತಕ ಪುರಸ್ಕಾರ ಪ್ರಕಟಗೊಂಡಿದೆ.

ನಾಲ್ವರು ಲೇಖಕರಿಗೆ ವಾರ್ಷಿಕ ಪುಸ್ತಕ ಬಹುಮಾನ ಹಾಗೂ 6 ಲೇಖಕರಿಗೆ ವಾರ್ಷಿಕ ದತ್ತಿ ನಿಧಿ ಪುಸ್ತಕ ಬಹುಮಾನವನ್ನು ಪ್ರಕಟಿಸಲಾಗಿದೆ.

2022ನೇ ಸಾಲಿನ ತುಳು ಕವನ ವಿಭಾಗದ ಪುಸ್ತಕ ಬಹುಮಾನಕ್ಕೆ ರಾಜೇಶ್ ಶೆಟ್ಟಿ ದೋಟ ಅವರ 'ಮುಗದಾರಗೆ' ಕವನ ಸಂಕಲನ, 2023ನೇ ಸಾಲಿನ ತುಳು ಕವನ ವಿಭಾಗಕ್ಕೆ ರಘು ಇಡ್ಕಿದು ಅವರ 'ಎನ್ನ ನಲಿಕೆ' ಕವನ ಸಂಕಲನ, 2023ನೇ ಸಾಲಿನ ತುಳು ಕಾದಂಬರಿ ಬಹುಮಾನಕ್ಕೆ ರಾಜಶ್ರೀ ಟಿ. ರೈ ಪೆರ್ಲ ಅವರ 'ಮುಸ್ರಾಲೋ ಪಟ್ಟೊ' ಕಾದಂಬರಿ, 2023ನೇ ಸಾಲಿನ ತುಳು ಅನುವಾದ ವಿಭಾಗದ ಪುಸ್ತಕ ಬಹುಮಾನಕ್ಕೆ ಕುಶಲಾಕ್ಷಿ ವಿ. ಕುಲಾಲ್ ಅವರ 'ತಗೊರಿ ಮಿತ್ತ್ದ ಮಣ್ಣ್' ಅನುವಾದ ಕೃತಿ ಆಯ್ಕೆಯಾಗಿದೆ. ಈ ಪುಸ್ತಕ ಪ್ರಶಸ್ತಿಯು ₹25 ಸಾವಿರ ನಗದು, ಸ್ಮರಣಿಕೆ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ.

2022ನೇ ಸಾಲಿನ ಉಷಾ ಪಿ. ರೈ ದತ್ತಿ ನಿಧಿ ಪ್ರಶಸ್ತಿಗೆ ಕಬ್ಬಿನಾಲೆ ವಸಂತ ಭಾರದ್ವಾಜ್ ಅವರ 'ತುಳು ಕಾವ್ಯ ಮೀಮಾಂಸೆ' ಕೃತಿ, 2023ನೇ ಪ್ರಶಸ್ತಿಗೆ ಚಿನ್ನಪ್ಪ ಗೌಡ ಅವರ 'ಕರಾವಳಿ ಕಥನ' ಕೃತಿ, 2022ನೇ ಸಾಲಿನ ದಿ. ಕೆ. ಅಮರನಾಥ ಶೆಟ್ಟಿ ದತ್ತಿ ಪ್ರಶಸ್ತಿಗೆ ಯಶೋದಾ ಮೋಹನ್ ಅವರ 'ದೇರ ಮಾಮುನ ದೂರ ನೋಟೊಲು' ಕೃತಿ, 2023ನೇ ಸಾಲಿನ ಪ್ರಶಸ್ತಿಗೆ ವಿ.ಕೆ. ಯಾದವ್ ಅವರ 'ಮೊಗವೀರೆರ್ನ ಸಾಂಸ್ಕೃತಿಕ ಬದ್ಕ್ ಬೊಕ್ಕ ಆರ್ಥಿಕ ಚಿಂತನೆ' ಕೃತಿಯು ಆಯ್ಕೆಯಾಗಿದೆ.

2022ನೇ ಸಾಲಿನ ದಿ. ಶಿವಾನಂದ ಕರ್ಕೇರ ದತ್ತಿನಿಧಿ ಪ್ರಶಸ್ತಿಗೆ ಶಾರದಾ ಅಂಚನ್ ಅವರ 'ನಂಬಿ ಸತ್ಯೊಲು' ಕೃತಿ, 2023ನೇ ಸಾಲಿನ ಪ್ರಶಸ್ತಿಗೆ ರಘುನಾಥ ವರ್ಕಾಡಿ ಅವರ 'ಸೂರ್ಯ ಚಂದ್ರ ಸಿರಿ' ಕೃತಿ ಆಯ್ಕೆಯಾಗಿದೆ. ಈ ದತ್ತಿನಿಧಿ ಪ್ರಶಸ್ತಿಗಳು ₹10 ಸಾವಿರ ನಗದು, ಸ್ಮರಣಿಕೆ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿವೆ.

ಪ್ರಶಸ್ತಿ ಪ್ರದಾನ ಸಮಾರಂಭವು ಮಾ.15ರಂದು ಬೆಳಿಗ್ಗೆ 10 ಗಂಟೆಗೆ ಮಂಗಳೂರಿನ ಉರ್ವ ಸ್ಟೋರ್‌ನಲ್ಲಿರುವ ತುಳು ಭವನದಲ್ಲಿ ನಡೆಯಲಿದೆ ಎಂದು ಅಕಾಡೆಮಿ ಅಧ್ಯಕ್ಷ ತಾರಾನಾಥ್ ಗಟ್ಟಿ ಕಾಪಿಕಾಡ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೈಋತ್ಯ ರೈಲ್ವೆ

ಇ-ಟೆಂಡರು ಸಂ.: CPMGSU-2024-11
ದಿನಾಂಕ: 06.03.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಮೈಸೂರು ರೈಲ್ವೆ ನಿಲ್ದಾಣದ ಅಭಿವೃದ್ಧಿಗಾಗಿ ಇಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಮತ್ತು ನಿರ್ಮಾಣ (ಇಪಿಸಿ) ಮಾದರಿಯಲ್ಲಿ ಸಿಬ್ಬಂದಿ ನಿವಾಸಗಳು ಮತ್ತು ಸರ್ವೀಸ್ ಕಟ್ಟಡಗಳು, ಕೆಲವು ಕಟ್ಟಡ ರಚನೆಗಳನ್ನು ಕಿತ್ತು ಹಾಕುವುದು, ಬ್ರಿಡ್ಜ್‌ಗಳ ವಿಸ್ತರಣೆ, ರೀಟೇನಿಂಗ್ ಗೋಡೆಗಳು ಮತ್ತು ಅದಕ್ಕೆ ಸಂಬಂಧಪಟ್ಟ ಕಾಮಗಾರಿಗಳು, ಎಲೆಕ್ಟ್ರಿಕಲ್ ಮತ್ತು ದೂರಸಂಪರ್ಕ ಕೆಲಸಗಳು ಸೇರಿದಂತೆ ಒಡ್ಡು ಹಾಕುವದಕ್ಕಾಗಿ ಭೂಮಿಯ ರಚನೆ ಇವೆಲ್ಲವುಗಳನ್ನು ಒಳಗೊಂಡಂತೆ ಸಿವಿಲ್, ಎಲೆಕ್ಟ್ರಿಕಲ್, ರೈಲ್ವೆ ವಿದ್ಯುತೀಕರಣ ಮತ್ತು ಸಿಗ್ನಲ್ & ದೂರಸಂಪರ್ಕ ಕಾಮಗಾರಿಗಳಿಗೆ ಸಂಬಂದಪಟ್ಟಂತೆ ಯೋಜನಾ ನಿರ್ವಹಣೆ ಸೇವೆಗಳ ಒದಗಿಸುವಿಕೆಗಾಗಿ ಅಧಿಕೃತ ಇಂಜಿನಿಯರ್‌ರ ನೇಮಕಾತಿಗಾಗಿ ಪ್ರಸ್ತಾವನೆಯ ಬೇಡಿಕೆ (ಆರ್‌ಎಫ್‌ಪ) ಪ್ರಕ್ರಿಯೆ.	ರೂ. 2,80,62,705.06

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15.04.2025, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಮುಖ್ಯ ಯೋಜನಾ ವ್ಯವಸ್ಥಾಪಕರು / ಗತಿ ಶಕ್ತಿ ಘಟಕ ಮೈಸೂರು
PUB/838/AAF/PRB/SWR/2024-25
South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಇ-ಟೆಂಡರು ಸೂಚನೆ ಸಂ. 62/2024, ದಿನಾಂಕ: 05.03.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ	ಟೆಂಡರು ದಿನಾಂಕ
1	ಎಲ್ 8246751ಬಿ	ಅನುಬಂಧ-1 ಮತ್ತು ಅನುಬಂಧ-2 ಕ್ಕೆ ಅನುಗುಣವಾಗಿ ಹೆವಿ ಡ್ಯೂಟಿ ಶೆಲ್ವಿಂಗ್ ಸಿಸ್ಟಮ್ ಮತ್ತು ಸೆಲೆಕ್ಟಿವ್ ಪ್ಯಾಲೆಟ್ ರ್‍ಯಾಕಿಂಗ್ ಸಿಸ್ಟಮ್‌ಅನ್ನು ಒಳಗೊಂಡಿರುವ ಪ್ಯಾಲೆಟ್ ರ್‍ಯಾಕಿಂಗ್ ಸಿಸ್ಟಮ್‌ನ ಪೂರೈಕೆ, ಸ್ಥಾಪನೆ ಮತ್ತು ಕಾರ್ಯಾರಂಭ (ಪರಿಮಾಣ: 01 ಸೆಟ್).	31.03.2025 10:30 ಗಂಟೆಗೆ
2	ಎಲ್ 8255023ಎ	300 ಸಿಎಫ್‌ಎಂ, 10.0-10.5 ಕೆಜಿ/ಸೆಮೀ2 ನ ಎಲೆಕ್ಟ್ರಿಕ್ ಚಾಲಿತ, ರೋಟರಿ ಸ್ಕ್ರೂ, ಏರ್-ಕೂಲ್ಡ್, ಮೈಕ್ರೋಪ್ರೊಸೆಸರ್ ಆಧಾರಿತ ಸ್ಟೇಷನರಿ ಏರ್ ಕಂಪ್ರೆಸರ್‌ನ ವಿನ್ಯಾಸ, ಪೂರೈಕೆ, ಸ್ಥಾಪನೆ, ಕಾರ್ಯಾರಂಭ ಮತ್ತು ಮಶೀನ್‌ನಿಂದ ಸಾಬೀತು ಮಾಡಿ ತೋರಿಸುವುದು. (ಪರಿಮಾಣ: 03 ನಂ.).	01.04.2025 10:30 ಗಂಟೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/834/AAF/PRB/SWR/2024-25 ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು
South Western Railway - SWR | SWRRLY | SWRRLY

ಶಿಕ್ಷಣಕ್ಕೆ ದೊರೆಸ್ವಾಮಿ ಅನನ್ಯ ಕೊಡುಗೆ: ಹೊರಟ್ಟಿ

ಪ್ರಜಾವಾಣಿ ವಾರ್ತೆ



ದೊರೆಸ್ವಾಮಿ

ಬೆಂಗಳೂರು: 'ರಾಜ್ಯದ ಶೈಕ್ಷಣಿಕ ಅಭಿವೃದ್ಧಿಗೆ ಅನನ್ಯ ಕೊಡುಗೆ ನೀಡಿರುವ ಎಂ.ಆರ್. ದೊರೆಸ್ವಾಮಿ ಅವರು ತಮ್ಮ ಶಿಸ್ತು, ಸಂಯಮ, ಪರಿಶ್ರಮ ಮತ್ತು ದಣಿವರಿಯದ ದುಡಿಮೆಯಿಂದಾಗಿ ಶಿಕ್ಷಣ ಕ್ಷೇತ್ರದ ದೊರೆ ಆಗಿದ್ದರು' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಮಾರ್ಚ್ 6ರಂದು ದೊರೆಸ್ವಾಮಿ ಅವರು ನಿಧನ ಹೊಂದಿದ್ದರು. ವಿಧಾನ ಪರಿಷತ್‌ನಲ್ಲಿ ಸೋಮವಾರ ಸಂತಾಪ ಸೂಚನೆ ಮಂಡಿಸಿ ಮಾತನಾಡಿದ ಹೊರಟ್ಟಿ, '2008ರಿಂದ 2014ರವರೆಗೆ ವಿಧಾನ ಪರಿಷತ್ತಿಗೆ ನಾಮನಿರ್ದೇಶನ ಹೊಂದಿದ ಸದಸ್ಯರಾಗಿ ಅವರು ಸೇವೆ ಸಲ್ಲಿಸಿದ್ದರು' ಎಂದರು.

'ಪಿಇಎಸ್ ಶಿಕ್ಷಣ ಸಂಸ್ಥೆ ಕಟ್ಟಿ ಶಾಲಾ ಹಂತದಿಂದ ವಿಶ್ವವಿದ್ಯಾಲಯದ ಮಟ್ಟಕ್ಕೆ ಕೊಂಡೊಯ್ಯುವಲ್ಲಿ ಯಶಸ್ವಿಯಾದ ಅವರು ಶಿಕ್ಷಣೋದ್ಯಮಿಯಾದರು. ಸರ್ಕಾರದ ಶೈಕ್ಷಣಿಕ ಸುಧಾರಣೆಗಳ ಸಲಹೆಗಾರರಾಗಿ ಎರಡು ಬಾರಿ ಕಾರ್ಯನಿರ್ವಹಿಸಿದ್ದರು' ಎಂದರು.

'ಶಿಕ್ಷಣ ಕ್ಷೇತ್ರದ ಸುಧಾರಣೆಗೆ ಅವರ ಕೊಡುಗೆಗಾಗಿ ರಾಜ್ಯ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ ನೀಡಿ ಪುರಸ್ಕರಿಸಿದೆ. ಯುಎಸ್ ಶಿಕ್ಷಣ ಸಂಸ್ಥೆಯಿಂದ ಫುಲ್‌ಬ್ರೈಟ್ ಫೆಲೋಶಿಪ್, ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದಿರುವ ಅವರು, ಹಲವು ಪ್ರಶಸ್ತಿ, ಪುರಸ್ಕಾರಗಳಿಗೂ ಭಾಜನರಾಗಿದ್ದರು' ಎಂದರು. ದೊರೆಸ್ವಾಮಿ ಅವರ ನಿಧನಕ್ಕೆ ಸಭಾ ನಾಯಕ ಎನ್.ಎಸ್. ಬೋಸರಾಜು ಮತ್ತು ವಿರೋಧ ಪಕ್ಷದ ಪರವಾಗಿ ಬಿಜೆಪಿಯ ಸಿ.ಟಿ. ರವಿ ಸಂತಾಪ ಸೂಚಿಸಿದರು.

'ಶಿಕ್ಷಣದಿಂದಷ್ಟೇ ಬಡತನ ನಿರ್ಮೂಲನೆ'

ಬೆಂಗಳೂರು: 'ಶಿಕ್ಷಣ ಮತ್ತು ತಂತ್ರಜ್ಞಾನದಿಂದ ಮಾತ್ರ ಬಡತನ ನಿರ್ಮೂಲನೆ ಸಾಧ್ಯ' ಎಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ ಅಭಿಪ್ರಾಯಪಟ್ಟರು. ಬೆಂಗಳೂರು ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಟಿ) ಘಟಕದಿಂದ ಆಯೋಜಿಸಿದ್ದ ಎಸ್‌ಸಿ ಮತ್ತು ಎಸ್‌ಟಿ ಸಂಶೋಧನಾ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಿಧನ ವಾರ್ತೆ

ನಾರಾಯಣಪ್ಪ

ಬೆಂಗಳೂರು: ಬನಶಂಕರಿಯ ಬನಗಿರಿ ನಗರದ ನಿವಾಸಿ ನಿವೃತ್ತ ಸರ್ವೇಯರ್ ದೇವನಹಳ್ಳಿ ನಾರಾಯಣಪ್ಪ (89) ವಯೋಸಹಜ ಅನಾರೋಗ್ಯದಿಂದಾಗಿ ಸೋಮವಾರ ಮಧ್ಯಾಹ್ನ ನಿಧನರಾಗಿದ್ದಾರೆ.ಮೃತರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ 12 ಗಂಟೆಗೆ ನಗರದ ವಿಲ್ಸನ್ ಗಾರ್ಡನ್ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಅಯ್ಯನ್ ದೊರೈ

ಬೊಮ್ಮನಹಳ್ಳಿ: ಸಿಪಿಎಂನ ಮುಖಂಡ ಅಯ್ಯನ್ ದೊರೈ (68) ಅವರು ಅನಾರೋಗ್ಯದಿಂದಾಗಿ ನಿಧನರಾದರು.

ಮೃತರಿಗೆ ಪತ್ನಿ, ಮೂವರು ಪುತ್ರರು ಹಾಗೂ ಒಬ್ಬರು ಪುತ್ರಿ ಇದ್ದಾರೆ. ಬೆಂಗಳೂರಿಗೆ ವಲಸೆ ಬಂದು ಹೊಸೂರು ರಸ್ತೆಯ ಕೂಡ್ಲುಗೇಟ್ ಬಳಿ ಪತ್ತಿ ಸಿಲ್ಕ್ ಎಂಬ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಾಗ ಮಾಲೀಕರ ಶೋಷಣೆ ವಿರುದ್ಧ ಸಂಘ ಕಟ್ಟಿ ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಡಿದ್ದರು. ನಂತರ ಅವರು ಸಿಪಿಎಂ ಪಕ್ಷದ ಸೇರಿದ್ದರು. ಗಾರ್ವೆಬಾವಿಪಾಳ್ಯದ ಲಕ್ಷ್ಮಿಲೇಔಟ್‌ನಲ್ಲಿ ನೆಲಸಿದ್ದರು.

ಹೊಸಪಾಳ್ಯದ ಚಿತಾಗಾರದಲ್ಲಿ ಸೋಮವಾರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

CONNECT ಕ್ಲಾಸಿಫೈಡ್ಸ್

ನ್ಯಾಷನಲ್ ಸಿಲ್ಕ್ ಎಕ್ಸ್ ಪೋ
ನೈಸರ್ಗಿಕ ನಾರು ರೇಷ್ಮೆಯ ಪ್ರದರ್ಶನ ಮತ್ತು ಮಾರಾಟ
ಸಿಲ್ಕ್, ಕಾಟನ್ ಸೀರೆ | ಡಿಸೈನ್ & ಸಾಂಪ್ರದಾಯಿಕ ಉಡುಗೆ | ಕುರ್ತಿ | ಇನ್ನೂ ಹಲವು
ಮಾರ್ಚ್ 8 ರಿಂದ 15ರ ವರೆಗೆ
ಹೊಸ ಹಾಗೂ ಇತ್ತೀಚಿನ ವೈವಿಧ್ಯಮಯ ವಿನ್ಯಾಸಗಳೊಂದಿಗೆ ಮದುವೆಯ ವಿಶೇಷ ಸಂಗ್ರಹ
ಭಾರತದಾದ್ಯಂತದ ಅಧಿಕೃತ ನೇಯ್ಗೆ ತಜ್ಞರಿಂದ ತಯಾರಿಸಿದ ಶುದ್ಧ ರೇಷ್ಮೆ ಮತ್ತು ಹತ್ತಿ ಸೀರೆಗಳು
ಬನಾರಸ್ ಸಿಲ್ಕ್, ಜಾಮದನಿ, ಲಕ್ನೋ ಚಿಕಾನ್, ಕಾಂಚಿಪುರಂ, ಬಿಹಾರ್ ಟಸ್ಸಾರ್ ಮತ್ತು ಮಟ್ಕಾ ಸಿಲ್ಕ್, ಚತ್ತೀಸ್‌ಗಢ್ ಕೊಸಾ ಸಿಲ್ಕ್, ಗುಜರಾತ್ ಪಟೋಲಾ ಮತ್ತು ಬಾಂಧಿನಿ, ಪಶ್ಚಿಮ ಬಂಗಾಳದ ಬಯಾಲು, ಬಲೂಚರಿ, ಢಕಾಯಿ ಜಾಮದನಿ, ಬಲುಚರಿ, ಕಾಂತಾ ಮತ್ತು ಹ್ಯಾಂಡ್ ಪ್ರಿಂಟೆಡ್ ಸಿಲ್ಕ್, ಧರ್ಮಾವರಂ, ಪೈಥಾನಿ, ಚಾಂದೇರಿ, ಎರಿ (ಅಹಿಂಸಾ) ಸೀರೆ, ಶಿಬೋರಿ & ಅಜ್ರಾಕ್ ಪ್ರಿಂಟ್, ಹ್ಯಾಂಡ್ ಕಲಾಂಕರಿ, ರಾಜಸ್ಥಾನಿ ಬಾಂಧಿನಿ, ಬ್ಲಾಕ್ ಪ್ರಿಂಟ್, ಡ್ರೆಸ್ ಮಟೀರಿಯಲ್ & ದೇಶಾದ್ಯಂತದ ಇನ್ನೂ ಅನೇಕ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ
ಸಿಂಧೂರ್ ಕನ್ವೆನ್ಷನ್ ಸೆಂಟರ್
15ನೇ ಕ್ರಾಸ್, ಸಾರಕ್ಕಿ 1ನೇ ಹಂತ, ಜೆ.ಪಿ.ನಗರ, ರಿಂಗ್ ರಸ್ತೆ, ಬೆಂಗಳೂರು
UP TO 50% DISCOUNT BY WEAVERS
M: 9412258826 | Entry Free | All Debit & Credit Cards Accepted
GRAMIN HASTKALA VIKAS SAMITI

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

The general public is hereby informed that, on behalf of our Client, we are investigating the right, title and interest in relation to the property described in the Schedule below ("Schedule Property") which is owned by K. N. Balakrishna, son of Narayanaswamy K. B. The Owner has represented that he is the absolute owner of the Schedule Property having unrestricted rights of alienation over the same.

Any person, including any individuals, corporate bodies, partnership firms, banks, financial institutions, other lenders and government bodies having any right, title , interest, claim, benefit, demand or interest in the Schedule Property or any portion thereof by way of sale, lease, mortgage, charge, lien, possession, assignment, attachment, exchange, gift or transfer in any manner, tenancy, license, inheritance, easement, succession, right of way, agreements, settlement, maintenance, decree or order of any Court of Law or in any other manner is hereby called upon to intimate their objections and/or claims in writing along with documentary proof to the undersigned at the address mentioned below within Fifteen (15) days from the date of this notice. If no such objection or claim is received, it would be deemed that no person, except the Owner, has any right, interest or claim in or in relation to the Schedule Property and all rights, interest and claims, if any, which are not notified as stated above shall be treated as waived and not enforceable or binding on our Client and the title of the Owner to the Schedule Property shall be treated as clear and marketable.

SCHEDULE PROPERTY

All that piece and parcel of the land bearing Survey No. 374/6 (Old Survey No. 374/1) measuring 24 Guntas, duly converted for industrial purpose vide Official Memorandum dated 14.12.2020, bearing No. 174094, issued by the office of the Deputy Commissioner, Kandaya Bhavana, Ramanagara, situated at Cheeluru Village, Maralavadi Hobli, Kanakapura Taluk, Ramanagara District and bounded on:

East by : Kanakapura-Bangalore Main Road
West by : Survey No. 191
North by : Survey No. 192
South by : Survey No. 374/4.

Trust Law Advocates & Solicitors
No.29/11, 1st Floor, Udaya Sahakara Bhavana,
Mount Joy Road, 1st Main Road, Bengaluru-560004
Phone No. 080 – 29913089
E-mail Id: narayan@trustlaw.in

KERALA SAMAJAM DOORAVANINAGAR (Regd)
D-69, ITI TOWNSHIP
Bangalore-560016
Website: www.keralasamajam.co.in
TENDER NOTICE
Invite item wise quotations for construction of an RCC framed building in Vijinapura, Bangalore-560016. Interested parties may access NIT from our website.
General Secretary

BUSINESS

Business Offers

Finance

NRI'S INVESTMENTS and finance NOW available (HIGH VALUE FUNDS) on low interest against LANDs & PROPERTIES call -7204995189

JOB OPPORTUNITIES

General

'LIFE GUARD Required for Swimming Pool. Please Contact Mobile 8970050795, Jp nagar phase 2

TOURS & TRAVEL

Travel

VISIT BHUTAN, the most Wonderful Country with Expert Guide and Best Arrangements. GANESH SHENOY 8310028157

PERSONAL

Change of Name

CHANGE OF NAME
I, **KRISHNAVENI S A**, R/at # 356, 5th Main, 4th Cross, HAL 3rd Stage, New Thippasandra, Indiranagar, Bengaluru-560075, declare that my minor son's name is wrongly mentioned in National Institute of Open Schooling applicaiton form as **ANANTHSURYA S P**, his correct name is **ANANTHA SURYA S P** vide affidavit dated 08.03.2025 before Notary A.R.Muneer Ahmed Bengaluru.

I, NIKHIL Abludu Lakshminarayana S/o Lakshminarayana, aged about 28 years, residing behind Bescom Office, Nandi Village and Post, Nandi Hobli, Chikkaballapur Taluk and District. Have changed my name to Nikhil Abloodu Lakshminarayana vide affidavit dated 08.03.2025 before Notary PV Ramachandra reddy Chikkaballapur. Henceforth I shall be called as Nikhil Abloodu Lakshminarayana only.

WE, ABDUL Kareem & Ameenabi Tabassum.S.K, R/a#38, 6thcross, Ramakrishnanagar, J.P.Nagar 6th phase, Bangalore-78, have changed our minor son's name from MOHAMMED ISAAR to MOHAMMED ZUNAIR AHMED, affidavit 10.03.2025, Notary L.Gopalakrishna, Bangalore.

Lost

LOST
I have lost my house original sale deed of 1989. For which, a police complaint has been registered under 155CrPC report no 1512103/2025. If found Contact within 10 days: Joanna 7411319427Address No 29, 3rd Cross, Mudamma Garden, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD | ಪ್ರಜಾವಾಣಿ

Freedom Healthy Cooking Oils
Presents
ಭೂಮಿಕಾ ಕ್ಲಬ್
Powered by manipalhospitals LIFE'S ON

ರೋಚಕ ಆಟಗಳು ಮತ್ತು ಉಡುಗೊರೆಗಳು ನಿಮಗಾಗಿ ಕಾದಿವೆ. ಈ ಮೋಜಿನ ಸಂದರ್ಭವನ್ನು ಮಿಸ್ ಮಾಡಿಕೊಳ್ಳದಿರಿ.

ಬೆಂಗಳೂರಿನ ಮಹಿಳೆಯರಿಗೆ ನಮಸ್ಕಾರ!

ಮತ್ತೊಂದು ಸುತ್ತಿನ ಮೋಜು ಮತ್ತು ಅಪರೂಪದ ಸಮ್ಮಿಲನ ಹೊತ್ತು ನಿಮ್ಮ ಬಳಿಗೆ ಬರಲು ನಾವು ಕಾತರಿಸುತ್ತಿದ್ದೇವೆ. ಎಂದೂ ಮರೆಯಲಾಗದ ಸುಂದರ ಮತ್ತು ಅದ್ಭುತ ಅನುಭವ ನಿಮ್ಮದಾಗಿಸಿಕೊಳ್ಳಲು, ನಿಮ್ಮ ಸ್ನೇಹಿತರು ಮತ್ತು ಕುಟುಂಬ ಸದಸ್ಯರ ಸಮೇತ ನಮ್ಮ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಿರಿ. ಹೊಸ ಸ್ನೇಹಿತೆಯರನ್ನು ಪಡೆಯಿರಿ, ರೋಚಕ ಆಟಗಳನ್ನು ಆನಂದಿಸಿರಿ ಮತ್ತು ಭೂಮಿಕಾ ಕ್ಲಬ್‌ನ 25ನೇ ಆವೃತ್ತಿಯನ್ನು ಇನ್ನಿಲ್ಲದಂತೆ ಅನುಭವಿಸಿರಿ.

ಉದ್ಘಾಟನೆ:
ಅನುಷಾ ರೈ (ನಟಿ & ಬಿಗ್ ಬಾಸ್ ಸ್ಪರ್ಧಿ – ಸೀಸನ್ 11)

15 ಮಾರ್ಚ್ 2025 ಮಧ್ಯಾಹ್ನ 2:30 ಗಂಟೆ
ಸ್ಥಳ: ಇಂದಿರಾನಗರ ಕ್ಲಬ್, 4ನೇ ಅಡ್ಡರಸ್ತೆ, 8ನೇ ಮುಖ್ಯರಸ್ತೆ, ಎಚ್‌ಎಎಲ್ 2ನೇ ಹಂತ, ಇಂದಿರಾನಗರ, ಬೆಂಗಳೂರು

ಒಬ್ಬ ಅದೃಷ್ಟಶಾಲಿ ನೋಂದಾಯಿತರಿಗೆ ₹15000 ಮೌಲ್ಯದ ಬಹುಮಾನ ಗೆಲ್ಲುವ ಅವಕಾಶ
ಉಚಿತ ಪ್ರವೇಶ ನೋಂದಾಯಿಸಲು ಇಲ್ಲಿ ಸ್ಕ್ಯಾನ್ ಮಾಡಿ
ಹೆಚ್ಚಿನ ಮಾಹಿತಿಗಾಗಿ, ಸಂಪರ್ಕಿಸಿ – 73380 18541

ಕಾರ್ಯಕ್ರಮದ ವಿಶೇಷಗಳು
ಪಾವಣಿ ಡಿ & ಪಾವನಿ ಇವರಿಂದ ಪ್ರದರ್ಶನ
ಮಹಿಳಾ ಆರೋಗ್ಯ ಉಪನ್ಯಾಸ – ಮಣಿಪಾಲ್ ಆಸ್ಪತ್ರೆಯ ಜನಪ್ರಿಯ ವೈದ್ಯರು
ಪಾಕಶಾಸ್ತ್ರ ಉಪನ್ಯಾಸ – ತ್ರಿವೇಣಿ ಉತ್ತರ ಕರ್ನಾಟಕ ಅಡುಗೆ ಮನೆ (ಯೂಟ್ಯೂಬ್ ಚಾನೆಲ್)
ಸೈಬರ್ ಕುರಿತು ಉಪನ್ಯಾಸ – ಉಮಾರಾಣಿ ಎಸ್ ಎಸಿಪಿ ಸಿಇಎನ್ ವೆಸ್ಟ್ ಡಿವಿಜನ್, ಬೆಂಗಳೂರು
ಮೋಜು | ಮನರಂಜನೆ | ಹೈ-ಟೀ

ಬಿಬಿಎಂಪಿಯಿಂದ ಕಟ್ಟಡ ನಕ್ಷೆ ಪಡೆಯಲು ನಕಲಿ ದಾಖಲೆ ಅಪ್‌ಲೋಡ್

ಹನ್ನೆರಡು ಮಂದಿ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯಿಂದ ಕಟ್ಟಡ ನಕ್ಷೆ ಪಡೆಯಲು ಆನ್‌ಲೈನ್‌ನಲ್ಲಿ ನಕಲಿ ದಾಖಲೆಗಳನ್ನು ಅಪ್‌ಲೋಡ್ ಮಾಡಿದ ಆರೋಪದ ಮೇರೆಗೆ ಬಿಬಿಎಂಪಿ ಅನುಮೋದಿತ ವಾಸ್ತುಶಿಲ್ಪಿ ಆರ್. ಅರ್ಪಿತಾ ಸೇರಿ 12 ಜನರ ವಿರುದ್ಧ ವಿ.ವಿ.ಪುರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಿಬಿಎಂಪಿ ನಗರ ಯೋಜನೆ ವಿಭಾಗದ (ದಕ್ಷಿಣ) ಸಹಾಯಕ ನಿರ್ದೇಶಕ ಕೆ.ಸಿ.ನಚಿಕೇತ್ ದೂರಿನ ಮೇರೆಗೆ ಮಹಾವೀರ್ ಕುಮಾರ್, ಸುನಿಲ್ ಕುಮಾರ್, ಪ್ರವೀಣ್ ಕುಮಾರ್, ಈಶ್ವರ ಲಾಲ್, ಲಲಿತ ಸಿ ಜೈನ್, ಪ್ರಮೋದ್ ಬಿ ಜೈನ್, ವಿಮಲಾ ಬಾಯಿ, ಭರತ್, ಸುಭಾಷ್, ರಾಜೇಶ್ ಕೆ ಶಾ, ಅರ್ಪಿತಾ, ಮೆಸರ್ಸ್ ಮೈಂಡ್ ವರ್ಕ್ಸ್ ವೆಂಚರ್ಸ್ ಎಲ್.ಎಲ್.ಪಿ ವಿರುದ್ಧ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

‘ವಿ.ವಿಪುರ ವಾಣಿ ವಿಲಾಸ ರಸ್ತೆಯ ಸ್ವತ್ತಿನ ಸಂಖ್ಯೆ 26ಕ್ಕೆ ಕಟ್ಟಡ ನಕ್ಷೆ ಮಂಜೂರಾತಿಗಾಗಿ ಆನ್‌ಲೈನ್ ಮೂಲಕ ಬಿಬಿಎಂಪಿಯಿಂದ ಅನುಮೋದಿತ ವಾಸ್ತುಶಿಲ್ಪಿ ಅರ್ಪಿತಾ ಅವರಿಗೆ ಅರ್ಜಿ ಸಲ್ಲಿಸಲಾಗಿತ್ತು. ನೆಲ ಮತ್ತು ಮೂರು ಅಂತಸ್ತುಗಳ ನಕ್ಷೆ ಮಂಜೂರಾತಿ ನೀಡಲಾಗಿತ್ತು. ಉದ್ದೇಶಿತ ಕಟ್ಟಡದ ಲೈನ್ ಮಾರ್ಕಿಂಗ್ ಪರಿಶೀಲಿಸಲು ಅಧಿಕಾರಿಗಳು ಸ್ಥಳಕ್ಕೆ ತೆರಳಿದ್ದಾಗ, ತಂತ್ರಾಂಶದಲ್ಲಿ ಸಲ್ಲಿಸಿದ್ದ ಛಾಯಾಚಿತ್ರಕ್ಕೂ, ಸ್ಥಳದಲ್ಲಿದ್ದ ಸ್ವತ್ತಿಗೂ ವ್ಯತ್ಯಾಸವಿತ್ತು. ಸ್ವತ್ತಿನ ಸಂಖ್ಯೆ 26ರ ಬದಲು ಸ್ವತ್ತಿನ 29ರ ಛಾಯಾಚಿತ್ರವನ್ನು ಅಪ್‌ಲೋಡ್ ಮಾಡಿ, ವಂಚಿಸಲಾಗಿದೆ’ ಎಂದು ಅಧಿಕಾರಿ ದೂರಿನಲ್ಲಿ ಆರೋಪಿಸಿದ್ದಾರೆ.

‘ವಂಚನೆ ಎಸಗಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಅವರು ಕೋರಿದ್ದಾರೆ.

300 ಕೆ.ಜಿ ಗೋಮಾಂಸ ವಶ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಕುಪ್ಪಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ 300 ಕೆ.ಜಿ ಗೋಮಾಂಸವನ್ನು ಭಾನುವಾರ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಕುಪ್ಪಹಳ್ಳಿಯ ಶ್ರೀನಿವಾಸ್ ಮತ್ತು ಸುರೇಶ್ ಎಂಬುವವರನ್ನು ವಶಕ್ಕೆ ಪಡೆಯಲಾಗಿದೆ.

‘ಜಾನುವಾರುಗಳನ್ನು ವಧಿಸಿ ಮಾಂಸ ಸಂಗ್ರಹಿಸಿದ್ದ ಮಾಹಿತಿ ದೊರೆತಿದ್ದು, ಅಧಿಕಾರಿಗಳು ಮತ್ತು ಪೊಲೀಸರು ಗೋಮಾಂಸ ವಶಕ್ಕೆ ಪಡೆದು ಇಬ್ಬರನ್ನು ಬಂಧಿಸಿದ್ದಾರೆ’ ಎಂದು ತಹಶೀಲ್ದಾರ್ ಅನಿಲ್ ತಿಳಿಸಿದ್ದಾರೆ.

ನಾಯಿ ನಾಪತ್ತೆ: ಠಾಣೆಗೆ ದೂರು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಅಪಾರ್ಟ್‌ಮೆಂಟ್ ಆವರಣದಲ್ಲಿದ್ದ ‘ಗೋ ಗೋ’ ಎಂಬ ಹೆಣ್ಣು ನಾಯಿ ನಾಪತ್ತೆಯಾಗಿದ್ದು, ಹುಡುಕಿ ಕೊಡುವಂತೆ ಪ್ರಾಣಿ ಪ್ರಿಯರೊಬ್ಬರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಕೋಡಿಚಿಕ್ಕನಹಳ್ಳಿ ಲೇಕ್‌ವ್ಯೂವ್ ರೆಸಿಡೆನ್ಸಿ ನಿವಾಸಿ ಪ್ರಾಣಿ ಪ್ರಿಯೆ ನಿರ್ಮಲಾ ಅವರು ನೀಡಿದ ದೂರಿನ ಮೇರೆಗೆ ಮೈಕೊ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ನಾಯಿ ಪತ್ತೆ ಕಾರ್ಯ ಕೈಗೊಂಡಿದ್ದಾರೆ.

‘ಫೆಬ್ರುವರಿ 1ರ ತಡರಾತ್ರಿ 2 ಗಂಟೆಗೆ ರಂಕಾ ಕಾಲೊನಿ ರಸ್ತೆಯಲ್ಲಿ ಕಾರಿನಲ್ಲಿ ಹೋಗುವಾಗ, ಅಪಾರ್ಟ್‌ಮೆಂಟ್ ಗೇಟ್ ಬಳಿ ನಾಲ್ವರು ಅಪರಿಚಿತರು ಚೀಲದಲ್ಲಿ ಏನನ್ನೋ ತೆಗೆದುಕೊಂಡು ಹೋಗುತ್ತಿದ್ದರು. ಬಳಿಕ ರಂಕಾ ಕಾಲೊನಿ ಅಪಾರ್ಟ್‌ಮೆಂಟ್ ನಿವಾಸಿ, ಸ್ನೇಹಿತ ಜಾಯ್ ದೀಪ್ ಫೆಬ್ರುವರಿ 5ರಂದು ನನಗೆ ಕರೆ ಮಾಡಿ, ‘ಗೋ ಗೋ’ ಕಾಣೆಯಾಗಿದೆ ಎಂದು ತಿಳಿಸಿದ್ದರು. ಆಗ ಅಂದು ನಾನು ಕಾರಿನಲ್ಲಿ ಬರುವಾಗ ನಾಲ್ವರು ಅಪರಿಚಿತರು ಅಪಾರ್ಟ್‌ಮೆಂಟ್ ಗೇಟ್ ಬಳಿ ಚೀಲದಲ್ಲಿ ಏನನ್ನೋ ತೆಗೆದುಕೊಂಡು ಹೋಗುತ್ತಿದ್ದ ದೃಶ್ಯ ನೆನಪಾಯಿತು’ ಎಂದು ನಿರ್ಮಾಲಾ ದೂರಿನಲ್ಲಿ ತಿಳಿಸಿದ್ದಾರೆ.

‘ನಾಯಿ ಕಾಣೆಯಾದ ಸಮಯದ ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿ ವೀಕ್ಷಿಸುವಂತೆ ಜಾಯ್ ದೀಪ್‌ಗೆ ಹೇಳಿದ್ದೆ. ಆತ ಆ ಸಮಯದ ದೃಶ್ಯಾವಳಿ ಅಳಿಸಲಾಗಿದೆ ಎಂದು ತಿಳಿಸಿದ್ದರು. ಹಾಗಾಗಿ ನಾಯಿ ನಾಪತ್ತೆ ಹಿಂದೆ ರಂಕಾ ಕಾಲೊನಿ ಅಪಾರ್ಟ್‌ಮೆಂಟ್ ನಿವಾಸಿಗಳ ಬಗ್ಗೆ ಅನುಮಾನವಿದೆ’ ಎಂದು ಹೇಳಿದ್ದಾರೆ.

‘ಜತೆಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೂ ದೂರು ನೀಡಲಾಗಿದೆ. ನಾಯಿ ನಾಪತ್ತೆ ಬಗ್ಗೆ ಪ್ರಶ್ನೆ ಮಾಡಿದರೆ, ಅಪಾರ್ಟ್‌ಮೆಂಟ್ ನಿವಾಸಿಗಳ ಅಸೋಸಿಯೇಷನ್ ಸರಿಯಾಗಿ ಸ್ಪಂದಿಸುತ್ತಿಲ್ಲ. ನ್ಯಾಯ ಕೊಡಿಸಬೇಕು’ ಎಂದು ನಿರ್ಮಲಾ ಮನವಿ ಮಾಡಿದ್ದಾರೆ.

ರಸ್ತೆ ಅಪಘಾತ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಡೆದ ಪ್ರತ್ಯೇಕ ರಸ್ತೆ ಅಪಘಾತಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಪುಲಕೇಶಿನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಲಾರಿ ಡಿಕ್ಕಿ ಹೊಡೆದ ಪರಿಣಾಮ ದ್ವಿಚಕ್ರ ವಾಹನ ಸವಾರ, ಜೀವನಹಳ್ಳಿ ನಿವಾಸಿ ನವೀನ್ ಕುಮಾರ್ (47) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಲಾರಿ ಚಾಲಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಖಾಸಗಿ ಕಂಪನಿ ಉದ್ಯೋಗಿ ನವೀನ್ ಕುಮಾರ್, ಐಟಿಸಿ ಸಾಫ್ಟ್‌ವೇರ್ ಕಂಪನಿ ರಸ್ತೆಯಿಂದ ದೊಡ್ಡಬಾಣಸವಾಡಿ ಕಡೆ ಬೈಕ್‌ನಲ್ಲಿ ಹೋಗುತ್ತಿದ್ದ ವೇಳೆ ಲಾರಿ ಚಾಲಕ ಏಕಾಏಕಿ ಬಲಕ್ಕೆ ಬಂದು ಡಿಕ್ಕಿ ಹೊಡೆದಿದ್ದಾನೆ. ನವೀನ್ ಕುಮಾರ್ ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲೇ ಮೃತಪಟ್ಟರು.

ಮತ್ತೊಂದು ಪ್ರಕರಣದಲ್ಲಿ ಯಲಹಂಕ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅಪರಿಚಿತ ಕಾರು ಡಿಕ್ಕಿ ಹೊಡೆದ ಪರಿಣಾಮ ದ್ವಿಚಕ್ರ ವಾಹನದ ಹಿಂಬದಿ ಸವಾರ, ಕೊಡಿಗೇಹಳ್ಳಿ ಬಾಲಾಜಿ ಲೇಔಟ್ ನಿವಾಸಿ ಸಂದೀಪ್ (42) ಮೃತಪಟ್ಟಿದ್ದಾರೆ. ಸವಾರ ಹರಿಶ್ ಕುಮಾರ್ ಗಾಯಗೊಂಡಿದ್ದಾರೆ.

ಭಾನುವಾರ ರಾತ್ರಿ ಸುಮಾರು 9.30ಕ್ಕೆ ಬೆಂಗಳೂರು-ಬಳ್ಳಾರಿ ಹೆದ್ದಾರಿಯ ಜಕ್ಕೂರು ಕ್ರಾಸ್ ಸಮೀಪದ ಉದಯ ಡಾಬಾ ಬಳಿ ಈ ಘಟನೆ ನಡೆದಿದೆ. ಸಂದೀಪ್ ವೃತ್ತಿಯಲ್ಲಿ ಕ್ಯಾಬ್ ಚಾಲಕ. ಹರೀಶ್ ರಿಯಲ್ ಎಸ್ಟೇಟ್ ಏಜೆಂಟ್ ಆಗಿದ್ದಾರೆ. ಭಾನುವಾರ ಸಂಜೆ ನಿವೇಶನ ನೋಡಿಕೊಂಡು ಬರಲು ಇಬ್ಬರು ದ್ವಿಚಕ್ರ ವಾಹನದಲ್ಲಿ ಹೋಗಿದ್ದರು. ರಾತ್ರಿ ಮನೆಗೆ ವಾಪಸ್ ಬರುವಾಗ ಕಾರು ಡಿಕ್ಕಿ ಹೊಡೆದಿದೆ. ಈ ವೇಳೆ ಗಂಭೀರವಾಗಿ ಗಾಯಗೊಂಡಿದ್ದ ಹಿಂಬದಿ ಸವಾರ ಸಂದೀಪ್‌ನನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಸೋಮವಾರ ಮುಂಜಾನೆ ಮೃತಪಟ್ಟರು.

‘ಅಪಘಾತದ ಬಳಿಕ ಚಾಲಕ ಕಾರು ನಿಲ್ಲಿಸದೆ ಪರಾರಿಯಾಗಿದ್ದಾನೆ. ಕಾರು ಪತ್ತೆಗೆ ಘಟನಾ ಸ್ಥಳದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಲಾಗುತ್ತಿದೆ. ಪ್ರಕರಣ ದಾಖಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವ್ಹೀಲಿ: ಮೂವರು ಸವಾರರ ಬಂಧನ

ಬೆಂಗಳೂರು: ರಸ್ತೆಗಳಲ್ಲಿ ದ್ವಿಚಕ್ರ ವಾಹನದಲ್ಲಿ ವ್ಹೀಲಿ ಮಾಡುವವರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿರುವ ಪಶ್ಚಿಮ ಉಪವಿಭಾಗದ ಸಂಚಾರ ಪೊಲೀಸರು ಮೂವರು ಸವಾರರನ್ನು ಬಂಧಿಸಿದ್ದಾರೆ.

ಬ್ಯಾಟರಾಯನಪುರದ ಇಬ್ರಾಹಿಂ ಪಾಷಾ (19), ಮಾಗಡಿ ರಸ್ತೆಯ ಚರಣ್(20) ಮತ್ತು ಮನೀಶ್(21) ಬಂಧಿತರು. ಆರೋಪಿಗಳಿಂದ ಮೂರು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ.

ಜಾಲತಾಣ ಮತ್ತು ಸಾರ್ವಜನಿಕರ ಮಾಹಿತಿ ಆಧರಿಸಿ ವ್ಹೀಲಿ ಮಾಡುವವರ ಪತ್ತೆಗೆ ಸಂಚಾರ ಪಶ್ಚಿಮ ಉಪವಿಭಾಗದಲ್ಲಿ ವಿಶೇಷ ತಂಡ ರಚಿಸಲಾಗಿತ್ತು.

ಈ ಸಂಬಂಧ ಬ್ಯಾಟರಾಯನಪುರ ಸಂಚಾರ ಠಾಣೆಯಲ್ಲಿ ಒಂದು, ಮಾಗಡಿ ರಸ್ತೆ ಸಂಚಾರ ಠಾಣೆಯಲ್ಲಿ ಎರಡು ಸೇರಿ ಒಟ್ಟು ಮೂರು ಪ್ರಕರಣಗಳನ್ನು ದಾಖಲಿಸಲಾಗಿದೆ. ವಿಶೇಷ ಕಾರ್ಯಾಚರಣೆ ಮುಂದುವರೆಯಲಿದೆ ಎಂದು ಸಂಚಾರ ಪಶ್ಚಿಮ ವಿಭಾಗದ ಡಿಸಿಪಿ ಅನಿತಾ ಬಿ.ಹದ್ದಣ್ಣವರ್ ತಿಳಿಸಿದ್ದಾರೆ.

ಗೂಡ್ಸ್ ವಾಹನ ಡಿಕ್ಕಿ: ಖಾಸಗಿ ಕಂಪನಿ ಉದ್ಯೋಗಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರಕು ಸಾಗಣೆ ವಾಹನ ಡಿಕ್ಕಿ ಹೊಡೆದ ಪರಿಣಾಮ ದ್ವಿಚಕ್ರ ವಾಹನ ಸವಾರ ಗಂಭೀರವಾಗಿ ಗಾಯಗೊಂಡು ಮೃತಪಟ್ಟಿರುವ ಘಟನೆ ಉಪ್ಪಾರಪೇಟೆ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಜೆ.ಸಿ.ರಸ್ತೆ ನಿವಾಸಿ ವಿಶಾಖ (27) ಮೃತ ಸವಾರ. ಭಾನುವಾರ ರಾತ್ರಿ 12.50ಕ್ಕೆ ಗಾಂಧಿನಗರದ ವೈ.ರಾಮಚಂದ್ರ ರಸ್ತೆಯ ಟಿಒಟಿ ಜಂಕ್ಷನ್‌ನಲ್ಲಿ ಅಪಘಾತ ಸಂಭವಿಸಿದೆ. ಚಾಲಕ ಸರಕು ಸಾಗಣೆ ವಾಹನವನ್ನು ನಿಲ್ಲಿಸದೆ ಪರಾರಿಯಾಗಿದ್ದಾನೆ. ನೋಂದಣಿ ಸಂಖ್ಯೆ ಆಧರಿಸಿ ವಾಹನ ಪತ್ತೆ ಮಾಡಿ, ಚಾಲಕನನ್ನು ಬಂಧಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಗರದ ಖಾಸಗಿ ಕಂಪನಿ ಉದ್ಯೋಗಿಯಾಗಿರುವ ಚನ್ನಪಟ್ಟಣದ ವಿಶಾಖ, ಜೆ.ಸಿ.ರಸ್ತೆಯ ಸಂಬಂಧಿಕರ ಮನೆಯಲ್ಲಿ ವಾಸವಿದ್ದರು. ಎಸ್.ಸಿ.ರಸ್ತೆ ಕಡೆಯಿಂದ ಗಾಂಧಿನಗರದ ವೈ.ರಾಮಚಂದ್ರ ರಸ್ತೆ ಟಿಒಟಿ ಜಂಕ್ಷನ್ ಕಡೆಗೆ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದ ವೇಳೆ ಜನತಾ ಬಜಾರ್ ಕಡೆಯಿಂದ ವೇಗವಾಗಿ ಬಂದ ಗೂಡ್ಸ್ ವಾಹನ ಡಿಕ್ಕಿ ಹೊಡೆದಿದೆ. ವಾಹನ ಸಹಿತ ರಸ್ತೆಗೆ ಬಿದ್ದು ಗಂಭೀರವಾಗಿ ಗಾಯಗೊಂಡ ಅವರನ್ನು ಸ್ಥಳೀಯರು ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಪರೀಕ್ಷಿಸಿದ ವೈದ್ಯರು ಮಾರ್ಗ ಮಧ್ಯೆಯೇ ವಿಶಾಖ ಮೃತಪಟ್ಟಿರುವುದಾಗಿ ದೃಢಪಡಿಸಿದ್ದಾರೆ.

ಉಪ್ಪಾರ ಪೇಟೆ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರವಾಸ ಪ್ಯಾಕೇಜ್: ₹70 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾ ಕುಂಭಮೇಳ ಪ್ರವಾಸದ ಪ್ಯಾಕೇಜ್ ಹೆಸರಿನಲ್ಲಿ ಸಾರ್ವಜನಿಕರಿಗೆ ₹70 ಲಕ್ಷ ವಂಚಿಸಿದ್ದ ಆರೋಪದ ಮೇರೆಗೆ ಆರೋಪಿಯನ್ನು ಗೋವಿಂದರಾಜ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಘವೇಂದ್ರ ರಾವ್

ಟೂರ್ಸ್ ಆ್ಯಂಡ್ ಟ್ರಾವೆಲ್ಸ್ ಕಂಪನಿಯ ಪ್ರತಿನಿಧಿಯ ಹೆಸರಿನಲ್ಲಿ ಫೇಸ್‌ಬುಕ್ ಹಾಗೂ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ನಕಲಿ ಜಾಹೀರಾತು ನೀಡಿದ್ದ ರಾಘವೇಂದ್ರ ರಾವ್ ಅವರನ್ನು ಪೊಲೀಸರು ಬಂಧಿಸಿ, ವಿಚಾರಣೆ ನಡೆಸುತ್ತಿದ್ದಾರೆ.

‘ಕುಂಭಮೇಳ ಪ್ರವಾಸಕ್ಕೆ ಪ್ರತಿಯೊಬ್ಬರಿಂದ 7 ದಿನಕ್ಕೆ ₹49 ಸಾವಿರ ಸಂಗ್ರಹಿಸಿದ್ದ. ಈ ರೀತಿ ನೂರಕ್ಕೂ ಹೆಚ್ಚು ಜನರಿಂದ ಹಣ ಸಂಗ್ರಹಿಸಿದ್ದ ಆರೋಪಿ, ಕೆಲವರಿಗೆ ಟಿಕೆಟ್ ಬುಕ್ ಮಾಡಿ ನಂತರ ರದ್ದು ಮಾಡುತ್ತಿದ್ದ. ಇನ್ನು ಕೆಲವರಿಗೆ ಪ್ರಯಾಗರಾಜ್ ತಲುಪಿದ ನಂತರ ವಾಪಸ್ ಟಿಕೆಟ್ ಬುಕ್ ಮಾಡುತ್ತಿರಲಿಲ್ಲ. ಬಳಿಕ ಹಣ ನೀಡಿದ್ದವರ ಸಂಪರ್ಕಕ್ಕೆ ಸಿಗದೆ ಮೊಬೈಲ್ ಸ್ವಿಚ್ ಆಫ್ ಮಾಡಿಕೊಳ್ಳುತ್ತಿದ್ದ. ವಂಚನೆಗೊಳಗಾದ 20 ಮಂದಿ ದೂರು ನೀಡಿದ್ದು, ₹70 ಲಕ್ಷ ಕಳೆದುಕೊಂಡಿರುವುದಾಗಿ ಹೇಳಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ನೂರಕ್ಕೂ ಹೆಚ್ಚು ಮಂದಿಗೆ ಇದೇ ರೀತಿ ವಂಚನೆ ಮಾಡಲಾಗಿದೆ ಎಂದು ಆರೋಪಿಸಲಾಗಿದೆ. ಸಾರ್ವಜನಿಕರಿಗೆ ವಂಚಿಸಿ ಗಳಿಸಿದ್ದ ಹಣವನ್ನು ಬೆಟ್ಟಿಂಗ್ ಆ್ಯಪ್‌ನಲ್ಲಿ ತೊಡಗಿಸಿರುವುದು ಪ್ರಾಥಮಿಕ ತನಿಖೆ ವೇಳೆ ಗೊತ್ತಾಗಿದೆ. ತನಿಖೆ ಮುಂದುವರಿದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಮಾದಕದ್ರವ್ಯ ಸೇವನೆ, ಸೈಬರ್ ಅಪರಾಧದ ವಿರುದ್ಧ ಜಾಗೃತಿ ಓಟ

ಪ್ರಜಾವಾಣಿ ವಾರ್ತೆ

ಯಲಹಂಕ: ಕರ್ನಾಟಕ ರಾಜ್ಯ ಪೊಲೀಸ್, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಮಾದಕದ್ರವ್ಯ ಸೇವನೆ ಮತ್ತು ಸೈಬರ್ ಅಪರಾಧದ ವಿರುದ್ಧ ಯುವಕರಲ್ಲಿ ಜಾಗೃತಿ ಮೂಡಿಸಲು ಮ್ಯಾರಥಾನ್ ಓಟ ಏರ್ಪಡಿಸಲಾಗಿತ್ತು.

ಪ್ರೆಸಿಡೆನ್ಸಿ ಕಾಲೇಜಿನಿಂದ ಆರಂಭವಾದ 5 ಕಿಲೋಮೀಟರ್ ದೂರದ ಓಟವು, ರಾಜಾನುಕುಂಟೆ ಪೊಲೀಸ್ ಠಾಣೆಯವರೆಗೆ ತೆರಳಿ, ಮತ್ತೆ ಕಾಲೇಜಿನ ಬಳಿಗೆ ಆಗಮಿಸಿತು. ಈ ಓಟದಲ್ಲಿ ಚಿತ್ರನಟ-ನಟಿಯರು, ಪ್ರೆಸಿಡೆನ್ಸಿ ಮತ್ತು ಸುತ್ತಮುತ್ತಲ ಕಾಲೇಜುಗಳ ವಿದ್ಯಾರ್ಥಿಗಳು ಹಾಗೂ ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯ 30 ಪೊಲೀಸ್ ಠಾಣೆಗಳ ಸಿಬ್ಬಂದಿ ಸೇರಿ 700ಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದರು.

ಈ ವೇಳೆ ಮಾತನಾಡಿದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಕೆ.ಬಾಬಾ, ಮಾದಕದ್ರವ್ಯ ಮತ್ತು ಸೈಬರ್ ಅಪರಾಧದ ಪಿಡುಗು ಯುವಕರ ಮೇಲೆ ಪ್ರತಿಕೂಲ ಪರಿಣಾಮ ಬೀರಿ, ಜೀವನವನ್ನು ಹಾಳುಮಾಡುತ್ತದೆ. ಈ ದಿಸೆಯಲ್ಲಿ ಯುವಕರು ಈ ದುಶ್ಚಟಗಳಿಂದ ದೂರವಿದ್ದು, ಸದೃಢ ಆರೋಗ್ಯವನ್ನು ಕಾಪಾಡಿಕೊಳ್ಳುವ ಮೂಲಕ ಉತ್ತಮ ಬದುಕನ್ನು ಕಟ್ಟಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮಾದಕ ವಸ್ತುಗಳು ಮತ್ತು ಸೈಬರ್ ಅಪರಾಧದ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯವು ರಾಜ್ಯ ಪೊಲೀಸರೊಂದಿಗೆ ಪಾಲುದಾರಿಕೆ ವಹಿಸಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ಕುಲಪತಿ ಡಾ.ನಿಸಾರ್ ಅಹಮದ್ ಹೇಳಿದರು.

ಪ್ರೆಸಿಡೆನ್ಸಿ ಸಮೂಹ ಶಿಕ್ಷಣಸಂಸ್ಥೆಯ ಉಪಾಧ್ಯಕ್ಷ ಸುಹೇಲ್ ಅಹ್ಮದ್, ಚಿತ್ರನಟರಾದ ಧ್ರುವ ಸರ್ಜಾ, ಶ್ರೀಮುರಳಿ, ಅಕುಲ್ ಬಾಲಾಜಿ, ನಟಿಯರಾದ ಮಾನ್ವಿತಾ ಕಾಮತ್, ಸ್ಫೂರ್ತಿ ಉದಿಮನೆ ಮತ್ತಿತರರು ಪಾಲ್ಗೊಂಡಿದ್ದರು.

+ನಿಯಮ ಮತ್ತು ಷರತ್ತುಗಳು ಅನ್ವಯಿಸುತ್ತವೆ. #Honda ಟೂ ವೀಲರ್ ವಾಹನದ ಯಾವುದೇ ಮಾದರಿಯ ಖರೀದಿಗೆ ಕ್ಯಾಶ್‌ಬ್ಯಾಕ್ ಆಫರ್‌ನಲ್ಲಿ HDFC ಬ್ಯಾಂಕ್ ಕ್ರೆಡಿಟ್ ಕಾರ್ಡ್ ಮತ್ತು IDFC FIRST ಬ್ಯಾಂಕ್ ಕ್ರೆಡಿಟ್ ಕಾರ್ಡ್ ಬಳಸಿ ಪೈನ್ ಲ್ಯಾಬ್ಸ್ ಯಂತ್ರಗಳ ಮೂಲಕ ಮಾತ್ರ EMI ವಹಿವಾಟುಗಳ ಮೇಲೆ ಗರಿಷ್ಠ ₹5000 ವರೆಗಿನ 5% ಕ್ಯಾಶ್‌ಬ್ಯಾಕ್ ಸೇರಿದೆ. #ಈ ಯೋಜನೆ ಆಯ್ದ ಮಳಿಗೆಗಳಲ್ಲಿ ಮಾತ್ರ ಲಭ್ಯವಿದೆ. #ಕ್ಯಾಶ್‌ಬ್ಯಾಕ್ ಆಫರ್ ಮಾರ್ಚ್ 31, 2025 ರವರೆಗೆ ಮಾತ್ರ ಮಾನ್ಯವಾಗಿರುತ್ತದೆ. **ಹಣಕಾಸು ಯೋಜನೆಯು ಹಣಕಾಸುದಾರರ ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟು ಏಕಪಕ್ಷೀಯ ವಿವೇಚನೆಗೆ ಒಳಪಟ್ಟಿರುತ್ತದೆ. **ಪೂರ್ವ ಸೂಚನೆ ಇಲ್ಲದೆ ಆಫರ್‌ಗಳನ್ನು ಬದಲಾಯಿಸಬಹುದು ಅಥವಾ ಹಿಂಪಡೆಯಬಹುದು. *ಸಾಲದ ಅನುಮೋದನೆಯು ಹಣಕಾಸುದಾರರ ಏಕಪಕ್ಷೀಯ ವಿವೇಚನೆಗೆ ಒಳಪಟ್ಟಿರುತ್ತದೆ ಮತ್ತು ಹೆಚ್ಚುವರಿ ದಾಖಲೆಗಳು ಬೇಕಾಗಬಹುದು. *ಬಡ್ಡಿ ದರಗಳು, ಡೌನ್ ಪೇಮೆಂಟ್‌ಗಳು ಮತ್ತು ಅವಧಿಯು ಅರ್ಜಿದಾರರ ಕ್ರೆಡಿಟ್ ಪ್ರೊಫೈಲ್ ಅನ್ನು ಅವಲಂಬಿಸಿರುತ್ತದೆ. *ಗ್ರಾಹಕರು ಕಡಿಮೆ ಬಡ್ಡಿ ದರವನ್ನು ಅಥವಾ 0 ಪ್ರಕ್ರಿಯೆ/ಕಾಗದಪತ್ರ ಶುಲ್ಕಗಳನ್ನು ಆಯ್ಕೆ ಮಾಡಬಹುದು. *ಈ ಯೋಜನೆಯನ್ನು ಅಧಿಕೃತ ಮುಖ್ಯ ಡೀಲರ್‌ಗಳು ಮತ್ತು ಸಹಾಯಕ ಡೀಲರ್‌ಗಳು ಒದಗಿಸುತ್ತಿದ್ದಾರೆ ಮತ್ತು ಅಧಿಕೃತ ಮುಖ್ಯ ಡೀಲರ್‌ಗಳು ಮತ್ತು ಅಧಿಕೃತ ಡೀಲರ್‌ಗಳಿಂದ ಆಕ್ಟಿವಾ 110cc ಮತ್ತು ಆಕ್ಟಿವಾ 125cc ಖರೀದಿಯ ಮೇಲೆ ಪಡೆಯಬಹುದು. *ಈ ಆಫರ್‌ಗಳು ತಮಿಳುನಾಡು, ತೆಲಂಗಾಣ, ಕರ್ನಾಟಕ, ಕೇರಳ, ಆಂಧ್ರಪ್ರದೇಶದಲ್ಲಿ ಮಾತ್ರ ಅನ್ವಯಿಸುತ್ತವೆ. *ಪೂರ್ವ ಸೂಚನೆ ಇಲ್ಲದೆ ಆಫರ್‌ಗಳನ್ನು ಬದಲಾಯಿಸಬಹುದು ಅಥವಾ ಹಿಂಪಡೆಯಬಹುದು. **ನಿಯಮ ಮತ್ತು ಷರತ್ತುಗಳು ಅನ್ವಯಿಸುತ್ತವೆ. ಚಿತ್ರದಲ್ಲಿ ತೋರಿಸಿರುವ ಉತ್ಪನ್ನವು ಮಾರುಕಟ್ಟೆಯಲ್ಲಿ ಲಭ್ಯವಿರುವ ನಿಜವಾದ ಉತ್ಪನ್ನಕ್ಕಿಂತ ಭಿನ್ನವಾಗಿರಬಹುದು. ಚಿತ್ರದಲ್ಲಿ ತೋರಿಸಿರುವ ಬಿಡಿಭಾಗಗಳು ಪ್ರಮಾಣಿತ ಉಪಕರಣಗಳ ಭಾಗವಾಗಿರುವುದಿಲ್ಲ.

Honda Motorcycle & Scooter India Pvt. Ltd., Registered Office: Plot No. 1 , Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **MALLESHWARAM:** 8971887792; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda.hmsi.in

ಬಿಬಿಎಂಪಿ: ಬೃಹತ್ ಯೋಜನೆಗಳ ಅನುಷ್ಠಾನ, ಅನುದಾನ ಹಂಚಿಕೆಯ 'ವಾಸ್ತವ ಬಜೆಟ್'

₹18 ಸಾವಿರ ಕೋಟಿ ಮೀರುವ ಬಜೆಟ್

● ಆರ್. ಮಂಜುನಾಥ್



ಬೆಂಗಳೂರು: ರಾಜ್ಯ ಸರ್ಕಾರದ ಬಜೆಟ್ ಮೂಲಕ ಅನುದಾನ, ಖಾತರಿಗಳ ಭರಪೂರ ಕೊಡುಗೆ ಪಡೆದಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ತನ್ನ ಬೃಹತ್ ಯೋಜನೆಗಳ ಅನುಷ್ಠಾನಕ್ಕೆ 'ರೂಪುರೇಷೆಗಳ ಬಜೆಟ್' ಮಂಡನೆಗೆ ಸಿದ್ಧಗೊಳ್ಳುತ್ತಿದೆ.

ರಾಜ್ಯ ಬಜೆಟ್‌ನಿಂದ ₹4 ಸಾವಿರ ಕೋಟಿ ಅಧಿಕ ಅನುದಾನವನ್ನು 2025–26ನೇ ಸಾಲಿನಿಂದ ಪಡೆಯಲಿರುವ ಬಿಬಿಎಂಪಿ, ಅದನ್ನು ಯಾವ ಯೋಜನೆಗಳಿಗೆ ವಿನಿಯೋಗಿಸಲಿದೆ, ₹19 ಸಾವಿರ ಕೋಟಿ ಖಾತರಿ ಪಡೆದಿರುವ ಸುರಂಗ ರಸ್ತೆ ಯೋಜನೆಯ ಅನುಷ್ಠಾನದ ವಿಧಾನ ಹೇಗೆ ಎಂಬ ಮಾಹಿತಿ ಬಿಬಿಎಂಪಿಯ 2025–26ನೇ ಸಾಲಿನ ಬಜೆಟ್ ಸ್ಪಷ್ಟಪಡಿಸಲಿದೆ. ಹೀಗಾಗಿ, ಬಿಬಿಎಂಪಿ ಬಜೆಟ್ ಸುಮಾರು ₹18 ಸಾವಿರ ಕೋಟಿಗಿಂತ ಹೆಚ್ಚಾಗಲಿದೆ ಎಂದು ಅಂದಾಜಿಸಲಾಗಿದೆ.

ಕಳೆದ ಒಂದು ವರ್ಷದಲ್ಲಿ ಸುರಂಗ ರಸ್ತೆ ನಿರ್ಮಾಣ, ಬೃಹತ್ ಯೋಜನೆಗಳು ಸೇರಿದಂತೆ ಹಲವು ಯೋಜನೆಗಳನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರಕಟಿಸಿದ್ದಾರೆ. ನಗರದಲ್ಲಿ ಸುಗಮ ಸಂಚಾರಕ್ಕೆ 16 ಮೇಲ್ಸೇತುವೆ/ಅಂಡರ್‌ಪಾಸ್‌ಗಳನ್ನು ನಿರ್ಮಿಸುವ ಸುಮಾರು ₹54 ಸಾವಿರ ಕೋಟಿ ವೆಚ್ಚದ ಕಾರ್ಯಸಾಧ್ಯತಾ ವರದಿಯೂ 'ಬೆಂಗಳೂರು ಸಮಗ್ರ ಸಂಚಾರ ನಿರ್ವಹಣೆ ಯೋಜನೆ' ಸಿದ್ಧವಾಗಿದೆ.

ಈ ಯೋಜನೆಗಳೂ ಸೇರಿದಂತೆ 'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯಡಿಯ 21 ಯೋಜನೆಗಳಿಗೆ ಅನುದಾನ ಹಾಗೂ ನಗರದ ಮೂಲಸೌಕರ್ಯ ಯೋಜನೆಗಳನ್ನು ಅವುಗಳ ಶೀರ್ಷಿಕೆ ಹಾಗೂ ಅನುಷ್ಠಾನ ನಿರ್ದಿಷ್ಟ ಪ್ರದೇಶಗಳನ್ನೂ ಬಿಬಿಎಂಪಿ ಬಜೆಟ್ ಸೂಚಿಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಗರದ ಅತಿದೊಡ್ಡ ಯೋಜನೆ ಎಂದೇ ಪರಿಗಣಿಸಲಾಗಿರುವ ಸುಮಾರು ₹40 ಸಾವಿರ ಕೋಟಿ ವೆಚ್ಚದ ಸುರಂಗ ರಸ್ತೆ ಯೋಜನೆ ಬಗ್ಗೆ ಹಲವು ರೀತಿಯ ಸಂದೇಹಗಳು ನಾಗರಿಕರ ವಲಯದಲ್ಲಿ ಇವೆ. ಈ ಯೋಜನೆ ಅನುಷ್ಠಾನವಾಗುವ ಪ್ರಕ್ರಿಯೆಗಳ ಬಗ್ಗೆ ಗೊಂದಲವೂ ಇದೆ. ಇದಕ್ಕೆಲ್ಲ ಪರಿಹಾರ ನೀಡಿ, ಸ್ಪಷ್ಟ ರೂಪುರೇಷೆಯನ್ನು ಬಜೆಟ್ ನೀಡಲಿದೆ.

ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧವಿದ್ದರೂ ಸುರಂಗ ರಸ್ತೆಯ ಉತ್ತರ-ದಕ್ಷಿಣ ಕಾರಿಡಾರ್‌ಗೆ ಟೆಂಡರ್ ಕರೆಯುವ ಪ್ರಕ್ರಿಯೆ ನಾಲ್ಕಾರು ತಿಂಗಳಿಂದ ಮುಂದೂಡಲಾಗುತ್ತದೆ. ಈಗ ಬಜೆಟ್ ನಂತರವೇ ಟೆಂಡರ್ ಪ್ರಕ್ರಿಯೆ ಆರಂಭವಾಗಲಿದೆ. ಬೃಹತ್ ಯೋಜನೆಗಳಿಗೆ ಅನುಷ್ಠಾನ ಹಾಗೂ ನಿರ್ವಹಣೆಗೆ 'ವಿಶೇಷ ಉದ್ದೇಶಿತ ಸಂಸ್ಥೆ' (ಎಸ್‌ಪಿವಿ) ಸ್ಥಾಪಿಸುವುದಾಗಿ ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಹೀಗಾಗಿ, ಯಾವ ಯೋಜನೆಗಳು ಎಸ್‌ಪಿವಿ ಅಡಿಯಲ್ಲಿ ನಿರ್ವಹಣೆಯಾಗಲಿವೆ, ಎಸ್‌ಪಿವಿಯ ಕಾರ್ಯವಿಧಾನವನ್ನೂ ಬಿಬಿಎಂಪಿ ಬಜೆಟ್ ನಿರ್ಧರಿಸಲಿದೆ.

20ರಂದು ಮಂಡನೆ?: ಬಿಬಿಎಂಪಿ ಬಜೆಟ್ ಸಿದ್ಧತೆ ಅಂತಿಮ ಹಂತದಲ್ಲಿ, ಜನಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಅವರು ಸಲಹೆಯನ್ನು ಪಡೆಯುವುದಷ್ಟೇ ಬಾಕಿ ಉಳಿದಿದೆ. ಇದಾದ ನಂತರ ಬೆಂಗಳೂರು ಅಭಿವೃದ್ಧಿ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಾರ್ಗದರ್ಶನದಲ್ಲಿ ಬಜೆಟ್ ಅಂತಿಮಗೊಳ್ಳಲಿದೆ ಎನ್ನಲಾಗಿದೆ.

ಮಾರ್ಚ್ 30 ಮತ್ತು 31ರಂದು ಸರ್ಕಾರಿ ರಜೆ ಇರುವುದರಿಂದ ಮಾರ್ಚ್ 29ರೊಳಗೆ ಬಿಬಿಎಂಪಿ ಬಜೆಟ್‌ಗೆ ಸರ್ಕಾರದಿಂದ ಅನುಮೋದನೆ ದೊರೆಯಬೇಕಿದೆ. ಹೀಗಾಗಿ, ಮಾರ್ಚ್ 20 ಅಥವಾ 21ರಂದು ಬಿಬಿಎಂಪಿ ಬಜೆಟ್ ಮಂಡನೆಯಾಗಲಿದೆ. ಸರ್ಕಾರದಿಂದ 'ಆರ್ಥಿಕ ಬಲ' ಪಡೆದಿರುವ ಬಿಬಿಎಂಪಿ, ನಗರದ ಜನರಿಗೆ ಪ್ರಿಯವಾದ ಬಜೆಟ್ ಮಂಡಿಸುವ ಆಶಯ ಹೊಂದಿದೆ ಎಂದು ಮೂಲಗಳು ತಿಳಿಸಿವೆ.

ಅಂತಿಮ ತಯಾರಿಯಲ್ಲಿದೆ: ಹರೀಶ್

'ಬಿಬಿಎಂಪಿ ಬಜೆಟ್‌ಗೆ ತಯಾರಿ ಅಂತಿಮ ಹಂತದಲ್ಲಿದ್ದು, ಇದಕ್ಕೆ ಸಂಬಂಧಿಸಿದಂತೆ ನಗರದ ಸಚಿವರು ಹಾಗೂ ಶಾಸಕರೊಂದಿಗೆ ಈ ವಾರದಲ್ಲಿ ಮಾತುಕತೆ ನಡೆಸಲಾಗುತ್ತದೆ. ನಾಗರಿಕರಿಂದಲೂ ಈಗಾಗಲೇ ಸಲಹೆಗಳನ್ನು ಸ್ವೀಕರಿಸಲಾಗಿದೆ. ನಗರದಲ್ಲಿ ಮುಂದಿನ ವರ್ಷ ಕೈಗೊಳ್ಳುವ ಯೋಜನೆಗಳಿಗೆ ಸ್ವರೂಪ ಸೇರಿದಂತೆ ಅನುಷ್ಠಾನದ ವಿವರಗಳನ್ನೂ ಒಳಗೊಂಡಿರುವ 'ವಾಸ್ತವ ಬಜೆಟ್' ಮಂಡನೆಯಾಗಲಿದೆ' ಎಂದು ಬಿಬಿಎಂಪಿ ಹಣಕಾಸು ವಿಭಾಗ ವಿಶೇಷ ಆಯುಕ್ತ ಹರೀಶ್ ಕುಮಾರ್ ತಿಳಿಸಿದರು.

ಸುದ್ದಿ 2 ನಿಮಿಷ

ಹುಳಿಮಾವು: ಸತ್ಯನಾರಾಯಣ ಸ್ವಾಮಿ ಬ್ರಹ್ಮರಥೋತ್ಸವ

ಬೊಮ್ಮನಹಳ್ಳಿ: ಹುಳಿಮಾವುನಲ್ಲಿರುವ ಸತ್ಯ ನಾರಾಯಣಸ್ವಾಮಿ ದೇವಾಲಯದ 20ನೇ ವರ್ಷದ ವಾರ್ಷಿಕೋತ್ಸವ ಹಾಗೂ 19ನೇ ವರ್ಷದ ಬ್ರಹ್ಮರಥೋತ್ಸವವು ಸೋಮವಾರ ವಿಜೃಂಭಣೆಯಿಂದ ನೆರವೇರಿತು.

ಕೆಂಗೇರಿ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ನಿಶ್ಚಲಾನಂದನಾಥ ಸ್ವಾಮೀಜಿ ರಥೋತ್ಸವಕ್ಕೆ ಪೂಜೆ ಸಲ್ಲಿಸಿ, ಚಾಲನೆ ನೀಡಿದರು. ದೇವಸ್ಥಾನದಿಂದ ಕೋದಂಡರಾಮ ದೇವಸ್ಥಾನ ವೃತ್ತದವರೆಗೂ ಭಕ್ತರು ಭಕ್ತಿ ಭಾವದಿಂದ ತೇರು ಎಳೆದರು.

ಬ್ರಹ್ಮರಥೋತ್ಸವಕ್ಕಾಗಿ ಬಂದಿದ್ದ ಜನರು, ಧವನ ಚುಚ್ಚಿದ ಬಾಳೆಹಣ್ಣು ಎಸೆದು ಹರಕೆ ತೀರಿಸಿದರು.

ನಿಶ್ಚಲಾನಂದನಾಥ ಸ್ವಾಮೀಜಿ ಮಾತನಾಡಿ, 'ಹಬ್ಬ ಹರಿದಿನಗಳ ಆಚರಣೆ ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದೆ. ರಥೋತ್ಸವದ ವೇಳೆಯಲ್ಲಿ ಗರುಡ ರಥದ ಸುತ್ತಲೂ ಪ್ರದಕ್ಷಿಣೆ ಹಾಕುವ ಮೂಲಕ ದೈವ ನೆಲೆಯನ್ನು ಸಾಕ್ಷೀಕರಿಸಿದೆ ಎಂದರು.

ಸಾಹಿತಿ ಪ್ರೊ.ಕೃಷ್ಣೇಗೌಡ, ಮೇಲುಕೋಟೆ ಶಲ್ವಪಿಳ್ಳೈ ಅಯ್ಯಂಗಾರ್, ವೇಣುಗೋಪಾಲ್ ನೇತೃತ್ವದಲ್ಲಿ ಹಾಸ್ಯಸಂಜೆ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಹುಲಿ ವೇಷಧಾರಿಗಳು ನೃತ್ಯಕ್ಕೆ ಹೆಜ್ಜೆ ಹಾಕಿ ರಂಜಿಸಿದರು. ಕೇರಳದ ಚೆಂಡೆ, ಪೂರ್ಣ ಕುಂಭ ಮೇಳದೊಂದಿಗೆ ಸಾಗಿದ ತೇರು, ನೋಡುಗರ ಕಣ್ಮನ ಸೆಳೆದವು. ಮಜ್ಜಿಗೆ, ಪಾನಕ, ಕೋಸಂಬರಿ, ತಂಪು ಪಾನೀಯಗಳು ಸೇರಿದಂತೆ ಉಪಾಹಾರದ ವ್ಯವಸ್ಥೆ ಕಲ್ಪಿಸಲಾಗಿತ್ತು.

'ವಿಶ್ವ ಗಾಣಿಗರ ಟ್ರಸ್ಟ್: ಅನುದಾನ ಬಿಡುಗಡೆಯಲ್ಲಿ ತಾರತಮ್ಯ'

ಬೆಂಗಳೂರು: 'ವಿಶ್ವ ಗಾಣಿಗ ಸಮುದಾಯ ಚಾರಿಟಬಲ್ ಟ್ರಸ್ಟ್‌ಗೆ ಮಂಜೂರಾದ ಅನುದಾನವನ್ನು ಬಿಡುಗಡೆಗೊಳಿಸದೇ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ ತಂಗಡಗಿ ಅವರು ತಾರತಮ್ಯ ನೀತಿ ಅನುಸರಿಸುತ್ತಿದ್ದಾರೆ' ಎಂದು ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ಪೂರ್ಣಾನಂದಪುರಿ ಸ್ವಾಮೀಜಿ ದೂರಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರ ವಿಶ್ವ ಗಾಣಿಗ ಸಮುದಾಯ ಚಾರಿಟಬಲ್ ಟ್ರಸ್ಟ್‌ಗೆ ₹3.5 ಕೋಟಿ ಅನುದಾನ ಘೋಷಿಸಿತ್ತು. ಇದರಲ್ಲಿ ಈಗಾಗಲೇ ₹2 ಕೋಟಿ ಅನುದಾನ ಬಿಡುಗಡೆಯಾಗಿದ್ದು, ₹1.5 ಕೋಟಿ ಬಾಕಿ ಇದೆ. ಈ ಅನುದಾನ ಬಿಡುಗಡೆ ಮಾಡಲು ಶಿವರಾಜ ತಂಗಡಗಿ ಅವರು ಮೀನಮೇಷ ಎಣಿಸುತ್ತಿದ್ದಾರೆ' ಎಂದು ಆರೋಪಿಸಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತ್ವರಿತಗತಿಯಲ್ಲಿ ಅನುದಾನ ಬಿಡುಗಡೆ ಮಾಡುವಂತೆ ಆದೇಶಿಸಬೇಕು' ಎಂದು ಆಗ್ರಹಿಸಿದ್ದಾರೆ.

ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾ ದರ್ಪಣ ಆರ್ಟ್ ರಿಫ್ಲೆಕ್ಸ್ ಸಂಸ್ಥೆಯ ದಶಮಾನೋತ್ಸವದ ಅಂಗವಾಗಿ ಮಾರ್ಚ್ 29ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ರಾಜ್ಯಮಟ್ಟದ ಮಕ್ಕಳ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ.

ಸ್ಪರ್ಧೆಯಲ್ಲಿ 8, 12 ಹಾಗೂ 18 ವರ್ಷದೊಳಗಿನ ಮತ್ತು 18 ವರ್ಷ ಮೇಲ್ಪಟ್ಟವರು ಎಂಬ ನಾಲ್ಕು ವಿಭಾಗಗಳಿವೆ. ಸ್ಪರ್ಧೆಯಲ್ಲಿ ಭಾಗವಹಿಸುವ ಎಲ್ಲರಿಗೂ ಬಹುಮಾನ ಹಾಗೂ ಪ್ರಮಾಣಪತ್ರಗಳನ್ನು ನೀಡಲಾಗುತ್ತದೆ. ವಿಜೇತರಿಗೆ ವಿಶೇಷ ಬಹುಮಾನ ಇದೆ. ಮಾ. 11ರೊಳಗೆ ಆಸಕ್ತರು ತಮ್ಮ ಹೆಸರಗಳನ್ನು ನೋಂದಣಿ ಮಾಡಿಕೊಳ್ಳಬಹುದು.

29ರಂದು ನಡೆಯುವ ಇದೇ ಕಾರ್ಯಕ್ರಮದಲ್ಲಿ ಅಸಮಾನ್ಯ ಕಲಾವಿದರನ್ನು, ಬಾಲಪ್ರತಿಭೆಗಳನ್ನು ಗುರುತಿಸಿ 'ಕಲಾ ದರ್ಪಣ' ವಾರ್ಷಿಕ ಪ್ರಶಸ್ತಿ, ಕಲಾ ಸಾಧಕರಿಗೆ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಸಂಸ್ಥೆಯ ಕಾರ್ಯದರ್ಶಿ ವಿನಾಯಕ ಪಾಟೀಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಹಿತಿಗೆ: 93806 71947

ಚಿತ್ರಾವಳಿ

ಬೆಂಗಳೂರಿನ ಸದಾಶಿವ ನಗರದಲ್ಲಿ ಚಿತ್ರಸಂತೆ ಸಂಸ್ಥೆ ಹಮ್ಮಿಕೊಂಡಿದ್ದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಂಗೀತ ಶಿಕ್ಷಕಿ ರುದ್ರಾಕ್ಷಿ ಬಾಯಿ ಸಿ.ಕೆ. ಅವರಿಗೆ ಸಂಗೀತ ಸೇವೆಗಾಗಿ 'ವೀರ ವನಿತೆ' ಪ್ರಶಸ್ತಿಯನ್ನು ನಟಿ ಪ್ರಿಯಾಂಕಾ ಉಪೇಂದ್ರ ನೀಡಿ ಗೌರವಿಸಿದರು. ದಿನೇಶ್ ಗುರೂಜಿ ಭಾಗವಹಿಸಿದ್ದರು

ಸೋಷಲಿಸ್ಟ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ (ಎಸ್‌ಡಿಪಿಐ) ರಾಷ್ಟ್ರೀಯ ಅಧ್ಯಕ್ಷ ಎಂ.ಕೆ. ಫೈಜಿ ಅವರನ್ನು ಬಂಧಿಸಿರುವ ಜಾರಿ ನಿರ್ದೇಶನಾಲಯದ ನಡೆಯಲ್ಲಿ ಖಂಡಿಸಿ ಎಸ್‌ಡಿಪಿಐ ರಾಜ್ಯ ಘಟಕದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು

ಬಿಜೆಪಿ–ಜೆಡಿಎಸ್ ಸದಸ್ಯರ ವಿರೋಧ, ಸಭಾತ್ಯಾಗ

ಅರಮನೆ ಮಸೂದೆ ಅಂಗೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರೋಧ ಪಕ್ಷಗಳಾದ ಬಿಜೆಪಿ-ಜೆಡಿಎಸ್ ಸದಸ್ಯರ ವಿರೋಧ, ಸಭಾತ್ಯಾಗದ ನಡುವೆ ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ಮಸೂದೆ ವಿಧಾನ ಪರಿಷತ್‌ನಲ್ಲಿ ಅಂಗೀಕಾರವಾಯಿತು.

ವಿಧಾನಸಭೆಯಲ್ಲಿ ಅಂಗೀಕಾರವಾಗಿದ್ದ ಮಸೂದೆಯನ್ನು ಕಾನೂನು ಸಚಿವ ಎಚ್.ಕೆ. ಪಾಟೀಲ ವಿಧಾನಪರಿಷತ್‌ನಲ್ಲಿ ಸೋಮವಾರ ಮಂಡಿಸಿದರು. ಮಸೂದೆಗೆ ಬಿಜೆಪಿ–ಜೆಡಿಎಸ್ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿದರು.

ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮುಖ್ಯ ಸಚೇತಕ ಎನ್. ರವಿಕುಮಾರ್, ಬಿಜೆಪಿಯ ಸಿ.ಟಿ. ರವಿ, ಎಚ್. ವಿಶ್ವನಾಥ್, ಜೆಡಿಎಸ್‌ನ ಎಸ್.ಎಲ್. ಬೋಜೇಗೌಡ, ಟಿ.ಎ. ಶರವಣ ಮತ್ತಿತರರು, 'ಮೈಸೂರು ಭಾಗದ ಜನರ ಕಲ್ಯಾಣಕ್ಕೆ ಒಡೆಯರ್ ವಂಶದ ಕೊಡುಗೆ ಅಪಾರವಾದುದು. ಸ್ವಾತಂತ್ರ್ಯ ನಂತರ ಯಾವ ಷರತ್ತೂ ಇಲ್ಲದೆ ಮೈಸೂರು ಸಂಸ್ಥಾನವನ್ನು ಭಾರತದಲ್ಲಿ ವಿಲೀನಗೊಳಿಸಿದರು. ನಂತರ ಜಾರಿಗೆ ಬಂದ ಭೂ ಸುಧಾರಣಾ ಕಾಯ್ದೆ ಸೇರಿದಂತೆ ಹಲವು ಜನಪರ ಕಾರ್ಯಗಳಿಗೆ ಉದಾರವಾಗಿ ಭೂಮಿ ಬಿಟ್ಟುಕೊಟ್ಟಿದ್ದರು. ಇಂದು ರಾಜವಂಶ ಆರ್ಥಿಕ ಸಂಕಷ್ಟದಲ್ಲಿದೆ. ರಾಜ್ಯ ಸರ್ಕಾರ ಅವರ ವಿರುದ್ಧ ಕಾಯ್ದೆ ರೂಪಿಸಬಾರದು' ಎಂದು ಒತ್ತಾಯಿಸಿದರು.

ಅರಮನೆ ಮೈದಾನ ಸುತ್ತಲ ಪ್ರದೇಶದಲ್ಲಿನ ಭೂಮಿಯ ಮಾರ್ಗಸೂಚಿ ದರದಂತೆ ಲೆಕ್ಕ ಹಾಕಿದರೆ ವಶಪಡಿಸಿಕೊಳ್ಳುವ 15 ಎಕರೆ ಜಮೀನಿಗೆ ಸುಪ್ರೀಂ ಕೋರ್ಟ್ ನಿಗದಿ ಮಾಡಿದ ಮೊತ್ತ ಸರಿಯಾಗಿದೆ. ಅದು ಹೆಚ್ಚು ಎನಿಸಿದರೆ ರಾಜವಂಶಸ್ಥರ ಜತೆ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬೇಕು. ಮಸೂದೆ ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಬಿಜೆಪಿ ಅಧಿಕಾರದಲ್ಲಿ ಇದ್ದಾಗಲೂ ಅಧಿಕ ಪರಿಹಾರ ನೀಡಲು ವಿರೋಧ ವ್ಯಕ್ತಪಡಿಸಿತ್ತು. ರಾಜಕೀಯ ಕಾರಣಗಳಿಗಾಗಿ ಈಗ ಮಸೂದೆ ವಿರುದ್ಧ ನಿಂತಿದ್ದಾರೆ. ಅಷ್ಟಕ್ಕೂ ಭೂ ಮಾಲೀಕತ್ವದ ವಿಚಾರವೇ ಇತ್ಯರ್ಥವಾಗಿಲ್ಲ ಎಂಬ ಸಚಿವ ಪ್ರಿಯಾಂಕ್ ಖರ್ಗೆ, ದಿನೇಶ್ ಗುಂಡೂರಾವ್, ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಮೊದಲಾದವರ ಮಾತಿಗೆ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ವಾಗ್ವಾದದ ನಂತರ ಬಿಜೆಪಿ–ಜೆಡಿಸ್ ಸದಸ್ಯರು ಸಭಾತ್ಯಾಗ ಮಾಡಿದರು. ಮಸೂದೆ ಅಂಗೀಕಾರವಾಗಿದೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ಘೋಷಿಸಿದರು.

ಅಧಿಕಗೊಂಡ ವಾಯುಮಾಲಿನ್ಯ, ಶಬ್ದಮಾಲಿನ್ಯ, ವಾಹನ ದಟ್ಟಣೆ ● ಹೆಚ್ಚಿದ ತಾಪಮಾನ

'ನಮ್ಮ ಮೆಟ್ರೊ'ಗೆ ಮರಳದ ಪ್ರಯಾಣಿಕರು

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಮ್ಮ ಮೆಟ್ರೊ ಪ್ರಯಾಣದರವನ್ನು ಬಿಎಂಆರ್‌ಸಿಎಲ್ ಏರಿಸಿ ಮಾರ್ಚ್ 8ಕ್ಕೆ ಒಂದು ತಿಂಗಳು ತುಂಬಿದೆ. ದರ ಏರಿಕೆಯ ಬಿಸಿಯಿಂದ ಮೆಟ್ರೊ ತೊರೆದವರು ವಾಪಸ್ಸಾಗಿಲ್ಲ. ಹಾಗಾಗಿ ಮೆಟ್ರೊ ಪ್ರಯಾಣಿಕರ ಸಂಖ್ಯೆ ಒಂದು ತಿಂಗಳಲ್ಲಿ ಒಟ್ಟು 40 ಲಕ್ಷದಷ್ಟು ಕಡಿಮೆಯಾಗಿದೆ. ಈ ಭಾನುವಾರ ಅತಿ ಕಡಿಮೆ ಪ್ರಯಾಣಿಕರ ಸಂಖ್ಯೆ ದಾಖಲಾಗಿದೆ.

ಶನಿವಾರ ಮತ್ತು ಭಾನುವಾರ ಪ್ರಯಾಣಿಕರ ಸಂಖ್ಯೆ ಕಡಿಮೆ. ಜನವರಿಯಲ್ಲಿ ಸೋಮವಾರದಿಂದ ಶುಕ್ರವಾರದವರೆಗೆ ದಿನಕ್ಕೆ ಸರಾಸರಿ 8.5 ಲಕ್ಷ ಜನರು ಸಂಚರಿಸುತ್ತಿದ್ದರು. ಇದು 7.30 ಲಕ್ಷಕ್ಕೆ ಇಳಿದಿದೆ. ವಾರಾಂತ್ಯದ ದಿನಗಳಲ್ಲಿ ಸರಾಸರಿ 7 ಲಕ್ಷ ಇರುತ್ತಿದ್ದ ಪ್ರಯಾಣಿಕರ ಸಂಖ್ಯೆ 5.8 ಲಕ್ಷಕ್ಕೆ ಇಳಿಕೆಯಾಗಿದೆ. ಮಾರ್ಚ್ 9ರಂದು ಕೇವಲ 4.70 ಲಕ್ಷ ಜನರು ಪ್ರಯಾಣಿಸಿದ್ದಾರೆ.

ಜನವರಿ 27ರಂದು 9.09 ಲಕ್ಷ ಜನರು ಸಂಚರಿಸಿದ್ದು, ಆ ತಿಂಗಳ ಗರಿಷ್ಠ ಸಂಖ್ಯೆಯಾಗಿತ್ತು. ಫೆಬ್ರುವರಿ 9ರಂದು ಪರಿಷ್ಕೃತ ದರ ಜಾರಿಯಾಗಿದ್ದು, ಅಲ್ಲಿಂದ ಮಾರ್ಚ್ 8ರವರೆಗಿನ ಒಂದು ತಿಂಗಳಲ್ಲಿ ಮೂರು ಬಾರಿ ಹೊರತುಪಡಿಸಿ 8 ಲಕ್ಷದ ಗಡಿಯನ್ನು ದಾಟಿಲ್ಲ. ದರ ಏರಿಕೆಯಾದ ಮರುದಿನ 8.28 ಲಕ್ಷ ಪ್ರಯಾಣಿಸಿದ್ದೇ ಅತಿ ಹೆಚ್ಚು. ಆನಂತರ ಫೆ. 24 (8.02 ಲಕ್ಷ) ಮತ್ತು ಮಾರ್ಚ್ 5ರಂದು (8.04) ಮಾತ್ರ 8 ಲಕ್ಷ ದಾಟಿತ್ತು.

ಮೆಟ್ರೊ ಪ್ರಯಾಣ ದರ ಕಡಿಮೆ ಮಾಡದೇ ಇದ್ದರೆ ಪ್ರಯಾಣಿಕರ ಸಂಖ್ಯೆ ಹೆಚ್ಚಳವಾಗುವುದು ಕಷ್ಟ ಎಂದು ಸಾರ್ವಜನಿಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ನಮ್ಮ ಮೆಟ್ರೊದಲ್ಲಿ ಸಂಚರಿಸುವವರ ಸಂಖ್ಯೆ ಬಹಳ ಕಡಿಮೆಯಾಗಿದೆ. ಅದೇ ಹೊತ್ತಿಗೆ ನಗರದ ವಾಯುಮಾಲಿನ್ಯ, ಶಬ್ದಮಾಲಿನ್ಯ, ವಾಹನ ದಟ್ಟಣೆ, ಅಧಿಕಗೊಂಡಿದೆ. ತಾಪಮಾನ ಬಿಸಿಯಾಗಿದೆ. ಇದು ಮೆಟ್ರೊ ಪ್ರಯಾಣದರ ಏರಿಕೆಯ ಪರಿಣಾಮವಾಗಿದೆ. ಮೆಟ್ರೊ ದರ ಕಡಿಮೆ ಮಾಡಿದರೆ ಮೆಟ್ರೊದಿಂದ ದೂರ ಸರಿದಿರುವ ಪ್ರಯಾಣಿಕರು ಮತ್ತೆ ಮೆಟ್ರೊಗೆ ಮರಳಲಿದ್ದಾರೆ' ಎಂದು ಗ್ರೀನ್ ಪೀಸ್ ಇಂಡಿಯಾ ಸದಸ್ಯೆ ನಿಶ್ಚಿತಾ ವೀರೇಂದ್ರ ಅಭಿಪ್ರಾಯಪಟ್ಟರು.

ಆಸ್ಪತ್ರೆ, ಶಾಲಾ ಕಾಲೇಜು, ಉದ್ಯೋಗ ಇನ್ನಿತರ ಕಾರಣಕ್ಕೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಂಚರಿಸುವವರಿಗೆ ಅನುಕೂಲವಾಗುಂತಹ ಸಾರಿಗೆ ನಿರ್ಮಿಸುವುದು ಸರ್ಕಾರಗಳ ಜವಾಬ್ದಾರಿ. ಬೆಂಗಳೂರಿನ ವಾಹನದಟ್ಟಣೆಯಿಂದ ಉಂಟಾಗುವ ಸಮಸ್ಯೆಯನ್ನು ಪರಿಹರಿಸಬೇಕು ಎಂಬ ಕಾರಣಕ್ಕಾಗಿಯೇ ಸಾರ್ವಜನಿಕರ ಹಣದಲ್ಲಿ ಮೆಟ್ರೊ ಆರಂಭಿಸಲಾಗಿದೆ. ಅದೇ ದುಡ್ಡಿನಲ್ಲಿ ಇಲ್ಲಿನ ಮರಗಳನ್ನು ಕಡಿದು, ಜನರ ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಈಗ ಅದೇ ಮೆಟ್ರೊದಲ್ಲಿ ಜನರು ಪ್ರಯಾಣಿಸದಷ್ಟು ದರ ಇರಿಸಿದರೆ ಮೂಲ ಉದ್ದೇಶವೇ ಹಾಳಾಗುತ್ತದೆ ಎಂದು ತಿಳಿಸಿದರು.

'ಶಾಲಾ ಕಾಲೇಜುಗಳಲ್ಲಿ ಈಗ ಪರೀಕ್ಷೆ ಆರಂಭವಾಗುತ್ತಿದೆ. ಅನಿವಾರ್ಯವಾಗಿ ಜನರು ಮೆಟ್ರೊದಲ್ಲಿ ಪ್ರಯಾಣಿಸುತ್ತಿದ್ದಾರೆ. ಪರೀಕ್ಷೆಗಳು ಮುಗಿದ ಕೂಡಲೇ ಹಲವರು ಮೆಟ್ರೊ ಬಿಡಲಿದ್ದಾರೆ. ಬಾಡಿಗೆ ಮನೆಯಲ್ಲಿ ಇರುವವರು ಮೆಟ್ರೊ ಹತ್ತಿರದಿಂದ ಬಸ್ ಪ್ರಯಾಣಕ್ಕೆ ಹತ್ತಿರ ಇರುವಲ್ಲಿಗೆ ಸ್ಥಳಾಂತರಗೊಳ್ಳಲಿದ್ದಾರೆ. ಇದು ನಾವು ಜನರೊಂದಿಗೆ ಮಾತನಾಡಿದಾಗ ಗೊತ್ತಾಗಿರುವ ಅಂಶ. ಮುಂದೆ ಮೆಟ್ರೊ ಪ್ರಯಾಣಿಕರ ಸಂಖ್ಯೆ ಇನ್ನಷ್ಟು ಕಡಿಮೆಯಾಗಲಿದೆ' ಎಂದು ಬೆಂಗಳೂರು ಮೆಟ್ರೊ ಪ್ರಯಾಣಿಕರ ಸಂಘಟನೆಯ ರಾಜೇಶ್ ಭಟ್ ಹೇಳಿದರು.

'ಬಿಎಂಆರ್‌ಸಿಎಲ್‌ಗೆ ವಿದ್ಯುತ್‌ನಲ್ಲಿ ರಿಯಾಯಿತಿ, ಸಾಲದಲ್ಲಿ ರಿಯಾಯಿತಿಗಳನ್ನು ಸರ್ಕಾರವು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದರೆ ಪ್ರಯಾಣದರವನ್ನು ಇಳಿಸಿ ಹೊರೆ ಕಡಿಮೆ ಮಾಡಬಹುದಿತ್ತು. ಸರ್ಕಾರಗಳಿಗೂ ಇದು ಬೇಕಾಗಿಲ್ಲ. ಮೆಟ್ರೊ ಹಳದಿ ಮಾರ್ಗ ಸದ್ಯದಲ್ಲಿಯೇ ಆರಂಭಗೊಳ್ಳಲಿದೆ. ಉಳಿದ ಮಾರ್ಗಗಳ ಕಾಮಗಾರಿಗಳು ನಡೆಯುತ್ತಿವೆ. ಹಗಲು ದರೋಡೆ ರೀತಿಯಲ್ಲಿ ದರ ಮುಂದುವರಿದರೆ ಅವರು ನಿರೀಕ್ಷಿಸಿದಷ್ಟು ಪ್ರಯಾಣಿಕರು ಬರುವುದಿಲ್ಲ' ಎಂದು ಹೇಳಿದರು.

'ದರ ನಿಗದಿ ಸಮಿತಿಯು ವರದಿ ನೀಡುವ ಮೊದಲು ಸಾರ್ವಜನಿಕರಿಂದ ಅಭಿಪ್ರಾಯ ಕೇಳಿತ್ತು. ನಾವು ಕೂಡ ಅಭಿಪ್ರಾಯ ನೀಡಿದ್ದೆವು. ದರ ಏರಿಕೆ ಮಾಡಿ ಎಂದು ಯಾರೂ ಹೇಳಿಲ್ಲ. ಹೆಸರಿಗಷ್ಟೇ ಅಭಿಪ್ರಾಯ ಕೇಳುವುದು ನಡೆದಿದೆ. ಅದಕ್ಕೆ ಯಾವ ಮಾನ್ಯತೆಯೂ ದೊರೆತಿಲ್ಲ. ದರ ನಿಗದಿ ಸಮಿತಿಯಲ್ಲಿ ಮೆಟ್ರೊ ಪ್ರಯಾಣಿಕರನ್ನು ಪ್ರತಿನಿಧಿಸುವ ಸಂಘಟನೆಗಳು ಇದ್ದಿದ್ದರೆ ಇಷ್ಟು ದರ ಹೆಚ್ಚಳವಾಗುತ್ತಿರಲಿಲ್ಲ' ಎಂದು ವಿವರಿಸಿದರು.

ದರ ಏರಿಕೆಗೆ 3ಂಗಳು

ಕೇಂದ್ರ, ರಾಜ್ಯ ಸರ್ಕಾರಗಳಿಗೆ ದರ ಕಡಿಮೆ ಇರುವಂತೆ ಕ್ರಮ ಕೈಗೊಳ್ಳುವ ಅವಕಾಶವಿದ್ದರೂ ಎರಡೂ ಪಕ್ಷದವರು ಒಬ್ಬರನ್ನೊಬ್ಬರು ದೂರುತ್ತಿದ್ದಾರೆ.
ರಾಜೇಶ್ ಭಟ್
ಮೆಟ್ರೊ ಪ್ರಯಾಣಿಕರ ಸಂಘಟನೆ

ಮೆಟ್ರೊ ಪ್ರಯಾಣ ದರವು ಬೈಕ್‌ನಲ್ಲಿ ಹೋಗುವುದಕ್ಕಿಂತ ದುಬಾರಿಯಾಗಿದೆ. ದರ ಇಳಿಸದಿದ್ದರೆ ಜನರ ಮೇಲಿನ ಹೊರೆ ಕಡಿಮೆಯಾಗದು.
ನಿಶ್ಚಿತಾ ವೀರೇಂದ್ರ
ಗ್ರೀನ್ ಪೀಸ್ ಇಂಡಿಯಾ ಸದಸ್ಯೆ

ಸಂಸದರಿಗೇ ಸಿಗದ ವರದಿ!

ಪಿ.ಸಿ. ಮೋಹನ್

ಮೆಟ್ರೊ ದರ ನಿಗದಿ ಸಮಿತಿ ನೀಡಿದ ವರದಿಯಲ್ಲಿ ಏನಿದೆ ಎಂಬುದು ಯಾರಿಗೂ ಗೊತ್ತಿಲ್ಲ. ಸ್ವತಃ ಸಂಸದರೇ ವರದಿ ಕೇಳಿದ್ದರೂ ಬಿಎಂಆರ್‌ಸಿಎಲ್ ನೀಡಿಲ್ಲ.

ಈ ಬಗ್ಗೆ ಸಂಸದ ಪಿ.ಸಿ. ಮೋಹನ್ ಅವರು 'ಎಕ್ಸ್'ನಲ್ಲಿ ಬರೆದುಕೊಂಡಿದ್ದು, 'ನಾನು ಪದೇ ಪದೇ ವಿನಂತಿಸಿದರೂ ವರದಿಯನ್ನು ನೀಡಿಲ್ಲ. ಜನರ ಕೈಗೆ ಎಟಕದಷ್ಟು ದರ ಏರಿಕೆಯಾಗಿದೆ. ಗ್ರಾಹಕ ಬೆಲೆ ಸೂಚ್ಯಂಕವನ್ನು (ಸಿಪಿಐ) ಶೇ 43.9ಕ್ಕೆ ನಿಲ್ಲಿಸದೇ ಇದ್ದರೆ ಕಾನೂನು ಹೋರಾಟ ಬಿಟ್ಟು ನನಗೆ ಬೇರೆ ದಾರಿ ಕಾಣುತ್ತಿಲ್ಲ' ಎಂದು ತಿಳಿಸಿದ್ದಾರೆ.

ಅಂಕಿ ಅಂಶಗಳು

2.49 ಕೋಟಿ
ಜನವರಿಯಲ್ಲಿ ಪ್ರಯಾಣಿಸಿದವರು

2.09 ಕೋಟಿ
ಫೆಬ್ರುವರಿಯಲ್ಲಿ ಪ್ರಯಾಣಿಸಿದವರು

1.9 ಕೋಟಿ
ಫೆ.9ರಿಂದ ಮಾರ್ಚ್ 8ರವರೆಗೆ ಪ್ರಯಾಣಿಸಿದವರು

ಚಿಕ್ಕಬಾಣಾವರ: ಅಂಗನವಾಡಿ ಮಕ್ಕಳ ಕ್ರೀಡಾಕೂಟ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಚಿಕ್ಕಬಾಣಾವರ ಗಣಪತಿನಗರ ಬಳಿಯ ಮೈದಾನದಲ್ಲಿ ಸ್ಥಳೀಯ ಅಂಗನವಾಡಿಗಳ ಮಕ್ಕಳಿಗೆ ಕ್ರೀಡಾಕೂಟ ಆಯೋಜಿಸಲಾಗಿತ್ತು.

ರಾಕ್ ಥಂಡರ್ಸ್ ಪಬ್ಲಿಕ್ ವೆಲ್‌ಫೇರ್ ಟ್ರಸ್ಟ್‌ನ ಅಂಗಸಂಸ್ಥೆ ಹ್ಯೂಮನ್ ರೈಟ್ಸ್ ಪ್ರೊಟೆಕ್ಷನ್ ಕಮಿಟಿ ಆಯೋಜಿಸಿದ್ದ ಕ್ರೀಡಾಕೂಟದಲ್ಲಿ 11 ಅಂಗನವಾಡಿಗಳ ಸುಮಾರು 150 ಮಕ್ಕಳು ಭಾಗವಹಿಸಿದ್ದರು. ಕ್ರೀಡಾಕೂಟಕ್ಕೆ ಶಾಸಕ ಎಸ್. ಮುನಿರಾಜು ಚಾಲನೆ ನೀಡಿದರು.

ರನ್ನಿಂಗ್ ರೇಸ್, ಲೆಮನ್ ಅಂಡ್ ಸ್ಪೂನ್, ಮ್ಯೂಸಿಕಲ್ ಚೇರ್, ಜಂಪಿಂಗ್ ಕ್ರೀಡೆಗಳನ್ನು ಏರ್ಪಡಿಸಲಾಗಿತ್ತು.

ಚಿಕ್ಕಬಾಣಾವರ ಅಂಗನವಾಡಿಯ ಮೂವರು ಮಕ್ಕಳು, ಗಣಪತಿನಗರ, ವೀರಶೆಟ್ಟಿಹಳ್ಳಿ, ಕೆಂಪಾಪುರ ಕಾಲೊನಿ, ಬ್ರದರ್ಸ್ ಕಾಲೋನಿ, ಗುಟ್ಟೆ ಬಸವೇಶ್ವರ ನಗರ, ದ್ವಾರಕನಗರ, ಮಾರುತಿ ನಗರ 1 ಮತ್ತು 2 ಅಂಗನವಾಡಿ ಮಕ್ಕಳು ಕ್ರೀಡಾಕೂಟದಲ್ಲಿ ಭಾಗವಹಿಸಿ ಪ್ರತಿಭೆ ಮೆರೆದರು. ಮಕ್ಕಳೊಂದಿಗೆ ಪೋಷಕರು ಸಹ ಹಾಜರಿದ್ದರು.

ಹ್ಯೂಮನ್ ರೈಟ್ಸ್ ಪ್ರೊಟೆಕ್ಷನ್ ಕಮಿಟಿ ರಾಜ್ಯಾಧ್ಯಕ್ಷ ಬಿ.ಎಂ. ಚಿಕ್ಕಣ್ಣ ಮಾತನಾಡಿ, 'ಅಂಗನವಾಡಿ ಮಕ್ಕಳಿಗೆ ಕ್ರೀಡಾಕೂಟ ಏರ್ಪಡಿಸುವ ಮೂಲಕ ಮಕ್ಕಳಲ್ಲಿ ಸ್ಫೂರ್ತಿ ಹಾಗೂ ಪ್ರೋತ್ಸಾಹ ನೀಡುವ ಪ್ರಯತ್ನ ಮಾಡಲಾಗಿದೆ' ಎಂದು ತಿಳಿಸಿದರು.

ಶೆಟ್ಟಿಹಳ್ಳಿ ವಾರ್ಡ್ ಬಿಜೆಪಿ ಅಧ್ಯಕ್ಷ ಬಿ. ಸುರೇಶ್, ಹ್ಯೂಮನ್ ರೈಟ್ಸ್ ಪ್ರೊಟೆಕ್ಷನ್ ಕಮಿಟಿ ರಾಜ್ಯಾಧ್ಯಕ್ಷ ಬಿ.ಎಂ.ಚಿಕ್ಕಣ್ಣ, ಬೆಂಗಳೂರು ನಗರ ಉಪಾಧ್ಯಕ್ಷ ಚಾಂದ್ ಪಾಷ, ಸದಸ್ಯ ಮಹಮದ್ ಸಲೀಂ ಅಹಮದ್, ಚಿಕ್ಕಸ್ವಾಮಿ, ಮಂಜುನಾಥ್, ಪುರಸಭೆ ಮುಖ್ಯ ಅಧಿಕಾರಿ ಸಂದೀಪ್ ಸೇರಿದಂತೆ ಆಯೋಜಕರ ತಂಡ ನೇತೃತ್ವ ವಹಿಸಿತ್ತು. ದಾಸನಪುರದ ಬಿಜಿಎಸ್ ಗ್ರೂಪ್ ನ ಎಂಸಿಎಚ್ ಆಸ್ಪತ್ರೆ ವತಿಯಿಂದ ಆಂಬುಲೆನ್ಸ್ ಹಾಗೂ ವೈದ್ಯ ತಂಡದ ವ್ಯವಸ್ಥೆ ಮಾಡಲಾಗಿತ್ತು.

'ಎಕ್ಸ್' ಮೇಲೆ ಸೈಬರ್ ದಾಳಿ: ಎಲಾನ್ ಮಸ್ಕ್

ಸ್ಯಾನ್‌ಫ್ರಾನ್ಸಿಸ್ಕೊ (ಎಪಿ): ಸಾಮಾಜಿಕ ಮಾಧ್ಯಮ 'ಎಕ್ಸ್' ಜಗತ್ತಿನ ಹಲವೆಡೆ ಬಳಕೆದಾರರಿಗೆ ಸೋಮವಾರ ಲಭ್ಯವಾಗಲಿಲ್ಲ. 'ಭಾರಿ ಪ್ರಮಾಣದ ಸೈಬರ್ ದಾಳಿಯ' ಪರಿಣಾಮವಾಗಿ ಈ ರೀತಿ ಆಗಿದೆ ಎಂದು 'ಎಕ್ಸ್'ನ ಮಾಲೀಕ ಎಲಾನ್ ಮಸ್ಕ್ ಹೇಳಿದ್ದಾರೆ.

'ನಮ್ಮ ಮೇಲೆ ಪ್ರತಿದಿನ ದಾಳಿ ನಡೆಯುತ್ತದೆ. ಆದರೆ ಈ ಬಾರಿ ಭಾರಿ ಸಂಪನ್ಮೂಲದೊಂದಿಗೆ ದಾಳಿ ನಡೆಸಲಾಗಿದೆ' ಎಂದು ಮಸ್ಕ್ ಅವರು ಹೇಳಿದ್ದಾರೆ. 'ಭಾರಿ ದೊಡ್ಡದಾದ, ಸಮನ್ವಯದಿಂದ ಕೆಲಸ ಮಾಡುವ ಗುಂಪು ಈ ರೀತಿ ಮಾಡಿರಬೇಕು ಅಥವಾ ದೇಶವೊಂದು ಹೀಗೆ ಮಾಡಿರಬೇಕು. ಪತ್ತೆ ಮಾಡಲಾಗುತ್ತಿದೆ' ಎಂದು ಅವರು ವಿವರಿಸಿದ್ದಾರೆ.

ವೆಬ್‌ಸೈಟ್‌ಗಳು, ಸಾಮಾಜಿಕ ಜಾಲತಾಣಗಳು ಬಳಕೆದಾರರಿಗೆ ಲಭ್ಯವಾಗದೆ ಇರುವ ನಿದರ್ಶನಗಳನ್ನು ದಾಖಲಿಸುವ ಡೌನ್‌ಡಿಟೆಕ್ಟರ್.ಕಾಂನಲ್ಲಿ ಲಭ್ಯವಿರುವ ಮಾಹಿತಿ ಪ್ರಕಾರ 40 ಸಾವಿರಕ್ಕೂ ಹೆಚ್ಚು ಬಳಕೆದಾರರು ತಮಗೆ 'ಎಕ್ಸ್' ಬಳಸಲು ಸಾಧ್ಯವಾಗುತ್ತಿಲ್ಲ ಎಂದು ದೂರಿದ್ದಾರೆ.

ಭಾರತ, ಬ್ರಿಟನ್ ಸೇರಿದಂತೆ ವಿಶ್ವದ ಹಲವೆಡೆ 'ಎಕ್ಸ್' ಬಳಕೆಗೆ ಅಡ್ಡಿ ಆಗಿದೆ.

ಕಂಟೋನ್ಮೆಂಟ್ ರೈಲು ನಿಲ್ದಾಣ ನವೀಕರಣ: ಪ್ರವೇಶ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವೀಕರಣಗೊಳ್ಳುತ್ತಿರುವ ಬೆಂಗಳೂರು ಕಂಟೋನ್ಮೆಂಟ್ ರೈಲು ನಿಲ್ದಾಣವನ್ನು ಪ್ಲಾಟ್‌ಫಾರ್ಮ್ 2ರಲ್ಲಿ ನಿರ್ವಹಿಸಲಾಗುತ್ತಿದ್ದು, ಪ್ರಯಾಣಿಕರು ಸಹಕರಿಸುವಂತೆ ನೈರುತ್ಯ ರೈಲ್ವೆ, ಬೆಂಗಳೂರು ವಿಭಾಗದ ಅಧಿಕಾರಿಗಳು ಕೋರಿದ್ದಾರೆ.

ಬೈಯಪ್ಪನಹಳ್ಳಿ ಕಡೆಗೆ ಹೋಗುವ ರೈಲುಗಳನ್ನು ಪ್ಲಾಟ್‌ಫಾರ್ಮ್ ಸಂಖ್ಯೆ 2ರಿಂದ ನಿರ್ವಹಿಸಲಾಗುತ್ತಿದೆ. ಇಲ್ಲಿಗೆ ಮಿಲ್ಲರ್ಸ್ ರಸ್ತೆಯ ಹಿಂಭಾಗದ ಪ್ರವೇಶದ್ವಾರದ ಮೂಲಕ ಅಂದರೆ ಟರ್ಮಿನಲ್ 2ರಲ್ಲಿ ಪ್ರವೇಶಿಸಬಹುದು.

ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳನ್ನು ಪ್ಲಾಟ್‌ಫಾರ್ಮ್ 1ರ ಕೊನೆಯಲ್ಲಿ ಹೊಸದಾಗಿ ನಿರ್ಮಿಸಲಾದ 1ಎ–1ಇ ಪ್ಲಾಟ್‌ಫಾರ್ಮ್‌ಗಳಲ್ಲಿ ನಿರ್ವಹಿಸಲಾಗುತ್ತಿದೆ. ನಿಲ್ದಾಣಕ್ಕೆ ಬಸ್ಸಿನಲ್ಲಿ ಬರುವ ಪ್ರಯಾಣಿಕರು ಕಂಟೋನ್ಮೆಂಟ್ ಬಸ್ ನಿಲ್ದಾಣದಲ್ಲಿ ಇಳಿದು ಪ್ಲಾಟ್‌ಫಾರ್ಮ್ 1ರ ಬದಿಯಲ್ಲಿರುವ ಮುಖ್ಯದ್ವಾರದ ಮೂಲಕ ರೈಲುಗಳು ನಿಲ್ಲುವ 1ಎ ನಿಂದ 1ಇ ವರೆಗಿನ ಪ್ಲಾಟ್‌ಫಾರ್ಮ್‌ಗಳಿಗೆ ತಲುಪಬಹುದು. ನಿಲ್ದಾಣದ ಮುಂಭಾಗದಲ್ಲಿರುವ ಟರ್ಮಿನಲ್ 1ರ ಬಳಿ ಇರುವ ತಾತ್ಕಾಲಿಕ ಪ್ರವೇಶವನ್ನು ಕೂಡ ಬಳಸಬಹುದು. ತಾತ್ಕಾಲಿಕ ಪ್ರವೇಶದ್ವಾರದಿಂದ ಸುಮಾರು 100 ಮೀಟರ್‌ಗಳಷ್ಟು ದೂರ ಕ್ರಮಿಸಿದರೆ ಪ್ಲಾಟ್‌ಫಾರ್ಮ್ 1ಎ–1ಇಗಳಿಗೆ ತಲುಪಬಹುದು. ಇತರ ಎಲ್ಲ ರೈಲುಗಳಿಗೆ ಪ್ರಯಾಣಿಕರು ಟರ್ಮಿನಲ್ ಎರಡನ್ನು ಬಳಸಲು ಕೋರಲಾಗಿದೆ.

ಅಭಿವೃದ್ಧಿ ಕಾಮಗಾರಿ ನಡೆಯುತ್ತಿರುವುದರಿಂದ ಟರ್ಮಿನಲ್ 2ರಲ್ಲಿ ಪಾರ್ಕಿಂಗ್ ಸೌಲಭ್ಯವಿರುವುದಿಲ್ಲ. ಟರ್ಮಿನಲ್–1ರ ಮುಂಭಾಗದಲ್ಲಿ ಇರುವ ಪಾರ್ಕಿಂಗ್ ಸೌಲಭ್ಯ ಬಳಸಬಹುದು. ತಪ್ಪಾದ ಟರ್ಮಿನಲ್ ಮೂಲಕ ಪ್ರಯಾಣಿಕರು ನಿಲ್ದಾಣವನ್ನು ಪ್ರವೇಶಿಸಿದರೆ, ಪ್ಲಾಟ್‌ಫಾರ್ಮ್‌ಗಳ ನಡುವೆ ದಾಟಲು ಪಾದಚಾರಿ ಮೇಲ್ಸೇತುವೆ ಬಳಸಬಹುದು.

ಪ್ರಯಾಣಿಕರ ಅನುಕೂಲಕ್ಕಾಗಿ, ನಿಲ್ದಾಣದ ಪ್ಲಾಟ್‌ಫಾರ್ಮ್ 1ರ ಬದಿಯಲ್ಲಿ ಟಿಕೆಟ್ ಕಾಯ್ದಿರಿಸುವ ಒಂದು ಕೌಂಟರ್ ಮತ್ತು ಕಾಯ್ದಿರಿಸದ ಟಿಕೆಟ್‌ಗಳ ನಾಲ್ಕು ಕೌಂಟರ್‌ಗಳು ಕಾರ್ಯನಿರ್ವಹಿಸುತ್ತಿದೆ. ಪ್ಲಾಟ್‌ಫಾರ್ಮ್ 2ರ ಕಡೆಯಲ್ಲಿ ಕಾಯ್ದಿರಿಸದ ಟಿಕೆಟ್‌ಗಳ ಎರಡು ಕೌಂಟರ್‌ಗಳು ಮತ್ತು ಒಂದು ಸ್ವಯಂಚಾಲಿತ ಟಿಕೆಟ್ ವೆಂಡಿಂಗ್ ಮೆಷಿನ್ (ಎಟಿವಿಎಂ) ಕಾರ್ಯ ನಿರ್ವಹಿಸುತ್ತಿವೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮಹಿಳಾ ದಿನಾಚರಣೆಯಲ್ಲಿ ಡಾ. ವಿಜಯಲಕ್ಷ್ಮಿ ದೇಶಮಾನೆ

'ಜಾಗೃತಿಯಿಂದ ಕ್ಯಾನ್ಸರ್ ತಡೆ ಸಾಧ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮುದಾಯಕ್ಕೆ ಶಿಕ್ಷಣ ನೀಡುವ ಮೂಲಕ ಸ್ತನ ಕ್ಯಾನ್ಸರ್ ನಿಯಂತ್ರಿಸಲು ಸಾಧ್ಯವಿದೆ' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿವೃತ್ತ ನಿರ್ದೇಶಕಿ ಡಾ. ವಿಜಯಲಕ್ಷ್ಮಿ ದೇಶಮಾನೆ ಅಭಿಪ್ರಾಯಪಟ್ಟರು.

ಬೆಂಗಳೂರು ವಿಶ್ವವಿದ್ಯಾಲಯ ಮಹಿಳಾ ಅಧ್ಯಯನ ಕೇಂದ್ರದಿಂದ ಆಯೋಜಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಇತ್ತೀಚೆಗೆ ಮಹಿಳೆಯರಲ್ಲಿ ಹೃದಯ ಸಂಬಂಧಿ ಕಾಯಿಲೆಗಳ ಜೊತೆಗೆ, ಸ್ತನ ಕ್ಯಾನ್ಸರ್ ಕೂಡ ಹೆಚ್ಚಾಗುತ್ತಿದೆ. ಈ ಕ್ಯಾನ್ಸರ್ ವೇಗವಾಗಿ ಹರಡಿ, ಸೂಕ್ತ ಚಿಕಿತ್ಸೆಯಿಲ್ಲದೇ ನರಳುವಂತಾಗಿದೆ. ಆರಂಭದಲ್ಲಿಯೇ ರೋಗ ಪತ್ತೆ ಮಾಡಿ ಸೂಕ್ತ ಚಿಕಿತ್ಸೆ ಪಡೆದರೆ ಶೇ 98ರಷ್ಟು ಗುಣಮುಖರಾಗಬಹುದು' ಎಂದರು.

ಕಾರ್ಯಕ್ರಮದಲ್ಲಿ 'ಮಾನವಿ ವಾರ್ಷಿಕ ವರದಿ' ಪುಸ್ತಕ ಬಿಡುಗಡೆಗೊಳಿಸಲಾಯಿತು. ಮಹಿಳಾ ಅಧ್ಯಯನ ಕೇಂದ್ರ ಸಂಯೋಜಕರಾದ ಸುದೇಶ್ನಾ ಮುಖರ್ಜಿ,ಬೆಂವಿವಿ ಕಾನೂನು ಸಲಹೆಗಾರ್ತಿ ಚಿಂತಾ, ರಂಗಭೂಮಿ ಕಲಾವಿದೆ ಪ್ರೊ.ರಾಮೇಶ್ವರಿ ವರ್ಮಾ, ಡಾ.ವಿಜಯಲಕ್ಷ್ಮಿ ದೇಶಮಾನೆ, ಸಿಂಡಿಕೇಟ್ ಸದಸ್ಯೆ ಡಾ.ಕೆ.ಷರೀಫಾ, ಕುಲಸಚಿವ ಶೇಕ್ ಲತೀಫ್, ಕುಲಸಚಿವ (ಮೌಲ್ಯಮಾಪನ) ಶ್ರೀನಿವಾಸ್ ಸಿ, ಸಿಂಡಿಕೇಟ್ ಸದಸ್ಯರಾದ ರಮೇಶ್ ಬಾಬು,ಬಿ.ಡಿ. ಗಂಗರಾಜು ಉಪಸ್ಥಿತರಿದ್ದರು.

'ಜೀವನಶೈಲಿ, ಸಂತಾನೋತ್ಪತ್ತಿ ಸಂಬಂಧಿತ ಸಮಸ್ಯೆ, ತಡವಾದ ಋತುಬಂಧ, ವಂಶಾವಳಿ ಕಾಯಿಲೆ, ರೇಡಿಯೇಷನ್‌ಗಳಿಂದ ಮಹಿಳೆಯರು ಸ್ತನ ಕ್ಯಾನ್ಸರ್‌ಗೆ ಒಳಗಾಗುತ್ತಾರೆ. ಇದನ್ನು ಗುಣಪಡಿಸಲು ಯಾವುದೇ ನಿರ್ದಿಷ್ಟ ವೈದ್ಯಕೀಯ ಪರಿಕರಗಳು, ಪದ್ಧತಿ, ಚಿಕಿತ್ಸಾ ಮಾರ್ಗ ಲಭ್ಯವಿಲ್ಲ' ಎಂದು ವಿವರಿಸಿದರು.

'ಮಹಿಳೆಯರು ಪೌಷ್ಟಿಕ ಆಹಾರ ಸೇವಿಸಬೇಕು, ಆರೋಗ್ಯಕರ ಜೀವನ ಶೈಲಿ ಅಳವಡಿಸಿಕೊಳ್ಳಬೇಕು. ನಿಗದಿತ ಆರೋಗ್ಯ ತಪಾಸಣೆ ಮಾಡಿಸಬೇಕು. ಇದರಿಂದ ರೋಗವನ್ನು ನಿಯಂತ್ರಿಸಬಹುದಾಗಿದೆ' ಎಂದು ಸಲಹೆ ನೀಡಿದರು.

'ಸ್ತನ ಕ್ಯಾನ್ಸರ್ ಚಿಕಿತ್ಸೆ ಬಲು ದುಬಾರಿ. ಬಡವರು ಎಲ್ಲಿಂದ ಹಣ ತರುತ್ತಾರೆ? ಆ ನಿಟ್ಟಿನಲ್ಲಿ ಸ್ತನ ಕ್ಯಾನ್ಸರ್ ಕುರಿತು ಎಲ್ಲಾ ಸಂಸ್ಥೆಗಳು ಜಾಗೃತಿ ಮೂಡಿಸಬೇಕು' ಎಂದರು.

ಕಾರ್ಯಕ್ರಮದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಮಹಿಳಾ ಉದ್ಯೋಗಿಗಳಿಗಾಗಿ ವಿಶೇಷ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ವಿಜೇತರಾಗಿ ಬಹುಮಾನ ವಿತರಿಸಲಾಯಿತು.

ಅಂಗನವಾಡಿ ಕಾರ್ಯಕರ್ತೆಯರ ಕಡೆಗಣನೆಗೆ ಖಂಡನೆ

ಬೆಂಗಳೂರು: ಬಜೆಟ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಕೇವಲ ₹1 ಸಾವಿರ ಹಾಗೂ ಸಹಾಯಕಿಯರಿಗೆ ₹750 ಗೌರವಧನ ಹೆಚ್ಚಳ ಮಾಡಿರುವ ಸರ್ಕಾರದ ನಡೆ ಖಂಡನೀಯ ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘಟನೆಗಳ ಸಂಯುಕ್ತ ಸಂಘರ್ಷ ಸಮಿತಿ ತಿಳಿಸಿದೆ.

ಟಿಯುಸಿಸಿ ಅಧ್ಯಕ್ಷ ಜಿ.ಆರ್. ಶಿವಶಂಕರ್ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ವಿವಿಧ ಅಂಗನವಾಡಿ ಸಂಘಟನೆಗಳ ಮುಖಂಡರ ಸಭೆಯಲ್ಲಿ ಸರ್ಕಾರದ ನಡೆಯನ್ನು ಖಂಡಿಸಲಾಯಿತು. ಮುಂಬರುವ ದಿನಗಳಲ್ಲಿ ರಾಜ್ಯದಾದ್ಯಂತ ಪ್ರತಿಭಟನೆ ನಡೆಸುವ ಕುರಿತು ಚರ್ಚಿಸಲಾಯಿತು ಎಂದು ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಎಂ. ಜಯಮ್ಮ ತಿಳಿಸಿದ್ದಾರೆ.

'ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಒಂದು ತಿಂಗಳಿಗೆ ₹15 ಸಾವಿರ, ಸಹಾಯಕಿಯರಿಗೆ ₹10 ಸಾವಿರ ಗೌರವಧನ ನೀಡುವ ಭರವಸೆ ನೀಡಲಾಗಿತ್ತು. ಆದರೆ, ಪ್ರಸಕ್ತ ಬಜೆಟ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಕೇವಲ ₹1 ಸಾವಿರ ಹಾಗೂ ಸಹಾಯಕಿಯರಿಗೆ ₹750 ಗೌರವಧನ ಹೆಚ್ಚಿಸುವ ಮೂಲಕ ದುಡಿಯುವ ಮಹಿಳಾ ವರ್ಗಕ್ಕೆ ಅನ್ಯಾಯ ಮಾಡಲಾಗಿದೆ' ಎಂದು ಆರೋಪಿಸಿದ್ದಾರೆ. 2023ನೇ ಸಾಲಿನಿಂದ ನಿವೃತ್ತರಾದವರಿಗೆ ಮಾತ್ರ ಗ್ರಾಚ್ಯುಟಿ ಸೌಲಭ್ಯ ಸೌಲಭ್ಯ ನೀಡುವುದಾಗಿ ಸರ್ಕಾರ ಹೇಳುತ್ತಿದೆ. 2011ರಿಂದ ನಿವೃತ್ತರಾದ ಎಲ್ಲರಿಗೂ ಗ್ರಾಚ್ಯುಟಿ ಸೌಲಭ್ಯ ನೀಡಬೇಕು ಎಂದು ಸಭೆಯಲ್ಲಿ ಒತ್ತಾಯಿಸಲಾಗಿದೆ' ಎಂದು ತಿಳಿಸಿದ್ದಾರೆ.

ಎಐಟಿಯುಸಿ ಅಂಗನವಾಡಿ ಸಂಘಟನೆಯ ಬಿ. ಅಮ್ಜದ್ ಮತ್ತು ಟಿಯುಸಿಸಿ ಸಂಘಟನೆ ಬಿ. ನಾಗರತ್ನಮ್ಮ ಹಾಗೂ ಎಐಯುಟಿಯುಸಿ ಸಂಘಟನೆಯ ಕೆ. ಸೋಮಶೇಖರ್ ಯಾದಗಿರಿ ಮತ್ತು ಎಂ. ಉಮಾದೇವಿ ಭಾಗವಹಿಸಿದ್ದರು.



ನಾಗಸಂದ್ರ ಎಸ್‌ಟಿಪಿ ಒಳಾಂಗಣ, ಚಿತ್ರ: ಬೆಂಗಳೂರು ಜಲಮಂಡಳಿ



ಇನ್ನು ಮುಂದೆ ಸಂಸ್ಕರಿತ ನೀರು ಬಳಸುವುದು ಅನಿವಾರ್ಯ ಹಾಗೂ ಅಗತ್ಯ. ಕೈಗಾರಿಕೆಗಳಿಗೆ ಸಂಸ್ಕರಿತ ನೀರು ಪೂರೈಸಲು ರೂಪಿಸಿರುವ ಈ ಯೋಜನೆ ಉತ್ತಮವಾಗಿದೆ. ಇದು ಪರಿಣಾಮಕಾರಿಯಾಗಿ ಅನುಷ್ಠಾನವಾಗಬೇಕು, ಯೋಜನೆ ಯಶಸ್ವಿಯಾಗಬೇಕು

ಎಸ್. ವಿಶ್ವನಾಥ್, ಜಲತಜ್ಞ

ಪ್ರತ್ಯೇಕ ಕೊಳವೆಗಳಲ್ಲಿ ಸಂಸ್ಕರಿತ ನೀರು ಪೂರೈಕೆ ಕುರಿತು ಕೈಗಾರಿಕಾ ಪ್ರದೇಶಗಳ ಉದ್ಯಮಿಗಳೊಂದಿಗೆ ಸಭೆ ನಡೆಸಿದ ನಂತರ, ಡಿಪಿಆರ್ ಸಿದ್ಧಪಡಿಸಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಅನುಮೋದನೆಯ ನಿರೀಕ್ಷೆಯಲ್ಲಿದ್ದೇವೆ

ರಾಮ್ ಪ್ರಸಾತ್ ಮನೋಹರ್, ಅಧ್ಯಕ್ಷ, ಬೆಂಗಳೂರು ಜಲಮಂಡಳಿ

ಕುಡಿಯುವುದಕ್ಕಲ್ಲದೆ ಬೇರೆ ಕೆಲಸಗಳಿಗೆ ಸಂಸ್ಕರಿಸಿದ ನೀರು ಪೂರೈಸಲು ಜಲಮಂಡಳಿ ಪ್ರತ್ಯೇಕ ಕೊಳವೆಮಾರ್ಗ ಅಳವಡಿಸುತ್ತಿರುವುದು ಒಳ್ಳೆಯದು. ಆದರೆ, ಯಾವ ಗುಣಮಟ್ಟದಲ್ಲಿ ನೀರು ಸಂಸ್ಕರಣೆಯಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸಬೇಕು. ಇದರಿಂದ ಏನೂ ತೊಂದರೆಯಾಗುವುದಿಲ್ಲ ಎಂಬುದನ್ನು ಪ್ರಮಾಣೀಕೃತ ಸಂಸ್ಥೆಗಳಿಂದ ದೃಢಪಡಿಸಿಕೊಂಡು, ಉದ್ಯಮದಾರರೊಂದಿಗೆ ಚರ್ಚಿಸಿ ನಂತರ ಮುಂದುವರಿಯಬೇಕು.

ಶಿವಕುಮಾರ್, ಅಧ್ಯಕ್ಷ, ಪೀಣ್ಯ ಕೈಗಾರಿಕಾ ಸಂಘ

ಕೈಗಾರಿಕೆಗಳಿಗೆ ಪ್ರತ್ಯೇಕ ಕೊಳವೆಯಲ್ಲಿ

‘ಸಂಸ್ಕರಿಸಿದ ನೀರು ಪೂರೈಕೆ’

‘ಸುಸ್ಥಿರ ನೀರು ನಿರ್ವಹಣೆ’ಗಾಗಿ ಜಲಮಂಡಳಿಯ ಹೊಸ ಹೆಜ್ಜೆ

ಯೋಜನೆ ಮುಖ್ಯಾಂಶಗಳು

₹**27** ಕೋಟಿ ಯೋಜನಾ ವೆಚ್ಚ

40 ಎಂಎಲ್‌ಡಿ ಎಸ್‌ಟಿಪಿ ಕೇಂದ್ರದ ಸಾಮರ್ಥ್ಯ

4 ಎಂಎಲ್‌ಡಿ ನಿತ್ಯ ಪೂರೈಸುವ ಸಂಸ್ಕರಿತ ನೀರು

• ಗ್ರಾಣಧಾಳು ಶ್ರೀಕಂಠ

ಬೆಂಗಳೂರು: ನಗರದಲ್ಲಿ ನೀರಿನ ಕೊರತೆ ಹೆಚ್ಚಾದಾಗಲೆಲ್ಲ ಕೈಗಾರಿಕೆಗಳಿಗೆ ಪೂರೈಸುವ ನೀರಿನ ಪ್ರಮಾಣವನ್ನು ಕಡಿತಗೊಳಿಸಲಾಗುತ್ತದೆ. ಇದರಿಂದ ಉದ್ದಿಮೆಗಳು ಸಂಕಷ್ಟಕ್ಕೆ ಸಿಲುಕುತ್ತವೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವುದಕ್ಕಾಗಿ ಬೆಂಗಳೂರು ಜಲಮಂಡಳಿ ಕೈಗಾರಿಕಾ ಪ್ರದೇಶಗಳಿಗೆ ಸಂಸ್ಕರಿತ ನೀರು ಪೂರೈಸುವಂತಹ ಹೊಸ ಯೋಜನೆಯೊಂದನ್ನು ಸಿದ್ಧಪಡಿಸಿದೆ.

ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸುತ್ತಿದೆ. ನೀರಿನ ಬೇಡಿಕೆಯನ್ನು ತಗ್ಗಿಸುವುದು ಮತ್ತು ಈ ಮೂಲಕ ಸುಸ್ಥಿರ ನೀರು ನಿರ್ವಹಣೆಗೆ ಆದ್ಯತೆ ನೀಡುವುದು ಯೋಜನೆಯ ಉದ್ದೇಶವಾಗಿದೆ.

ಯೋಜನೆ ಅನುಷ್ಠಾನ ಹೇಗೆ?: ಬಿಬಿಎಂಪಿ ದಾಸರಹಳ್ಳಿ ವಲಯದ ವ್ಯಾಪ್ತಿಯಲ್ಲಿರುವ ಜಲಮಂಡಳಿಯ ನಾಗಸಂದ್ರ ತ್ಯಾಜ್ಯ ನೀರು ಸಂಸ್ಕರಣಾ ಘಟಕದಿಂದ(ಎಸ್‌ಟಿಪಿ) ಕೈಗಾರಿಕಾ ಪ್ರದೇಶಕ್ಕೆ ಪ್ರತ್ಯೇಕ ಎಚ್‌ಡಿಪಿ ಕೊಳವೆಗಳನ್ನು ಜೋಡಿಸಲಾಗುತ್ತದೆ. ಅದರ ಮೂಲಕ ಪ್ರತಿದಿನ ಸಂಸ್ಕರಿತ ನೀರನ್ನು ಕಾರ್ಖಾನೆಗಳ ಬಾಗಿಲಿಗೆ ಪೂರೈಸಲು ಯೋಜನೆ ಸಿದ್ಧವಾಗಿದೆ. ಜಲಮಂಡಳಿ ಈ ಯೋಜನೆಗಾಗಿ ₹27 ಕೋಟಿ ವೆಚ್ಚ ಮಾಡುತ್ತಿದ್ದು, ವಿಸ್ತೃತ ಯೋಜನಾ ವರದಿ(ಡಿಪಿಆರ್) ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿದೆ. ಶೀಘ್ರದಲ್ಲೇ ಅನುಮೋದನೆಯಾಗುವ ವಿಶ್ವಾಸವನ್ನೂ ವ್ಯಕ್ತಪಡಿಸಿದೆ.

ಯೋಜನೆಯ ಉದ್ದೇಶ : ನೂರು ಕಿ.ಮೀಗೂ ಹೆಚ್ಚು ದೂರದಿಂದ ತರುವ ಕಾವೇರಿ ನೀರಿನ ಮೇಲಿನ ಅವಲಂಬನೆ ಕಡಿಮೆ ಮಾಡುವುದು, ಕಾರ್ಖಾನೆಗಳಿಗೆ ಆಗುತ್ತಿರುವ ನೀರಿನ ವೆಚ್ಚ ತಗ್ಗಿಸುವುದು, ಶ್ರಮ–ಸಮಯ ಉಳಿತಾಯ, ಉದ್ಯಮಗಳಿಗೆ ಬೇಕಾದ ಸಮಯದಲ್ಲಿ ನೀರು ಪೂರೈಕೆ ಸೇರಿದಂತೆ ಹಲವು ಉದ್ದೇಶಗಳಿಂದ ಈ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಜಲಮಂಡಳಿ ತಿಳಿಸಿದೆ.

ದಾಸರಹಳ್ಳಿ ವ್ಯಾಪ್ತಿಯ ನಾಗಸಂದ್ರದಲ್ಲಿರುವ ಜಲಮಂಡಳಿಯ ತ್ಯಾಜ್ಯ ನೀರು ಸಂಸ್ಕರಣಾ ಘಟಕ

ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಪ್ರತಿನಿತ್ಯ 2.5 ದಶಲಕ್ಷ ಲೀಟರ್ (ಎಂಎಲ್‌ಡಿ) ಕಾವೇರಿ ನೀರನ್ನು ಪೂರೈಸಲಾಗುತ್ತಿದೆ. (ತಿಂಗಳಿಗೆ 70 ಎಂಎಲ್‌ಡಿ) ಜಲಮಂಡಳಿ ಪ್ರಕಾರ, ಒಂದು ವಾರ್ಡ್‌ಗೆ ಕುಡಿಯಲು ಪೂರೈಸಲು ಇಷ್ಟು ಪ್ರಮಾಣದ ನೀರು ಸಾಕಾಗುತ್ತದೆ. ಇದೇ ಈ ನೀರನ್ನು ಯಂತ್ರಗಳ ಕೂಲಿಂಗ್, ಕಾರ್ಖಾನೆ ಸ್ವಚ್ಛತೆ, ಕೈ ತೊಳೆಯುವುದು, ಶೌಚಾಲಯ, ತೋಟ ನಿರ್ವಹಣೆ ಸೇರಿದಂತೆ ಅನ್ಯ ಉದ್ದೇಶಗಳಿಗೆ ಹೆಚ್ಚಾಗಿ ಬಳಸಲಾಗುತ್ತಿದೆ.

ಪ್ರಸ್ತುತ ವಾಣಿಜ್ಯ ಉದ್ದೇಶಕ್ಕೆ ಬಳಸುವ ಪ್ರತಿ ಸಾವಿರ ಲೀಟರ್ ಕಾವೇರಿ ನೀರಿಗೆ ₹90 ದರ ನಿಗದಿಪಡಿಸಲಾಗಿದೆ. ಟ್ಯಾಂಕರ್ ಮೂಲಕ ಸಂಸ್ಕರಿತ ನೀರು ಪೂರೈಕೆ ಮಾಡುತ್ತಿದ್ದರೂ, ಸಾರಿಗೆ ವೆಚ್ಚವೂ ಸೇರುತ್ತದೆ. ಜೊತೆಗೆ ಸಂಚಾರ ದಟ್ಟಣೆಯ ಕಾರಣ ಸಮಯಕ್ಕೆ ಸರಿಯಾಗಿ ಲಭ್ಯವಾಗುವುದಿಲ್ಲ. ಹೀಗಾಗಿ ಸಂಸ್ಕರಿತ ನೀರಿನ ಬಳಕೆ ಪ್ರಮಾಣ ಕಡಿಮೆ ಇದೆ. ಈ ಯೋಜನೆ ಅನುಷ್ಠಾನವಾದರೆ, ನಾಲ್ಕೈದು ಕಿ.ಮೀ. ವ್ಯಾಪ್ತಿಯೊಳಗೆ ಕೈಗಾರಿಕಾ ಪ್ರದೇಶಗಳಿಗೆ ನೀರು ಲಭ್ಯವಾಗುತ್ತದೆ. ಸಾವಿರ ಲೀಟರ್ ಸಂಸ್ಕರಿತ ನೀರಿಗೆ ₹25 ದರ ನಿಗದಿಪಡಿಸಿದ್ದು, ಇದರಿಂದ ಕಾರ್ಖಾನೆಗಳಿಗೆ ನೀರಿನ ವೆಚ್ಚದಲ್ಲಿ ಶೇ 75ರಷ್ಟು ಉಳಿತಾಯ ಆಗುತ್ತದೆ. ಬೇಕಾದ ಸಮಯದಲ್ಲಿ ನೀರು ಕೂಡ ಲಭ್ಯವಾಗುತ್ತದೆ.

ಸುಮಾರು 13 ಸಾವಿರ ಸೂಕ್ಷ್ಮ, ಸಣ್ಣ ಕೈಗಾರಿಕೆಗಳಿರುವ ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಪೂರೈಸುತ್ತಿರುವ ಕಾವೇರಿ ನೀರಿನ ಪ್ರಮಾಣವನ್ನು ಹೆಚ್ಚಿಸಬೇಕೆಂಬ ಬೇಡಿಕೆ ಇದೆ. ಇದಕ್ಕಾಗಿ ಹೆಚ್ಚುವರಿ ಹಣ ನೀಡುವುದಾಗಿಯೂ ಕೈಗಾರಿಕಾ ಸಂಘದವರು ಹೇಳುತ್ತಾರೆ. ಆದರೆ, ನೀರು ಪೂರೈಕೆ ಆರಂಭದಲ್ಲೇ ರೂಪಿಸಿರುವ ನಿಯಮದ ಪ್ರಕಾರ, ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ 70 ಎಂಎಲ್‌ಡಿ ನೀರನ್ನು ಮಾತ್ರ ಪೂರೈಸಲು ಸಾಧ್ಯ. ಈ ಮಿತಿಯನ್ನು ಹೆಚ್ಚಿಸಲು ಅವಕಾಶವಿಲ್ಲ. ಅದಕ್ಕಾಗಿಯೇ ಹೊಸ ಯೋಜನೆ ರೂಪಿಸಲಾಗಿದೆ ಎಂದು ಜಲಮಂಡಳಿ ತಿಳಿಸಿದೆ.

ಪ್ರಸ್ತುತ ನಾಗಸಂದ್ರದಲ್ಲಿ 40 ದಶಲಕ್ಷ ಲೀಟರ್ ನೀರು ಸಂಸ್ಕರಿಸುವ ಸಾಮರ್ಥ್ಯದ ಎಸ್‌ಟಿಪಿ ಘಟಕವಿದೆ. ಇದರಿಂದ ನಿತ್ಯ 4 ದಶಲಕ್ಷ ನೀರನ್ನು ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಪೂರೈಸಬಹುದಾಗಿದೆ.

1,440 ಎಂಎಲ್‌ಡಿ ನಗರದಲ್ಲಿ ಉತ್ಪತ್ತಿಯಾಗುತ್ತಿರುವ ತ್ಯಾಜ್ಯ ನೀರು

1,212 ಎಂಎಲ್‌ಡಿ ಸಂಸ್ಕರಣೆ ಆಗುತ್ತಿರುವ ನೀರು

775 ಎಂಎಲ್‌ಡಿ ಮರುಬಳಕೆ ಆಗುತ್ತಿರುವ ನೀರು

ಹೀಗಾಗಿ, ಕಾರ್ಖಾನೆಗಳು ಎಷ್ಟು ಸಂಸ್ಕರಿತ ನೀರನ್ನು ಕೇಳಿದರೂ ಪೂರೈಸಲು ಜಲಮಂಡಳಿ ಸಿದ್ಧವಿದೆ ಎಂದು ಸಂಸ್ಕರಿತ ನೀರಿನ ಉಸ್ತುವಾರಿ ನೋಡಿಕೊಳ್ಳುತ್ತಿರುವ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗುಣಮಟ್ಟದ ನೀರು: ಅನೇಕರಿಗೆ ಸಂಸ್ಕರಿತ ನೀರಿನ ಬಗ್ಗೆ ಅನುಮಾನಗಳಿರುತ್ತವೆ. ಆದರೆ, ಅಂಥ ಶಂಕೆ ಇಟ್ಟುಕೊಳ್ಳಲೇಬೇಡಿ ಎಂದು ಜಲಮಂಡಳಿಯ ಎಂಜಿನಿಯರ್‌ಗಳು ಭರವಸೆ ನೀಡಿದ್ದಾರೆ. ಹಲವು ಹಂತಗಳ ಪರೀಕ್ಷೆ ನಡೆಸಿದ ನಂತರವೇ ಪೂರೈಕೆ ಮಾಡಲಾಗುತ್ತದೆ ಎಂದು ಅವರು ಹೇಳಿದ್ದಾರೆ.

ಮೂರು ಹಂತಗಳಲ್ಲಿ ನೀರು ಸಂಸ್ಕರಣೆಯಾಗುತ್ತದೆ. ನಂತರ ‘ಆರ್‌ಒ’ ಘಟಕದಲ್ಲಿ ಶುದ್ಧೀಕರಣಗೊಳ್ಳುತ್ತದೆ. ಆಮೇಲೆ ಗ್ರಾಹಕರಿಗೆ ತಲುಪಿಸಲಾಗುತ್ತದೆ. ನೀರಿನ ಗುಣಮಟ್ಟವನ್ನು ಖಾತರಿಪಡಿಸುವ ಪ್ರಮಾಣಪತ್ರವನ್ನೂ ನೀಡಲಾಗುತ್ತದೆ. ಮಾತ್ರವಲ್ಲ, ಪೂರೈಸುವ ಸಂಸ್ಕರಿತ ನೀರಿನ ಬಗ್ಗೆ ನಿಗಾ ಇಡಲಾಗುತ್ತದೆ. ನೀರಿನ ಬಗ್ಗೆ ಅನುಮಾನ ಬಂದರೆ, ಗ್ರಾಹಕರು ಸಮೀಪದಲ್ಲೇ ಇರುವ ಪ್ರಯೋಗಾಲಯದಲ್ಲಿ ಪರೀಕ್ಷಿಸಿ ಖಚಿತಪಡಿಸಿಕೊಳ್ಳಬಹುದು ಎಂದು ಎಂಜಿನಿಯರ್‌ಗಳು ತಿಳಿಸಿದ್ದಾರೆ.

‘ಬಗರ್‌ಹುಕುಂ: ಅರ್ಜಿ ವಿಲೇವಾರಿ ಮಾಡದೇ ಒಕ್ಕಲೆಬ್ಬಿಸುವಂತಿಲ್ಲ’

ಪ್ರಜಾವಾಣಿ ವಾರ್ತೆ



ಕೃಷ್ಣ ಬೈರೇಗೌಡ

ಬೆಂಗಳೂರು: ಬಗರ್‌ಹುಕುಂ ಅಡಿ ಸಲ್ಲಿಸಲಾಗಿರುವ ನಮೂನೆ 53 ಹಾಗೂ ನಮೂನೆ 57ರ ಅರ್ಜಿಗಳು ವಿಲೇವಾರಿ ಆಗದೇ ರೈತರ ಬೆಳೆ ನಾಶ ಮಾಡುವುದು ಅಥವಾ ಒಕ್ಕಲೆಬ್ಬಿಸುವ ಕ್ರಮಕ್ಕೆ ಮುಂದಾಗ ಬಾರದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಶೈಲೇಂದ್ರ ಬೆಲ್ದಾಳೆ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಅಂತಹ ಘಟನೆಗಳು ನಡೆದರೆ ಕೂಡಲೇ ನನ್ನ ಗಮನಕ್ಕೆ ತರಬೇಕು’ ಎಂದು ಅಧಿಕಾರಿಗಳಿಗೆ ಸೂಚಿಸಿದರು.

‘ಈ ಅರ್ಜಿಗಳು ಇತ್ಯರ್ಥ ಆಗುವುದಕ್ಕೂಮೊದಲು ಅರ್ಜಿದಾರರನ್ನು ಒಕ್ಕಲೆಬ್ಬಿಸಲು ಸಾಧ್ಯವಿಲ್ಲ. ಅಲ್ಲದೇ, ಅರ್ಜಿ ಹಾಕಿರುವ ಕಡೆ ರೈತರ ಬೆಳೆ ಕಟಾವು ಮಾಡಲು ಅಡ್ಡಿಪಡಿಸಬಾರದು. ಈ ಸಂಬಂಧ ಸ್ಪಷ್ಟವಾದ ಕಾನೂನು ರೂಪಿಸಲಾಗಿದೆ. ಬಗರ್‌ಹುಕುಂಗೆ ಸಂಬಂಧಿಸಿದಂತೆ ಇಷ್ಟು ಸ್ಪಷ್ಟವಾಗಿ ಹಿಂದೆ ಯಾವತ್ತೂ ಸುತ್ತೋಲೆ ಹೊರಡಿಸಿರಲಿಲ್ಲ’ ಎಂದು ಅವರು ಹೇಳಿದರು.

ಬಗರ್‌ಹುಕುಂ ಯೋಜನೆ ಅಡಿ ಭೂಮಂಜೂರು ಮಾಡಲು ರಾಜ್ಯದಲ್ಲಿ ಈವರೆಗೆ 185 ಸಮಿತಿಗಳನ್ನು ರಚಿಸಲಾಗಿದೆ. ಇದೊಂದು ಹೊಸ ದಾಖಲೆ. ಅರ್ಜಿ ವಿಲೇವಾರಿಯನ್ನು ತ್ವರಿತಗತಿಯಲ್ಲಿ ಕೈಗೊಳ್ಳಲಾಗುತ್ತಿದೆ ಎಂದು ಅವರು ತಿಳಿಸಿದರು.

‘ಕಳೆದ ಹಲವು ವರ್ಷಗಳಿಗೆ ಹೋಲಿಸಿದರೆ, ಅತಿ ಹೆಚ್ಚು ಬಗರ್‌ಹುಕುಂ ಸಮಿತಿಗಳನ್ನು ರಚಿಸಿದ್ದು, ನಮ್ಮ ಅವಧಿಯಲ್ಲೇ. ಅರ್ಜಿ ವಿಲೇ ಕೆಲಸಗಳನ್ನು ಶೀಘ್ರ ಮುಗಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಈ ಸಂಬಂಧ ಅಧಿಕಾರಿಗಳಿಗೆ ಗಡುವು ನೀಡಿದ್ದು ನಿಜ. ಸರ್ಕಾರವೇ ಅದರ ಬೆನ್ನಟ್ಟಿರುವುದೂ ನಿಜ’ ಎಂದು ಕೃಷ್ಣ ಬೈರೇಗೌಡ ಹೇಳಿದರು.

ಐಪಿಎಲ್: ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ 75 ಸಾವಿರ ಲೀ. ಸಂಸ್ಕರಿತ ನೀರು

ಅಂತರ್ಜಲ ಕುಸಿಯುವ ಬಗ್ಗೆ ಎಚ್ಚರಿಸಿದ್ದ ವಿಜ್ಞಾನಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಸ್ಕರಿತ ನೀರಿನ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಈ ಬಾರಿಯೂ ನಗರದಲ್ಲಿ ನಡೆಯಲಿರುವ ಐಪಿಎಲ್ ಕ್ರಿಕೆಟ್ ಪಂದ್ಯಾವಳಿ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಬೆಂಗಳೂರು ಜಲಮಂಡಳಿ ಸಂಸ್ಕರಿಸಿದ ನೀರು ಪೂರೈಸಲಿದೆ’ ಎಂದು ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಐಪಿಎಲ್ ಪಂದ್ಯ ನಡೆಯುವ ವೇಳೆ ಕ್ರೀಡಾಂಗಣಕ್ಕೆ ನಿತ್ಯ 75 ಸಾವಿರ ಲೀಟರ್ ನೀರು ಬೇಕಾಗುತ್ತದೆ. ಈ ಸಂಬಂಧ ಕೆಎಸ್‌ಸಿಎ ಕಬ್ಬನ್ ಪಾರ್ಕ್‌ನ ತ್ಯಾಜ್ಯ ನೀರು ಸಂಸ್ಕರಣಾ ಘಟಕದಿಂದ ನೀರು ಪೂರೈಸುವಂತೆ ಮನವಿ ಮಾಡಿತ್ತು. ಅದರಂತೆ ನೀರು ಪೂರೈಸಲಾಗುತ್ತಿದೆ’ ಎಂದು ತಿಳಿಸಿದರು.

ಕಬ್ಬನ್ ಪಾರ್ಕ್‌ನ ತ್ಯಾಜ್ಯ ನೀರು ಸಂಸ್ಕರಣಾ ಘಟಕ

ಕಳೆದ ವರ್ಷ ನೀರಿನ ಸಮಸ್ಯೆ ತೀವ್ರವಾಗಿದ್ದರಿಂದ ಸಂಸ್ಕರಿತ ನೀರು ಬಳಕೆ ಬಗ್ಗೆ ಜಲಮಂಡಳಿ ಜಾಗೃತಿ ಮೂಡಿಸಿತ್ತು. ಆ ವರ್ಷದ ಐಪಿಎಲ್ ಪಂದ್ಯಾವಳಿ ವೇಳೆ ಕ್ರೀಡಾಂಗಣಕ್ಕೆ ಸಂಸ್ಕರಿತ ನೀರು ಪೂರೈಸಲಾಗಿತ್ತು. ಈ ವರ್ಷವೂ 80 ವಾರ್ಡ್‌ಗಳಲ್ಲಿ ಅಂತರ್ಜಲ ಕುಸಿಯುವ ಸಾಧ್ಯತೆ ಬಗ್ಗೆ ಐಐಎಸ್‌ಸಿ ವಿಜ್ಞಾನಿಗಳು ಮುನ್ಸೂಚನೆ ನೀಡಿದ್ದಾರೆ. ಹೀಗಾಗಿ, ಈ ವರ್ಷವೂ ಮುಂದುವರಿಸಲಾಗುತ್ತಿದೆ’ ಎಂದು ವಿವರಿಸಿದರು.

ಕೆಪಿಎಸ್‌ಸಿ: ಕನ್ನಡ ವಿದ್ಯಾರ್ಥಿಗಳಿಗೆ ಅನ್ಯಾಯ ಆರೋಪ

ನ್ಯಾಯಕ್ಕಾಗಿ ಅಹೋರಾತ್ರಿ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಕೆಪಿಎಸ್‌ಸಿ ನಡೆಸಿದ ಪರೀಕ್ಷೆಗಳಲ್ಲಿ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ ಎಂದು ಆರೋಪಿಸಿ ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ. ನಾರಾಯಣಗೌಡ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು.

2024ರ ಆಗಸ್ಟ್ 27ರಂದು ನಡೆದ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಅನ್ಯಾಯವಾಗಿತ್ತು. ಡಿಸೆಂಬರ್ 29ರಂದು ನಡೆದ ಮರುಪರೀಕ್ಷೆಯಲ್ಲೂ ಅದು ಪುನರಾವರ್ತನೆ ಆಗಿರುವುದು ಮಾತ್ರವಲ್ಲ, 80 ಪ್ರಶ್ನೆಗಳಲ್ಲಿ ಲೋಪವೆಸಗಿ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ವಂಚನೆ ಎಸಗಲಾಗಿದೆ ಎಂದು ಪ್ರತಿಭಟನಕಾರರು ಆರೋಪಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು —ಪ್ರಜಾವಾಣಿ ಚಿತ್ರ

‘ಕರ್ನಾಟಕದಲ್ಲಿ ಆಡಳಿತ ಭಾಷೆ ಕನ್ನಡ. ಕೆಎಎಸ್ ಅಧಿಕಾರಿಗಳಾಗುವವರು ಕಡತಗಳನ್ನು ಕನ್ನಡದಲ್ಲೇ ಸಿದ್ಧಪಡಿಸಬೇಕು, ಕನ್ನಡದಲ್ಲೇ ವ್ಯವಹರಿಸಬೇಕು. ಇದು ಅವರ ಶಾಸನಬದ್ಧ ಕರ್ತವ್ಯ. ಹೀಗಿರುವಾಗ ಪರೀಕ್ಷೆಗಳು ಕನ್ನಡ ಮಾಧ್ಯಮದಲ್ಲೇ ನಡೆಯಬೇಕು. ಒಂದು ವೇಳೆ ಇಂಗ್ಲಿಷ್ ಮಾಧ್ಯಮದಲ್ಲೂ ನಡೆಯುವುದಾದರೆ ಮೊದಲು ಕನ್ನಡದಲ್ಲಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಅದನ್ನು ಇಂಗ್ಲಿಷ್‌ಗೆ ಅನುವಾದಿಸಬೇಕು. ಆದರೆ ಅಧಿಕಾರಿಗಳು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸುತ್ತಿದ್ದಾರೆ. ಇದರಿಂದಾಗಿ ಪರೀಕ್ಷೆ ಮತ್ತು ಮರುಪರೀಕ್ಷೆ ಎರಡರಲ್ಲೂ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮೂರು ಬಾರಿ ಭೇಟಿ ಮಾಡಿರುವ ಆಗಿರುವ ಪ್ರಮಾದವನ್ನು ಗಮನಕ್ಕೆ ತರಲಾಗಿದೆ. ಸಚಿವರಿಗೆ, ವಿರೋಧ ಪಕ್ಷಗಳ ನಾಯಕರಿಗೆ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಆಗಿರುವ ಅನ್ಯಾಯದ ಕುರಿತು ಮಾಹಿತಿ ನೀಡಲಾಗಿದೆ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ‘ಮುಖ್ಯಮಂತ್ರಿ’ ಚಂದ್ರು, ಹಂಪ ನಾಗರಾಜಯ್ಯ, ನಲ್ಲೂರು ಪ್ರಸಾದ್ ಹಾಗೂ ಸ್ವಾಮೀಜಿಗಳು ಭಾಗವಹಿಸಿದ್ದರು.

ಗೋರ ಬಂಜಾರ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ನೀಡುವಂತೆ ಆಗ್ರಹಿಸಿ ಗೋರ ಸೇನಾ ರಾಷ್ಟ್ರೀಯ ಸಂಘಟನೆಯ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

‘ಮಕ್ಕಳನ್ನು ಸಮಾನವಾಗಿ ಬೆಳೆಸಿ’

ಪ್ರಜಾವಾಣಿ ವಾರ್ತೆ

ಯಲಹಂಕ: ‘ಮನೆಗಳಲ್ಲಿ ಪೋಷಕರು ಹೆಣ್ಣು ಮತ್ತು ಗಂಡು ಮಕ್ಕಳೆಂಬ ಭೇದಭಾವ ಮಾಡದೆ ಇಬ್ಬರನ್ನೂ ಸಮಾನ ರೀತಿಯಲ್ಲಿ ಬೆಳೆಸಬೇಕು’ ಎಂದು ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ ಹೇಳಿದರು.

ಬ್ಯಾಟರಾಯನಪುರ ಕ್ಷೇತ್ರದ ಜಕ್ಕೂರಿನ ಅಂಬೇಡ್ಕರ್ ಸಮುದಾಯ ಭವನ ಟ್ರಸ್ಟ್ ಹಾಗೂ ಜಕ್ಕೂರು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಆಶ್ರಯದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಹೆಣ್ಣುಮಕ್ಕಳು ಉತ್ತಮ ಶಿಕ್ಷಣ ಪಡೆದು ಉನ್ನತ ಹುದ್ದೆಗಳನ್ನು ಅಲಂಕರಿಸುವ ಮೂಲಕ ಸ್ವಾವಲಂಬಿಗಳಾಗಿ ಬದುಕಬೇಕು. ಇಡೀ ಕುಟುಂಬವನ್ನು ನಿರ್ವಹಣೆ ಮಾಡುವ ಮಹಿಳೆಯರು ಮೊದಲು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಅತಿಮುಖ್ಯ’ ಎಂದರು.

ಅಂಬೇಡ್ಕರ್ ಸಮುದಾಯ ಭವನ ಟ್ರಸ್ಟ್ ಅಧ್ಯಕ್ಷ ರವಿಕುಮಾರ್ ಮಾತನಾಡಿ, ‘ಸಹಕಾರ ಸಂಘದಿಂದ ಮಹಿಳಾ ದಿನಾಚರಣೆಯಂದು ಬಾಗಿನ ಮತ್ತು ಉಡುಗೊರೆ ನೀಡುವ ಪದ್ಧತಿಯನ್ನು ಹಲವು ವರ್ಷಗಳಿಂದ ನಿರಂತರವಾಗಿ ನಡೆಸಿಕೊಂಡು ಬರಲಾಗಿದೆ. ಈ ಬಾರಿ ಸ್ತ್ರೀಶಕ್ತಿ ಗುಂಪುಗಳ 500 ಸದಸ್ಯರಿಗೆ ವಿತರಿಸಲಾಗಿದೆ’ ಎಂದು ತಿಳಿಸಿದರು.

ರಾಜ್ಯ ಯುವ ಕಾಂಗ್ರೆಸ್‌ನ ಉಪಾಧ್ಯಕ್ಷ ದಿವ್ಯಾ ರಾಜಣ್ಣ, ಉಪನ್ಯಾಸಕ ರೇಣುಕಾ ಪಾಟೀಲ್, ಪೊಲೀಸ್ ಸಬ್ ಇನ್ ಸ್ಪೆಕ್ಟರ್ ಜ್ಯೋತಿ, ವಿದ್ಯಾಶ್ರೀ, ಮಹಿಳಾ ಮುಖಂಡೆ ಜಯಲಕ್ಷ್ಮಿ ರವಿಕುಮಾರ್, ಕೃತಿ ಹರೀಶ್ ಉಪಸ್ಥಿತರಿದ್ದರು.

ನವಜಾತ ಶಿಶು ಪತ್ತೆ

ಹೊಸಕೋಟೆ: ಇಲ್ಲಿನ ಉಪ್ಪಾರಹಳ್ಳಿ ಕಾಟೇ ರಮ್ಮ ದೇವಾಲಯದ ಬಳಿ ನವಜಾತ ಗಂಡು ಶಿಶುವೊಂದು ಪತ್ತೆಯಾಗಿದೆ. ಮಗುವನ್ನು ಹೊಸಕೋಟೆ ಪೊಲೀಸರು ರಕ್ಷಣೆ ಮಾಡಿದ್ದಾರೆ.

ಪೊಲೀಸರು ಮಗುವಿಗೆ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕಳಿಸಿದ್ದಾರೆ.

ಮುಖ್ಯಮಂತ್ರಿ ಮುಂದೆ ಶಾಸಕರ ಅಹವಾಲು

‘ಕೈಗೆ ಸಿಗದ ಸಚಿವರಿಗೆ ಬುದ್ಧಿ ಹೇಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷ ತುಂಬಿದರೂ ಸಚಿವರು ಕೈಗೆ ಸಿಗುತ್ತಿಲ್ಲ. ಅವರಿಗೆ ಸ್ವಲ್ಪ ಬುದ್ಧಿ ಹೇಳಿ’ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಕೆಲವು ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಬಳಿ ಅಲವತ್ತುಕೊಂಡಿದ್ದಾರೆ.

ನಗರದ ರ್‍ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ಸೋಮವಾರ ರಾತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಯಿತು. ಸಚಿವರ ಕಾರ್ಯವೈಖರಿಯ ಬಗ್ಗೆ ಸಭೆಯಲ್ಲಿ ಶಾಸಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಉಪ ನೋಂದಣಾಧಿಕಾರಿ ಮತ್ತು ಪಿಡಿಒಗಳನ್ನು ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡುತ್ತಿರುವುದಕ್ಕೂ ಆಕ್ಷೇಪ ವ್ಯಕ್ತಪಡಿಸಿದರು ಎಂದು ಗೊತ್ತಾಗಿದೆ.

ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ‘ಮುಸ್ಲಿಂ ಬಜೆಟ್ ಎಂದು ಬಿಜೆಪಿ, ಜೆಡಿಎಸ್‌ನವರು ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ. ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆಯಡಿ ಪರಿಶಿಷ್ಟರ ಕಲ್ಯಾಣಕ್ಕೆ ಮಾತ್ರ ಅನುದಾನ ನೀಡಲಾಗಿದೆ ಎಂಬ ಆರೋಪವೂ ಸರಿಯಲ್ಲ. ಜೈನ ಸಮುದಾಯವೂ ಸೇರಿದಂತೆ ಎಲ್ಲ ಸಮುದಾಯಗಳಿಗೂ ಅನುದಾನ ನೀಡಲಾಗಿದೆ. ಬಜೆಟ್ ಗಾತ್ರವೂ ದೊಡ್ಡದಾಗಿದೆ. ಯಾರೂ ಭಯ ಪಡುವ ಅಗತ್ಯ ಇಲ್ಲ. ಶಾಸಕರಿಗೆ ₹8 ಸಾವಿರ ಕೋಟಿ ವಿಶೇಷ ಅನುದಾನವಿದೆ. ಅಧಿವೇಶನ ಮುಗಿದ ತಕ್ಷಣ ಆ ಅನುದಾನ ಬಿಡುಗಡೆ ಮಾಡುತ್ತೇನೆ’ ಎಂದು ಭರವಸೆ ನೀಡಿದರು ಎಂದು ಗೊತ್ತಾಗಿದೆ.

‘ಗ್ಯಾರಂಟಿ ಯೋಜನೆಗಳು ಮತ್ತು 7ನೇ ವೇತನ ಆಯೋಗ ಅನುಷ್ಠಾನಕ್ಕೆ ₹70 ಸಾವಿರ ಕೋಟಿ ಬೇಕಾಗುತ್ತದೆ. ಬಜೆಟ್‌ನಲ್ಲಿ ಎಲ್ಲ ಕ್ಷೇತ್ರಗಳ ಹೆಸರನ್ನೂ ಹೇಳಲಾಗುವುದಿಲ್ಲ. ಯಾವ ಶಾಸಕರೂ ಆತಂಕ ಪಡುವುದು ಬೇಡ. ಏಪ್ರಿಲ್ ಬಳಿಕ ಎಲ್ಲರಿಗೂ ಅನುದಾನ ಸಿಗಲಿದೆ’ ಎಂದು ಸಿದ್ದರಾಮಯ್ಯ ಅವರು ಶಾಸಕರನ್ನು ಸಮಾಧಾನ ಪಡಿಸಿದರು..

‘ಕ್ಷೇತ್ರ ಮರು ವಿಂಗಡಣೆಗೆ ಸಂಬಂಧಿಸಿದಂತೆ ಇದೇ 28ರಂದು ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಅವರು ಸಭೆ ಕರೆದಿದ್ದಾರೆ. ಆ ಸಭೆಯಲ್ಲಿ ನಾನು ಮತ್ತು ಉಪ ಮುಖ್ಯಮಂತ್ರಿ ಭಾಗವಹಿಸಲಿದ್ದೇವೆ’ ಎಂದೂ ಮುಖ್ಯಮಂತ್ರಿ ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಸಭೆಯಲ್ಲಿ ಭಾಗಿಯಾದರು.

ಮೇ 20ರಂದು ಸರ್ಕಾರದ ಸಂಭ್ರಮಾಚರಣೆ

ಸಿದ್ದರಾಮಯ್ಯ

‘ರಾಜ್ಯ ಸರ್ಕಾರಕ್ಕೆ ಎರಡು ವರ್ಷ ತುಂಬಿದ ಸಂಭ್ರಮವನ್ನು ಮೇ 20ರಂದು ಆಚರಿಸಲು ನಿರ್ಧರಿಸಿದ್ದೇವೆ’ ಎಂದು ಸಿದ್ದರಾಮಯ್ಯ ಅವರು ಸಭೆಯಲ್ಲಿ ತಿಳಿಸಿದ್ದಾಗಿ ಗೊತ್ತಾಗಿದೆ.

‘ಅಧಿವೇಶನ ಮುಗಿದ ಬಳಿಕ ಎಲ್ಲ ಸಚಿವರು ತಮ್ಮ ಜಿಲ್ಲೆಗಳಲ್ಲಿ ಪ್ರವಾಸ ಮಾಡಬೇಕು. ಶಾಸಕರು, ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕು’ ಎಂದು ಮುಖ್ಯಮಂತ್ರಿ ಕಿವಿಮಾತು ಹೇಳಿದರು ಎಂದು ತಿಳಿದುಬಂದಿದೆ.

ಆರು ಫ್ರಾಂಚೈಸಿ ತಂಡಗಳಲ್ಲಿ 90 ಆಟಗಾರ್ತಿಯರು ಭಾಗಿ

ನಗರದಲ್ಲಿ ದೇಶದ ಮೊದಲ ಮಹಿಳಾ ಲೀಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಮೊದಲ ಮಹಿಳಾ ಗಾಲ್ಫ್ ಲೀಗ್ ಇದೇ 13, 20 ಮತ್ತು 27ರಂದು ಬೆಂಗಳೂರಿನ ಗಾಲ್ಫ್ ಕ್ಲಬ್‌ನಲ್ಲಿ ನಡೆಯಲಿದೆ. ಒಟ್ಟು 90 ಆಟಗಾರ್ತಿಯರು ಭಾಗವಹಿಸುತ್ತಿದ್ದು, ಆರು ಫ್ರಾಂಚೈಸಿ ತಂಡಗಳಲ್ಲಿ ಆಡಲಿದ್ದಾರೆ.

ಮಹಿಳಾ ಮಾಲೀಕತ್ವದ ದೇಶದ ಮೊದಲ ಗಾಲ್ಫ್ ಕಂಪನಿಯಾದ 180ಗಾಲ್ಫ್, ಮಹಿಳಾ ಗಾಲ್ಫ್ ಲೀಗ್‌ನ ಉದ್ಘಾಟನಾ ಆವೃತ್ತಿಯನ್ನು ಪರಿಚಯಿಸುತ್ತಿದೆ ಎಂದು ಕಂಪನಿಯ ಸಿಇಒ ಅಂಜಲಿ ಸಂತೋಷ್ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಲೀಗ್‌ನಲ್ಲಿ ಪಾಲ್ಗೊಳ್ಳುತ್ತಿರುವ ಆರು ತಂಡಗಳೆಂದರೆ – ಈಸ್ಟ್‌ವೆಸ್ಟ್ ಎಲೀಟ್ಸ್, ಗೋಪಾಲನ್ ಜೈಂಟ್ಸ್, ರಾಮಯ್ಯ ರಾಯಲ್ಸ್, ಮೊರಡೊ ಮಹಿಳಾಸ್, ರಾಜ್ ಇನ್‌ಫ್ರಾ ಗ್ರೀನ್ ಲೆಜೆಂಡ್ಸ್ ಮತ್ತು ಸುದರ್ಶನ್ ಸ್ಟ್ರೈಕರ್ಸ್.

ಈಸ್ಟ್ ವೆಸ್ಟ್ ಸಮೂಹ ಸಂಸ್ಥೆಗಳ ಅಧ್ಯಕ್ಷೆ ರಶ್ಮಿ ರವಿಕಿರಣ್ ಅವರು ಬೆಂಗಳೂರಿನಲ್ಲಿ ಸೋಮವಾರ ಮೊದಲ ಮಹಿಳಾ ಗಾಲ್ಫ್ ಲೀಗ್‌ನ ಲೋಗೊ ಅನಾವರಣಗೊಳಿಸಿದರು. 180ಗಾಲ್ಫ್ ಸ್ಥಾಪಕರಾದ ತನಿಶಾ ರೊಹಿರಾ, ಸಮೃದ್ಧಿ ಸುಜೇಶ್, ಅಂಜಲಿ ಸಂತೋಷ್ ಮತ್ತು ಹೇಮ ಪ್ರಿಯಾ ಅವರೂ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ: ಎಸ್‌.ಕೆ.ದಿನೇಶ್

ಫೆಬ್ರುವರಿಯಲ್ಲಿ ಆಟಗಾರ್ತಿಯರ ಬಿಡ್ಡಿಂಗ್ ನಡೆಸಲಾಗಿದೆ. ರಾಜ್ಯದಲ್ಲಿ ಪ್ರಸ್ತುತ 350 ಮಂದಿ ಮತ್ತು ರಾಜಧಾನಿಯಲ್ಲಿ 200 ಮಂದಿ ಮಹಿಳೆಯರು ಗಾಲ್ಫ್ ಆಡುತ್ತಿದ್ದಾರೆ. ಮಹಿಳೆಯರಿಗೆ ಸ್ಪರ್ಧಿಸಲು ಅವಕಾಶ ನೀಡುವುದು ಮತ್ತು ಬೆಂಬಲ ನೀಡುವುದು 180ಗಾಲ್ಫ್ ಉದ್ದೇಶ. ಈ ಲೀಗ್‌ಅನ್ನು ಪ್ರತಿ ವರ್ಷ ನಡೆಸಲು ಉದ್ದೇಶಿಸಿದ್ದೇವೆ ಎಂದು ವಿವರಿಸಿದರು.

ಸ್ಪರ್ಧಿಗಳಲ್ಲಿ ಬಹುತೇಕ ಮಂದಿ ಬೆಂಗಳೂರಿನವರು. ನಗರದಲ್ಲಿ ಉದ್ಯೋಗದಲ್ಲಿರುವ ಕೊರಿಯಾದ ಆಟಗಾರ್ತಿಯರು, ಕೋಲ್ಕತ್ತದಿಂದ ಆಟಗಾರ್ತಿಯೊಬ್ಬರು ಕಣಕ್ಕೆ ಇಳಿಯುವರು ಎಂದರು.

ಟೂರ್ನಿಯ ಅಧ್ಯಕ್ಷ ವಿಘ್ನೇಶ್ ಹೆಬ್ಬಾರ್ ಅವರು ಲೀಗ್‌ನ ಮಾದರಿಯನ್ನು ವಿವರಿಸಿದರು. ಆರು ತಂಡಗಳು ಮಾ.13, 20ರಂದು ಅರ್ಹತಾ ಲೀಗ್ ಸುತ್ತುಗಳನ್ನು ಆಡಲಿವೆ. ಅಗ್ರ ನಾಲ್ಕು ತಂಡಗಳು 27ರಂದು ಫೈನಲ್ ಆಡಲಿವೆ ಎಂದರು.

ಈಸ್ಟ್ ವೆಸ್ಟ್ ಸಮೂಹ ಸಂಸ್ಥೆಗಳ ಅಧ್ಯಕ್ಷೆ ರಶ್ಮಿ ರವಿಕಿರಣ್, 180ಗಾಲ್ಫ್‌ನ ಸ್ಥಾಪಕರಾದ ಹೇಮಪ್ರಿಯಾ, ಸಮೃದ್ಧಿ ಸುಜೇಶ್, ತನಿಶಾ ರೊಹಿರಾ ಅವರೂ ಇದ್ದರು.

ಇದೇ ವೇಳೆ ಲೀಗ್‌ನ ಲೋಗೊ ಅನಾವರಣ ಮಾಡಲಾಯಿತು.

ಜಕ್ಕೂರು ಕ್ರೆಡಿಟ್ ಕೋಆಪರೇಟಿವ್ ಸೊಸೈಟಿ ಆಶ್ರಯದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಸ್ತ್ರೀಶಕ್ತಿ ಗುಂಪುಗಳ ಸದಸ್ಯರಿಗೆ ಸೀರೆ ಮತ್ತು ಬಾಗಿನ ವಿತರಿಸಲಾಯಿತು

OBITUARY



MAYANNA M
(86 years)
Ex president Bhuvaneshwari Vokkaligara Sangha, Bangalore East Taluk
Cremation :11.03.2025 at 12pm
Deep condolences by:
Lakshmidevamma and family, KR Puram, Bangalore -560 036
Mobile : 91411 69560

ಮಾನದಂಡ ಪರಿಗಣಿಸಿ ಪರಿಷ್ಕರಣೆ • ಎಲ್ಲರೂ ಸಹಕಾರ ನೀಡಿ– ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಮನವಿ

ಮತ್ತೆ ಬಿಪಿಎಲ್ ಕಾರ್ಡ್‌ಗಳ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಕೆ.ಎಚ್. ಮುನಿಯಪ್ಪ

ಬೆಂಗಳೂರು: 'ಅಧಿವೇಶನ ಮುಗಿದ ಬಳಿಕ ಬಿಪಿಎಲ್ ಕಾರ್ಡ್‌ಗಳ ಪರಿಷ್ಕರಣೆಗೆ ಚಿಂತನೆ ನಡೆಸಲಾಗಿದೆ. ಕೇಂದ್ರ ಸರ್ಕಾರದ ಮಾನದಂಡ ಪರಿಗಣಿಸಿ ಪರಿಷ್ಕರಿಸಲು ಎಲ್ಲರೂ ಸಹಕಾರ ನೀಡಬೇಕು' ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಸಿ.ಟಿ. ರವಿ ಪ್ರಶ್ನೆಗೆ ಉತ್ತರಿಸಿದ ಅವರು, 'ರಾಜ್ಯದಲ್ಲಿ 1.10 ಕೋಟಿ ಬಿಪಿಎಲ್ ಕಾರ್ಡ್‌ಗಳ ಪೈಕಿ 20 ಲಕ್ಷ ಅನರ್ಹ ಬಿಪಿಎಲ್ ಕಾರ್ಡ್‌ಗಳಿವೆ ಎಂದು ಅಂದಾಜಿಸಲಾಗಿದೆ' ಎಂದರು.

'ಹೊಸ ಬಿಪಿಎಲ್ ಕಾರ್ಡ್ ನೀಡಲು ಭೌತಿಕ ಪರಿಶೀಲನೆ ಕಡ್ಡಾಯ. ಈ ಉದ್ದೇಶದಿಂದ ಗ್ರಾಮ ಮಟ್ಟದಲ್ಲಿ ಪಿಡಿಒ, ಗ್ರಾಮ ಲೆಕ್ಕಾಧಿಕಾರಿ, ಪಂಚಾಯಿತಿ ಕಾರ್ಯದರ್ಶಿ, ಕಂದಾಯ ನಿರೀಕ್ಷಕರನ್ನು ಒಳಗೊಂಡ ಸಮಿತಿ ರಚಿಸಲಾಗುವುದು' ಎಂದರು.

'ಹೊಸ ಬಿಪಿಎಲ್ ಪಡಿತರ ಚೀಟಿಗಾಗಿ 2023ರಿಂದ ಈವರೆಗೂ 2,95,986 ಅರ್ಜಿಗಳು ಸಲ್ಲಿಕೆಯಾಗಿವೆ. ಈ ಪೈಕಿ 2,04,760 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಉಳಿದ 91 ಸಾವಿರ ಅರ್ಜಿಗಳು ಪರಿಷ್ಕರಣೆ ಹಂತದಲ್ಲಿದ್ದು, ಅದರಲ್ಲಿ 50ರಿಂದ 60 ಸಾವಿರ ಅನರ್ಹ ಬಿಪಿಎಲ್ ಅರ್ಜಿಗಳಿವೆ. ಎರಡು ತಿಂಗಳ ಒಳಗೆ ಪರಿಷ್ಕರಣೆ ಪೂರ್ಣಗೊಳಿಸಲಾಗುವುದು' ಎಂದರು.

'ಔಷಧ ಗುಣಮಟ್ಟ ಪರಿಶೀಲನೆಗೆ 12 ಪ್ರಯೋಗಾಲಯ': 'ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮವು ಔಷಧಗಳನ್ನು ಖರೀದಿಸಿದ ಬಳಿಕ ಗುಣಮಟ್ಟ ಪರಿಶೀಲಿಸಲು ಪ್ರತ್ಯೇಕ 12 ಪ್ರಯೋಗಾಲಯಗಳನ್ನು ತೆರೆಯಲಾಗಿದೆ. ನಂತರವಷ್ಟೇ ಜಿಲ್ಲಾ ಔಷಧ ಉಗ್ರಾಣಗಳಿಗೆ ಪೂರೈಕೆ ಮಾಡಲಾಗುತ್ತಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಬಿಜೆಪಿಯ ತಳವಾರ ಸಾಬಣ್ಣ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಸ್ಥಳೀಯ ಮಟ್ಟದಲ್ಲಿ ಔಷಧ ಖರೀದಿಸಲು ಸಂಬಂಧಿಸಿದ ಪ್ರಾಧಿಕಾರಗಳಿಗೆ ಅನುಮತಿ ನೀಡಲಾಗಿದೆ. 2022-23ರಲ್ಲಿ ಅನುಮೋದಿಸಿದ್ದ 732 ಅಗತ್ಯ ಔಷಧಗಳ ಖರೀದಿಯನ್ನು ಈ ವರ್ಷ 1,084 ಹೆಚ್ಚಿಸಲಾಗಿದೆ' ಎಂದರು.

'2 ತಾಸು ಹೆಚ್ಚುವರಿ ತ್ರೀ ಫೇಸ್ ವಿದ್ಯುತ್ ಪೂರೈಕೆ ಪರಿಶೀಲನೆ'

'ರೈತರ ಕೃಷಿ ಪಂಪ್ ಸೆಟ್‌ಗಳಿಗೆ ಎರಡು ತಾಸು ಹೆಚ್ಚುವರಿ 3 ಫೇಸ್ ವಿದ್ಯುತ್ ಒದಗಿಸುವ ಬಗ್ಗೆ ಪರಿಶೀಲಿಸಲಾಗುವುದು' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಭರವಸೆ ನೀಡಿದರು.

ಕಾಂಗ್ರೆಸ್‌ನ ದಿನೇಶ ಗೂಳಿಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ದಿನಕ್ಕೆ 7 ತಾಸು ವಿದ್ಯುತ್ ನೀಡಲು ಬೇಕಾದಷ್ಟು ವಿದ್ಯುತ್ ರಾಜ್ಯದಲ್ಲಿ ಉತ್ಪಾದನೆಯಾಗುತ್ತದೆ. ಬೇಸಿಗೆಯಲ್ಲಿ ವಿದ್ಯುತ್ ವ್ಯತ್ಯಯ ಆಗದಂತೆ ಸಿದ್ಧತೆ ಮಾಡಿಕೊಳ್ಳಲಾಗಿದೆ' ಎಂದರು.

'ರಾಜ್ಯದ ಬೇಡಿಕೆಗೆ ತಕ್ಕಂತೆ ಉತ್ತರ ಪ್ರದೇಶ ಹಾಗೂ ಪಂಜಾಬ್‌ನಿಂದ ಪ್ರತಿ ಯೂನಿಟ್‌ಗೆ ₹6.75 ರಿಂದ ₹6.87 ದರದಲ್ಲಿ ವಿದ್ಯುತ್ ಖರೀದಿಸಲಾಗುತ್ತಿದೆ' ಎಂದು ಜಾರ್ಜ್ ತಿಳಿಸಿದರು.

'ಮುದಿಗೆರೆ ಅಮೃತಮಹಲ್ ಕಾವಲ್ ಸಂರಕ್ಷಣೆ'

'ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಮುದಿಗೆರೆಯ ಅಮೃತಮಹಲ್ ಕಾವಲ್‌ನ 3,025 ಎಕರೆ ಅರಣ್ಯ ಪ್ರದೇಶವನ್ನು ಅರಣ್ಯವಾಗಿ ಉಳಿಸಿ ಅಭಿವೃದ್ಧಿಪಡಿಸಲಾಗುವುದು' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಬಿಜೆಪಿಯ ಸದಸ್ಯ ಚಿದಾನಂದ ಎಂ. ಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಬುಕಾಪಟ್ಟಣ ಚಿಂಕಾರ ವನ್ಯಜೀವಿ ಧಾಮದಲ್ಲಿ ಪ್ರಾಣಿಗಳಿಗೆ ಆಹಾರ ಒದಗಿಸಲು ಹುಲ್ಲು ಬೀಜ ಬಿತ್ತನೆ, ನಾಟಿ ಮಾಡಲಾಗುತ್ತಿದ್ದು, ಹುಲ್ಲುಗಾವಲಿನಲ್ಲಿ ಬೆಳೆದಿರುವ ಲಂಟನಾ ತೆರವಿಗೂ ಕ್ರಮ ಕೈಗೊಳ್ಳಲಾಗಿದೆ' ಎಂದು ಅವರು ತಿಳಿಸಿದರು.

'ವೈದ್ಯರಿಗೆ 4 ಬಾರಿ ಬಯೊಮೆಟ್ರಿಕ್ ಕಡ್ಡಾಯ'

'ಸರ್ಕಾರಿ ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸುವ ವೈದ್ಯರು ಬೆಳಿಗ್ಗೆ 9 ಗಂಟೆಗೆ ಕರ್ತವ್ಯಕ್ಕೆ ಹಾಜರಾದರೆ 4 ಗಂಟೆವರೆಗೂ ಕರ್ತವ್ಯ ನಿರ್ವಹಿಸಬೇಕೆಂದು ಸೂಚಿಸಲಾಗಿದೆ' ಎಂದು ವೈದ್ಯಕೀಯ ಸಚಿವ ಡಾ. ಶರಣಪ್ರಕಾಶ ಪಾಟೀಲ ಹೇಳಿದರು.

ಕಾಂಗ್ರೆಸ್‌ನ ಬಲ್ಕಿಶ್ ಬಾನು ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ವೈದ್ಯರು ಕಡ್ಡಾಯವಾಗಿ ಕರ್ತವ್ಯಕ್ಕೆ ಹಾಜರಾಗುವ ಸಂದರ್ಭದಲ್ಲಿ ಬೆಳಿಗ್ಗೆ 9 ಗಂಟೆ, ಮಧ್ಯಾಹ್ನ 2, 3 ಮತ್ತು ಸಂಜೆ 4 ಗಂಟೆ ಹೀಗೆ ಒಟ್ಟು ನಾಲ್ಕು ಬಾರಿ ಬಯೊಮೆಟ್ರಿಕ್ ನೀಡಬೇಕು. ಅದನ್ನು ಆಧರಿಸಿ ಸಂಬಳ ನೀಡಲಾಗುತ್ತದೆ' ಎಂದರು.

ಸುದ್ದಿ 2 ನಿಮಿಷ

ರಾಜ್ಯದಲ್ಲಿ ಶೀಘ್ರ ರಾಜಕೀಯ ಧ್ರುವೀಕರಣ: ಶ್ರೀರಾಮುಲು

ಮೊಳಕಾಲ್ಮುರು (ಚಿತ್ರದುರ್ಗ ಜಿಲ್ಲೆ): 'ರಾಜ್ಯದಲ್ಲಿ ಶೀಘ್ರದಲ್ಲೇ ಮಹಾರಾಷ್ಟ್ರದಲ್ಲಾದಂತೆ ರಾಜಕೀಯ ಧ್ರುವೀಕರಣವಾಗಲಿದೆ. ಆಗ ಬಿಜೆಪಿ ಹೈಕಮಾಂಡ್ ಬೆಂಬಲ ನೀಡುವ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲಿದೆ' ಎಂದು ಮಾಜಿ ಸಚಿವ ಬಿ. ಶ್ರೀರಾಮುಲು ಹೇಳಿದರು.

ಸೋಮವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮಹಾರಾಷ್ಟ್ರದಂತೆ ಇಲ್ಲಿ ಶಿಂಧೆ ಯಾರಾಗುತ್ತಾರೋ ಗೊತ್ತಿಲ್ಲ. ಧ್ರುವೀಕರಣ ಮಾತ್ರ ಖಚಿತ. ಯಾರು ಮುಖ್ಯಮಂತ್ರಿಯಾಗಬಹುದು ಎಂದು ಹೇಳಲು ಇಚ್ಛಿಸುವುದಿಲ್ಲ. ಆದರೆ ರಾಷ್ಟ್ರ ನಾಯಕರು ಇಲ್ಲಿನ ಬೆಳವಣಿಗೆಯನ್ನು ಗಮನಿಸುತ್ತಿದ್ದು, ಸಮಯ ಬಂದಾಗ ಬೆಂಬಲ ನೀಡುವ ನಿರ್ಧಾರ ಮಾಡಲಿದ್ದಾರೆ' ಎಂದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರ್ಕಾರದ ಹಣವನ್ನು ತಮ್ಮ ಸ್ವಂತದ ಹಣದ ರೀತಿ ಬಳಕೆ ಮಾಡುತ್ತಿದ್ದಾರೆ. ಸರ್ಕಾರ ಶಕ್ತಿ ಯೋಜನೆಗೆ ಬಜೆಟ್‌ನಲ್ಲಿ ಹಣ ಮೀಸಲಿಡದೆ ಸಾರಿಗೆ ನೌಕರರನ್ನು ಬೀದಿಗೆ ತಂದಿದೆ. ಅವರಿಗೆ ಕೊಡಬೇಕಾಗಿರುವ ಪಿಎಫ್, ಪಿಂಚಣಿ ಬೇಡಿಕೆ, ವೇತನ ಹೆಚ್ಚಳವನ್ನು ನಿರ್ಲಕ್ಷಿಸಲಾಗಿದೆ. ₹ 900 ಕೋಟಿಯಷ್ಟು ಪಿಎಫ್ ಹಣವನ್ನು ಸಾರಿಗೆ ನೌಕರರಿಗೆ ನೀಡಬೇಕಿದೆ' ಎಂದು ತಿಳಿಸಿದರು.

'ರಾಜ್ಯ ಸರ್ಕಾರ ₹ 4 ಲಕ್ಷ ಕೋಟಿ ಮೊತ್ತದ ದಾಖಲೆ ಬಜೆಟ್ ಮಂಡನೆಯ ಜತೆಯಲ್ಲಿ ದಾಖಲೆ ಪ್ರಮಾಣದಲ್ಲಿ ಸಾಲವನ್ನೂ ಮಾಡಿದೆ' ಎಂದು ಟೀಕಿಸಿದರು.

ಕೊಲೆ: ತಂದೆ, ಅಣ್ಣನ ಬಂಧನ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): 'ಮದುವೆ ವಿಷಯದಲ್ಲಿ ನಡೆದ ವಾಗ್ವಾದದಲ್ಲಿ ಪುತ್ರ ಮಂಜುನಾಥ ನಾಗಪ್ಪ ಉಳ್ಳಾಗಡ್ಡಿ ಅವರನ್ನು ಕೊಲೆ ಮಾಡಿದ ತಂದೆ ನಾಗಪ್ಪ (68) ಮತ್ತು ಅಣ್ಣ ಗುರುಬಸಪ್ಪ ಉಳ್ಳಾಗಡ್ಡಿ (28) ಅವರನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಪ್ರವೀಣ ಗಂಗೋಳ ತಿಳಿಸಿದ್ದಾರೆ.

'ಮರಾಠಾ ಸಮುದಾಯದ ಯುವತಿಯನ್ನು ಪ್ರೀತಿಸುತ್ತಿದ್ದ ಲಿಂಗಾಯತ ಸಮುದಾಯದ ಮಂಜುನಾಥ, ಮದುವೆಯಾಗಲು ಬಯಸಿದ್ದರು. ಆದರೆ, ಅವರ ಮನೆಯಲ್ಲಿ ಇದಕ್ಕೆ ವಿರೋಧವಿತ್ತು. ಮಾರ್ಚ್ 12ರಂದು ಮದುವೆ ಆಗಲು ತೀರ್ಮಾನಿಸಿದ್ದ ಮಂಜುನಾಥ ಅವರು ತಂದೆ ನಾಗಪ್ಪ ಬಳಿ ಹಣ ಕೇಳಿದ್ದಾರೆ. ಆಗ ಜಗಳ ತಾರಕಕ್ಕೇರಿತು. ರಜೆ ಮೇಲೆ ಬಂದಿದ್ದ ಸೇನೆಯಲ್ಲಿ ಇರುವ ಅಣ್ಣ ಗುರುಬಸಪ್ಪ ಹಿಂದಿನಿಂದ ಬಂದು ತಲೆಗೆ ಕಲ್ಲಿನಿಂದ ಹೊಡೆದ. ಇದರಿಂದ ಮಂಜುನಾಥ ಕೆಳಗೆ ಬಿದ್ದ ಕೂಡಲೇ ತಂದೆ ಮತ್ತು ಅಣ್ಣ ಸೇರಿ ಮತ್ತೆ ಹೊಡೆದರು. ಆಗ ಮಂಜುನಾಥ ಸ್ಥಳದಲ್ಲೇ ಸಾವನ್ನಪ್ಪಿದರು' ಎಂದು ಗ್ರಾಮಸ್ಥರು ಹೇಳಿದರು.

'ಕೈ' ಚಿಹ್ನೆ ಕೊಟ್ಟಿದ್ದು ಜೈನ ಮುನಿ

ಪ್ರಜಾವಾಣಿ ವಾರ್ತೆ

ಲಕ್ಷ್ಮಣ ಸವದಿ

ಬೆಂಗಳೂರು: ಕಾಂಗ್ರೆಸ್‌ಗೆ 'ಹಸ್ತ'ದ ಚಿಹ್ನೆಯನ್ನೇ ಬಳಸುವಂತೆ ಇಂದಿರಾಗಾಂಧಿಯವರಿಗೆ ಸೂಚಿಸಿದವರು ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಜೈನ ಮುನಿ ವಿದ್ಯಾನಂದ ಮಹಾಮುನಿಗಳು ಎಂದು ಕಾಂಗ್ರೆಸ್ ಶಾಸಕ ಲಕ್ಷ್ಮಣ ಸವದಿ ಹೇಳಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್‌ಗೆ ಹಸು ಕರು ಚಿಹ್ನೆ ಮುಂದುವರಿಸುವುದು ಬೇಡ, ಹಸ್ತ ಇಟ್ಟುಕೊಳ್ಳಿ; ಪಕ್ಷ ಅಭಿವೃದ್ಧಿ ಹೊಂದುತ್ತದೆ ಎಂದು ಸಲಹೆ ನೀಡಿದ್ದರು. ಇಂದಿರಾಗಾಂಧಿ ಅದನ್ನು ಪಾಲಿಸಿದರು ಎಂದು ತಿಳಿಸಿದರು.

ಅಲ್ಪಸಂಖ್ಯಾತರಲ್ಲೇ ಅತಿ ಕಡಿಮೆ ಜನ ಸಂಖ್ಯೆ ಇರುವ ಜೈನ ಸಮುದಾಯದ ಅಭಿವೃದ್ಧಿಗೆ ರಾಜ್ಯದಲ್ಲಿ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು. ಜೈನ ಸಮುದಾಯ ಅತ್ಯಂತ ಸಾತ್ವಿಕ ಸಮುದಾಯ. ಈ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಹಾಸ್ಟೆಲ್ ಸ್ಥಾಪಿಸಬೇಕು. ಇವರು ಈರುಳ್ಳಿ-ಬೆಳ್ಳುಳ್ಳಿ ಸಹಿತ ಸೇವಿಸುವುದಿಲ್ಲ. ಅವರ ಧಾರ್ಮಿಕ ಆಚರಣೆ ಮತ್ತು ನಂಬಿಕೆಗಳಿಗೆ ಬೆಲೆ ಕೊಡಬೇಕು ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ಅವರು, ಜೈನ ಸಮುದಾಯದ ಜನಸಂಖ್ಯೆ ಕುರಿತು ಸಮೀಕ್ಷೆ ಮಾಡಿಸಿದ್ದು, ರಾಜ್ಯದಲ್ಲಿ 20 ಲಕ್ಷ ಜೈನರು ಇದ್ದಾರೆ. ಜೈನರೆಂದರೆ ರಾಜಸ್ಥಾನದಿಂದ ಬಂದವರು ಎಂದುಕೊಳ್ಳಬೇಕಾಗಿಲ್ಲ. ಕನ್ನಡ ಭಾಷಿಕ ಜೈನರೇ ಸುಮಾರು 15 ಲಕ್ಷಕ್ಕೂ ಹೆಚ್ಚು ಇದ್ದಾರೆ ಎಂದರು.

'ಜಮೀರ್ ಅವರೇ ಅಲ್ಪಸಂಖ್ಯಾತರೆಂದರೆ ಮುಸ್ಲಿಮರು ಮಾತ್ರ ಅಲ್ಲ. ಅವರ ಸಂಖ್ಯೆ ದೊಡ್ಡ ಪ್ರಮಾಣದಲ್ಲಿದೆ. ಆದರೆ, ಜೈನ ಮತ್ತು ಬೌದ್ಧರ ಸಂಖ್ಯೆ ಅತ್ಯಂತ ಕಡಿಮೆ. ಇವರಿಗೆ ಹೆಚ್ಚಿನ ನೆರವು ನೀಡಬೇಕು' ಎಂದು ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಅವರು ಒತ್ತಾಯಿಸಿದರು.

ಕಲಾಪ ವೀಕ್ಷಣೆ...

ಸೋಮವಾರ ವಿಧಾನ ಪರಿಷತ್ ಕಲಾಪ ವೀಕ್ಷಿಸಿದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು – ಪ್ರಜಾವಾಣಿ ಚಿತ್ರ

'ಮೈಕ್ರೊ ಫೈನಾನ್ಸ್'ಗೆ ಅಂಕುಶ: ಮಸೂದೆಗೆ ಅಂಕಿತ

ಪ್ರಜಾವಾಣಿ ವಾರ್ತೆ



ಎಚ್.ಕೆ.ಪಾಟೀಲ

ಬೆಂಗಳೂರು: ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಂದ ಸಾಲಗಾರರಿಗೆ ಆಗುತ್ತಿದ್ದ ಕಿರುಕುಳ ತಪ್ಪಿಸುವ ಉದ್ದೇಶದಿಂದ ಹೊರಡಿಸಿದ್ದ ಸುಗ್ರೀವಾಜ್ಞೆಗೆ ಕಾಯ್ದೆಯ ಬಲ ನೀಡುವ 'ಕರ್ನಾಟಕ ಕಿರು ಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ಪ್ರತಿಬಂಧಕ) ಮಸೂದೆ 2025'ಕ್ಕೆ ವಿಧಾನಸಭೆ ಒಮ್ಮತದ ಅಂಗೀಕಾರ ನೀಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ಕಾನೂನು ಸಚಿವ ಎಚ್.ಕೆ. ಪಾಟೀಲ ಅವರು ಮಸೂದೆಯನ್ನು ಪರ್ಯಾಲೋಚನೆಗೆ ಮಂಡಿಸಿದರು.

ಈ ಕುರಿತು ವಿವರ ನೀಡಿದ ಪಾಟೀಲ, ಕೆಲವು ಕಿರು ಹಣಕಾಸು ಸಂಸ್ಥೆಗಳು ಸಾಲ ವಸೂಲಿಗೆ ಕಠಿಣ ಕ್ರಮಗಳನ್ನು ಅನುಸರಿಸಿದ್ದರಿಂದ ಜನ ಆತ್ಮವಿಶ್ವಾಸ ಕಳೆದುಕೊಂಡಿದ್ದರು. ಇದರ ಪರಿಣಾಮ 19 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಸಾಲ ವಸೂಲಾತಿ ಸಂಸ್ಥೆಗಳ ಕಿರುಕುಳದಿಂದ ಚಾಮರಾಜನಗರ ಜಿಲ್ಲೆಯ ಗ್ರಾಮವೊಂದರ ಗ್ರಾಮಸ್ಥರು ಮನೆಗಳನ್ನು ಬಿಟ್ಟು ಹೋಗಿದ್ದರು. ಜನರಲ್ಲಿ ಆತ್ಮವಿಶ್ವಾಸ ತುಂಬುವ ಸಲುವಾಗಿ ಕಠಿಣ ಕಾನೂನಿನ ಅಗತ್ಯವಿತ್ತು ಎಂದು ಪ್ರತಿಪಾದಿಸಿದರು.

ರಾಜ್ಯದಲ್ಲಿ ನೋಂದಾಯಿತವಲ್ಲದ ಹಣಕಾಸು ಸಂಸ್ಥೆಗಳು, ಲೇವಾದೇವಿದಾರರು ಸುಮಾರು ₹40 ಸಾವಿರ ಕೋಟಿ ಸಾಲ ನೀಡಿದ್ದಾರೆ. ಕೆಲವು ಸಂಸ್ಥೆಗಳು ತಿಂಗಳಿಗೆ ಶೇ 10ರಷ್ಟು ಬಡ್ಡಿ ವಿಧಿಸುತ್ತಿವೆ. ಬಹುತೇಕ ಕಪ್ಪು ಹಣವೇ ಬಳಕೆ ಆಗುತ್ತಿತ್ತು. ಸಣ್ಣ ವ್ಯಾಪಾರಿಗಳಿಗೆ ದಿನಕ್ಕೆ ₹5,000 ಸಾಲ ನೀಡುವಾಗಲೇ ₹500 ಹಿಡಿದುಕೊಳ್ಳುತ್ತಾರೆ. ಸಂಜೆ ₹5,000 ವಾಪಸ್ ಮಾಡಬೇಕಾಗುತ್ತದೆ. ಕಿರುಕುಳ ನೀಡುವುದಕ್ಕೆ, ಬಡವರ ರಕ್ತ ಹೀರುವುದಕ್ಕೆ ಹೊಸ ಕಾಯ್ದೆಯಿಂದ ಕಡಿವಾಣ ಬೀಳಲಿದೆ ಎಂದು ಪಾಟೀಲ ತಿಳಿಸಿದರು.

ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ವಿರೋಧಪಕ್ಷದ ನಾಯಕ ಆರ್.ಅಶೋಕ, ಸರ್ಕಾರ ಮಸೂದೆ ಮಂಡಿಸಿರುವುದು ರೈಲು ಹೋದ ಮೇಲೆ ಟಿಕೆಟ್ ಪಡೆದ ಹಾಗೆ ಆಗಿದೆ. ಸರ್ಕಾರ ಮೊದಲೇ ಎಚ್ಚೆತ್ತುಕೊಳ್ಳಬೇಕಿತ್ತು. ಇದ್ದ ಕಾನೂನು ಬಳಸಿ ಕಿರುಕುಳ ನೀಡುತ್ತಿದ್ದವರನ್ನು ಶಿಕ್ಷೆಗೆ ಗುರಿಪಡಿಸಿದ್ದರೆ 30 ಜನರ ಪ್ರಾಣ ಉಳಿಸಬಹುದಿತ್ತು ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಎಚ್.ಕೆ.ಪಾಟೀಲ, ಹೊಸ ಮಸೂದೆಯಲ್ಲಿ ದಂಡ ಮತ್ತು ಶಿಕ್ಷೆ ಪ್ರಮಾಣ ಹೆಚ್ಚಿಸಲಾಗಿದೆ. ಹಿಂದೆ ದಂಡ ₹1,000ದಿಂದ ₹10 ಸಾವಿರ ಮತ್ತು 6 ತಿಂಗಳವರೆಗೆ ಶಿಕ್ಷೆ ಇತ್ತು. ಈಗ ದಂಡವನ್ನು ₹5 ಲಕ್ಷ ಮತ್ತು ಜೈಲು ಶಿಕ್ಷೆ 10 ವರ್ಷದವರೆಗೆ ಹೆಚ್ಚಿಸಲಾಗಿದೆ ಎಂದರು.

ಚರ್ಚೆಯಲ್ಲಿ ಜೆಡಿಎಸ್‌ನ ಎಚ್.ಟಿ.ಕೃಷ್ಣಪ್ಪ, ಕಾಂಗ್ರೆಸ್‌ನ ಲಕ್ಷ್ಮಣ ಸವದಿ ಅವರೂ ಭಾಗವಹಿಸಿದ್ದರು. ಇದೇ ವೇಳೆ, ಕರ್ನಾಟಕ ಗಿರವಿದಾರರ (ತಿದ್ದುಪಡಿ) ಅಧಿನಿಯಮ 2025, ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ (ತಿದ್ದುಪಡಿ) ಮಸೂದೆ 2025 ಮತ್ತು ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ಮಸೂದೆಯನ್ನೂ ಅಂಗೀಕರಿಸಲಾಯಿತು. ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರು ಪರ್ಯಾಲೋಚನೆಗೆ ಕೋರಿದರು.

ತಿದ್ದುಪಡಿ ಮಸೂದೆಗೆ ವಿಧಾನಸಭೆಯ ಅಂಗೀಕಾರ

ಎಪಿಎಂಸಿ ವ್ಯಾಪ್ತಿಗೆ ಇ–ಕಾಮರ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ಇ–ಪ್ಲಾಟ್‌ಫಾರ್ಮ್‌ಗಳಲ್ಲಿ ಮಾರಾಟವಾಗುವ ಕೃಷಿ ಉತ್ಪನ್ನಗಳ ಮೇಲೆ ಸೆಸ್ ವಿಧಿಸಲು ಅವಕಾಶ ಕಲ್ಪಿಸುವ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ಮಸೂದೆ–2025ಕ್ಕೆ ವಿಧಾನಸಭೆ ಸೋಮವಾರ ಅಂಗೀಕಾರ ನೀಡಿತು.

ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವ ಇ–ಪ್ಲಾಟ್‌ಫಾರ್ಮ್‌ಗಳು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ (ಎಪಿಎಂಸಿ) ಸೆಸ್ ಪಾವತಿ ಮಾಡುವುದು ಕಡ್ಡಾಯವಾಗಲಿದೆ. ಇ–ಪ್ಲಾಟ್‌ಫಾರ್ಮ್‌ಗಳಲ್ಲಿ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಪರವಾನಗಿ ನೀಡುವ, ಸೆಸ್ ವಿಧಿಸಿ, ವಸೂಲಿ ಮಾಡುವ ಮತ್ತು ಪರವಾನಗಿಯನ್ನು ರದ್ದುಪಡಿಸುವ ಅಥವಾ ಅಮಾನತು ಪಡಿಸುವ ಅಧಿಕಾರವು ಎಪಿಎಂಸಿ ಅಧಿಕಾರಿಗಳಿಗೆ ಲಭಿಸಲಿದೆ. ಈ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಮೇಲ್ಮನವಿಗಳನ್ನು ವಿಚಾರಣೆ ನಡೆಸಿ, ಆದೇಶ ಹೊರಡಿಸುವ ಅಧಿಕಾರವು ಕೃಷಿ ಮಾರುಕಟ್ಟೆ ನಿರ್ದೇಶಕರಿಗೆ ದೊರಯಲಿದೆ.

ಮಸೂದೆ ಕುರಿತು ಸದನಕ್ಕೆ ವಿವರ ನೀಡಿದ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್. ಪಾಟೀಲ, 'ಇ–ಪ್ಲಾಟ್‌ಫಾರ್ಮ್‌ಗಳಲ್ಲಿ ಕೃಷಿ ಉತ್ಪನ್ನ ಮಾರಾಟ ಮಾಡುವವರು ತೆರಿಗೆ ಪಾವತಿಸುತ್ತಿರಲಿಲ್ಲ. ಅಂತಹ ಸಂಸ್ಥೆಯೊಂದಕ್ಕೆ ಇತ್ತೀಚೆಗೆ ₹50 ಲಕ್ಷ ದಂಡ ವಿಧಿಸಲಾಗಿದೆ. ಈ ಮಸೂದೆಯಿಂದಾಗಿ ಎಲ್ಲ ಇ–ಪ್ಲಾಟ್‌ಫಾರ್ಮ್‌ಗಳು ಪರವಾನಗಿ ಪಡೆದು, ಸೆಸ್ ಪಾವತಿಸುವುದು ಕಡ್ಡಾಯವಾಗಲಿದೆ' ಎಂದರು.

ತಿದ್ದುಪಡಿ ಮಸೂದೆಯ ಪರಿಣಾಮವಾಗಿ, ಉಗ್ರಾಣಗಳಲ್ಲಿ (ವೇರ್‌ಹೌಸ್) ನಡೆಯುವ ಕೃಷಿ ಉತ್ಪನ್ನಗಳ ಮಾರಾಟದ ಮೇಲೂ ಸೆಸ್ ಪಾವತಿ ಕಡ್ಡಾಯವಾಗಲಿದೆ.

ಸಚಿವರಾದ ಪ್ರಿಯಾಂಕ್ ಖರ್ಗೆ ಮತ್ತು ದಿನೇಶ್ ಆರ್. ಗುಂಡೂರಾವ್ ವಿಧಾನ ಪರಿಷತ್ ಕಲಾಪದಲ್ಲಿ ಭಾಗವಹಿಸಿದರು – ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ವಿವಾದಿತ ಜಾಗದಲ್ಲಿ ಕಟ್ಟಡ ತೆರವು: ಅಧಿಕಾರಿ ಅಮಾನತು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ನಗರದ ತಾಲ್ಲೂಕು ಕಚೇರಿ ಎದುರಿನ ಬಡಾ ಮಕಾನ್ ಸಮೀಪದ ವಿವಾದಿತ ಸ್ಥಳದಲ್ಲಿದ್ದ ಕಟ್ಟಡವನ್ನು ಏಕಾಏಕಿ ತೆರವುಗೊಳಿಸಿದ ಆರೋಪದಲ್ಲಿ ಜಿಲ್ಲಾ ವಕ್ಫ್ ಅಧಿಕಾರಿ ಸೈಯದ್ ಸತ್ತಾರ್ ಷಾ ಹುಸೇನಿ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

'ಕಮಲಮ್ಮ ಮತ್ತು ವಕ್ಫ್ ಮಂಡಳಿ, ಜಾಮಿಯಾ ಮಸೀದಿ ನಡುವಿನ ವಿವಾದ ನ್ಯಾಯಾಲಯದಲ್ಲಿದೆ. ಕಮಲಮ್ಮ ಮತ್ತು ಇತರರ ಕಟ್ಟಡವನ್ನು ತೆರವುಗೊಳಿಸದಂತೆ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯ 2017ರಲ್ಲಿ ತಡೆಯಾಜ್ಞೆ ನೀಡಿದೆ. ಜಾಮಿಯಾ ಮಸೀದಿ ಆಡಳಿತ ಮಂಡಳಿಯು ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ಹೈಕೋರ್ಟ್ ಮಾನ್ಯ ಮಾಡಿದೆ.'

'ಮಾ.4ರಂದು ಬೆಳಗಿನ ಜಾವ ಕಟ್ಟಡವನ್ನು ತೆರವುಗೊಳಿಸಲಾಗಿದೆ. ತೆರವಿಗೆ ಮುನ್ನ ಕೈಗೊಳ್ಳಬೇಕಾದ ಕ್ರಮಗಳನ್ನು ವಕ್ಫ್ ಅಧಿಕಾರಿ ಕೈಗೊಂಡಿಲ್ಲ. ಸ್ಥಳೀಯ ನಗರಸಭೆಗೆ ಅಥವಾ ಪೊಲೀಸ್ ಇಲಾಖೆಗೆ ಮಾಹಿತಿ ನೀಡಿಲ್ಲ. ತೆರವು ಕಾರ್ಯಾಚರಣೆ ಸಂಬಂಧ ಅವರ ಅಧಿಕಾರ ವ್ಯಾಪ್ತಿಯ ಬಗ್ಗೆಯೇ ಅವರಿಗೆ ಮಾಹಿತಿ ಇಲ್ಲ. ವಿವಾದಿತ ಜಾಗದ ಕುರಿತ ದಾಖಲೆಗಳನ್ನು ಪರಿಶೀಲಿಸದೆ ತೆರವುಗೊಳಿಸಲಾಗಿದೆ. ಇದರಿಂದ ಪ್ರಕ್ಷುಬ್ಧ ವಾತಾವರಣ ಉಂಟಾಗಲು ಅಧಿಕಾರಿ ಕಾರಣರಾಗಿದ್ದಾರೆ. ಅಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ 'ಡೇರ್ ಸ್ಟೆಪ್' ತೆಗೆದುಕೊಂಡಿರುವುದಾಗಿ ಉಡಾಫೆ ಉತ್ತರ ನೀಡಿದ್ದಾರೆ' ಎಂದು ಜಿಲ್ಲಾಧಿಕಾರಿ ವರದಿ ಸಲ್ಲಿಸಿದ್ದರು.

'ವರದಿ ಅಧರಿಸಿ ಕಾರಣ ಕೇಳಿ ನೀಡಿದ ನೋಟಿಸ್‌ಗೂ ಅಧಿಕಾರಿ ಸಮಜಾಯಿಷಿ ಸಲ್ಲಿಸಿಲ್ಲ. ಆದ್ದರಿಂದ ಅಮಾನತು ಮಾಡಲಾಗಿದೆ' ಎಂದು ಕರ್ನಾಟಕ ವಕ್ಫ್ ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆದೇಶದಲ್ಲಿ ತಿಳಿಸಿದ್ದಾರೆ.

ಈ ಪ್ರಕರಣದಲ್ಲಿ ಕಟ್ಟಡ ಕಳೆದುಕೊಂಡವರು ನೀಡಿದ ದೂರು ಆಧರಿಸಿ ಸತ್ತಾರ್ ಸೇರಿ 14 ಜನರ ವಿರುದ್ಧ ಪೊಲೀಸರು ಎರಡು ಎಫ್‌ಐಆರ್ ದಾಖಲಿಸಿದ್ದರು. ಇಡೀ ಜಾಗದಲ್ಲಿ 14 ದಿನಗಳ ಕಾಲ ನಿರ್ಬಂಧಾಜ್ಞೆ ವಿಧಿಸಿ ಜಿಲ್ಲಾಧಿಕಾರಿ ಮೀನಾ ನಾಗರಾಜ್ ಆದೇಶ ಹೊರಡಿಸಿದ್ದಾರೆ.

ಮುಳ್ಳಯ್ಯನಗಿರಿ: 3 ದಿನ ಪ್ರವಾಸ ನಿರ್ಬಂಧ

ಚಿಕ್ಕಮಗಳೂರು: ಶ್ರೀ ಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾದಲ್ಲಿ ಮಾ.15 ರಿಂದ 17 ರವರೆಗೆ ಉರುಸ್ ಕಾರ್ಯಕ್ರಮ ನಡೆಯುತ್ತಿದ್ದು, ಮುಳ್ಳಯ್ಯನಗಿರಿ ಭಾಗಕ್ಕೆ ಪ್ರವಾಸಿಗರನ್ನು ನಿರ್ಬಂಧಿಸಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ.

ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಲಿದ್ದು, ವಾಹನ ದಟ್ಟಣೆ ಉಂಟಾಗುವ ಸಾಧ್ಯತೆ ಇದೆ. ಆದ್ದರಿಂದ ಮುಳ್ಳಯ್ಯನಗಿರಿ, ಸೀತಾಳಯ್ಯನಗಿರಿ, ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ ಸಂಸ್ಥೆ, ಗಾಳಿಕೆರೆ, ಮಾಣಿಕ್ಯಧಾರಾ ಜಲಪಾತ ತಾಣಗಳಿಗೆ ಭಕ್ತರು ಮತ್ತು ಸ್ಥಳೀಯರನ್ನು ಹೊರತುಪಡಿಸಿ ಪ್ರವಾಸಿಗರನ್ನು ನಿರ್ಬಂಧಿಸಲಾಗಿದೆ. ಈಗಾಗಲೇ ಹೋಂಸ್ಟೇ, ರೆಸಾರ್ಟ್‌ಗಳಲ್ಲಿ ಬುಕಿಂಗ್ ಮಾಡಿದವರಿಗೆ ಅವಕಾಶ ಇದೆ ಎಂದು ವಿವರಿಸಿದ್ದಾರೆ.

ರಾಹುಲ್ ಕೆಪಿಎಸ್‌ಸಿ ಜಂಟಿ ಪರೀಕ್ಷಾ ನಿಯಂತ್ರಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ನಿರ್ದೇಶಕ ರಾಹುಲ್ ಸಂಕನೂರ್ ಅವರಿಗೆ ಕೆಪಿಎಸ್‌ಸಿ ಜಂಟಿ ಪರೀಕ್ಷಾ ನಿಯಂತ್ರಕ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಈ ಹುದ್ದೆಯ ಹೊಣೆಯನ್ನು ಇದೇ ಜನವರಿಯಲ್ಲಿ ವಹಿಸಿಕೊಂಡಿದ್ದ ಮೊಹ್ಮದ್ ಹ್ಯಾರಿಸ್ ಸುಮೈರ್ ಅವರನ್ನು ಇತ್ತೀಚೆಗೆ ಬಳ್ಳಾರಿ ಜಿಲ್ಲಾ ಪಂಚಾಯಿತಿ ಸಿಇಒ ಹುದ್ದೆಗೆ ವರ್ಗಾವಣೆ ಮಾಡಲಾಗಿತ್ತು.

ರನ್ಯಾಗೆ ಬಿಜೆಪಿ ಅವಧಿಯಲ್ಲೇ ಜಮೀನು– ಎಂ.ಬಿ. ಪಾಟೀಲ

ಪ್ರಜಾವಾಣಿ ವಾರ್ತೆ

ಎಂ.ಬಿ. ಪಾಟೀಲ

ಬೆಂಗಳೂರು: 'ಚಿನ್ನ ಕಳ್ಳ ಸಾಗಣೆ ಪ್ರಕರಣದಲ್ಲಿ ಸಿಕ್ಕಿಬಿದ್ದಿರುವ ನಟಿ ರನ್ಯಾ ರಾವ್ ಅವರ ಟಿಎಂಟಿ ಸರಳು ತಯಾರಿಸುವ ಯೋಜನೆಗೆ ಹಿಂದಿನ ಬಿಜೆಪಿ ಸರ್ಕಾರ ಅನುಮೋದನೆ ನೀಡಿತ್ತು' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಈ ಯೋಜನೆಗೆ ತುಮಕೂರು ಜಿಲ್ಲೆಯ ಶಿರಾ ಕೈಗಾರಿಕಾ ಪ್ರದೇಶದಲ್ಲಿ 12 ಎಕರೆ ಜಮೀನು ಮಂಜೂರು ಮಾಡಲು 2023ರ ಜನವರಿ 2ರಂದು ನಡೆದಿದ್ದ ಉನ್ನತ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ ತೀರ್ಮಾನಿಸಿತ್ತು' ಎಂದರು.

'ರನ್ಯಾ ಅವರು ನಿಗದಿತ ಅವಧಿಯಲ್ಲಿ ಹಣ ಪಾವತಿಸದ ಕಾರಣಕ್ಕೆ ಅವರಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಈ ಜಮೀನು ಹಂಚಿಕೆ ಮಾಡಿಲ್ಲ' ಎಂದೂ ಅವರು ಸ್ಪಷ್ಟಪಡಿಸಿದರು.

ಸಮಗ್ರ ತನಿಖೆಯಾಗಲಿ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಚಿತ್ರನಟಿ ರನ್ಯಾ ರಾವ್ ಅಕ್ರಮ ಚಿನ್ನ ಸಾಗಾಣಿಕೆ ಮಾಡಿರುವ ಜಾಲದಲ್ಲಿ ಇರುವವರನ್ನು ಪತ್ತೆ ಹಚ್ಚಲು ಸಮಗ್ರವಾಗಿ, ಆಳವಾದ ತನಿಖೆ ನಡೆಸಬೇಕು. ಬಿಜೆಪಿ ಸರ್ಕಾರದ ಅವಧಿಯಲ್ಲಿ ರನ್ಯಾರಾವ್ ನಿರ್ದೇಶಕಿಯಾದ ಕಂಪನಿಗೆ ಜಮೀನು ನೀಡಿರುವುದು ಮುಖ್ಯಮಂತ್ರಿಯ ಹಂತದವರೆಗೂ ಬಂದಿರುವುದಿಲ್ಲ' ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಶಿರಾ ಕೈಗಾರಿಕಾ ಪ್ರದೇಶದಲ್ಲಿ ಮೆ. ಕ್ಸಿರೋಡಾ ಇಂಡಿಯಾ ಪ್ರೈ. ಲಿ. ಸಂಸ್ಥೆಗೆ ಜಮೀನು ನೀಡಿದ್ದೇವೆ. ಆ ಕಂಪನಿಯಲ್ಲಿ ರನ್ಯಾರಾವ್ ನಿರ್ದೇಶಕಿಯಾಗಿದ್ದಾರೆ. ಯಾರೇ ಉದ್ದಿಮೆ ಮಾಡುತ್ತೇವೆ ಎಂದು ಬಂದರೂ ನಾವು ಅವರಿಗೆ ಅಗತ್ಯ ಕರಾರುಗಳನ್ನು ಹಾಕುತ್ತೇವೆ. ಲ್ಯಾಂಡ್ ಆಡಿಟ್ ಸಮಿತಿಯಲ್ಲಿ ಪ್ರಧಾನ ಕಾರ್ಯದರ್ಶಿ ಸೇರಿದಂತೆ ಹಿರಿಯ ಅಧಿಕಾರಿಗಳು ಇರುತ್ತಾರೆ. ಅವರು ಸಂಬಂಧಪಟ್ಟ ಕಂಪನಿಗೆ ಎಷ್ಟು ಜಮೀನು ಬೇಕು, ಯಾವ ಭಾಗದಲ್ಲಿ ಜಮೀನು ಬೇಕಿದೆ ಎನ್ನುವುದನ್ನು ಪರಿಶೀಲಿಸಿ ಶಿಫಾರಸು ಮಾಡುತ್ತಾರೆ. ₹500 ಕೋಟಿವರೆಗಿನ ಯೋಜನೆಗಳಿಗೆ ಸಂಬಂಧಪಟ್ಟ ಉದ್ದಿಮೆಗಳು ಮಂತ್ರಿಗಳ ಹಂತದಲ್ಲಿ ತೀರ್ಮಾನ ಆಗುತ್ತದೆ' ಎಂದು ಸ್ಪಷ್ಟಪಡಿಸಿದರು.

> **ನಾನು ಕೈಗಾರಿಕಾ ಸಚಿವನಾಗಿದ್ದ ಅವಧಿಯಲ್ಲಿ ಕಾನೂನು ಪ್ರಕಾರ, ರನ್ಯಾರಾವ್ ಕಂಪನಿಗೆ ಜಮೀನು ಮಂಜೂರು ಮಾಡಲಾಗಿತ್ತು. ಯಾವುದೇ ಲೋಪವಾಗಿಲ್ಲ**
> **ಮುರುಗೇಶ ನಿರಾಣಿ,** ಮಾಜಿ ಸಚಿವ

ರನ್ಯಾ ನಂಟು: ಯಾರಿಗೆ ಉಂಟು?

ಒಂದನೇ ಪುಟದಿಂದ...

'ಕಳ್ಳ ಸಾಗಾಣಿಕೆಯ ಮಾಫಿಯಾವನ್ನು ಮಟ್ಟ ಹಾಕಬೇಕು' ಎಂದು ಸುನಿಲ್‌ಕುಮಾರ್ ಒತ್ತಾಯಿಸಿದರು.

'ಈ ಪ್ರಕರಣದ ಬಗ್ಗೆ ಮಾಹಿತಿಯೇ ಇಲ್ಲ ಎಂದು ಗೃಹ ಸಚಿವರು ಹೇಳಿದ್ದಾರೆ. ಈ ರೀತಿ ಅಸಹಾಯಕತೆ ವ್ಯಕ್ತಪಡಿಸುವುದು ಸರಿಯಲ್ಲ. ದೊಡ್ಡ ಮಟ್ಟದ ಅಪರಾಧದ ವಿಚಾರ ಗೊತ್ತೇ ಇಲ್ಲ ಎಂದರೆ ಒಪ್ಪಲು ಸಾಧ್ಯವಿಲ್ಲ. ಆಕೆ ಪೊಲೀಸ್ ವಾಹನ ಬಳಸುತ್ತಿದ್ದರಿಂದ ಈ ಪ್ರಕರಣವನ್ನು ರಾಜ್ಯ ಸರ್ಕಾರವೇ ಸಿಬಿಐ ತನಿಖೆಗೆ ಒಪ್ಪಿಸಬೇಕಿತ್ತು. ಹಿರಿಯ ಅಧಿಕಾರಿಗಳು ಮತ್ತು ರಾಜಕೀಯದ ನಂಟು ಇರುವುದರಿಂದ ಸಿಬಿಐ ತನಿಖೆ ನಡೆಸುವುದೇ ಸೂಕ್ತ. ಚಿನ್ನದ ಪ್ರಭಾವದ ಬಲೆಗೆ ಬೀಳದೆ ಬಂದೋಬಸ್ತ್ ಮಾಡಿ' ಎಂದು ಸುನಿಲ್ ಕುಮಾರ್ ಅವರು ಪರಮೇಶ್ವರ ಅವರನ್ನು ಕುಟುಕಿದರು.

ಚಿನ್ನ: ಉದ್ಯಮಿ ಪುತ್ರನ ಬಂಧನ

ಒಂದನೇ ಪುಟದಿಂದ...

ರನ್ಯಾ ಅವರ ಮೊಬೈಲ್ ಫೋನ್ ಪರಿಶೀಲನೆ ವೇಳೆ, ಸಚಿವರು, ಮಾಜಿ ಸಚಿವರು ಹಾಗೂ ಪೊಲೀಸ್ ಅಧಿಕಾರಿಗಳ ಸಂಖ್ಯೆಗಳು ಪತ್ತೆಯಾಗಿವೆ. ರಾಜಕಾರಣಿಗಳು, ಚಿನ್ನಾಭರಣ ವ್ಯಾಪಾರಿಗಳು, ರಿಯಲ್ ಎಸ್ಟೇಟ್ ಉದ್ಯಮಿಗಳ ಜತೆ ರನ್ಯಾ ನಂಟು ಹೊಂದಿರುವುದು ತನಿಖೆ ವೇಳೆ ಗೊತ್ತಾಗಿದೆ. ಅಧಿಕಾರಿಗಳು ಕರೆಗಳ ವಿವರದ ದಾಖಲೆ (ಸಿಡಿಆರ್) ಪರಿಶೀಲನೆ ನಡೆಸುತ್ತಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಡಿಆರ್‌ಐ ಅಧಿಕಾರಿಗಳು ಚಿನ್ನದ ವ್ಯಾಪಾರಿಗಳ ವಿಚಾರಣೆಯನ್ನು ಮುಂದುವರಿಸಿ, ಮಾಹಿತಿ ಸಂಗ್ರಹಿಸುತ್ತಿದ್ದಾರೆ.

ಈ ನಡುವೆ ಡಿಆರ್‌ಐ ಕಸ್ಟಡಿ ಅವಧಿ ಅಂತ್ಯಗೊಂಡ ಕಾರಣದಿಂದ ರನ್ಯಾ ರಾವ್ ಅವರನ್ನು ಮಾರ್ಚ್ 24ರವರೆಗೆ ನ್ಯಾಯಾಂಗ ಬಂಧನಕ್ಕೆ ನೀಡಿ ವಿಶೇಷ ಆರ್ಥಿಕ ಅಪರಾಧಗಳ ನ್ಯಾಯಾಲಯ ಸೋಮವಾರ ಆದೇಶ ಹೊರಡಿಸಿದೆ. ಪೊಲೀಸರು ಅವರನ್ನು ಪರಪ್ಪನ ಅಗ್ರಹಾರ ಜೈಲಿಗೆ ಕರೆದೊಯ್ದರು.

ನಟಿಯ ವಿಚಾರಣೆ ವೇಳೆ ಸಂಗ್ರಹಿಸಿದ ಮಾಹಿತಿಯನ್ನು ಡಿಆರ್‌ಐ ಅಧಿಕಾರಿಗಳು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿದರು. ಈ ಮಧ್ಯೆ ಪ್ರಕರಣದಲ್ಲಿ ಜಾಮೀನು ಕೋರಿ ರನ್ಯಾ ರಾವ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಜಾಮೀನು ಅರ್ಜಿಯ ವಿಚಾರಣೆ ಮಂಗಳವಾರ ನಡೆಯಲಿದ್ದು, ಆಕ್ಷೇಪಣೆಗಳಿದ್ದರೆ ಸಲ್ಲಿಸುವಂತೆ ಡಿಆರ್‌ಐ ಅಧಿಕಾರಿಗಳಿಗೆ ನ್ಯಾಯಾಲಯ ಸೂಚಿಸಿದೆ. ಲ್ಯಾವೆಲ್ಲೆ ರಸ್ತೆಯಲ್ಲಿರುವ ನಟಿಯ ಐಷಾರಾಮಿ ಫ್ಲ್ಯಾಟ್‌ನಲ್ಲಿ ಡಿಆರ್‌ಐ ಶೋಧ ನಡೆಸಿದ ವೇಳೆ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ವಿದೇಶಿ ವಾಚ್‌ಗಳು ಪತ್ತೆಯಾಗಿವೆ. ಆದರೆ, ಅಧಿಕಾರಿಗಳು ವಿದೇಶಿ ವಾಚ್‌ಗಳನ್ನು ವಶಕ್ಕೆ ಪಡೆದಿಲ್ಲ. ಅವುಗಳ ಮೂಲದ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದಾರೆ ಎಂಬುದು ಗೊತ್ತಾಗಿದೆ.

ರನ್ಯಾ 'ಮಾಸ್ಟರ್ ಮೈಂಡ್'

ಚಿನ್ನ ಕಳ್ಳ ಸಾಗಣೆ ಪ್ರಕರಣದಲ್ಲಿ ರನ್ಯಾ 'ಮಾಸ್ಟರ್ ಮೈಂಡ್' ಎಂದು ಡಿಆರ್‌ಐ ನ್ಯಾಯಾಲಯಕ್ಕೆ ಸಲ್ಲಿಸಿದ ವರದಿಯಲ್ಲಿ ಉಲ್ಲೇಖ ಮಾಡಿದೆ.

ಟಿಶ್ಯೂ ಪೇಪರ್, ಬ್ಯಾಂಡೇಜ್ ಬಳಸಿ ಚಿನ್ನ ಸಾಗಾಟ ಮಾಡಲಾಗಿದೆ. ಈ ಪ್ರಕರಣದಲ್ಲಿ ದೊಡ್ಡ ಮಟ್ಟದ ಜಾಲ ಕಾರ್ಯನಿರ್ವಹಿಸಿರುವುದು ಹಾಗೂ ಅನೇಕ ಜನ ಭಾಗಿಯಾಗಿರುವ ಬಗ್ಗೆ ಮಾಹಿತಿ ಇದೆ ಎಂದು ಹೇಳಿದೆ.

ವಿಮಾನ ನಿಲ್ದಾಣದಲ್ಲಿ ಶಿಷ್ಟಾಚಾರ ಹೇಗೆ ದುರ್ಬಳಕೆ ಮಾಡಲಾಗಿದೆ ಎಂಬುದನ್ನು ತಿಳಿಯಲು ರನ್ಯಾ ಅವರ ಮೊಬೈಲ್ ಫೋನ್ ಕರೆಗಳ ಪರಿಶೀಲನೆ ನಡೆಸಲಾಗುತ್ತಿದೆ. ಲ್ಯಾಪ್‌ಟಾಪ್‌ನಲ್ಲಿ ರಿಯಲ್ ಎಸ್ಟೇಟ್ ವ್ಯವಹಾರದ ಮಾಹಿತಿ ಇದ್ದು, ಡಿಜಿಟಲ್ ಸಾಕ್ಷ್ಯದ ಬಗ್ಗೆಯೂ ಅಧಿಕಾರಿಗಳು ತನಿಖೆ ಮಾಡುತ್ತಿದ್ದಾರೆ.

'ಕೆಟ್ಟ ಪದ ಬಳಕೆ– ಕುಗ್ಗಿದ್ದೇನೆ'

'ಡಿಆರ್‌ಐ ಅಧಿಕಾರಿಗಳು ವಿಚಾರಣೆ ವೇಳೆ ಕೆಟ್ಟ ಪದ ಬಳಕೆ ಮಾಡಿದ್ದಾರೆ. ಮಾನಸಿಕವಾಗಿ ಕುಗ್ಗಿ ಹೋಗಿದ್ದೇನೆ' ಎಂದು ರನ್ಯಾ ಅವರು ನ್ಯಾಯಾಧೀಶರ ಮುಂದೆ ದೂರಿದರು.

ಸೋಮವಾರ ವಿಚಾರಣೆ ವೇಳೆ, ಮಾಹಿತಿ ನೀಡದಿದ್ದರೆ ಗೊತ್ತಲ್ವಾ ಎಂದು ಬೆದರಿಕೆ ಹಾಕಿದ್ದಾರೆ ಎಂದೂ ಆಪಾದಿಸಿದರು. ಈ ಆರೋಪ ನಿರಾಕರಿಸಿದ ಡಿಆರ್‌ಐ ಅಧಿಕಾರಿಗಳು, 'ಸಿ.ಸಿ.ಟಿ.ವಿ ಕ್ಯಾಮೆರಾ ಕಣ್ಗಾವಲಿನಲ್ಲಿ ವಿಚಾರಣೆ ನಡೆಸಲಾಗಿದೆ. ಆಕೆಯ ಮೇಲೆ ಹಲ್ಲೆ ನಡೆಸಿಲ್ಲ. ಬೆದರಿಕೆ ಹಾಕಿಲ್ಲ. ಸಾಕ್ಷ್ಯಗಳನ್ನು ಮುಂದಿಟ್ಟು ಪ್ರಶ್ನೆಗಳನ್ನು ಕೇಳಲಾಗಿದೆ. 24 ತಾಸು ಸಿ.ಸಿ.ಟಿ.ವಿ ಕ್ಯಾಮೆರಾ ಕಣ್ಗಾವಲಿನಲ್ಲಿ ಇರಿಸಲಾಗಿದೆ' ಎಂದು ಸ್ಪಷ್ಟಪಡಿಸಿದರು.

ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಕೂಲಹಳ್ಳಿಯಲ್ಲಿ ಗೋಣಿಬಸವೇಶ್ವರ ರಥೋತ್ಸವ ಸೋಮವಾರ ಸಂಭ್ರಮದಿಂದ ಜರುಗಿತು

ಪಠ್ಯಕ್ಕೆ ಹೊರತಾದ ಪ್ರಶ್ನೆಗಳು 19

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ್ದ 2024ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) ಪಠ್ಯಕ್ಕೆ ಹೊರತಾದ 19 ಪ್ರಶ್ನೆಗಳಿದ್ದವು ಎಂದು ತಜ್ಞರ ಸಮಿತಿ ವರದಿ ನೀಡಿದೆ.

ಕಳೆದ ಬಾರಿಯ ಸಿಇಟಿ ಪ್ರಶ್ನೆ ಪತ್ರಿಕೆಗಳಲ್ಲಿ ಪಠ್ಯಕ್ಕೆ ಹೊರತಾದ 50 ಪ್ರಶ್ನೆಗಳನ್ನು ಕೇಳಲಾಗಿತ್ತು ಎಂದು ವಿಷಯವಾರು ಉಪನ್ಯಾಸಕರು, ವಿದ್ಯಾರ್ಥಿಗಳು ದೂರಿದ್ದರು. ಇಂತಹ ಪ್ರಮಾದ ಎಸಗಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದರು.

ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಜೀವಶಾಸ್ತ್ರ ವಿಷಯಗಳ ತಜ್ಞರು ನೀಡಿದ ಪ್ರಾಥಮಿಕ ಮಾಹಿತಿಯಂತೆ ಪಠ್ಯಕ್ಕೆ ಹೊರತಾದ 50 ಪ್ರಶ್ನೆಗಳನ್ನು ಕೈಬಿಟ್ಟಿದ್ದ ಕೆಇಎ ಉತ್ತರ ಪತ್ರಿಕೆಗಳ ಮೌಲ್ಯಮಾಪನ ನಡೆಸಿ, ಫಲಿತಾಂಶ ಪ್ರಕಟಿಸಿತ್ತು.

ಈ ಕುರಿತು ತನಿಖೆ ನಡೆಸಲು ನಿವೃತ್ತ ಐಎಎಸ್ ಅಧಿಕಾರಿ ಡಿ.ಎನ್. ನರಸಿಂಹರಾಜು ಅವರ ನೇತೃತ್ವದಲ್ಲಿ ತಜ್ಞರ ಸಮಿತಿಯನ್ನು ಉನ್ನತ ಶಿಕ್ಷಣ ಇಲಾಖೆ ರಚಿಸಿತ್ತು. ದ್ವಿತೀಯ ಪಿಯು ಪಠ್ಯ ಪುಸ್ತಕಗಳು, ಆಯಾ ವಿಷಯಗಳ ತಜ್ಞರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳ ಅಭಿಪ್ರಾಯ ಪಡೆದು ರೂಪಿಸಿದ ವರದಿಯನ್ನು ಸಮಿತಿ ಈಚೆಗೆ ಸಲ್ಲಿಸಿತ್ತು.

ಸರ್ವಧರ್ಮ ರಥೋತ್ಸವ

ಉತ್ಸವ ಮೂರ್ತಿ ಬದಲಿಗೆ ಎಲ್ಲಾ ಧರ್ಮಗ್ರಂಥಗಳ ಪೂಜೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಇಲ್ಲಿನ ಕೊಟ್ಟೂರುಸ್ವಾಮಿ ಮಠದ ಮುಂಭಾಗದ ಮುಖ್ಯ ಬಜಾರ್‌ನಲ್ಲಿ ಸೋಮವಾರ ಸರ್ವಧರ್ಮ ರಥೋತ್ಸವ ಸಂಭ್ರಮದಿಂದ ನಡೆಯಿತು.

ಕೊಟ್ಟೂರು ಸ್ವಾಮಿ ಮಠದ ಈ ಹಿಂದಿನ ಪೀಠಾಧಿಪತಿ ಸಂಗನಬಸವ ಸ್ವಾಮೀಜಿ ಅವರು ಎಂಟು ವರ್ಷಗಳ ಹಿಂದೆ ಸರ್ವಧರ್ಮ ರಥೋತ್ಸವವನ್ನು ಆರಂಭಿಸಿದ್ದರು. ಮಠವು ಯಾವುದೇ ಜಾತಿ, ಧರ್ಮ ಮತ್ತು ಜನಾಂಗದ ಸಮುದಾಯಗಳಿಗೆ ಸೀಮಿತವಾಗಿಲ್ಲ ಎಂಬ ಸಂದೇಶ ಸಾರಿದ್ದರು. ಅದನ್ನು ಈಗಿನ ಗುರುಗಳಾದ ಕೊಟ್ಟೂರು ಬಸವಲಿಂಗ ಸ್ವಾಮೀಜಿ ಮುಂದುವರಿಸಿದ್ದಾರೆ.

ತೇರಿನಲ್ಲಿ ಭಗವದ್ಗೀತೆ, ಬೈಬಲ್, ಕುರಾನ್, ಸಿದ್ಧಾಂತ ಶಿಖಾಮಣಿ ಸೇರಿ ವಿಶ್ವದ ಎಲ್ಲಾ ಧರ್ಮದ ಗ್ರಂಥಗಳನ್ನು ಇಟ್ಟು ಮೊದಲಿಗೆ ಪೂಜಿಸಲಾಯಿತು. ಬಳಿಕ ಸಮಾಳ, ನಂದಿಕೋಲು, ಡೆಂಡೆ, ಮದ್ದಳೆ ಸೇರಿ ವಿವಿಧ ಬಗೆಯ ಮಂಗಳವಾದ್ಯಗಳ ಜೊತೆ ಮಠದ ಪರಂಪರೆಯಂತೆ ತೇರನ್ನು ಎಳೆಯಲಾಯಿತು. ಹಿಂದೂ, ಮುಸ್ಲಿಮರು, ಕ್ರೈಸ್ತರು, ಜೈನರು, ಬೌದ್ಧರು ಸೇರಿ ವಿವಿಧ ಸಮುದಾಯದವರು ಭಾಗಿಯಾಗಿದ್ದರು.

ಹೊಸಪೇಟೆಯಲ್ಲಿ ಸೋಮವಾರ ಸರ್ವಧರ್ಮ ಗ್ರಂಥಗಳನ್ನು ಹೊತ್ತ ರಥವನ್ನು ಸಂಭ್ರಮದಿಂದ ಎಳೆಯಲಾಯಿತು ಪ್ರಜಾವಾಣಿ ಚಿತ್ರ: ಲವ ಕೆ.

ಉಟ್ಟ ಬಟ್ಟೆಯಲ್ಲಿಯೇ ಊರು ಬಿಟ್ಟಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಸಾಣಾಪುರದ ಬಳಿ ಈಚೆಗೆ ನಡೆದಿದ್ದ ಇಬ್ಬರು ಯುವತಿಯರ ಮೇಲಿನ ಅತ್ಯಾಚಾರ ಮತ್ತು ಹಲ್ಲೆ ಪ್ರಕರಣದ ಮೂರನೇ ಆರೋಪಿ ಗಂಗಾವತಿಯ ಶರಣಬಸವನಾಗ ಎಂಬಾತ, ಘಟನೆ ನಡೆದ ಬಳಿಕ ಉಟ್ಟ ಬಟ್ಟೆಯಲ್ಲಿಯೇ ರಾತ್ರೋರಾತ್ರಿ ಊರು ಬಿಟ್ಟಿದ್ದ ಎನ್ನುವ ಮಾಹಿತಿ ಗೊತ್ತಾಗಿದೆ.

ಘಟನೆ ನಡೆದ ಮರುದಿನವೇ ಮಲ್ಲೇಶ ಹಂದಿ ಮತ್ತು ಚೇತನಸಾಯಿ ಎಂಬ ಆರೋಪಿಗಳನ್ನು ಬಂಧಿಸಲಾಗಿತ್ತು. ಇದರಿಂದ ಗಾಬರಿಗೆ ಒಳಗಾಗಿದ್ದ ಶರಣಬಸವನಾಗ ತನ್ನ ಬಳಿಯಿದ್ದ ಅಲ್ಪ ಹಣದಲ್ಲಿಯೇ ರಾಯಚೂರಿಗೆ ಹೋಗಿ ಸಂಬಂಧಿಕರಿಂದ ಬೇರೊಬ್ಬರ ಮೊಬೈಲ್‌ಗೆ ಹಣ ಹಾಕಿಸಿಕೊಂಡು ಅಲ್ಲಿಂದ ತಮಿಳುನಾಡಿನ ವೆಲ್ಲೂರಿಗೆ ತೆರಳಿದ್ದ. ಆತನ ಬಳಿ ಫೋನ್ ಇಲ್ಲದಿದ್ದರೂ ಅವರ ಅಪ್ಪನ, ಕುಟುಂಬದವರಿಗೆ ಬರುತ್ತಿದ್ದ ಫೋನ್ ಕರೆಗಳ ಮೇಲೆ ಕಣ್ಣಾವಲು ಇಟ್ಟು ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದು ಇಲ್ಲಿ ನ್ಯಾಯಾಲಯದ ಮುಂದೆ ಹಾಜರು ಪಡಿಸಿದರು.

'ಮೂರನೇ ಆರೋಪಿ ಕೃತ್ಯ ನಡೆದಿದ್ದನ್ನು ಒಪ್ಪಿಕೊಂಡಿದ್ದಾನೆ. ಕೃತ್ಯಕ್ಕೆ ಬಳಸಿದ ಬೈಕ್ ಜಪ್ತಿ ಮಾಡಲಾಗಿದೆ. ಘಟನೆ ನಡೆದಾಗ ಆರೋಪಿಗಳು ಮದ್ಯ ಸೇವನೆ ಮಾಡಿದ್ದು ಸಾಬೀತಾಗಿದೆ' ಎಂದು ಎಸ್‌ಪಿ ಡಾ. ರಾಮ್ ಎಲ್. ಅರಸಿದ್ದಿ ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಮದ್ಯದ ನಶೆಯಲ್ಲಿದ್ದ ಆರೋಪಿಗಳು, ₹100 ನೀಡುವಂತೆ ಪ್ರವಾಸಿಗರನ್ನು ಕೇಳಿದ್ದರು. ಕೇವಲ ₹20 ಕೊಟ್ಟಿದ್ದಕ್ಕೆ ಸಿಟ್ಟಾಗಿ, ಹಲ್ಲೆ ಮಾಡಿದ್ದಾರೆ. ಒಡಿಶಾದ ಯುವಕನ ಬಳಿ ಇದ್ದ ಎರಡು ಮೊಬೈಲ್ ಮತ್ತು ಹಣ ಕಿತ್ತುಕೊಂಡು ಕಾಲುವೆಗೆ ತಳ್ಳಿದ್ದರು' ಎಂದು ಹೇಳಿದರು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಹೇಮಂತಕುಮಾರ್ ಇದ್ದರು.

ಪ್ರಶಸ್ತಿ ಪ್ರದಾನ

ಧಾರವಾಡದಲ್ಲಿ ಸೋಮವಾರ ಬೆಂಗಳೂರಿನ ಪಂಡಿತ್ ಡಿ.ಕುಮಾರ ದಾಸ್ ಅವರಿಗೆ ಡಾ.ಮಲ್ಲಿಕಾರ್ಜುನ ಮನಸೂರ ರಾಷ್ಟ್ರೀಯ ಪ್ರಶಸ್ತಿ, ಶಿರಸಿ ವಿನಾಯಕ ಹೆಗಡೆ ಅವರಿಗೆ ರಾಷ್ಟ್ರೀಯ ಯುವ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪಂಡಿತ್ ವೆಂಕಟೇಶಕುಮಾರ, ಡಾ.ದಿಲೀಪ ದೇಶಪಾಂಡೆ, ಶಾಕೀರ ಸನದಿ, ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ, ನೀಲಾ ಎಂ.ಕೊಡ್ಲಿ, ಡಾ. ಮಲ್ಲಿಕಾರ್ಜುನ ಮನಸೂರ ಟ್ರಸ್ಟ್ ಅಧ್ಯಕ್ಷೆ ದಿವ್ಯಪ್ರಭು ಜಿ.ಆರ್.ಜೆ, ಶಂಕರ ಕುಂಬಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಸುಧಾ ಓದಿರಿ

ಮರಳು ಅಕ್ರಮ ಸಾಗಣೆ: ಪೊಲೀಸ್ ಕಾನ್‌ಸ್ಟೆಬಲ್ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಮಾನ್ವಿ (ರಾಯಚೂರು ಜಿಲ್ಲೆ): ತಾಲ್ಲೂಕಿನ ಚೀಕಲಪರ್ವಿಯಲ್ಲಿ ಸೋಮವಾರ ಟ್ರ್ಯಾಕ್ಟರ್ ಮೂಲಕ ಮರಳು ಅಕ್ರಮ ಸಾಗಣೆ ಮಾಡುತ್ತಿದ್ದ ವ್ಯಕ್ತಿಯು ಪೊಲೀಸ್ ಕಾನ್‌ಸ್ಟೆಬಲ್ ಮೇಲೆ ಹಲ್ಲೆ ಮಾಡಿದ್ದಾನೆ.

'ದೇವರಾಜ ಎಂಬಾತ ಟ್ರ್ಯಾಕ್ಟರ್‌ನಲ್ಲಿ ಅಕ್ರಮವಾಗಿ ಮರಳು ಸಾಗಿಸುತ್ತಿದ್ದಾಗ ಪೊಲೀಸ್ ಕಾನ್‌ಸ್ಟೆಬಲ್ ಲಕ್ಷ್ಮಣ ಅವರು ತಡೆದು ವಿಚಾರಿಸಿದ್ದಾರೆ. ಈ ವೇಳೆ ಇಬ್ಬರ ನಡುವೆ ವಾಗ್ವಾದ ನಡೆದಿದೆ. 'ಇಲಾಖೆಗಳಿಗೆ ಮಾಮೂಲು ತಲುಪಿಸಲಾಗಿದೆ. ಟಿಪ್ಪರ್‌ನಲ್ಲಿ ಸಾಗಿಸಿದರೆ ಮೌನವಾಗಿರುತ್ತೀರಿ, ಟ್ರ್ಯಾಕ್ಟರ್‌ನಲ್ಲಿ ಸಾಗಿಸಿದರೆ ಏಕೆ ಬರ್ತೀರಿ' ಎಂದು ದೇವರಾಜ ಕೂಗಾಡಿದ್ದಾನೆ. ಬಳಿಕ ಆವೇಶದಲ್ಲಿ ಕಾನ್‌ಸ್ಟೆಬಲ್ ಲಕ್ಷ್ಮಣ ಅವರ ಮೇಲೆ ಹಲ್ಲೆ ಮಾಡಿದ್ದಾನೆ' ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಗಾಯಗೊಂಡ ಕಾನ್‌ಸ್ಟೆಬಲ್ ಲಕ್ಷ್ಮಣ ಅವರು ಮಾನ್ವಿ ಸಾರ್ವಜನಿಕ ಆಸ್ಪತ್ರೆಗೆ ದಾಖಲಾಗಿದ್ದಾರೆ. ಮಾನ್ವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

'ಪೊಲೀಸ್ ಹಿರಿಯ ಅಧಿಕಾರಿಗಳು ಮರಳು ಅಕ್ರಮ ದಂಧೆಕೋರರೊಂದಿಗೆ ಕೈಜೋಡಿಸಿದ್ದಾರೆ. ಹಿರಿಯ ಅಧಿಕಾರಿಗಳಿಗೆ ಅಕ್ರಮಗಳ ಬಗ್ಗೆ ಮಾಹಿತಿ ಕೊಡಲು ಫೋನ್ ಕರೆ ಮಾಡಿದರೂ ಕರೆ ಸ್ವೀಕರಿಸುವುದಿಲ್ಲ' ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಜ್ಜಾ ಕುಸಿತ: ಕಟ್ಟಡ ಮಾಲೀಕನ ಪುತ್ರನ ವಿರುದ್ಧ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೇಲೂರು (ಹಾಸನ ಜಿಲ್ಲೆ): ಇಲ್ಲಿನ ಬಸ್ ನಿಲ್ದಾಣದ ಮುಂಭಾಗ ಕಟ್ಟಡದ ಸಜ್ಜಾ ಕುಸಿದ ಪ್ರಕರಣಕ್ಕೆ ಸಂಬಂಧಿಸಿ, ಕಟ್ಟಡದ ಮಾಲೀಕ ದಿವಂಗತ ಸತ್ಯನಾರಾಯಣಗೌಡರ ಪುತ್ರ ಅವಿನಾಶ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

'ಸಜ್ಜಾ ಕುಸಿತದಲ್ಲಿ ಗಾಯಗೊಂಡಿದ್ದ ಶಿಲ್ಪಾ ಎಂಬುವವರು ದೂರು ನೀಡಿದ್ದರು. ಕಟ್ಟಡದ ಉಳಿದ ಮಳಿಗೆಗಳನ್ನು ಬಂದ್ ಮಾಡಿದ್ದು, ವ್ಯಾಪಾರ ನಡೆಸುವುದಕ್ಕೆ ನಿರ್ಬಂಧ ಹೇರಲಾಗಿದೆ. ಮುಂಜಾಗ್ರತಾ ಕ್ರಮವಾಗಿ ಎರಡು ಡಿ.ಆರ್.ತುಕಡಿಗಳನ್ನು ಸ್ಥಳದಲ್ಲಿ ನಿಯೋಜಿಸಲಾಗಿದೆ' ಎಂದು ಸಿಪಿಐ ರೇವಣ್ಣ ತಿಳಿಸಿದರು.

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಮಂಡ್ಯ

ನಂ. ಡಿಸಿಸಿಬಿ/ಕಟ್ಟಡ/62/2024–25 ದಿನಾಂಕ : 10–03–2025

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಬ್ಯಾಂಕಿನ ಪ್ರಧಾನ ಕಛೇರಿಯ ನೂತನ ಕಟ್ಟಡ ನಿರ್ಮಾಣ ಕಾಮಗಾರಿ ಸಂಬಂಧ ಅಲ್ಪಾವಧಿ ಇ-ಟೆಂಡರ್ ಪ್ರಕಟಣೆಯನ್ನು ಪ್ರಕಟಿಸಿದ್ದು ಆಸಕ್ತಿಯುಳ್ಳ ಟೆಂಡರ್‌ದಾರರು ಕರ್ನಾಟಕ ಇ-ಪೋರ್ಟಲ್ ಜಾಲತಾಣ https//kppp.karnataka.gov.in ಮೂಲಕ ಹೆಚ್ಚಿನ ವಿವರಗಳನ್ನು ಪಡೆಯಬಹುದಾಗಿರುತ್ತದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31–03–2025ರ ಸಂಜೆ 5–00 ಗಂಟೆ ಆಗಿರುತ್ತದೆಂದು ತಿಳಿಯಪಡಿಸಿದೆ.

Tender No. MDCCB/2024-25/BD/ WORK_INDENT7	Construction of MDCC Bank New Head Office building in Mandya

ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಎಂ.ಡಿ.ಸಿ.ಸಿ. ಬ್ಯಾಂಕ್ ನಿ., ಮಂಡ್ಯ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಚೇರಿ, ಎಸ್‌ಡಬ್ಲ್ಯುಡಿ–ಬೊಮ್ಮನಹಳ್ಳಿ ವಲಯ, ಬಿಬಿಎಂಪಿ, 9ನೇ ಮಹಡಿ, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, 4ನೇ ಬ್ಲಾಕ್, ಜಯನಗರ, ಬೆಂಗಳೂರು–560011.

ಸಂಖ್ಯೆ: ಕಾಪಾಅ/ಎಸ್‌ಡಬ್ಲ್ಯುಡಿ/ಬೊಹವ/ಟೆಂಡರ್/02/2024–25 ದಿನಾಂಕ: 10.03.2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

ದ್ವಿಲಕೋಟೆ ಪದ್ಧತಿ (ಜಿಓಕೆ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಎಸ್‌ಡಬ್ಲ್ಯುಡಿ, ಬೊಮ್ಮನಹಳ್ಳಿ ವಲಯ, ಬಿಬಿಎಂಪಿ, ಬೆಂಗಳೂರು ಇವರು ಆಯುಕ್ತರು, ಬಿಬಿಎಂಪಿ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಾಗಿ ಬಿಬಿಎಂಪಿ ಅಥವಾ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿತಗೊಂಡ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ್ತ
1	ಬೊಮ್ಮನಹಳ್ಳಿ ವಲಯದಲ್ಲಿ ಬಾಹ್ಯ ಅನುದಾನಿತ ಯೋಜನೆ (ವರ್ಲ್ಡ್ ಬ್ಯಾಂಕ್)ಯಲ್ಲಿ ಕರ್ನಾಟಕ ನೀರು ಸಂರಕ್ಷಣಾ ಮತ್ತು ರೆಸಿಲೆನ್ಸ್ ಯೋಜನೆ (ಕೆಡಬ್ಲ್ಯುಎಸ್‌ಆರ್‌ಪಿ) ಅಡಿಯಲ್ಲಿ ಆರ್‌ಸಿಸಿ ರೀಟೈನಿಂಗ್ ಗೋಡೆಗಳು, ವಾಟರ್ ರಿಟೆನ್ಷನ್ ಸ್ಟ್ರಕ್ಚರ್‌ಗಳು, ಪ್ರಕೃತಿ ಆಧಾರಿದ ಸೊಲ್ಯೂಷನ್ ಸ್ಟ್ರಕ್ಚರ್‌ಗಳು/ಸೇತುವೆಗಳು ಮತ್ತು ಕಲ್ವಟ್‌ಗಳನ್ನು ಒಳಗೊಂಡಂತೆ ಎಸ್‌ಡಬ್ಲ್ಯುಡಿಗೆ ಪ್ರವಾಹ ರಕ್ಷಣಾ ಸ್ಟ್ರಕ್ಚರ್‌ಗಳ ನಿರ್ಮಾಣ ಕಾಮಗಾರಿ – ಪ್ಯಾಕೇಜ್–1 (31 ಕಾಮಗಾರಿಗಳು).	ರೂ. 16350.39 ಲಕ್ಷಗಳು
	ಇಎಂಡಿ : ರೂ. 1,00,000/– ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಹಾಗೂ ಉಳಿಕೆ ರೂ. 1,62,50,393/– ಗಳನ್ನು ಬಿ.ಜಿ. ಮೂಲಕ ಇಇ(ಎಸ್‌ಡಬ್ಲ್ಯುಡಿ–ಬೊಮ್ಮನಹಳ್ಳಿ ವಲಯ) ಇವರ ಹೆಸರಿನಲ್ಲಿ ಪಾವತಿ ಮಾಡಬೇಕು.	

ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ https://kppp.karnataka.gov.inನಿಂದ ದಿನಾಂಕ: 11.03.2025ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವ–ಬಿಡ್ ಸಭೆಯ ದಿನಾಂಕ: 28.03.2025ರಂದು ಸಂಜೆ 4.00 ಗಂಟೆಗೆ – ಮುಖ್ಯ ಅಭಿಯಂತರರು, ಮಳೆ ನೀರು ಚರಂಡಿ, ಬಿಬಿಎಂಪಿ ಇವರ ಕಛೇರಿಯಲ್ಲಿ ಮೇಲೆ ತಿಳಿಸಲಾದ ವಿಳಾಸದಲ್ಲಿ. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 15.04.2025ರ ಸಂಜೆ 5.30 ಗಂಟೆವರೆಗೆ. (4) ಬಿಡ್‌ಗಳನ್ನು ತೆರೆಯುವ ದಿನಾಂಕ: 16.04.2025ರಂದು ಸಂಜೆ 5.30 ಗಂಟೆಗೆ. (5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: ತಾಂತ್ರಿಕವಾಗಿ ಅರ್ಹಗೊಂಡ ಗುತ್ತಿಗೆದಾರ ಯಶಸ್ವಿ ಬಿಡ್‌ದಾರರಿಗೆ ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಳೆ ನೀರು ಚರಂಡಿ, ಬೊಮ್ಮನಹಳ್ಳಿ ವಲಯ, ಬಿಬಿಎಂಪಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಮನೀಚ, ಪೂರ್ವ ವಲಯ, ಬಿಬಿಎಂಪಿ, 23ನೇ ಮಹಡಿ, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ಎಂ.ಜಿ. ರಸ್ತೆ, ಬೆಂಗಳೂರು–560001

ಸಂಖ್ಯೆ: ಕಾಅ/ಮನೀಚ/ಪೂರ್ವ/ಟೆಂಡರ್/03/2024–25 ದಿನಾಂಕ : 10.03.2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) ದ್ವಿ ಲಕೋಟೆ ಪದ್ಧತಿ

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಮನೀಚ–ಪೂರ್ವ ವಲಯ, ಬಿಬಿಎಂಪಿ, ಬೆಂಗಳೂರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಅಥವಾ / ಕೆಪಿಡಬ್ಲ್ಯುಡಿ / ಸಿಪಿಡಬ್ಲ್ಯುಡಿ/ ರೈಲ್ವೆಗಳು / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ಸಮಾನ ನೋಂದಣಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಳ ನಿರ್ಮಾಣಕ್ಕಾಗಿ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	ಮಳೆ ನೀರಿನ ಚರಂಡಿಗೆ ಪ್ರವಾಹ ರಕ್ಷಣಾ ರಚನೆಗಳ ನಿರ್ಮಾಣ ಸೇರಿದಂತೆ ಆರ್‌ಸಿಸಿ ತಡೆಗೋಡೆಗಳು. ನೀರು ಧಾರಣ ರಚನೆಗಳು, ಕರ್ನಾಟಕ ಜಲ ಭದ್ರತೆ ಮತ್ತು ಸ್ಥಿತಿಸ್ಥಾಪಕತ್ವ ಕಾರ್ಯಕ್ರಮದ (KWSRP) ಪೂರ್ವ ವಲಯ ಪ್ಯಾಕೇಜ್–1ರ ಅಡಿಯಲ್ಲಿ ಪ್ರಕೃತಿ ಆಧಾರಿತ ಪರಿಹಾರ ರಚನೆಗಳು/ ಸೇತುವೆಗಳು ಮತ್ತು ಕಲ್ವರ್ಟ್‌ಗಳ ನಿರ್ಮಾಣ ಮತ್ತು ಅದರ ಕಾಮಗಾರಿಗಳು ಕಾಮಗಾರಿ ಅಂದಾಜು ಮೊತ್ತ: ರೂ. 6547.60 ಲಕ್ಷಗಳು, ಇಎಂಡಿ : ರೂ. 1,00,000.00 ಲಕ್ಷಗಳು, ಕೆಪಿಪಿ ಪೋರ್ಟಲ್ ಮೂಲಕ ಮತ್ತು ಇಇ (ಮನೀಚ–ಪೂರ್ವ ವಲಯ) ಪರವಾಗಿ ಬಿಜಿ ಮೂಲಕ 65,00,000/–.

ಟೆಂಡರ್‌ನ ಕಾರ್ಯಸೂಚಿ: (1) ಪ್ರೀ–ಬಿಡ್ ಸಭೆ ನಡೆಯುವ ದಿನಾಂಕ ಮತ್ತು ಸಮಯ : 28.03.2025 ಸಂಜೆ 04.00 ಗಂಟೆಗೆ, ಕಾರ್ಯಪಾಲಕ ಅಭಿಯಂತರರ ಕಛೇರಿ, ಪೂರ್ವ ವಲಯ, 23ನೇ ಮಹಡಿ, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ಎಂ.ಜಿ. ರಸ್ತೆ, ಬೆಂಗಳೂರು–560001. (2) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 15.04.2025 ರಂದು ಸಂಜೆ 05.30 ಗಂಟೆಯವರೆಗೆ. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 16.04.2025 ರಂದು ಸಂಜೆ 05.30 ಅಥವಾ ಮುಂದಿನ ಕೆಲಸದ ದಿನ. (4) ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಗುತ್ತಿಗೆದಾರ ಯಶಸ್ವಿ ಬಿಡ್‌ದಾರರಿಗೆ ಹಣಕಾಸು ಬಿಡ್ ತೆರೆಯುವ ದಿನಾಂಕವನ್ನು ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಳೆ ನೀರಿನ ಚರಂಡಿ, ಪೂರ್ವ ವಲಯ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರವರ ಕಾರ್ಯಾಲಯ, ಜಲಮಂಡಳಿ ಆವರಣ, ಸರ್. ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ – 580001 ದೂರವಾಣಿ: 0836–2447090 ಇ–ಮೇಲ್: kwbcen@gmail.com

ತಿದ್ದುಪಡಿ

ಕಾಮಗಾರಿಯ ಹೆಸರು: ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಕಾರ್ಯಕ್ರಮದಡಿಯಲ್ಲಿ ಕಾರವಾರ ನಗರಕ್ಕೆ ಅಲ್ಪಾವಧಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು ಹಾಗೂ ಒಂದು ವರ್ಷದ ದೋಷ ಮತ್ತು ಹೊಣೆಗಾರಿಕೆ ಸೇರಿ 5 ವರ್ಷಗಳಿಗೆ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿ (ಇಡುಗಂಟು ಟೆಂಡರ್) Indent No. KUWSDB/2024-25/WS/WORK_INDENT/303 ಟೆಂಡರ್ ಅಧಿಸೂಚನೆ ಸಂಖ್ಯೆ: 1951 ದಿನಾಂಕ: 03–02–2025 ದಿನಾಂಕ: 08–02–2025 ರಂದು 'ಪ್ರಜಾವಾಣಿ', 'ಹೊಸ ದಿಗಂತ' (ಕರ್ನಾಟಕ ಆವೃತ್ತಿಗಳಲ್ಲಿ) ಹಾಗೂ 'ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್' (ಎಲ್ಲಾ ಇಂಡಿಯಾ ಆವೃತ್ತಿಯಲ್ಲಿ) ಪ್ರಕಟಿಸಲಾದ ಟೆಂಡರ್ ಅಧಿಸೂಚನೆಯತ್ತ ಗಮನ ಸೆಳೆಯಲಾಗಿದೆ. ಟೆಂಡರ್ ದಿನಾಂಕಗಳಲ್ಲಿ ಕೆಳಗಿನಂತೆ ತಿದ್ದುಪಡಿ ಮಾಡಲಾಗಿದೆ:

1) ಬಿಡ್ ಸಲ್ಲಿಸಲು / ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: 25–03–2025, 17:30 ಗಂಟೆಯವರೆಗೆ.

2) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 28–03–2025, 11:00 ಗಂಟೆಯ ನಂತರ. ಮೇಲಿನ ವಿವರಗಳನ್ನು ಹೊರತುಪಡಿಸಿ ಟೆಂಡರ್ ಅಧಿಸೂಚನೆಯಲ್ಲಿನ ಉಳಿದ ಮಾಹಿತಿಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಸಹಿ/– ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ.

ವಾಸಾಸಂಇ/ಧಾರವಾಡ/1067/ಅಡ್ವರ್ಟೋ/2024–25

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಆಸ್ತಿ ಅಧಿಕಾರಿಗಳ ಕಛೇರಿ, ಗಾ. ಕೃ. ವಿ. ಕೆ, ಬೆಂಗಳೂರು–560 065.

ಸಂಖ್ಯೆ:ಇ.ಒ/ಎಸ್.ಪಿ.ಒ/ಕೆಪಿಪಿಪಿ/21/2024-25 ದಿನಾಂಕ: 06-03-2025

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಜಿಕೆವಿಕೆ, ಬೆಂಗಳೂರು ಅವಶ್ಯವಿರುವ ಉಪಕರಣಗಳನ್ನು ಸರಬರಾಜು ಮಾಡಲು ಕೆ.ಜಿ–1 ಮತ್ತು ಕೆ.ಜಿ–2, ಟೆಂಡರ್ ನಿಬಂಧನೆಗೊಳಪಟ್ಟಂತೆ ಟೆಂಡರನ್ನು ಆಹ್ವಾನಿಸಲಾಗಿದೆ.

ವಿವರ: ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 15–03–2025 ಸಂಜೆ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17–03–2025 ಸಮಯ ಬೆಳಗ್ಗೆ 10.30 ಕ್ಕೆ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 19–03–2025 ಬೆಳಗ್ಗೆ 10.30, ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ.

ಸೂಚನೆ: ಯಾವುದೇ ಟೆಂಡರ್ ಪ್ರಕಟಣೆಯ ವಿವರಗಳು ವೆಬ್‌ಸೈಟ್: kppp.karnataka.gov.in ರಲ್ಲಿ ದೊರೆಯುತ್ತದೆ ಹಾಗೂ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ಸಹಾಯವಾಣಿ ಸಂಖ್ಯೆ: 91–80460 10000, 91–8068948777, support@eprochelpdesk.com ಅಥವಾ www.uasbangalore.edu.in ದೂರವಾಣಿ ಸಂಖ್ಯೆ: 080–23630128 ಅನ್ನು ಸಂಪರ್ಕಿಸಬಹುದು.

DIPR/CP/RO5563/2024-25 ಸಹಿ/– ಆಸ್ತಿ ಅಧಿಕಾರಿಗಳು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಬ.ನೀ.ಕಾಲುವೆ– ರಾ.ರಾ. ನಗರ, ಬೃ.ಬೆಂ.ಮ.ಪಾಲಿಕೆ, 9ನೇ ಮಹಡಿ ವಾಣಿಜ್ಯ ಸಂಕೀರ್ಣ, ಜಯನಗರ 4ನೇ ಬ್ಲಾಕ್, ಬೆಂಗಳೂರು–560 011.

ಸಂಖ್ಯೆ:ಕಾಪಾಅ/ಬೃನೀಕಾ/ಟೆಂಡರ್/ರಾರಾವ/02/2024–25 ದಿನಾಂಕ: 10.03.2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) ದ್ವಿಲಕೋಟೆ ಪದ್ಧತಿ

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು ಬೃ.ನೀ.ಕಾ, ರಾ.ರಾ ನಗರ ವಲಯ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಬೃ.ಬೆಂ.ಮ.ಪಾಲಿಕೆಯಲ್ಲಿ ಅಥವಾ ಸಮನಾಂತರವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆಳಗೆ ತಿಳಿಸಿರುವ ಕಾಮಗಾರಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾ.ಟೆಂ.ದಾ–ಕೆಡಬ್ಲ್ಯೂ–4)

ಕ್ರ ಸಂ.	ಕಾಮಗಾರಿಗಳ ಹೆಸರು
1.	ರಾಜರಾಜೇಶ್ವರಿನಗರ ವಲಯದಲ್ಲಿ ಬಾಹ್ಯ ಹಣಕಾಸು ಯೋಜನೆಯೊಂದಿಗೆ (ವಿಶ್ವ ಬ್ಯಾಂಕ್) ಕರ್ನಾಟಕ ಜಲ ಸಂರಕ್ಷಣೆ ಮತ್ತು ಚೇತರಿಕೆ / ಸ್ಥಿತಿಸ್ಥಾಪಕತ್ವ ಯೋಜನೆ (ಕೆಡಬ್ಲ್ಯೂಎಸ್‌ಆರ್‌ಪಿ) ಅಡಿಯಲ್ಲಿ ಆರ್‌ಸಿಸಿ ತಡೆಗೋಡೆಗಳು, ನೀರು ರಿಟೆನ್ಷನ್ ರಚನಾತ್ಮಕಗಳು, ಪರಿಸರ ಆಧಾರಿತ ಪರಿಹಾರ ರಚನಾತ್ಮಕಗಳು/ಸೇತುವೆಗಳು ಮತ್ತು ಕಲ್ವರ್ಟ್‌ಗಳನ್ನು ಒಳಗೊಂಡಂತೆ ಬೃಹತ್ ನೀರು ಕಾಲುವೆಗೆ ಪ್ರವಾಹ ರಕ್ಷಣೆ ರಚನಾತ್ಮಕಗಳನ್ನು ನಿರ್ಮಾಣ ಮಾಡುವುದು. ಪ್ಯಾಕೇಜ್–1 ಕಾಮಗಾರಿಗಿಟ್ಟ ಅಂದಾಜು ಮೊತ್ತ : ₹18,027.19 ಲಕ್ಷಗಳು, ಇಎಂಡಿ ₹1,00,000.00 ಕೆಪಿಪಿ ಪೋರ್ಟಲ್ ಮತ್ತು ₹1,79,27,192/– ಬಿಜಿ ಮೂಲಕ ಕಾಪಾಅ (ಬೃ.ನೀ.ಕಾ–ರಾರಾ ನಗರ ವಲಯ) ಇವರ ಪರವಾಗಿ)
2.	ರಾಜರಾಜೇಶ್ವರಿನಗರ ವಲಯದಲ್ಲಿ ಬಾಹ್ಯ ಹಣಕಾಸು ಯೋಜನೆಯೊಂದಿಗೆ (ವಿಶ್ವ ಬ್ಯಾಂಕ್) ಕರ್ನಾಟಕ ಜಲ ಸಂರಕ್ಷಣೆ ಮತ್ತು ಚೇತರಿಕೆ / ಸ್ಥಿತಿಸ್ಥಾಪಕತ್ವ ಯೋಜನೆ (ಕೆಡಬ್ಲ್ಯೂಎಸ್‌ಆರ್‌ಪಿ) ಅಡಿಯಲ್ಲಿ ಆರ್‌ಸಿಸಿ ತಡೆಗೋಡೆಗಳು, ನೀರು ರಿಟೆನ್ಷನ್ ರಚನಾತ್ಮಕಗಳು, ಪರಿಸರ ಆಧಾರಿತ ಪರಿಹಾರ ರಚನಾತ್ಮಕಗಳು/ಸೇತುವೆಗಳು ಮತ್ತು ಕಲ್ವರ್ಟ್‌ಗಳನ್ನು ಒಳಗೊಂಡಂತೆ ಬೃಹತ್ ನೀರು ಕಾಲುವೆಗೆ ಪ್ರವಾಹ ರಕ್ಷಣೆ ರಚನಾತ್ಮಕಗಳನ್ನು ನಿರ್ಮಾಣ ಮಾಡುವುದು. ಪ್ಯಾಕೇಜ್–2 ಕಾಮಗಾರಿಗಿಟ್ಟ ಅಂದಾಜು ಮೊತ್ತ : ₹18,532.29 ಲಕ್ಷಗಳು, ಇಎಂಡಿ ₹1,00,000.00 ಕೆಪಿಪಿ ಪೋರ್ಟಲ್ ಮತ್ತು ₹1,84,32,288/– ಬಿಜಿ ಮೂಲಕ ಕಾಪಾಅ (ಬೃ.ನೀ.ಕಾ–ರಾರಾ ನಗರ ವಲಯ) ಇವರ ಪರವಾಗಿ)

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ 11.03.2025ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 28.03.2025ರ ಸಂಜೆ 4:00 ಗಂಟೆಗೆ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ದಿನಾಂಕ: 15.04.2025ರ ಸಂಜೆ 5:30 ಗಂಟೆಗೆ. (4) ಬಿಡ್ ತೆರೆಯುವ ದಿನಾಂಕ: 16.04.2025ರ ಸಂಜೆ 5:30 ಗಂಟೆಗೆ ಅಥವಾ ಮುಂದಿನ ಕೆಲಸದ ದಿನದಂದು. (5) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ಕೆಪಿಪಿ ಪೋರ್ಟಲ್‌ನಲ್ಲಿ ತಾಂತ್ರಿಕವಾಗಿ ಅರ್ಹ ಗುತ್ತಿಗೆದಾರ ಯಶಸ್ವಿ ಬಿಡ್ಡರುಗಳಿಗೆ ತಿಳಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರು ಕಾಲುವೆ, ರಾ.ರಾ.ನಗರ ವಲಯ

ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆಗಳ ಇಲಾಖೆ)

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–01, 3ನೇ ಮಹಡಿ, ಟಿ.ಟಿ.ಎಂ.ಸಿ, ಬಿ.ಎಂ.ಟಿ.ಸಿ. ಕಟ್ಟಡ, ಯಶವಂತಪುರ, ಬೆಂಗಳೂರು–560022, ದೂರವಾಣಿ ಸಂಖ್ಯೆ: 080–23570382.

ಇ–ಮೇಲ್: jcctdgsto1.bng@ctd.ka.gov.in

ಸಂ:ವಾ.ತೆ.ಜಂ.ಆ(ಆ)/ವಿಸ&ಸೇತೆಕ–01/ಎಸ್‌ಟಿಎನ್/ಸಿಆರ್–11/24–25 ದಿನಾಂಕ: 06.03.2025

ಟೆಂಡರ್ ಪ್ರಕಟಣೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–1, ಯಶವಂತಪುರ, ಬೆಂಗಳೂರು ಇವರ ವಿಭಾಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಲು 17 (ಹದಿನೇಳು) ತಾಂತ್ರಿಕ ವಿಶ್ಲೇಷಕರು (Technical Analyst)ಗಳ ಸೇವೆಯನ್ನು ಹೆಸರಾಂತ ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಪಡೆಯಲು ಕೆ.ಟಿ.ಪಿ.ಪಿ. ಕಾಯ್ದೆ 1999ರ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: 07.03.2025ರಂದು ಇ–ಟೆಂಡರ್ ಪ್ರಕಟಣೆಯನ್ನು ಪ್ರಕಟಿಸಲಾಗಿದೆ. ಪೂರಕ ದಾಖಲೆಗಳೊಂದಿಗೆ ಅರ್ಜಿ/ಬಿಡ್ಡು ಸಲ್ಲಿಸಲು ಕೊನೆಯ ದಿನಾಂಕ: 17.03.2025.

ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನ್ನು https:// kppp.karnataka.gov.in , https://ctax.kar.nic.in ಸಂಪರ್ಕಿಸಿ, ದೂರವಾಣಿ ಸಂಖ್ಯೆ: 080–23470479.

ಸಹಿ/– ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿ.ಸ&ಸೇ.ತೆ.ಕ–01., ಬೆಂಗಳೂರು.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79, ಫ್ಯಾಕ್ಸ್: 080–22268667 ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ನಂ: ಕವಿನಿಆ–ಟಿಆರ್–2–2024–25/1613 ದಿನಾಂಕ: 07.03.2025

ಸೂಚನೆ

ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮುಕ್ತ ಅವಕಾಶಕ್ಕೆ ನಿಬಂಧನೆ ಮತ್ತು ಷರತ್ತುಗಳು) ವಿನಿಯಮಗಳು, 2025 ರ ಅಡಿಯಲ್ಲಿ ಮುಕ್ತ ಪ್ರವೇಶ ಯೋಜನೆಗಳಿಗೆ ಕರಡು ವೀಲಿಂಗ್ ಮತ್ತು ಬ್ಯಾಂಕಿಂಗ್ ಒಪ್ಪಂದದ ನಮೂನೆ ಹೊರಡಿಸಿರುವ ಕುರಿತು.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಮೇಲಿನ ವಿಷಯದ ಬಗ್ಗೆ ಕರಡು ವೀಲಿಂಗ್ ಮತ್ತು ಬ್ಯಾಂಕಿಂಗ್ ಒಪ್ಪಂದದ ನಮೂನೆಯನ್ನು ಹೊರಡಿಸಿದ್ದು, ಆಸಕ್ತರು ತಮ್ಮ ಲಿಖಿತ ಅನಿಸಿಕೆ / ಅಭಿಪ್ರಾಯ / ಆಕ್ಷೇಪಣೆ / ಸಲಹೆಗಳನ್ನು ದಿನಾಂಕ: 18.03.2025 ರೊಳಗೆ ಸಲ್ಲಿಸಲು ವಿನಂತಿಸಲಾಗಿದೆ.

ಕರಡು ವೀಲಿಂಗ್ ಮತ್ತು ಬ್ಯಾಂಕಿಂಗ್ ಒಪ್ಪಂದದ ನಮೂನೆಯನ್ನು ಆಯೋಗದ ಅಂತರ್ಜಾಲ ತಾಣ: https://kerc.karnataka.gov.in ರಲ್ಲಿ ಲಭ್ಯವಿರುತ್ತದೆ.

ಆಯೋಗವು ಈ ವಿಷಯದ ಬಗ್ಗೆ ಭಾಗೀದಾರರ ಅಭಿಪ್ರಾಯ ಪಡೆಯಲು ದಿನಾಂಕ: 19.03.2025ರ ಮಧ್ಯಾಹ್ನ 3.30 ಗಂಟೆಗೆ ಬುಧವಾರ ರಂದು, ಆಯೋಗದ ಕೋರ್ಟ್‌ಹಾಲ್‌ನ ಒಂದನೆಯ ಮಹಡಿ, ನಂ. 16ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052 ಇಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಿದೆ.

ಭಾಗೀದಾರರು/ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ / ಅಭಿಪ್ರಾಯ / ಸಲಹೆಗಳನ್ನು ಆಯೋಗದ ಮುಂದೆ ಸಲ್ಲಿಸಲು ಕೋರಲಾಗಿದೆ.

ಸಹಿ/– ಕಾರ್ಯದರ್ಶಿ

DIPR/CP/5566/2024-25 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ಅಲ್ಪಸಂಖ್ಯಾತರ ನಿರ್ದೇಶನಾಲಯ

ಮೌಲಾನಾ ಅಜಾದ್ ಭವನ, ನಂ.16ಸಿ, ಮಿಲ್ಲರ್ ಟ್ಯಾಂಕ್ ರಸ್ತೆ, ವಸಂತನಗರ, ಬೆಂಗಳೂರು–560052. ಸಹಾಯವಾಣಿ: 8277799990

Website: https://dom.karnataka.gov.in

e-mail : directordom@karnataka.gov.in

ಸಂ: ಅಸಂನಿ/ಶಿ.ವಿ/ವದಾ/ಸಿಆರ್–01/2024–25 ದಿನಾಂಕ: 10.03.2025

2025–26ನೇ ಶೈಕ್ಷಣಿಕ ವರ್ಷಕ್ಕೆ ಅಲ್ಪಸಂಖ್ಯಾತರ ವಸತಿ ಶಾಲೆಗಳ (MDRS/GMRS/Dr APJAKRS) 6ನೇ ತರಗತಿ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಕೆ ದಿನಾಂಕವನ್ನು ವಿಸ್ತರಿಸುವ ಕುರಿತು.

ಅಲ್ಪಸಂಖ್ಯಾತರ ವಸತಿ ಶಾಲೆಗಳಲ್ಲಿ (MDRS/GMRS/Dr APJAKRS) 6ನೇ ತರಗತಿ ಪ್ರವೇಶಕ್ಕಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ, ಕರ್ನಾಟಕದಾದ್ಯಂತ ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು/ ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು/ ಡಾ. ಎಪಿಜೆ ಅಬ್ದುಲ್‌ಕಲಾಂ ವಸತಿ ಶಾಲೆಗಳಲ್ಲಿ (CBSE) 2025–26ನೇ ಶೈಕ್ಷಣಿಕ ಸಾಲಿನಲ್ಲಿ 6ನೇ ತರಗತಿ ಉಚಿತ ಪ್ರವೇಶಕ್ಕಾಗಿ ಅರ್ಹ ವಿದ್ಯಾರ್ಥಿಗಳಿಂದ ಸೇವಾಸಿಂಧು ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದ್ದು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10.03.2025 ನಿಗದಿಪಡಿಸಲಾಗಿತ್ತು. ಪ್ರಸ್ತುತ ಸದರಿ ದಿನಾಂಕವನ್ನು ಈ ಕೆಳಕಂಡಂತೆ ವಿಸ್ತರಿಸಲಾಗಿದೆ.

ಪ್ರಸ್ತುತ ಅರ್ಜಿ ಸಲ್ಲಿಸಲು ವಿಸ್ತರಿಸಲಾದ ಕೊನೆಯ ದಿನಾಂಕ: 25.03.2025.

ಮೀಸಲಾತಿ ವಿವರ: 1) ಅಲ್ಪಸಂಖ್ಯಾತ ಸಮುದಾಯಕ್ಕೆ (ಮುಸ್ಲಿಂ, ಕ್ರಿಶ್ಚಿಯನ್ನರು, ಜೈನರು, ಬೌದ್ಧ, ಸಿಖ್ ಮತ್ತು ಪಾರ್ಸಿ) –75% 2) SC,ST ಮತ್ತು ಇತರೆ ಹಿಂದುಳಿದ ವರ್ಗಗಳಿಗೆ–25%.

ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಅಗತ್ಯವಿರುವ ದಾಖಲೆ: 1) SATS ಸಂಖ್ಯೆ, ಆಧಾರ್ ಸಂಖ್ಯೆ, ಚಾಲ್ತಿಯಲ್ಲಿರುವ ಮೊಬೈಲ್ ಸಂಖ್ಯೆ. 2) ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ವಿಶೇಷ ವರ್ಗದ ಪ್ರಮಾಣ ಪತ್ರ, ಪಾಸ್‌ಪೋರ್ಟ್ ಫೋಟೋ.

ಸೇವಾಸಿಂಧು ಪೋರ್ಟಲ್ ಲಿಂಕ್ https://sevasindhuservices.karnataka.gov.in/

ಮೂಲಕ ಆನ್‌ಲೈನ್ ಅರ್ಜಿಯನ್ನು ಅನ್ವಯಿಸುವ ಉಚಿತ ಸೇವೆಯನ್ನು ಬಳಸಲು ಆಸಕ್ತ ವಿದ್ಯಾರ್ಥಿಗಳು ಮತ್ತು ಪೋಷಕರು ಹತ್ತಿರದ ಜಿಲ್ಲಾ ಅಲ್ಪಸಂಖ್ಯಾತರ ಕಚೇರಿ ಅಥವಾ MDRS/Dr APJAKRS/GMRS ಶಾಲೆಗಳು ಅಥವಾ ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಿಗೆ ಭೇಟಿ ನೀಡಬಹುದು. ಹೆಚ್ಚಿನ ಮಾಹಿತಿ, ಅಧಿಸೂಚನೆ, ಪ್ರವೇಶ ಕೈಪಿಡಿ ಮತ್ತು ಇತರ ವಿವರಗಳಿಗಾಗಿ ದಯವಿಟ್ಟು ನಮ್ಮ ಇಲಾಖಾ ವೆಬ್‌ಸೈಟ್ https://dom.karnataka.gov.in ಗೆ ಭೇಟಿ ನೀಡಬಹುದಾಗಿದೆ.

ಸಹಿ/– ನಿರ್ದೇಶಕರು

ವಾಸಾಸಂಇ/ವಾಪ್ರ/5569/ಎಂಎಎ/24–25 ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ–2, (ಬಿಎಂಐಸಿಪಿ), ನಂ. 14/3, ಸಿ.ಎಫ್.ಸಿ. ಕಟ್ಟಡ, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು–560001.

ಸಂ: ಕೆಐಎಡಿಬಿ/ಎಲ್‌ಎಕ್ಯೂ/2414/2024–25 ದಿನಾಂಕ: 01.03.2025

ಸಾರ್ವಜನಿಕ ಪ್ರಕಟಣೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಲಿಂಗನಹಳ್ಳಿ ಗ್ರಾಮದಲ್ಲಿ ಒಟ್ಟು 518–27½ ಎಕರೆ ವಿಸ್ತೀರ್ಣದ ಜಮೀನನ್ನು ಕೆಐಎಡಿ ಕಾಯ್ದೆ 1966 ಕಲಂ 28(4)ರಂತೆ ಅಂತಿಮ ಅಧಿಸೂಚನೆ ಸಂಖ್ಯೆ: ಸಿಐ 140 ಎಸ್‌ಪಿಕ್ಯೂ 2024 ದಿನಾಂಕ 01.10.2024 ರಾಜ್ಯಪತ್ರ ಪ್ರಕಟಿತ ದಿನಾಂಕ 04.10.2024ರನ್ವಯ ಕೈಗಾರಿಕಾ ಪ್ರದೇಶದ ಸ್ಥಾಪನೆಗಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ಈ ಜಮೀನುಗಳಿಗೆ ಕೆಐಎಡಿ ಕಾಯ್ದೆ ಕಲಂ 29(2)ರನ್ವಯ ಪರಿಹಾರ ನಿಗದಿಪಡಿಸಲು ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 12.03.2025 ರಂದು ಬೆಳಗ್ಗೆ 11.30 ಘಂಟೆಗೆ ಈ ಕೆಳಕಂಡ ವಿಳಾಸದಲ್ಲಿ ಭೂದರ ಸಲಹಾ ಸಮಿತಿ ಸಭೆಯನ್ನು ಕರೆಯಲಾಗಿದೆ.

ಲೋಟಸ್ ಅರೇನಾ, ಎಲ್ ಅಂಡ್ ಟಿ ಫ್ಯಾಕ್ಟರಿ ಹತ್ತಿರ, ದೇವನಹಳ್ಳಿ – ದೊಡ್ಡಬಳ್ಳಾಪುರ ರಸ್ತೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ– 561203

ಆದುದರಿಂದ ದಿನಾಂಕ 12.03.2025 ರಂದು ನಡೆಯುವ ಭೂದರ ಸಲಹಾ ಸಮಿತಿ ಸಭೆಗೆ ಭೂಮಾಲೀಕರು ಮಾತ್ರ ಹಾಜರಾಗಲು ತಿಳಿಸಿದೆ.

ಸಹಿ/–ವಿಶೇಷ ಭೂಸ್ವಾಧೀನಾಧಿಕಾರಿ–2, ಕೆಐಎಡಿಬಿ(ಬಿಎಂಐಸಿಪಿ), ನೃಪತುಂಗ ರಸ್ತೆ, ಬೆಂಗಳೂರು.

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, (ಜಿಲ್ಲಾ ನಗರಾಭಿವೃದ್ಧಿ ಕೋಶ ಚಿತ್ರದುರ್ಗ–577501)

ನಂ. ಜಿನಕೋ(3)ಆರ್‌ಜಿಆರ್‌ಹೆಚ್‌ಸಿಎಲ್/ಸಿ.ಆರ್38/2024–25 ದಿ:06/03/2025

ಟೆಂಡರ್ ಪ್ರಕಟಣೆ

ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಕಚೇರಿಗೆ ಹೌಸಿಂಗ್ ಫಾರ್ ಆಲ್ ಯೋಜನೆಯಡಿಯಲ್ಲಿ 01–ಹೌಸಿಂಗ್ ಫೈನಾನ್ಸ್ ಸ್ಪೆಷಲಿಸ್ಟ್, 01 ಹೌಸಿಂಗ್ ಅಭಿಯಂತರರು ಮತ್ತು 01–ಸಾಮಾಜಿಕ ಅಭಿವೃದ್ಧಿ ತಜ್ಞರುಗಳ ಸಿಬ್ಬಂದಿ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಆಸಕ್ತ ಅರ್ಹ ಮಾನವ ಸಂಪನ್ಮೂಲ ಏಜೆನ್ಸಿಗಳಿಗೆ ಕೆ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕೆ.ಪಿ.ಪಿ ಪೋರ್ಟಲ್ ಇಂಡೆಂಟ್ ನಂಬರ್:– DMA/2024-25/SE4771

ಮಾನವ ಸಂಪನ್ಮೂಲ ಸೇವೆ:– 01–ಹೌಸಿಂಗ್ ಫೈನಾನ್ಸ್ ಸ್ಪೆಷಲಿಸ್ಟ್, 01 ಹೌಸಿಂಗ್ ಅಭಿಯಂತರರು ಮತ್ತು 01–ಸಾಮಾಜಿಕ ಅಭಿವೃದ್ಧಿ ತಜ್ಞರು. ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):– 15.00 ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):–37,500.00

ಗುತ್ತಿಗೆ ಅವಧಿ:– ಕಾರ್ಯಾದೇಶ ಕೊಟ್ಟ ದಿನಾಂಕದಿಂದ 1 ವರ್ಷ

ಟೆಂಡರ್ ವೇಳಾಪಟ್ಟಿ :– (1) ಪ್ರಶ್ನೆ / ಮಾಹಿತಿಗಾಗಿ ಸಲ್ಲಿಸುವ ಕೊನೆಯ ದಿನಾಂಕ 14–03–2025 15.00 ಸಮಯ (2) ಟೆಂಡರ್ ದಾಖಲೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 20–03–2025 17.00 ಸಮಯ (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ 21–03–2025 17.30 ಸಮಯ (4) ಹಣಕಾಸು ಬಿಡ್ ತೆರೆಯುವ ದಿನಾಂಕ ತಾಂತ್ರಿಕ ಬಿಡ್ ಅನುಮೋದನೆ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.

ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿ, ಟೆಂಡರ್ ದಾಖಲೆಗಳು ಮತ್ತು ಇತರೆ ಸೂಚನೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ (http://www.kppp.karnataka.gov.in). ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು ಹಾಗೂ ಠೇವಣಿ ಮತ್ತು ಟೆಂಡರ್ ಫೀ ಗಳನ್ನು ಆನ್‌ಲೈನ್‌ನಲ್ಲಿ (http://www.kppp.karnataka.gov.in). ಪಾವತಿಸತಕ್ಕದ್ದು.

DIPR/CTA/KSMCA/ 678/2024-25 ಸಹಿ/– ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಯಲಹಂಕ ವಿಭಾಗ, ಬೆಂಗಳೂರು–560064

No. BBMP/EE/YNK-D/KPPP/16/2024-25 Date: 10.03.2025

ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ) (ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ)

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) ದ್ವಿ ಲಕೋಟೆ ಪದ್ಧತಿ

1. ಕಾರ್ಯಪಾಲಕ ಅಭಿಯಂತರರವರು, ಯಲಹಂಕ ವಿಭಾಗ, ಇವರು ಬಿಬಿಎಂಪಿ ಮುಖ್ಯ ಆಯುಕ್ತರ ಪರವಾಗಿ, ಅರ್ಹ ಗುತ್ತಿಗೆದಾರರಿಂದ ಕೆಳಗಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸುತ್ತಾರೆ. ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು (viz https://kppp.karnataka.gov.in) ಕಾಮಗಾರಿಗೆ ಅರ್ಹತೆ ಪಡೆಯಲು ಟೆಂಡರ್‌ದಾರರು ಷರತ್ತು 3 ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತೆಯ ಮಾನದಂಡಗಳನ್ನು ಗಮನಿಸಲು ಸೂಚಿಸಲಾಗಿದೆ. (ಕೆಡಬ್ಲ್ಯೂ 04, ಕೆಡಬ್ಲ್ಯೂ 03, ಕೆಡಬ್ಲ್ಯೂ 02. 2. ಟೆಂಡರ್ ಡಾಕ್ಯುಮೆಂಟ್‌ಗಳನ್ನು ಆನ್‌ಲೈನ್ '–ಪ್ರೋಕ್ಯೂರ್‌ಮೆಂಟ್ ಮೂಲಕ ದಿನಾಂಕ 24.03.2025, ಸಂಜೆ 4.00 ಗಂಟೆಯೊಳಗೆ ಭರಿಸಬೇಕು ಮತ್ತು ಕೆಪಿಪಿ ಪೋರ್ಟಲ್ ಮಾರ್ಗಸೂಚಿಗಳಂತೆ ಟೆಂಡರ್‌ನ್ನು ತೆರೆಯಲಾಗುವುದು. 3. ಇತರೆ ವಿವರಗಳನ್ನು ಟೆಂಡರ್ ಡಾಕ್ಯುಮೆಂಟ್‌ನಲ್ಲಿ ವೀಕ್ಷಿಸಬಹುದು.

ಕ್ರ. ಸಂ.	ಕಾಮಗಾರಿಗಳ ಹೆಸರು/ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)/ ಇಎಂಡಿ (ರೂ. ಲಕ್ಷಗಳಲ್ಲಿ)/ವರ್ಗ
1	ಕೆಂಪೇಗೌಡ ವಾರ್ಡ್ ನಂ. 01 ರ ಮಾರುತಿನಗರ 3ನೆ ಮುಖ್ಯ , 6ನೆ, 7ನೆ ಮತ್ತು 8ನೆ ಅಡ್ಡ ರಸ್ತೆಗಳ ಮರು ಡಾಂಬರೀಕರಣ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 50.00, ಇಎಂಡಿ (ರೂ. ಲಕ್ಷಗಳಲ್ಲಿ) : 0.50. ವರ್ಗ : ಪರಿಶಿಷ್ಟ ಪಂಗಡ.
2	ಕೆಂಪೇಗೌಡ ವಾರ್ಡ್ ನಂ. 01 ರ ಧರ್ಮರಾಯ ದೇವಸ್ಥಾನ ರಸ್ತೆ ಮತ್ತು ನಾಗರೇಶ್ವರ ದೇವಸ್ಥಾನ ರಸ್ತೆಗಳ ಮರು ಡಾಂಬರೀಕರಣ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 50.00, ಇಎಂಡಿ (ರೂ. ಲಕ್ಷಗಳಲ್ಲಿ) : 1.00. ವರ್ಗ : ಇತರರು.
3	ಕೆಂಪೇಗೌಡ ವಾರ್ಡ್ ನಂ. 01 ರ ಮುನಿತಿಮ್ಮಯ್ಯ ಲೇಔಟ್, ಕೊಂಡಪ್ಪ ಗಾರ್ಡನ್ಸ್ ಮುಖ್ಯ ರಸ್ತೆ ಮತ್ತು ಅಡ್ಡರಸ್ತೆಗಳ ಮರು ಡಾಂಬರೀಕರಣ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 50.00, ಇಎಂಡಿ (ರೂ. ಲಕ್ಷಗಳಲ್ಲಿ) : 0.50. ವರ್ಗ : ಪರಿಶಿಷ್ಟ ಜಾತಿ.
4	ಕೆಂಪೇಗೌಡ ವಾರ್ಡ್ ನಂ. 01 ರ ಮಾರುತಿನಗರ 2ನೆ ಮುಖ್ಯ , 10ನೆ, 11ನೆ ಮತ್ತು 12ನೆ ಅಡ್ಡ ರಸ್ತೆಗಳು ಮತ್ತು ಆಲ್ಫಾ ಸ್ಕೂಲ್ ರಸ್ತೆಗಳ ಮರು ಡಾಂಬರೀಕರಣ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 50.00, ಇಎಂಡಿ (ರೂ. ಗಳಲ್ಲಿ) : 1.00. ವರ್ಗ : ಇತರರು.
5	ಕೆಂಪೇಗೌಡ ವಾರ್ಡ್ ನಂ. 01 ರ ಸುರಭಿ ಲೇಔಟ್ 2ನೆ ಅಡ್ಡ ರಸ್ತೆಗಳ ಮರು ಡಾಂಬರೀಕರಣ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 40.00, ಇಎಂಡಿ (ರೂ. ಲಕ್ಷಗಳಲ್ಲಿ) : 0.40. ವರ್ಗ : ಪರಿಶಿಷ್ಟ ಜಾತಿ.
6	ಚೌಡೇಶ್ವರಿ ವಾರ್ಡ್ ನಂ. 02 ರ ಮಾನವರ್ತಿ ತೋಟ ಮುಖ್ಯ ಮತ್ತು ಅಡ್ಡ ರಸ್ತೆಗಳ ಮರು ಡಾಂಬರೀಕರಣ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 60.00, ಇಎಂಡಿ (ರೂ. ಲಕ್ಷಗಳಲ್ಲಿ) : 1.20. ವರ್ಗ : ಇತರರು.
7	ಅತ್ತೂರು ವಾರ್ಡ್ ನಂ. 03 ರ ಹರಿರಾಜ ಲೇಔಟ್ ಮತ್ತು ಕಾವೇರಿ ಲೇಔಟ್ ನಲ್ಲಿ ಚರಂಡಿಗಳ ನಿರ್ಮಾಣ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 80.00, ಇಎಂಡಿ (ರೂ. ಲಕ್ಷಗಳಲ್ಲಿ) : 1.60. ವರ್ಗ : ಇತರರು.
8	ಅತ್ತೂರು ವಾರ್ಡ್ ನಂ. 03 ರ ಲಕ್ಷ್ಮಣ್ ರೆಡ್ಡಿ ಲೇಔಟ್ ನ ರಸ್ತೆಗಳ ಮರು ಡಾಂಬರೀಕರಣ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 60.00, ಇಎಂಡಿ (ರೂ. ಲಕ್ಷಗಳಲ್ಲಿ) : 1.20. ವರ್ಗ : CAT-II(A).
9	ಯಲಹಂಕ ಉಪನಗರ ವಾರ್ಡ್ ನಂ. 04 ರ ನಂಜುಂಡಪ್ಪ ಬಡಾವಣೆಯಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 60.00, ಇಎಂಡಿ (ರೂ. ಲಕ್ಷಗಳಲ್ಲಿ) : 1.20. ವರ್ಗ : CAT-I.
10	ಯಲಹಂಕ ವಿಭಾಗದ ವಾರ್ಡ್ ನಂ. 02, 03 ಮತ್ತು 04 ರಲ್ಲಿ ಉದ್ಯಾನವನಗಳ ಸುಧಾರಣೆ ಮತ್ತು ಅಭಿವೃದ್ಧಿ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 300.00, ಇಎಂಡಿ (ರೂ. ಲಕ್ಷಗಳಲ್ಲಿ) : 4.5. ವರ್ಗ : ಇತರರು.

ವೇಳಾಪಟ್ಟಿ:

1. ಪ್ರೀ ಬಿಡ್ ಮೀಟಿಂಗ್ ದಿನಾಂಕ : 17.03.2025 ಸಂಜೆ 4.00 ಗಂಟೆಗೆ ಸ್ಥಳ : ಕಾರ್ಯಪಾಲಕ ಅಭಿಯಂತರರು (ಯಲಹಂಕ ವಿಭಾಗ).
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 25.03.2025 ಸಂಜೆ 4.00 ಗಂಟೆಯ ನಂತರ.

ಸಹಿ/– ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ, ಬಿಬಿಎಂಪಿ

ಕ್ಷೇಮ ಕುಶಲ

ಬೇಸಿಗೆಯ ಬೇಗೆಗೆ ಆಹಾರದ ಬಗೆ

ಡಾ. ವೀಣಾ ಎನ್.ಸುಳ್ಯ

ಋತುಮಾನ ಬದಲಾದ ಹಾಗೆ ವಾತಾವರಣದಲ್ಲಿ ಉಷ್ಣತೆ, ತೇವಾಂಶಗಳು ಬದಲಾಗುತ್ತವೆ. ಚಳಿಗಾಲದಲ್ಲಿ ದೇಹವನ್ನು ಬೆಚ್ಚಗಿಡಬೇಕಾದರೆ ಹೆಚ್ಚಿನ ಶಕ್ತಿಯ ಉತ್ಪಾದನೆ ಆಗಬೇಕು. ಅದಕ್ಕಾಗಿ ಹೆಚ್ಚಿನ ಆಹಾರವನ್ನು ದೇಹ ಬಯಸುತ್ತದೆ. ಬೇಸಿಗೆಯಲ್ಲಿ, ದೇಹ ಇದಕ್ಕೆ ಹೊಂದಿಕೊಳ್ಳಲು ಒದ್ದಾಡುತ್ತದೆ. ಇತರ ಪ್ರಾಣಿಗಳಂತೆ ಮನುಷ್ಯ ತಂಪು ಇರುವ ಜಾಗಕ್ಕೆ ಹೋಗಲಾರ; ತಾನಿರುವ ಸ್ಥಳವನ್ನೇ ತಂಪಾಗಿರುವಂತೆ ನೋಡಿಕೊಳ್ಳಬೇಕು. ಆಹಾರದಲ್ಲಿ ಹೆಚ್ಚಿನ ಶಕ್ತಿಯ ಉತ್ಪತ್ತಿ ಆಗಬೇಕಾದ ಅವಶ್ಯಕತೆಯೂ ಇರುವುದಿಲ್ಲ. ಹಾಗೆಂದು ಆಹಾರವನ್ನು ಸೇವಿಸದೆ ಇರಲಾರೆವು. ಜೀರ್ಣಕ್ರಿಯೆಯಲ್ಲಿ ದೇಹದ ನೀರಿನ ಅಂಶದ ಸಮತೋಲನವನ್ನು ಕಾಪಾಡಿಕೊಳ್ಳುವಲ್ಲಿ ಹೆಚ್ಚು ಶ್ರಮವನ್ನು ವಹಿಸಬೇಕಾಗುತ್ತದೆ. ದೇಹದ ಒಳಗಡೆ ತಂಪಾಗಿರಲು ಮುಂಜಾಗರೂಕತೆಯನ್ನು ವಹಿಸಬೇಕಾಗುತ್ತದೆ. ಅದೂ ನಾವು ಸೇವಿಸುವ ಆಹಾರದ ಮೂಲಕವೇ.

ದೇಹದ ಉಷ್ಣತೆಯನ್ನು ಕಾಪಾಡಲು, ಬೆವರು ಉತ್ಪತ್ತಿ ಆಗುವ ಮೂಲಕ ಶರೀರದಿಂದ ನೀರಿನ ಮತ್ತು ಲವಣದ ಅಂಶ ಹೆಚ್ಚಾಗಿ ಹೊರ ಹೋಗುತ್ತದೆ. ಹೀಗೆ ಶರೀರದಿಂದ ನೀರಿನ ಅಂಶ ಹೊರಹೋದಾಗ ಬಾಯಾರಿಕೆ ಉಂಟಾಗುತ್ತದೆ. ಅದರ ಉಪಶಮನಕ್ಕಾಗಿ ಸಿಕ್ಕಸಿಕ್ಕಲ್ಲಿ ನೀರನ್ನು ಕುಡಿದು, ಬ್ಯಾಕ್ಟೀರಿಯಾ, ವೈರಾಣುಗಳಿಂದ ಭೇದಿ, ಅಮೀಬಿಯಾಸಿಸ್ ಕಾಯಿಲೆಗಳಿಗೆ ಒಳಗಾಗಬಹುದು. ಹಾಗೆಂದು ಶರೀರವನ್ನು ತಂಪುಗೊಳಿಸುವ ಉದ್ದೇಶದಿಂದ ಕುಡಿದ ತಂಪು ಪಾನೀಯಗಳು, ಗಂಟಲಿನಲ್ಲಿನ ಸಹಜ ಉಷ್ಣತೆಗಿಂತ ಕಡಿಮೆಯಾದಾಗ ನಿಶ್ಚಲ ಸ್ಥಿತಿಯಲ್ಲಿದ್ದ ಬ್ಯಾಕ್ಟೀರಿಯಾಗಳು ತಕ್ಷಣ ಸಾವಿರಾರು ಸಂಖ್ಯೆಯಲ್ಲಿ ಬೆಳೆದು ಗಂಟಲಿನ ನಂಜಿಗೆ ಕಾರಣವಾಗಿ ಗಂಟಲುನೋವು ಕಾಡಬಹುದು.

ಬೆವರಿನ ಮೂಲಕ ಲವಣ ಮತ್ತು ನೀರಿನ ಅಂಶ ಹೊರಹೋಗುತ್ತವೆ. ಇದರಿಂದ ಲವಣದ ಸಾಂದ್ರತೆ ದೇಹದಲ್ಲಿ ಕಡಿಮೆಯಾಗಿ, ನರಗಳ/ ಮಾಂಸ ಖಂಡಗಳ ಕಾರ್ಯವೈಖರಿಗೆ ತೊಂದರೆ ಉಂಟಾಗಬಹುದು. ಸೋಡಿಯಂ 135 meq/Lಗಳಿಗಿಂತ ಕಡಿಮೆಯಾದಾಗ, ತಲೆಸುತ್ತು, ಗಲಿಬಿಲಿ, ವಾಂತಿ, ಮಾಂಸ ಖಂಡಗಳಲ್ಲಿ ನಿಶ್ಯಕ್ತಿಯು ಕಾಣಿಸಿಕೊಳ್ಳಬಹುದು.

ಬೇಸಿಗೆಯಲ್ಲಿ ಮೂಗಿನಿಂದ ರಕ್ತಸ್ರಾವ, ಕಣ್ಣುಗಳಲ್ಲಿ ಉರಿ, ತಲೆಸುತ್ತು, ಉರಿಮೂತ್ರ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ನಿರ್ದಿಷ್ಟ ಆಹಾರವನ್ನು ಸೇವಿಸುವುದರ ಮೂಲಕ ಈ ತೊಂದರೆಗಳಿಂದ ಪಾರಾಗಬಹುದು. ದೇಹದಲ್ಲಿ ಉಂಟುಮಾಡುವ ಪರಿಣಾಮಗಳನ್ನು ಗಮನಿಸಿ ಆಹಾರವನ್ನು ಮೂರು ಬಗೆಯಾಗಿ ವಿಂಗಡಿಸಲಾಗಿದೆ; ಸಾತ್ವಿಕ, ರಾಜಸಿಕ ಮತ್ತು ತಾಮಸಿಕ.

ಸಾತ್ವಿಕ ಆಹಾರ: ರಸಭರಿತವಾಗಿರುವ, ಸ್ವಲ್ಪ ಜಿಡ್ಡಿನಿಂದ ಕೂಡಿದ್ದು, ಬಹಳ ಕಾಲದವರೆಗೆ ಕೆಡದೆ ಸ್ಥಿರವಾಗಿ ಇರುವಂಥದ್ದು. ರಕ್ತ, ಮಾಂಸಗಳಲ್ಲಿ ಸುಲಭವಾಗಿ ಬೆರೆತುಕೊಳ್ಳುವಂಥದ್ದು . ಯಾವುದು ಹೃದಯಕ್ಕೆ ಬಲವನ್ನು ಕೊಡುತ್ತದೋ ಅದು ಸಾತ್ವಿಕ ಆಹಾರ. ಉದಾಹರಣೆಗೆ ತಾಜಾ ಹಣ್ಣುಗಳು, ತರಕಾರಿಗಳು, ಧಾನ್ಯಗಳು, ಬೀಜಗಳು, ಗಿಡಮೂಲಿಕೆಗಳು, ಸಸ್ಯಾಧಾರಿತ ತೈಲಗಳು.

ರಾಜಸಿಕ ಆಹಾರ: ಅತಿಖಾರ, ಕಟು ಉಪ್ಪಿನಿಂದ ಕೂಡಿರುವುದು, ಅತಿ ಬಿಸಿಯಾಗಿರುವುದು, ಉರಿಯನ್ನು ಉಂಟುಮಾಡುವಂಥದ್ದು. ಮೊಳಕೆ ಬರಿಸಿದ ಕಾಳುಗಳು, ಬೆಳ್ಳುಳ್ಳಿ, ಮೆಣಸು, ಕರಿಮೆಣಸು, ಹೆಚ್ಚು ಮಸಾಲೆಯುಕ್ತ ಮಾಂಸ.

ತಾಮಸಿಕ ಆಹಾರ: ತಯಾರಿಸಿ ಮೂರು ನಾಲ್ಕು ಗಂಟೆಗಳ ಕಾಲ ಕಳೆದ ಆಹಾರ, ಅರ್ಧ ಬೆಂದ, ರಸವನ್ನು ಇಂಗಿಸಿದ, ದುರ್ಗಂಧಯುಕ್ತವಾದ, ಹಳಸಿದ ಆಹಾರ. 'ಜಂಕ್‌ಫುಡ್' ಎಂದು ಕರೆಯುವ ಎಲ್ಲವೂ ಈ ಗುಂಪಿಗೆ ಸೇರುತ್ತದೆ. ಹಾಗೆಯೇ ಹಿಂದಿನ ದಿನವೇ ತಯಾರು ಮಾಡಿದ ಆಹಾರ, ತಂಗಳನ್ನ, ಹಳಸಿದ ಮತ್ತು ಅತಿಯಾದ ಮಸಾಲೆ ಬೆರೆಸಿದ ಮಾಂಸವೂ ಇದರ ವ್ಯಾಪ್ತಿಗೆ ಬರುತ್ತವೆ.

ಬೇಸಿಗೆ ತಾಪಮಾನದಲ್ಲಿ ಶರೀರದಲ್ಲಿ ಆಗುವ ಬದಲಾವಣೆಗಳಿಗೆ ಪ್ರತಿಯಾಗಿ, ಹೆಚ್ಚು ನೀರಿನ ಅಂಶವಿರುವ, ಸುಲಭವಾಗಿ ಜೀರ್ಣವಾಗುವ, ಕಡಿಮೆ ಕ್ಯಾಲೋರಿ ಒದಗಿಸುವ, ಖನಿಜಾಂಶ, ಪೋಷಕಾಂಶಗಳನ್ನು ಒದಗಿಸುವ, ಹೆಚ್ಚು ಸಿಹಿ ಅಲ್ಲದ ಖಾರವಲ್ಲದ, ಮಸಾಲೆ ಇಲ್ಲದ ಆಹಾರಗಳನ್ನು ಸೇವಿಸಬೇಕು.

ದೇಹದ ಅಗತ್ಯವನ್ನು ಕಂಡುಕೊಂಡು ನೀರನ್ನು ಕುಡಿಯುವುದು, ಅವರವರ ವಯಸ್ಸಿಗೆ, ದೇಹದ ತೂಕಕ್ಕೆ ಅನುಸಾರ ನೀರನ್ನು ಸೇವಿಸುವುದು ಒಳ್ಳೆಯದು. ಕನಿಷ್ಠ 2ರಿಂದ 3 ಲೀಟರ್ ಕುಡಿಯಬೇಕು. ಮೂತ್ರ ವಿಸರ್ಜಿಸುವಾಗ ಅದರ ಬಣ್ಣವನ್ನು ಗಮನಿಸಿ. ಬಣ್ಣರಹಿತವಾಗಿ, ತೆಳು ಹಳದಿ ಬಣ್ಣವಿದ್ದರೆ ಸಾಕಷ್ಟು ನೀರು ಕುಡಿಯುತ್ತಿದ್ದೀರಿ ಎಂದು ಅರ್ಥ.

ಎಳನೀರಿನಲ್ಲಿ ಜೀವಸತ್ವ, ಖನಿಜ, ಪೋಷಕಾಂಶಗಳಿವೆ. ಇದನ್ನು ಧಾರಾಳವಾಗಿ ಸೇವಿಸಬಹುದು.

ಹಣ್ಣುಗಳು: ನಿಂಬೆ, ಕಿತ್ತಳೆ, ಮೂಸಂಬಿ, ನೆಲ್ಲಿಕಾಯಿ, ಅನನಾಸು, ಕಲ್ಲಂಗಡಿ, ಬಾಳೆಹಣ್ಣು, ಪೇರಳೆ, ಪಪ್ಪಾಯ ಇವುಗಳನ್ನು ಸೇವಿಸುವುದು ಒಳ್ಳೆಯದು. ಇವುಗಳಲ್ಲಿ ವಿಟಮಿನ್ ಸಿ ಮತ್ತು ಬಿ ಕಾಂಪ್ಲೆಕ್ಸ್ ಇರುತ್ತವೆ. ಜತೆಗೆ ಇವು ರಸಭರಿತವಾಗಿರುವುದರಿಂದ ಶರೀರಕ್ಕೆ ನೀರಿನ ಅಂಶವನ್ನು ಕೊಡುತ್ತವೆ.

ತರಕಾರಿಗಳು: ಎಳೆಸೌತೆಕಾಯಿ, ಸೌತೆಕಾಯಿ, ಸೋರೆಕಾಯಿ, ಕುಂಬಳಕಾಯಿ, ಹಸಿರುಎಲೆ ತರಕಾರಿಗಳು, ಪುದೀನಾಗಳಲ್ಲಿ ಕಡಿಮೆ ಕ್ಯಾಲೋರಿಯ ಜತೆಗೆ ಹೇರಳ ನೀರಿನ ಅಂಶ ಹಾಗೂ ನಾರಿನ ಅಂಶವಿದೆ. ಇವುಗಳ ಸೇವನೆಯಿಂದ ಹೊಟ್ಟೆ ತುಂಬಿದಂಥ ತೃಪ್ತಿಯೂ ಸಿಗುತ್ತದೆ.

ತರಕಾರಿಗಳ ಜತೆಗೆ ಈರುಳ್ಳಿಯನ್ನೂ ಬಳಸಿದ ಸಲಾಡ್ ಸೇವನೆಯಿಂದ ಜೀರ್ಣಕ್ರಿಯೆಗೂ ಸಹಕಾರಿ. ಮೊಸರು–ಮಜ್ಜಿಗೆಗಳ ಸೇವನೆಯಿಂದ ಜೀರ್ಣಕ್ರಿಯೆ ಚೆನ್ನಾಗಿ ಆಗುತ್ತದೆ; ಜತೆಗೆ ದೇಹವನ್ನೂ ತಂಪಾಗಿಡುತ್ತವೆ.

ಏನು ತಿನ್ನಬಾರದು?

ಆಗಾಗ ಕಾಫಿ, ಟೀಗಳ ಸೇವನೆ ಬೇಡ. ಹೀಗೆಯೆ ಎಣ್ಣೆಯಲ್ಲಿ ಕರಿದ ತಿಂಡಿಗಳು, ಸಂಸ್ಕರಿಸಿದ ತಿಂಡಿಗಳು, ಸಕ್ಕರೆ ಪಾನೀಯಗಳು, ಮಸಾಲೆಯುಕ್ತ ಆಹಾರ, ಆಲೂಗಡ್ಡೆ, ಬ್ರೆಡ್ ಇವುಗಳ ಸೇವನೆಗೆ ಮಿತಿಯಿರಲಿ. ಜಂಕ್‌ಫುಡ್ ಬೇಡವೇ ಬೇಡ.

ಬೇಸಿಗೆಯಲ್ಲಿ ಆಹಾರ ಪದಾರ್ಥಗಳು ಬೇಗ ಕೆಡುತ್ತವೆ. ಹೀಗಾಗಿ ಆಹಾರವನ್ನು ಸೇವಿಸುವ ಮುನ್ನ ಪರೀಕ್ಷಿಸಿಕೊಳ್ಳಿ. ಯಾವಾಗಲೂ ಕೈಗಳನ್ನು ಸರಿಯಾಗಿ ತೊಳೆದುಕೊಂಡು ಆಹಾರವನ್ನು ಸೇವಿಸಬೇಕು. ಸರಿಯಾದ ತಾಪಮಾನದಲ್ಲಿ ಆಹಾರವನ್ನು ಸಂಗ್ರಹಿಸಿಡಬೇಕು. ಅವಧಿಗೂ ಮೀರಿದ ಆಹಾರವನ್ನು ಯಾವುದೇ ಕಾರಣಕ್ಕೂ ಸೇವಿಸಬೇಡಿ. ❖

ವೈಶಾಖದ ಬಾಧೆಗಳು

ಡಾ. ವಿಜಯಲಕ್ಷ್ಮಿ ಪಿ.

ಬೇಸಿಗೆ ಬಂತೆಂದರೆ ರಜೆಯ ಮಜಾ ಒಂದು ಕಡೆಯಾದರೆ, ಪರೀಕ್ಷೆಯ ಚಿಂತೆ, ರೋಗ-ರುಜಿನಗಳ ಭಯಗಳು ಮತ್ತೊಂದು ಕಡೆ. ವಾಂತಿ, ಭೇದಿ, ಅಲರ್ಜಿಗಳ ಕಾಟವಂತೂ ಹೇಳತೀರದು. ವೈಶಾಖದಲ್ಲಂತೂ 'ವೈ-ಶಾಖ?' ಎಂದು ಕೇಳುವಷ್ಟು ಬಿಸಿಲೇರುತ್ತದೆ. ಶಿಶಿರದ ಚಳಿಯಿಂದ ಗಟ್ಟಿಯಾದ ಹಿಮವು ಬೇಸಿಗೆಯಲ್ಲಿ ಕರಗಿ ನೀರಾಗುವಂತೆ, ಶರೀರದಲ್ಲಿಯೂ ಶಿಶಿರದಲ್ಲಿ ಸಂಗ್ರಹಗೊಂಡ ಕಫವು ವಸಂತದಲ್ಲಿ ಕರಗಿ, ಕಫವೃದ್ಧಿಯಿಂದ ಅನೇಕ ರೋಗಗಳು ಬರಬಹುದು ಎನ್ನುತ್ತದೆ, ಆಯುರ್ವೇದ.

ಕಫದಿಂದ ಕೆಮ್ಮು, ದಮ್ಮು, ನೆಗಡಿ, ಚರ್ಮದ ತುರಿಕೆ, ವಾಂತಿ, ಭೇದಿ, ಕೆಲವರಿಗೆ ಮಲಬದ್ಧತೆ, ವಿಪರೀತ ಬಾಯಾರಿಕೆ, ಸುಸ್ತು, ತಲೆಸುತ್ತುವುದು, ಉರಿಶೀತ, ಶೀತಪಿತ್ತ, ಮಕ್ಕಳಲ್ಲಿ ಮಸೂರಿಕಾ (ಆಡುಭಾಷೆಯಲ್ಲಿ 'ಅಮ್ಮ') ಬರಬಹುದು. ಕರಗಿದ ಕಫದ ಅಂಶವು ದೇಹದ ಯಾವ ಭಾಗವನ್ನು ಗಾಸಿಗೊಳಿಸುತ್ತದೆಯೋ ಆ ಭಾಗದಲ್ಲಿ ರೋಗಗಳು ಉತ್ಪತ್ತಿಯಾಗುತ್ತವೆ. ಹೀಗಾಗದಂತೆ ತಡೆಗಟ್ಟಲು ಆಯುರ್ವೇದವು ಪಂಚಕರ್ಮೋಕ್ತ ವಮನ ಚಿಕಿತ್ಸೆಯನ್ನು ಮಾಡಿಸಿಕೊಳ್ಳಲು ಸೂಚಿಸುತ್ತದೆ. ಚಳಿಗಾಲದಲ್ಲಿ ಅತಿಯಾಗಿ ಕಫವು ದೇಹದಲ್ಲಿ ಸೇರದಂತೆ ಋತುವಿಗೆ ಅನುಗುಣವಾದ ಆಹಾರವನ್ನು ಸೇವಿಸುವುದರಿಂದ ಕಫಸಂಬಂಧಿ ರೋಗಗಳು ಬೇಸಿಗೆಯಲ್ಲಿ ಬಾಧೆ ಕೊಡದಂತೆ ತಡೆಗಟ್ಟಬಹುದು.

ಬೇಸಿಗೆಯಲ್ಲಿ ರೋಗಗಳು ಬಾರದಂತೆ ತಡೆಯಲು ಚಳಿಗಾಲದಲ್ಲಿಯೇ ಬೆಳಿಗ್ಗೆ ಸೂರ್ಯೋದಯಕ್ಕಿಂತ ಮೊದಲೇ ಎದ್ದು, ಮೈ ಬೆವರುವಷ್ಟು ಹೊತ್ತು ಮನೆಯಲ್ಲಿಯೇ ವ್ಯಾಯಾಮವನ್ನು ಮಾಡಬೇಕು. ಇದರಿಂದ ಚಳಿಗಾಲ ಮತ್ತು ಬೇಸಿಗೆಯಲ್ಲಿ ಬರುವ ನೆಗಡಿ, ತಲೆನೋವಿನಿಂದ ಮುಕ್ತಿಯನ್ನು ಪಡೆಯಬಹುದು. ನೆಗಡಿಯ ನಿವಾರಣೆಗೆ ಮತ್ತೊಂದು ಸುಲಭ ಉಪಾಯವೆಂದರೆ ಬಜೆಯನ್ನು ಅಲ್ಪಪ್ರಮಾಣದಲ್ಲಿ ಹಾಲಿನೊಡನೆ ಕುದಿಸಿ ಕುಡಿಯುವುದು.

ಚಳಿಗಾಲದಲ್ಲಿ ಹಾಲಿನ ಉತ್ಪನ್ನಗಳಾದ ಪನ್ನೀರು, ಚೀಸು, ಗಿಣ್ಣು, ಗಿಣ್ಣಿನ ಹಾಲು, ಹಸಿಹಾಲಿನ ಅತಿಯಾದ ಸೇವನೆ ಹಾಗೂ ವ್ಯಾಯಾಮ ಮಾಡದಿದ್ದರೆ ದೇಹದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಮುಂದೆ ಬೇಸಿಗೆಯಲ್ಲಿ ಕಫ ಕರಗಿದಾಗ ಅಜೀರ್ಣ, ಅತಿಸಾರ, ವಾಂತಿಗೆ ಕಾರಣವಾಗುವ ರೋಗಾಣುಗಳು ಶರೀರಕ್ಕೆ ತೊಂದರೆ ಕೊಡುತ್ತವೆ. ಅರಳು, ಅರಳಿನ ಹಿಟ್ಟು, ದಾಳಿಂಬೆ, ಅಂಜೂರ, ಖರ್ಜೂರ ಸೇರಿಸಿ ಪಾನೀಯ ತಯಾರಿಸಿ ಕುಡಿಯುವುದು ಒಳ್ಳೆಯದು. ಜತೆಗೆ ಬಜೆಯ ಬೇರನ್ನು ಸುಟ್ಟು ಮಸಿ ಮಾಡಿ ಅದನ್ನು ಒಂದೊಂದು ಚಿಟಿಕೆಯಂತೆ ಆಗಾಗ ಸೇವಿಸುತ್ತಿದ್ದರೆ, ನೆಗಡಿ, ಕೆಮ್ಮು, ಸ್ವರ ಬೀಳುವ ಸಮಸ್ಯೆಗಳು ನಿವಾರಣೆಯಾಗುತ್ತವೆ. ವಾಂತಿ, ಭೇದಿಗಳಿಗಂತೂ ಇದು ರಾಮಬಾಣ.

ಬೇಸಿಗೆಯಲ್ಲಿ ದೇಹದಲ್ಲಿ ನೀರಿನ ಅಂಶ ಕಡಿಮೆಯಾಗುವುದರಿಂದ ಒಣಕೆಮ್ಮು, ದಮ್ಮು, ಮೈತುರಿಕೆ, ದದ್ದುಗಳು ಬರುತ್ತವೆ. ಅನೇಕ ಚರ್ಮರೋಗಗಳು ಉಲ್ಬಣವಾಗುತ್ತವೆ. ಕೆಲವೊಮ್ಮೆ ಉರಿಮೂತ್ರ, ಮಲಪ್ರವೃತ್ತಿ ಆದನಂತರ ಉರಿಯಾಗುವುದು, ಮೂಲವ್ಯಾಧಿ ಉಲ್ಬಣವಾಗುವುದು. ಸ್ತ್ರೀಯರಲ್ಲಿ ಅತಿ ರಕ್ತಸ್ರಾವ, ಮೂಗಿನಲ್ಲಿ ರಕ್ತ ಬರುವ ತೊಂದರೆಗಳು ಕಾಣಿಸಿಕೊಳ್ಳಬಹುದು. ನೀರಿನಂಶ ವರ್ಧಿಸುವ ಲಾವಂಚ, ಶ್ರೀಗಂಧವನ್ನು ಹಾಕಿ ಕುದಿಸಿದ ನೀರನ್ನು ಸೇವಿಸುವುದರಿಂದ ದೇಹವನ್ನು ತಂಪಾಗಿಡಬಹುದು.

ಚಳಿಯಲ್ಲಿ ಅತಿ ತಂಪಿನಿಂದಾಗಿ ಒಣಗಿದ ಮಣ್ಣು, ಬೇಸಿಗೆಯ ಬಿಸಿಲಿಗೆ ಮತ್ತೂ ಬಿರುಸಾಗಿ ದೂಳಿನ ಕಣಗಳು ಹೆಚ್ಚುತ್ತವೆ. ದೂಳಿನಿಂದಾಗಿ ಮೈತುರಿಕೆ, ಸೀನು, ದಮ್ಮು, ಕಣ್ಣುರಿ, ಕಣ್ಣು ಕೆಂಪಾಗುವುದು ಕಂಡುಬರುತ್ತವೆ. ಇವುಗಳನ್ನು ತಡೆಗಟ್ಟಲು ಕೊಬ್ಬರಿಎಣ್ಣೆ, ಎಳ್ಳೆಣ್ಣೆ, ತುಪ್ಪ ಇವುಗಳನ್ನು ಬೆರೆಸಿ, ನಿತ್ಯವೂ ಮೈಗೆ ಅಲ್ಪಪ್ರಮಾಣದಲ್ಲಿ ಹಚ್ಚಿ ಸ್ನಾನ ಮಾಡುವುದು ಒಳ್ಳೆಯದು. ಮೂಗಿನ ಹೊಳ್ಳೆಗಳ ಒಳಭಾಗಕ್ಕೆ ತುಪ್ಪ ಅಥವಾ ಬೆಣ್ಣೆಯನ್ನು ಸವರುವುದರಿಂದ ಅತಿಯಾಗಿ ಸೀನು ಬರುವುದನ್ನು ತಡೆಗಟ್ಟಬಹುದು. ಅರಿಶಿನ ಅಥವಾ ಬಜೆಯ ಬೇರನ್ನು ಹರಳೆಣ್ಣೆ ಅಥವಾ ತುಪ್ಪದಲ್ಲಿ ನೆನೆಸಿಟ್ಟು ಅದನ್ನು ಧೂಪದಂತೆ ಉಪಯೋಗಿಸುವುದರಿಂದ, ಮೈ ನವೆ, ಸೀನು ದಮ್ಮಿನಿಂದ ದೂರವಿರಬಹುದು. ಹೊಂಗೆ ಎಣ್ಣೆ ಅಥವಾ ಹೊಂಗೆ ಎಲೆಯನ್ನು ಅರೆದು ಮೈಗೆ ಹಚ್ಚಿ ಸ್ನಾನ ಮಾಡುವುದರಿಂದಲೂ ಚರ್ಮಸಂಬಂಧಿ ರೋಗಗಳನ್ನು ನಿವಾರಿಸಿಕೊಳ್ಳಬಹುದು.

ಮಸೂರಿಕಾ ಅಥವಾ 'ಅಮ್ಮ' ಎಂದು ಕರೆಯುವ ರೋಗವು ಮಕ್ಕಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಶಿವರಾತ್ರಿಯ ನಂತರ ಬಿಲ್ವಪತ್ರೆ ಹಾಕಿ ಕುದಿಸಿದ ನೀರನ್ನು ಸೇವಿಸುವುದು ಅಥವಾ ಅತ್ತಿ, ಅರಳಿ, ಬಸರಿ, ಮುಂತಾದ ಮರದ ಚಕ್ಕೆಗಳನ್ನು ಕುದಿಸಿ, ತಯಾರಿಸಿದ ಕಷಾಯದಿಂದ ಸ್ನಾನ ಮಾಡುವುದರಿಂದಲೂ ಇದನ್ನು ಬಾರದಂತೆ ತಡೆಗಟ್ಟಬಹುದು. ಈ ಎಲ್ಲ ಉಪಾಯಗಳು ರೋಗ ಬಾರದಂತೆ ತಡೆಗಟ್ಟಲು ಸಹಾಯ ಮಾಡುತ್ತವೆ

ಆದರೆ, ಒಮ್ಮೆ ರೋಗ ಕಾಣಿಸಿಕೊಂಡರೆ, ವೈದ್ಯರ ಸಲಹೆಯನ್ನು ಪಡೆಯುವುದು ಅತ್ಯವಶ್ಯಕ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

32) ಒಬ್ಬ ವ್ಯಕ್ತಿಯು 3 ಬ್ಯಾಟ್‌ಗಳು ಮತ್ತು 2 ಚೆಂಡುಗಳನ್ನು ರೂ. 960 ಪಾವತಿಸಿ ಕೊಂಡುಕೊಳ್ಳುತ್ತಾನೆ, ಒಂದು ಬ್ಯಾಟ್‌ನ ಬೆಲೆ ರೂ. 300 ಆದರೆ, ಒಂದು ಚೆಂಡಿನ ಬೆಲೆಯನ್ನು ಕಂಡುಹಿಡಿಯಿರಿ

ಉತ್ತರ:– ಬ್ಯಾಟ್‌ಗಳು x ಆಗಿರಲಿ, ಚೆಂಡುಗಳು y ಆಗಿರಲಿ

$$3x + 2y = 960$$
$$3 \times 300 + 2y = 960$$
$$900 + 2y = 960$$
$$2y = 960 - 900$$
$$2y = 60$$
$$y = \frac{60}{2}$$
$$\boxed{y = 30}$$

33) $P(A) = 80\%$ ಆದರೆ, 'A' ಅಲ್ಲದ ಘಟನೆಯ ಸಂಭವನೀಯತೆ $\frac{1}{5}$ ಎಂದು ತೋರಿಸಿ.

ಉತ್ತರ:–

$$P(A) + P(\bar{A}) = 1$$
$$80\% + P(\bar{A}) = 100\%$$
$$P(\bar{A}) = 100 - 80$$
$$P(\bar{A}) = 20\%$$
$$P(A) = \frac{1}{5}$$

34) $\frac{\sqrt{3}\sec A}{\operatorname{cosec} A} = 1$ ಆದರೆ, 'A' ಯ ಬೆಲೆಯನ್ನು ಕಂಡುಹಿಡಿಯಿರಿ.

ಉತ್ತರ:–

$$\frac{\sqrt{3}\sec A}{\operatorname{cosec} A} = 1$$
$$\frac{\frac{\sqrt{3}}{\cos A}}{\frac{1}{\sin A}} = 1$$
$$\frac{\sqrt{3} \times \sin A}{\cos A} = 1$$
$$\sqrt{3}\tan A = 1$$
$$\tan A = \frac{1}{\sqrt{3}}$$
$$\tan A = \tan 30^\circ$$
$$\boxed{A = 30^\circ}$$

35) $\sin 30^\circ . \cos 60^\circ + \cos 30^\circ . \sin 60^\circ = \sin 90^\circ$ ಎಂದು ಸಾಧಿಸಿ.

ಉತ್ತರ:–

$$\sin 30^\circ = \frac{1}{2},\ \cos 60^\circ = \frac{1}{2},\ \cos 30^\circ = \frac{\sqrt{3}}{2}$$
$$\sin 60^\circ = \frac{\sqrt{3}}{2}$$

L.H.S = $\sin 30^\circ \cos 60^\circ + \cos 30^\circ \sin 60^\circ$

$= \frac{1}{2} \times \frac{1}{2} + \frac{\sqrt{3}}{2} \times \frac{\sqrt{3}}{2}$

$= \frac{1}{4} + \frac{3}{4}$

$= 1$ R.H.S .... (1)

$1 = \sin 90^\circ$ ....(2)

(1) ಮತ್ತು (2) ರಿಂದ

$\sin 30^\circ \cos 60^\circ + \cos 30^\circ \sin 60^\circ = \sin 90^\circ$

36) (–1, 7) ಮತ್ತು (4. –3) ಬಿಂದುಗಳನ್ನು ಸೇರಿಸುವ ರೇಖಾಖಂಡವನ್ನು ಆಂತರಿಕವಾಗಿ 2:3 ಅನುಪಾತದಲ್ಲಿ ವಿಭಾಗಿಸುವ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.

ಉತ್ತರ:–

$(-1, 7)$ $(4, -3)$ $2:3$

(x_1, y_1) (x_2, y_2) $m_1 : m_2$

ರೇಖಾಖಂಡವನ್ನು ವಿಭಾಗಿಸುವ ಬಿಂದುಗಳ ನಿರ್ದೇಶಾಂಕಗಳು (x, y) ಆಗಿರಲಿ.

$$(x, y) = \left(\frac{m_1x_2 + m_2x_1}{m_1 + m_2}, \frac{m_1y_2 + m_2y_1}{m_1 + m_2}\right)$$
$$= \left(\frac{2\times(4) + 3(-1)}{2+3}, \frac{2\times(-3) + 3\times(7)}{2+3}\right)$$
$$= \left(\frac{8\ \ 3}{5}, \frac{-6+21}{5}\right)$$
$$= \left(\frac{5}{5}, \frac{15}{5}\right)$$
$$(x, y) = (1, 3)$$

37) ಕೆಳಗಿನ ದತ್ತಾಂಶಗಳಿಗೆ ಬಹುಲಕವನ್ನು ಕಂಡುಹಿಡಿಯಿರಿ

ಉತ್ತರ:–

ವರ್ಗಾಂತರ	ಆವೃತ್ತಿ
0 — 5	4
5 — 10	10
10 — 15	6
15 — 20	4
20 — 25	5

ಉತ್ತರ:–

ಆವೃತ್ತಿ ವಿತರಣಾ ಕೋಷ್ಟಕದಿಂದ

$f_1 = 10$ $f_0 = 4$ $f_2 = 6$ $h = 5$ $l = 5$

$$\text{ಬಹುಲಕ} = l + \left[\frac{f_1 - f_0}{2f_1 - f_0 - f_2}\right] \times h$$
$$= 5 + \left[\frac{10-4}{2\times10-4-6}\right] \times 5$$
$$= 5 + \left[\frac{6}{20-10}\right] \times 5$$
$$= 5 + \left[\frac{\overset{3}{\cancel{6}}}{\underset{2_1}{\cancel{10}}}\right] \times \cancel{5}$$
$$= 5 + 3$$
$$\boxed{\text{ಬಹುಲಕ} = 8}$$

38) 10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ ಎಷ್ಟು?

ಪರಿಹಾರ:– 10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ

12, 16, 20, 24...............248

$\Rightarrow a_2 - a_1 = 16 - 12 = 4$

$\Rightarrow a_3 - a_2 = 20 - 16 = 4$

$\Rightarrow a_4 - a_3 = 24 - 20 = 4$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = 4$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿವೆ.

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

PUC -CET PHYSICS

12) **Which of the following combinations should be selected for better turning of an LCR circuit used for communication?**

a) $R = 20\Omega$, $L = 1.5$ H, $C = 35\mu F$
b) $R = 25\Omega$, $L = 2.5$ H, $C = 45\mu F$
c) $R = 15\Omega$, $L = 3.5$ H, $C = 30\mu F$
d) $R = 25\Omega$, $L = 1.5$ H, $C = 45\mu F$

Ans:-C

13) **For a particle executing simple harmonic motion (SHM), at its mean position**

(A) Velocity is zero and acceleration is maximum
(B) Velocity is maximum and acceleration is zero
(C) Both velocity and acceleration are maximum
(D) Both velocity and acceleration are zero

Ans:- B

Expl:-

$$V = \omega\sqrt{A^2 - y^2}$$
$$a = -\omega^2 y$$

14) **An inductor of reactance 1Ω, and a resistor of 2Ω, are connected in series to the terminals of a 6 V (rms) a.c. source. The power dissipated in the circuit is**

a) 8 W b) 12 W
c) 14.4 W d) 18 W

Ans:-C

15) **A car moves from A to B with a speed of 30 kmph and from B to A with a speed of 20 kmph. What is the average speed of the car?**

(a) 50 kmph (b) 25 kmph
(c) 10 kmph (d) 24 kmph

Soln: (d): let S be distance between A and B.

Let t_1 be time taken by the car to move from A to B with speed v_1 and t_2 be time taken by the car to move from B to A with speed v_2. Then

$$t_1 = \frac{S}{v_1} \text{ and } t_2 = \frac{S}{v_2}$$

Average speed of the car

$$v_{av} = \frac{\text{Total distance travelled}}{\text{Total time taken}} = \frac{2S}{t_1 + t_2}$$
$$= \frac{2S}{\frac{S}{v_1} + \frac{S}{v_2}} = \frac{2v_1v_2}{v_1 + v_2}$$

Here, $v_1 = 30$ kmph, $v_2 = 20$ kmph

$$\therefore v_{av} = \frac{2 \times 30 \times 20}{30 + 20} = 24 \text{ kmph}$$

16) **A motor-cyclist moving towards a huge cliff with a speed of 18 kmh-1, blows a horn of source frequency 325 Hz. If the speed of the sound in air is 330 ms^{-1}, the number of beats heard by him is**

(A) 5 (B) 4
(C) 10 (D) 7

Ans:-A

Expln:-

$$\Delta f = f\left(\frac{V_s}{V - V_s}\right) (V_0 = V_s)$$
$$\Delta f = 325\left(\frac{5}{330 - 5}\right) = 5$$

17) **The output of a step-down transformer is measured to be 24 V when connected to a 12 watt light bulb. The value of the peak current is**

a) $1\sqrt{2}$ A b) $\sqrt{2}$ A
c) 2 A d) $2\sqrt{2}$ A

Ans:-a

18) **One requires 11 eV of energy to dissociate a carbon monoxide molecule into carbon and oxygen atoms. The minimum frequency of the appropriate electromagnetic radiation to achieve the dissociation lies in.**

a) visible region b) infrared region
c) ultraviolet region d) microwave region

Ans:C

19) A body has a charge of $-3.2\ \mu C$. The number of excess electrons it has is

Ans:-C

Expln:-

$$Q = ne$$
$$n = \frac{Q}{e} = \frac{3.2 \times 10^{-6}}{1.6 \times 10^{-19}}$$
$$n = 2 \times 10^{13}$$

20) **A linearly polarised electromagnetic wave given as $E = E_0 \hat{i} \cos(kz - \omega t)$ is incident normally on a perfectly reflecting infinite wall at z= a. Assuming that the material of the wall is optically inactive, the reflected wave will be given as-**

a) $E_r = -E_0 \hat{i} \cos(kz - \omega t)$
b) $E_r = E_0 \hat{i} \cos(kz + \omega t)$
c) $E_r = -E_0 \hat{i} \cos(kz + \omega t)$
d) $E_r = E_0 \hat{i} \sin(kz - \omega t)$

Ans : b

21) **Light with an energy flux of 20 W/cm^2 falls on a non-reflecting surface at normal incidence. If the surface has an area of 30 cm^2. The total momentum delivered (for complete absorption) during 30 minutes is**

a) 36×10^{-5} kg m/s b) 36×10^{-4} kg m/s
c) 108×10^{4} kg m/s d) 1.08×10^{7} kg m/s

Ans:- b

22) **A body starts from rest and moves with constant acceleration for *t* s. It travels a distance x_1 in first half time and x_2 in next half of time, then**

(a) $x_2 = 3x_1$ (b) $x_2 = x_1$
(c) $x_2 = 4x_1$ (d) $x_2 = 2x_1$

Soln: (a):

(Contd…….)

ಐಶ್ವರ್ಯಾ ಗೌಡ ಜೊತೆ ಮಾತುಕತೆಯ ಪೆನ್ ಡ್ರೈವ್ ವಿವರ ಹೈಕೋರ್ಟ್ ಪೀಠಕ್ಕೆ ಸಲ್ಲಿಕೆ

‘ವಿನಯ ಭವಿಷ್ಯ ಮುಗಿಸಲು 15 ಕೋಟಿ ಡೀಲ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಕಾರಣಿಯೊಬ್ಬರ ಹತ್ತಿರ ನೀನು ನನಗೆ ₹15 ಕೋಟಿ ಕೊಡಿಸಿದರೆ ನಾನು ಮಾಫಿ ಸಾಕ್ಷಿ ಆಗುತ್ತೇನೆ. ವಿನಯ ಕುಲಕರ್ಣಿಯ ರಾಜಕೀಯ ಭವಿಷ್ಯ ಮುಗಿಸಿ ಅವರನ್ನು ಕೊಲೆ ಕೇಸಿನಲ್ಲಿ ಸಿಕ್ಕಿ ಹಾಕಿಸುತ್ತೇನೆ. ಹೀಗೆಂದು ಬಸವರಾಜ ಮುತ್ತಗಿ, ಉದ್ಯಮಿ ಐಶ್ವರ್ಯಾ ಗೌಡ ಅವರಿಗೆ ಮಾತು ಕೊಟ್ಟಿದ್ದಾರೆ...’

ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಮೊದಲ ಆರೋಪಿ ಬಸವರಾಜ ಶಿವಪ್ಪ ಮುತ್ತಗಿಯನ್ನು ಮೂರನೇ ಬಾರಿಗೆ ಮಾಫಿ ಸಾಕ್ಷಿಯಾಗಿ ಪರಿಗಣಿಸಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತೀರ್ಮಾನಿಸಿದ ಆದೇಶವನ್ನು ಪ್ರಶ್ನಿಸಲಾದ ಅರ್ಜಿ ವಿಚಾರಣೆ ವೇಳೆ ವಿನಯ ಕುಲಕರ್ಣಿ ಪರ ಹಿರಿಯ ವಕೀಲರು ಮಂಡಿಸಿದ ವಾದಾಂಶವಿದು.

ಈ ಕುರಿತಂತೆ ವಿನಯ ಕುಲಕರ್ಣಿ, ದಿನೇಶ್, ಅಶ್ವತ್ಥ್ ಮತ್ತಿತರ ಆರೋಪಿಗಳು ಸಲ್ಲಿಸಿರುವ ರಿಟ್ ಮತ್ತು ಕ್ರಿಮಿನಲ್ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ವಿನಯ ಕುಲಕರ್ಣಿ ಪರ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲ ಸಿ.ವಿ.ನಾಗೇಶ್, ‘ನೀನು ನನಗೆ ರಾಜಕಾರಣಿಯೊಬ್ಬರ ಹತ್ತಿರ ₹15 ಕೋಟಿ ಕೊಡಿಸು. ಅವರಿಗೂ ಅನುಕೂಲ ಆಗುವಂತೆ ಮಾಫಿ ಸಾಕ್ಷಿಯಾಗಿ ವಿನಯ ಕುಲಕರ್ಣಿ ಅವರನ್ನು ಕೇಸಿನಲ್ಲಿ ಸಿಕ್ಕಿ ಹಾಕಿಸುತ್ತೇನೆ ಎಂದು ಬಸವರಾಜ ಮುತ್ತಗಿಯು, ಐಶ್ವರ್ಯಾ ಗೌಡ ಜೊತೆಗೆ ನಡೆಸಿರುವ ಮಾತುಕತೆಯ ಪೆನ್ ಡ್ರೈವ್ ನಮ್ಮ ಬಳಿ ಇದೆ’ ಎಂದು ಅದರ ವಿವರವನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ಇದನ್ನು ಅಲ್ಲಗಳೆದ ಮುತ್ತಗಿ ಪರ ವಕೀಲ ನಾಗೇಂದ್ರ ನಾಯಕ್, ‘ಉದ್ಯಮಿ ಐಶ್ವರ್ಯ ಗೌಡ ಅವರು ವಿನಯ ಕುಲಕರ್ಣಿಗೆ ₹40 ಕೋಟಿ ಕೊಡಬೇಕು. ಅದನ್ನು ವಸೂಲಿ ಮಾಡುವ ಕೆಲಸವನ್ನು ಬಸವರಾಜ ಮುತ್ತಗಿಗೆ ವಹಿಸಲಾಗಿತ್ತು. ಅದಕ್ಕೆ ಸಂಬಂಧಿಸಿದಂತೆ ಮಾತುಕತೆ ಆಗಿದೆಯೇ ಹೊರತು, ಮಾಫಿ ಸಾಕ್ಷಿ ಸಂಬಂಧ ಇಲ್ಲ. ಈ ಬಗ್ಗೆ ನಮ್ಮ ಬಳಿ ದಾಖಲೆ ಇದೆ. ಪೆನ್ ಡ್ರೈವ್ ಕೂಡ ಇದೆ’ ಎಂದು ಪ್ರತಿಪಾದಿಸಿದರು.

ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್, ಆರೋಪಿಗಳ ಪರ ಪದಾಂಕಿತ ಹಿರಿಯ ವಕೀಲರಾದ ಸಂದೇಶ್ ಜೆ.ಚೌಟ, ಎಂ.ಎಸ್. ಶ್ಯಾಮ್‌ಸುಂದರ್, ವಿನಯ ಕುಲಕರ್ಣಿ ಪರ ವಕಾಲತ್ತು ವಹಿಸಿರುವ ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್ ಮತ್ತು ದಿನೇಶ್ ಹಾಗೂ ಅಶ್ವತ್ಥ್ ಪರ ಜೆ.ಲಕ್ಷ್ಮಿಕಾಂತ ಇದ್ದರು. ಸುದೀರ್ಘ ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 11ಕ್ಕೆ ಮುಂದೂಡಿತು.

ಮುಡಾ ಪ್ರಕರಣ : ಮೇಲ್ಮನವಿ ಸಲ್ಲಿಸಿದ ಇ.ಡಿ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಹಗರಣದ ಆರೋಪಕ್ಕೆ ಸಂಬಂಧಿಸಿದಂತೆ ಮುಡಾ ಮಾಜಿ ಆಯುಕ್ತ ಡಿ.ಬಿ.ನಟೇಶ್ ಅರ್ಜಿಯನ್ನು ಪುರಸ್ಕರಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್ ವಿಭಾಗೀಯ ನ್ಯಾಯಪೀಠಕ್ಕೆ ಮೇಲ್ಮನವಿ ಸಲ್ಲಿಸಲಾಗಿದೆ.

ಈ ಕುರಿತಂತೆ ಇ.ಡಿ ಸಲ್ಲಿಸಿರುವ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ‘ಮೇಲ್ಮನವಿಯನ್ನು ವಿಚಾರಣೆಗೆ ಪರಿಗಣಿಸಲಾಗಿದ್ದು, ಪ್ರತಿವಾದಿಗಳು ಆಕ್ಷೇಪಣೆ ಸಲ್ಲಿಸಬೇಕು’ ಎಂದು ಆದೇಶಿಸಿದ ನ್ಯಾಯಪೀಠ, ವಿಚಾರಣೆಯನ್ನು ಏಪ್ರಿಲ್ 8ಕ್ಕೆ ಮುಂದೂಡಿತು.

ಭವಾನಿ ರೇವಣ್ಣ ಅರ್ಜಿ ಕಾಯ್ದಿರಿಸಿದ ಆದೇಶ

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಆರೋಪ ಪ್ರಕರಣದಲ್ಲಿ; ಸಂತ್ರಸ್ತೆಯೊಬ್ಬರ ಅಪಹರಣದ ಆರೋಪಿಯಾಗಿರುವ ಪ್ರಜ್ವಲ್ ತಾಯಿ ಭವಾನಿ ರೇವಣ್ಣ ಅವರ ನಿರೀಕ್ಷಣಾ ಜಾಮೀನು ಷರತ್ತು ಸಡಿಲಿಸಬೇಕು ಎಂಬ ಅರ್ಜಿ ವಿಚಾರಣೆ ಪೂರ್ಣಗೊಳಿಸಿರುವ ಹೈಕೋರ್ಟ್ ಆದೇಶ ಕಾಯ್ದಿರಿಸಿದೆ.

ಈ ಸಂಬಂಧ ಭವಾನಿ ರೇವಣ್ಣ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ಪೀಠದ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರು ಸೋಮವಾರ ನಡೆಸಿದರು. ‘ಮೈಸೂರು ಮತ್ತು ಹಾಸನ ಜಿಲ್ಲೆಗಳ ಪ್ರವೇಶ ನಿರ್ಬಂಧಿಸಿರುವ ನಿರೀಕ್ಷಣಾ ಜಾಮೀನಿನಲ್ಲಿನ ಷರತ್ತು ಸಡಿಲಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಪಿವಿಆರ್ ಸಿನಿಮಾಸ್‌ಗೆ 1 ಲಕ್ಷ ದಂಡ: ಹೈಕೋರ್ಟ್ ತಡೆ

ಬೆಂಗಳೂರು: ‘ಸರಿಯಾದ ಸಮಯಕ್ಕೆ ಚಿತ್ರ ಪ್ರದರ್ಶಿಸಲಿಲ್ಲ’ ಎಂದು ಆರೋಪಿಸಲಾದ ಪ್ರಕರಣದಲ್ಲಿ ಪಿವಿಆರ್ ಸಿನಿಮಾಸ್‌ಗೆ ₹1 ಲಕ್ಷ ದಂಡ ವಿಧಿಸಿದ್ದ ಬೆಂಗಳೂರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಆಯೋಗದ ಆದೇಶವನ್ನು ಪ್ರಶ್ನಿಸಿ ‘ಭಾರತೀಯ ಮಲ್ಟಿಪ್ಲೆಕ್ಸ್ ಅಸೋಸಿಯೇಷನ್’ನ ಅಧಿಕೃತ ಪ್ರತಿನಿಧಿ ಶಂತನು ಪೈ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

‘ಈ ಪ್ರಕರಣದಲ್ಲಿ ಆಯೋಗವು ಹೊರಡಿಸಿರುವ ಆದೇಶ ನ್ಯಾಯಸಮ್ಮತವಾಗಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದೆ’ ಎಂದು ಆದೇಶಿಸಿತು.

ಎಚ್‌ಡಿಕೆ ವಿರುದ್ಧ ಬಲವಂತದ ಕ್ರಮ ಬೇಡ: ಆದೇಶ ವಿಸ್ತರಣೆ

ಬೆಂಗಳೂರು: ‘ಲೋಕಾಯುಕ್ತ ಎಡಿಜಿಪಿ ಮತ್ತು ಎಸ್‌ಐಟಿ ಮುಖ್ಯಸ್ಥ ಎಂ.ಚಂದ್ರಶೇಖರ್ ದೂರು ಆಧರಿಸಿ ದಾಖಲಾಗಿರುವ ಎಫ್‌ಐಆರ್‌ಗೆ ಸಂಬಂಧಿಸಿದಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತಿತರರ ವಿರುದ್ಧ ಯಾವುದೇ ರೀತಿಯ ಬಲವಂತದ ಕ್ರಮ ಕೈಗೊಳ್ಳಬಾರದು’ ಎಂದು ನಿರ್ದೇಶಿಸಿ ಈ ಹಿಂದೆ ಹೊರಡಿಸಿದ್ದ ಮಧ್ಯಂತರ ಆದೇಶವನ್ನು ಇದೇ 18ರವರೆಗೆ ಹೈಕೋರ್ಟ್ ವಿಸ್ತರಿಸಿದೆ.

‘ನಮ್ಮ ವಿರುದ್ಧ ಸಂಜಯನಗರ ಠಾಣೆ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಕುಮಾರಸ್ವಾಮಿ ಹಾಗೂ ಸುರೇಶ್‌ಬಾಬು ಸಲ್ಲಿಸಿರುವ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರು ಸೋಮವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದರು.

ಚಂದ್ರಶೇಖರ್ ಪರ ಹೈಕೋರ್ಟ್ ವಕೀಲ ವೆಂಕಟೇಶ್ ಅರಬಟ್ಟಿ, ‘ಅರ್ಜಿದಾರರ ವಿರುದ್ಧ ಬಲವಂತದ ಕ್ರಮ ಜರುಗಿಸದಂತೆ ಪೊಲೀಸರಿಗೆ ನಿರ್ದೇಶಿಸಿ ಹೊರಡಿಸಿರುವ ಮಧ್ಯಂತರ ಆದೇಶವನ್ನು ತೆರವುಗೊಳಿಸಬೇಕು’ ಎಂದು ಮನವಿ ಮಾಡಿದರು.

ಮಹಾರಾಷ್ಟ್ರ ಏಕೀಕರಣ ಸಮಿತಿ ನಿಷೇಧಿಸುವುದು, ಗಡಿಯಲ್ಲಿನ ನಾಡವಿರೋಧಿಗಳನ್ನು ಗಡಿಪಾರು ಮಾಡುವಂತೆ ಆಗ್ರಹಿಸಿ ಬೆಳಗಾವಿಯ ರಾಣಿ ಚನ್ನಮ್ಮನ ವೃತ್ತದಲ್ಲಿ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಕನ್ನಡ ಹೋರಾಟಗಾರರು ಸೋಮವಾರ ಪ್ರತಿಭಟನೆ ನಡೆಸಿದರು. ಮಾರ್ಚ್ 22ರಂದು ಕರ್ನಾಟಕ ಬಂದ್‌ಗೆ ಕರೆ ನೀಡಿದರು ಪ್ರಜಾವಾಣಿ ಚಿತ್ರ

‘ವರದಿಗಳನ್ನು ಸರಿಯಾಗಿ ಜಾರಿಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ರಾಜ್ಯದ ಗಡಿಭಾಗದ ಸರ್ಕಾರಿ ಶಾಲೆಗಳ ಉಳಿವಿಗಾಗಿ ಬರಗೂರು ವರದಿ ಸೇರಿ ಇತರೆ ವರದಿಗಳನ್ನು ಸರಿಯಾದ ಕ್ರಮದಲ್ಲಿ ಜಾರಿಗೊಳಿಸಲು ರಾಜ್ಯ ಸರ್ಕಾರ ಕ್ರಮ ವಹಿಸಬೇಕು’ ಎಂದು ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಸದಸ್ಯ ಅಶೋಕ ಚಂದರಗಿ ಒತ್ತಾಯಿಸಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಸೋಮವಾರ ಪತ್ರ ಬರೆದಿದ್ದಾರೆ.

ಪ್ರಜಾವಾಣಿ ದಿನಪತ್ರಿಕೆಯಲ್ಲಿ ಮಾರ್ಚ್ 9ರಂದು ‘ಗಡಿಯಲ್ಲಿ ಯಾರಿಗೂ ಸಲ್ಲದ ಶಾಲೆಗಳು’ ಶೀರ್ಷಿಕೆಯಡಿ ಪ್ರಕಟವಾದ ವಿಶೇಷ ವರದಿ ಪ್ರಸ್ತಾಪಿಸಿದ ಅವರು, ‘ಈ ವರದಿ ನಾಡು, ನುಡಿ, ಗಡಿ ಬಗ್ಗೆ ಕಾಳಜಿಯುಳ್ಳ ಪ್ರಜ್ಞಾವಂತ ಕನ್ನಡಿಗರನ್ನು ಆತಂಕಕ್ಕೆ ತಳ್ಳಿದೆ. ಅಧಿಕಾರಕ್ಕೆ ಬರುವ ಸರ್ಕಾರಗಳು ಗಡಿ ಶಾಲೆಗಳನ್ನು ಸತತ ನಿರ್ಲಕ್ಷಿಸುತ್ತ ಬಂದಿವೆ. ಅಂತರರಾಜ್ಯ ಗಡಿ ವಿವಾದಗಳು ಈ ಶಾಲೆಗಳ ಹಿತ ಬಲಿ ಕೊಡುತ್ತಿವೆ. ಗಡಿ ವಿವಾದ ಬದಿಗಿರಿಸಿ, ಈ ಶಾಲೆಗಳ ಸುಧಾರಣೆಯತ್ತ ಕರ್ನಾಟಕ ಸರಕಾರ ಹಾಗೂ ನೆರೆ ರಾಜ್ಯ ಸರ್ಕಾರಗಳು ಗಮನ ಹರಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ಡಾ.ರಾಜ್‌ಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ನೀಡುವ 2024 ಮತ್ತು 2025ನೇ ಸಾಲಿನ ‘ಡಾ.ರಾಜ್‌ಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿ’ಗೆ ಕ್ರಮವಾಗಿ ರಂಗಕಲಾವಿದೆ ಮತ್ತು ಗಾಯಕಿ ಸುಮತಿ ಶ್ರೀ ಎಸ್. ನವಲಿ ಹಿರೇಮಠ ಮತ್ತು ಚಿತ್ರನಟ ಹೊನ್ನವಳ್ಳಿ ಕೃಷ್ಣ ಅವರು ಆಯ್ಕೆಯಾಗಿದ್ದಾರೆ.

ಸುಮತಿ ಶ್ರೀ ಎಸ್.ನವಲಿ ಹಿರೇಮಠ ಅವರು ಎಳನೆಯ ವಯಸ್ಸಿನಿಂದಲೂ ರಂಗಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಸ್ವಂತ ನಾಟಕ ಕಂಪನಿಯನ್ನು ನಡೆಸಿದ್ದಾರೆ. ಸವಡಿಯಲ್ಲಿ ವೃದ್ಧಾಶ್ರಮ ಹಾಗೂ ಉಚಿತ ಕನ್ನಡ ಶಾಲೆ ನಡೆಸುತ್ತಿದ್ದಾರೆ. ಮೂರು ಹಳ್ಳಿಗಳನ್ನು ದತ್ತು ಪಡೆದು ಅವುಗಳ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ನಟ ಹೊನ್ನವಳ್ಳಿ ಕೃಷ್ಣ ಅವರು ರಾಜ್‌ಕುಮಾರ್ ಕುಟುಂಬದ ಆಪ್ತರು.

ಸುಮತಿ ಶ್ರೀ

ಹೊನ್ನವಳ್ಳಿ ಕೃಷ್ಣ

ರಾಜ್‌ಕುಮಾರ್ ಅವರೊಂದಿಗೆ ಹಲವು ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ.

ರಾಜ್‌ಕುಮಾರ್ ಅವರಿಗೆ ‘ದಾದಾ ಸಾಹೇಬ್ ಫಾಲ್ಕೆ’ ಪುರಸ್ಕಾರ ಬಂದಾಗ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಈ ದತ್ತಿ ಸ್ಥಾಪಿಸಲಾಯಿತು. ಮುಂದೆ ಪಾರ್ವತಮ್ಮ ರಾಜ್‌ಕುಮಾರ್ ಅವರು, ಇದಕ್ಕೆ ಇನ್ನಷ್ಟು ಹಣ ಸೇರಿಸಿದ್ದರು. ರಂಗಭೂಮಿ ಅಥವಾ ಚಿತ್ರರಂಗದ ಸಾಧಕರಿಗೆ ಈ ದತ್ತಿಯನ್ನು ನೀಡಲಾಗುತ್ತಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುನೀತ್ ರಾಜ್‌ಕುಮಾರ್ ‘ಪಿಕ್ಚರ್ ಪೋಸ್ಟ್ ಕಾರ್ಡ್’ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಪುನೀತ್ ರಾಜ್‌ಕುಮಾರ್ ಅವರ 50ನೇ ಜನ್ಮದಿನದ ನೆನಪಿನಲ್ಲಿ ಭಾರತೀಯ ಅಂಚೆ ಇಲಾಖೆಯು ಪುನೀತ್ ಅವರ ಭಾವಚಿತ್ರ ಇರುವ ಐದು ವಿಶೇಷ ‘ಪಿಕ್ಚರ್ ಪೋಸ್ಟ್ ಕಾರ್ಡ್’ಗಳನ್ನು ಬಿಡುಗಡೆ ಮಾಡಿದೆ.

ಪುನೀತ್ ರಾಜ್‌ಕುಮಾರ್ ಅವರ ಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಸೋಮವಾರ ಪೋಸ್ಟ್ ಕಾರ್ಡ್‌ಗಳನ್ನು ಬಿಡುಗಡೆ ಮಾಡಿದರು.

‘ಪುನೀತ್ ರಾಜ್‌ಕುಮಾರ್ ಅವರ ಜನ್ಮದಿನದ ಅಂಗವಾಗಿ ಅಪ್ಪು ಗಂಧದಗುಡಿ ಅಗರಬತ್ತಿ ಸಹಯೋಗದೊಂದಿಗೆ ಈ ಪೋಸ್ಟ್ ಕಾರ್ಡ್‌ಗಳನ್ನು ಹೊರತರಲಾಗಿದೆ’ ಎಂದು ಭಾರತೀಯ ಅಂಚೆ ಇಲಾಖೆಯ ಕರ್ನಾಟಕ ಅಂಚೆ ವೃತ್ತದ ಮುಖ್ಯ ಪೋಸ್ಟ್‌ಮಾಸ್ಟರ್ ಜನರಲ್ ಎಸ್. ರಾಜೇಂದ್ರ ಕುಮಾರ್ ಅವರು ‘ಪಿಟಿಐ’ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ಆಸಕ್ತರು ಕರ್ನಾಟಕದ ಅಂಚೆಚೀಟಿ ಸಂಗ್ರಹಣಾ ಬ್ಯೂರೋಗಳಿಂದ ಈ ಚಿತ್ರಗಳನ್ನು ಪಡೆದುಕೊಳ್ಳಬಹುದು. ಅವರ ಜನ್ಮದಿನವಾದ ಮಾರ್ಚ್ 17ರಂದು ವಿಶೇಷ ರಿಯಾಯಿತಿಯನ್ನು ಸಹ ಪಡೆಯಬಹುದು ಎಂದು ಮಾಹಿತಿ ನೀಡಿದ್ದಾರೆ.

1975 ಮಾರ್ಚ್ 17ರಂದು ಜನಿಸಿರುವ ಪುನೀತ್ ರಾಜ್‌ಕುಮಾರ್ ಅವರು ಬಾಲ್ಯದಲ್ಲಿಯೇ ಸಿನಿಮಾ ಪ್ರಯಾಣ ಪ್ರಾರಂಭಿಸಿದ್ದರು. ‘ವಸಂತ ಗೀತ’ ಚಿತ್ರದ ಮೂಲಕ ಬಾಲ ನಟನಾಗಿ ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದ್ದ ಅವರು ಸುಮಾರು 32 ಚಿತ್ರಗಳಲ್ಲಿ ನಟಿಸಿದ್ದರು. ಅಲ್ಲದೇ ಗಾಯಕನಾಗಿ, ನಿರ್ಮಾಪಕರಾಗಿಯೂ ಪುನೀತ್ ಗುರುತಿಸಿಕೊಂಡಿದ್ದರು.

ಅಂಚೆ ಇಲಾಖೆಯು ನಟ ಪುನೀತ್ ರಾಜ್‌ಕುಮಾರ್ ಅವರ ವಿಶೇಷ ‘ಪಿಕ್ಚರ್ ಪೋಸ್ಟ್ ಕಾರ್ಡ್’ಗಳನ್ನು ಬಿಡುಗಡೆ ಮಾಡಿದೆ

ಭಂಡಾರದ ಓಕುಳಿ

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಕೇರೂರ ಗ್ರಾಮದ ಅರಣ್ಯ ಸಿದ್ದೇಶ್ವರ ಹಾಗೂ ಮಲಕಾರಿ ಸಿದ್ದೇಶ್ವರ ಜಾತ್ರಾ ಮಹೋತ್ಸವದ ಪ್ರಯುಕ್ತ ನಡೆದ ನಿವ್ವಾಳಕಿ ಹಾಗೂ ದೇವರ ನುಡಿ ಕಾರ್ಯಕ್ರಮದಲ್ಲಿ ದೇವರ ಮೇಲೆ ಭಂಡಾರ ತೂರಿ ಸಹಸ್ರಾರು ಭಕ್ತರು ಹರಕೆ ತೀರಿಸಿದರು ಚಿತ್ರ: ಇಂದ್ರಕುಮಾರ ದಸ್ತೆನವರ

ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಮಠದಲ್ಲಿ ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸರಳ ಸಾಮೂಹಿಕ ವಿವಾಹ ನಡೆಯಿತು ಪ್ರಜಾವಾಣಿ ಚಿತ್ರ

ದಾಂಪತ್ಯಕ್ಕೆ ಕಾಲಿಟ್ಟ 11 ಜೋಡಿಗಳು

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಆದಿಚುಂಚನಗಿರಿ ಮಠದ ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರ ನಡೆದ ಸರಳ ಸಾಮೂಹಿಕ ವಿವಾಹದಲ್ಲಿ 11 ಜೋಡಿಗಳು ದಾಂಪತ್ಯ ಜೀವನ ಪ್ರವೇಶಿಸಿದವು. ಇದೇ ಸಂದರ್ಭದಲ್ಲಿ, 50 ವರ್ಷ ದಾಂಪತ್ಯ ಜೀವನ ಪೂರೈಸಿದ 250 ಜೋಡಿಯನ್ನು ಸನ್ಮಾನಿಸಿದ್ದು ವಿಶೇಷವಾಗಿತ್ತು. ನವ ಜೋಡಿಗಳಿಗೆ ಮಂಗಳ ಸೂತ್ರವನ್ನು ಮಠದ ವತಿಯಿಂದ ವಿತರಿಸಲಾಯಿತು.

ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ‘ಎಲ್ಲೋ ಹುಟ್ಟಿ ಬೆಳೆದವರನ್ನು ಒಗ್ಗೂಡಿಸುವ ಜೊತೆಗೆ ಸುಂದರ ಬದುಕನ್ನು ಕಟ್ಟಿಕೊಳ್ಳುವಂತೆ ಮಾಡುವ ಬಂಧವೇ ವಿವಾಹ. ಎಲ್ಲ ಕ್ಷೇತ್ರಗಳಲ್ಲಿ ತರಬೇತಿ ಇರುತ್ತದೆ. ಅದೇ ರೀತಿ ಮುಂದಿನ ದಿನಗಳಲ್ಲಿ ನವದಂಪತಿಗಳಿಗೆ ತರಬೇತಿ ನೀಡುವ ಅಗತ್ಯವಿದೆ’ ಎಂದು ಅಭಿಪ್ರಾಯಪಟ್ಟರು.

‘ಆಡಂಬರದ ಮದುವೆಗಳನ್ನು ನಿಲ್ಲಿಸಿ, ಆ ಹಣದಲ್ಲಿ ನಿಮ್ಮ ಮಕ್ಕಳ ಜೀವನೋಪಾಯಕ್ಕೆ ಬ್ಯಾಂಕ್‌ನಲ್ಲಿ ಠೇವಣಿ ಇಡಿ. ಅದರಿಂದ ಅವರ ಜೀವನೋಪಾಯಕ್ಕೆ ಅನುಕೂಲವಾಗುತ್ತದೆ. ನವ ದಂಪತಿಯು ಜೀವನದಲ್ಲಿ ವೈಯಕ್ತಿಕ ಪ್ರತಿಷ್ಠೆಗಳನ್ನು ಬದಿಗೊತ್ತಿ, ದಾಂಪತ್ಯದಲ್ಲಿ ಎದುರಾಗುವ ಸಮಸ್ಯೆಗಳನ್ನು ಒಗ್ಗೂಡಿ ನಿಭಾಯಿಸಿದರೆ ಬದುಕು ಸುಂದರವಾಗಿರುತ್ತದೆ’ ಎಂದು ಸಲಹೆ ನೀಡಿದರು.

ಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ, ಚೈತನ್ಯನಾಥ ಸ್ವಾಮೀಜಿ, ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ, ಐಎಎಸ್ ಅಧಿಕಾರಿ ರಂಗಪ್ಪ, ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಆಡಳಿತಾಧಿಕಾರಿ ಎ.ಟಿ. ಶಿವರಾಮು ಪಾಲ್ಗೊಂಡಿದ್ದರು.

ದೊಡ್ಡತೇಕಹಳ್ಳಿ ಶಾಲೆಗೆ ಬಂತು ನೀರು

ಶಿಡ್ಲಘಟ್ಟ (ಚಿಕ್ಕಬಳ್ಳಾಪುರ): ತಾಲ್ಲೂಕಿನ ದೊಡ್ಡತೇಕಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಲ್ಲಿಯಲ್ಲಿ ಸೋಮವಾರ ನೀರು ಬಂತು. ಹಲವು ತಿಂಗಳಿನಿಂದ ಕುಡಿಯಲು ಮತ್ತು ಶೌಚಕ್ಕೆ ನೀರಿಲ್ಲದೆ ಪರಿತಪಿಸಿದ್ದ ಶಾಲೆಯ ವಿದ್ಯಾರ್ಥಿಗಳು ಮತ್ತು ಶಿಕ್ಷಕಿಯರ ಮೊಗದಲ್ಲಿ ಸಂತಸ ಮೂಡಿತು.

‘ಪ್ರಜಾವಾಣಿ’ ಸೋಮವಾರ ಪ್ರಕಟಿಸಿದ್ದ ‘ಶೌಚಕ್ಕೆ ನೀರಿಲ್ಲ; ಶಾಲೆಗೆ ಪೋಷಕರ ಮುತ್ತಿಗೆ’ ಸುದ್ದಿಗೆ ಸ್ಪಂದಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ, ಇಲಾಖೆಯ ಅಧಿಕಾರಿ ಗಳನ್ನು ಸೋಮವಾರ ಶಾಲೆಗೆ ಕಳಿಸಿದ್ದರು. ಅವರು ಗ್ರಾಮ ಪಂಚಾಯಿತಿ ಪಿಡಿಒ ಜೊತೆ ಮಾತುಕತೆ ನಡೆಸಿ ಪೈಪ್‌ಲೈನ್ ಸರಿಪಡಿಸಿ ಶಾಲೆಗೆ ನೀರಿನ ವ್ಯವಸ್ಥೆ ಮಾಡಿದರು.

ಶಿಡ್ಲಘಟ್ಟ ತಾಲ್ಲೂಕಿನ ದೊಡ್ಡತೇಕಹಳ್ಳಿ ಶಾಲೆಗೆ ನೀರು ಬಂದಿದ್ದರಿಂದ ಸಂತಸಗೊಂಡ ಮಕ್ಕಳು

ನಿಧನ ವಾರ್ತೆ

ಮಾಜಿ ಸಚಿವ ಸುಬ್ಬಯ್ಯ ಶೆಟ್ಟಿ

ಮಂಗಳೂರು: ರಾಜ್ಯದಲ್ಲಿ ಭೂಸುಧಾರಣಾ ಕಾಯ್ದೆ ಜಾರಿಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮಾಜಿ ಸಚಿವ ಬಿ.ಸುಬ್ಬಯ್ಯ ಶೆಟ್ಟಿ (91) ಅನಾರೋಗ್ಯದಿಂದ ಬೆಂಗಳೂರಿನಲ್ಲಿ ಸೋಮವಾರ ನಿಧನರಾದರು.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಬಾಕ್ರಬೈಲು ಗ್ರಾಮದಲ್ಲಿ 1934ರಲ್ಲಿ ಬಿ.ಸುಬ್ಬಯ್ಯ ಶೆಟ್ಟಿ ಜನಿಸಿದ್ದರು. ಸುರತ್ಕಲ್ ವಿಧಾನಸಭಾ ಕ್ಷೇತ್ರದಿಂದ 1972ರ ಹಾಗೂ 1978ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಶಾಸಕರಾಗಿ ಆಯ್ಕೆಯಾಗಿದ್ದರು.

ದೇವರಾಜ ಅರಸು ನೇತೃತ್ವದ ಸರ್ಕಾರದಲ್ಲಿ ಭೂ ಸುಧಾರಣಾ ಖಾತೆ ಸಚಿವರಾಗಿದ್ದರು. ರೈತರಿಗೆ ಕೃಷಿ ಭೂಮಿಯ ಮಾಲೀಕತ್ವವನ್ನು ನೀಡುವ ಕ್ರಾಂತಿಕಾರಿ ಪರಿಕಲ್ಪನೆಯನ್ನು ಜಾರಿಗೊಳಿಸಲು ಆರಂಭದಲ್ಲಿ ಸ್ವಂತ ಭೂಮಿಯನ್ನು ಬಿಟ್ಟುಕೊಟ್ಟ ಭೂಮಾಲೀಕರಲ್ಲಿ ಇವರೂ ಒಬ್ಬರು. ಬಳಿಕ ರಾಜ್ಯ ಸರ್ಕಾರದಲ್ಲಿ ಮಾಹಿತಿ, ಇಂಧನ ಹಾಗೂ ಶಿಕ್ಷಣ ಸಚಿವರಾಗಿಯೂ ಕಾರ್ಯ ನಿರ್ವಹಿಸಿದ್ದರು. ಜನತಾ ಪಕ್ಷವನ್ನು ಸೇರಿ ಬಳಿಕ ರಾಜಕೀಯದಿಂದ ನಿವೃತ್ತರಾಗಿದ್ದರು.

ಬಾಕ್ರಬೈಲು ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿದ್ದ ಅವರು, ಇಲ್ಲಿನ ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ಬಿ.ಎಸ್‌ಸಿ ಪದವಿ ಹಾಗೂ ಮದ್ರಾಸ್ ವಿಶ್ವವಿದ್ಯಾಲಯ ದಿಂದ ಕಾನೂನು ಪದವಿ ಪಡೆದಿದ್ದರು. ರಾಜ್ಯ ಸರ್ಕಾರದ 2014 ನೇ ಸಾಲಿನ ದಿ.ದೇವರಾಜ ಅರಸು ಪ್ರಶಸ್ತಿಗೆ ಭಾಜನರಾಗಿದ್ದರು.

ಅವರ ಪತ್ನಿ ಶಾಲಿನಿ ಶೆಟ್ಟಿ ಈಚೆಗೆ ನಿಧನರಾಗಿದ್ದರು. ಅವರಿಗೆ ಇಬ್ಬರು ಪುತ್ರಿಯರು ಇದ್ದಾರೆ.

ಕಾವೆಂಶ್ರೀ

ಗದಗ: ‘ಕಾವೆಂಶ್ರೀ’ ಎಂದೇ ಜನಪ್ರಿಯರಾಗಿದ್ದ ಕಾಳಮಂಜಿ ವೆಂಕಟಗಿರಿಯಪ್ಪ ಶ್ರೀನಿವಾಸ (58) ಅವರು ನಗರದ ಆಸ್ಪತ್ರೆಯಲ್ಲಿ ಸೋಮವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ಹೋಟೆಲ್ ಉದ್ಯಮಿಯಾಗಿದ್ದ ಅವರು ಗದುಗಿನ ಸಾಂಸ್ಕೃತಿಕ ರಾಯಭಾರಿಯಂತೆ ಕೆಲಸ ಮಾಡಿದ್ದರು. ಶಿವಮೊಗ್ಗ ಜಿಲ್ಲೆಯ ಕಾಳಮಂಜಿಯವರಾದ ಅವರು ಗದಗನಲ್ಲಿ 34 ವರ್ಷಗಳಿಂದ ವಾಸವಿದ್ದರು. ಕಲೆ, ಸಂಸ್ಕೃತಿ ಉಳಿವಿಗೆ 1996ರಲ್ಲಿ ಗದುಗಿನಲ್ಲಿ ಕಲಾಚೇತನ ಸಂಸ್ಥೆ ಸ್ಥಾಪಿಸಿ, ಅಂತರರಾಷ್ಟ್ರೀಯ ಮಟ್ಟದ ಕಲಾವಿದರ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. ಸಂಗೀತ, ನಾಟಕ, ಯಕ್ಷಗಾನ ಕಾರ್ಯಕ್ರಮಗಳನ್ನು ನಡೆಸಿದ್ದರು.

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಮೂಡಬಿದ್ರೆ ಉಪ ವಿಭಾಗ, ಮೂಡಬಿದ್ರೆ–574227
No.ACF/CR- 454/E-TENDER/OUTSOURCE/2024-25 ದಿನಾಂಕ: 05–03–2025
ಇ–ಟೆಂಡರ್ ಪ್ರಕಟಣೆ
2025–26ನೇ ಸಾಲಿನಲ್ಲಿ ಮೂಡಬಿದ್ರೆ ಉಪ ವಿಭಾಗ ವ್ಯಾಪ್ತಿಗೊಳಪಡುವ ಉಪ ವಿಭಾಗ ಕಛೇರಿ, ವಲಯ ಕಛೇರಿ ಹಾಗೂ ಡಿಪೋಗಳಿಗೆ ಅಗತ್ಯವಿರುವ ಗಣಕಯಂತ್ರ ನಿರ್ವಾಹಕರು / ಲಿಪಿಕ ಸಹಾಯಕರು / ವಾಹನ ಚಾಲಕರು ಮತ್ತು ಇತರ ‘ಡಿ’ ಗ್ರೂಪ್ ನೌಕರರ ಸೇವೆಯನ್ನು ಸೇವಾ ಸಂಸ್ಥೆ (Outsourcing) ಮೂಲಕ ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಇ–ಟೆಂಡರನ್ನು ಅಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಪಡೆದು ಇ–ಟೆಂಡರ್ ಸಲ್ಲಿಸಲು ಕೊನೆಯ ದಿ. 27–03–2025 ರಂದು ಅಪರಾಹ್ನ 4.00 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ಸಮಯ ದಿ. 28–03–2025 ಅಪರಾಹ್ನ 4.30 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ಸಮಯ ದಿ. 29–03–2025 ರಂದು ಅಪರಾಹ್ನ 4.35 ಗಂಟೆಗೆ, ಹೆಚ್ಚಿನ ವಿವರಗಳನ್ನು ಉಪವಿಭಾಗೀಯ ಕಛೇರಿಯಿಂದ ಪಡೆದುಕೊಳ್ಳಬಹುದು.
ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮೂಡಬಿದ್ರೆ ಉಪವಿಭಾಗ, ಮೂಡಬಿದ್ರೆ.
ವಾಸಾಇ/ಸನಿಉ/ಕೆಎಸ್‌ಎಂಸಿಎ/796/24–25 ದಿ: 10.03.2025

ವಾಣಿಜ್ಯ ತೆರಿಗೆಗಳ ಇಲಾಖೆ
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–2, ಬೆಂಗಳೂರು.
ಸಂಖ್ಯೆ : ವಾತೆಜಂಆ(ಆ)/ವಿಸ&ಸೇತೆಕ–2/ಹೆಚ್‌ಕೆ&ಎಸ್/ಇ–ಪ್ರೊ/ಸಿಆರ್.8/24–25 ದಿನಾಂಕ 10–03–2025.
ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಿಬ್ಬಂದಿ ಮತ್ತು ಸ್ವಚ್ಚತಾ ಸಿಬ್ಬಂದಿಗಳ ಸೇವೆಯನ್ನು ಒದಗಿಸಲು ಇ–ಟೆಂಡರ್ ಅಧಿಸೂಚನೆ
ಈ ಕಛೇರಿಗೆ 17 ಸ್ವಚ್ಚತಾ ಸಿಬ್ಬಂದಿಗಳು ಮತ್ತು 09 ಜನ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ.
1. ಆಕ್ಷೇಪಣೆ/ಪ್ರಶ್ನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ:14–03–2025 ಸಮಯ 5.30 PM 2. ಆಕ್ಷೇಪಣೆ/ಪ್ರಶ್ನೆಗಳಿಗೆ ಉತ್ತರ ನೀಡುವ ಕಡೆಯ ದಿನಾಂಕ: 17–03–2025 ಸಮಯ 5.30 PM. 3. ಬಿಡ್‌ನ ಪೂರ್ವಭಾವಿ ಸಭೆ ದಿನಾಂಕ: 18–03–2025 ಸಮಯ 11.00 AM. 4. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 20–03–2025 ಸಮಯ 05.29 PM. 5. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 21–03–2025. ಸಮಯ 05.30 PM. 6. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 25–03–2025. ಸಮಯ 11.00 AM
ನಿಗಧಿತ ಟೆಂಡರ್ ನಮೂನೆ ಹಾಗೂ ಟೆಂಡರ್ ಷರತ್ತುಗಳ ವಿವರಗಳಿಗೆ ಕರ್ನಾಟಕ ಸರ್ಕಾರದ ವೆಬ್‌ಸೈಟ್ : http://eproc.Karnataka.gov.in ಅಥವಾ ವಾಣಿಜ್ಯ ತೆರಿಗೆ ಇಲಾಖೆಯ http://ctax.kar.nic.in. ನ್ನು ಸಂಪರ್ಕಿಸಿ.
ಸಹಿ/–
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ವಿ.ಸ.&ಸೇ.ತೆ.ಕ–2, ಬೆಂಗಳೂರು
DIPR/CP/Zen/5576/2024-25

ಹೊಸ ಸೇತುವೆ ನಿರ್ಮಾಣಕ್ಕೆ ಬೇಕು ಸುದೀರ್ಘ ಅವಧಿ

ಕಾಳಿ: ಸೇತುವೆ ಅವಶೇಷ ಶೀಘ್ರ ತೆರವು

• ಗಣಪತಿ ಹೆಗಡೆ

ಕಾರವಾರ: ಇಲ್ಲಿನ ಕೋಡಿಬಾಗದಲ್ಲಿ ಕುಸಿದು ಬಿದ್ದಿದ್ದ, ಕಾಳಿ ನದಿ ಹಳೆ ಸೇತುವೆ ಅವಶೇಷಗಳ ತೆರವು ಕಾರ್ಯ ಆರು ತಿಂಗಳಲ್ಲೇ ಪೂರ್ಣಗೊಳ್ಳಲಿದೆ. ಆದರೆ ಹೊಸ ಸೇತುವೆ ನಿರ್ಮಾಣಕ್ಕೆ ಸುದೀರ್ಘ ಸಮಯ ಬೇಕಾಗಬಹುದು.

‘ರಾಷ್ಟ್ರೀಯ ಹೆದ್ದಾರಿ–66ರಲ್ಲಿ, 2017ರಲ್ಲಿ ನಿರ್ಮಿತ ಸೇತುವೆ ಮೇಲೆ ವಾಹನಗಳ ಸಂಚಾರ ಮುಂದಿನ ಮೂರು ವರ್ಷಗಳಲ್ಲಿ ಇನ್ನೂ ಹೆಚ್ಚಾಗಬಹುದು’ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಂದಾಜಿಸಿದೆ.

41 ವರ್ಷಗಳ ಹಿಂದೆ ನಿರ್ಮಾಣಗೊಂಡಿದ್ದ 665 ಮೀಟರ್ ಉದ್ದದ ಸೇತುವೆ 2024ರ ಆಗಸ್ಟ್ 7ರ ತಡರಾತ್ರಿ ಕುಸಿದು ಬಿದ್ದಿತ್ತು. ಸೇತುವೆ ಕುಸಿದು ಬಿದ್ದ ಒಂದು ತಿಂಗಳ ಬಳಿಕ (ಸೆಪ್ಟೆಂಬರ್ 9) ಅವಶೇಷ ತೆರವು ಕಾರ್ಯ ಆರಂಭಗೊಂಡಿತ್ತು. 600 ಮೀಟರ್ ಉದ್ದದಷ್ಟು ಸೇತುವೆಯ ಭಾಗ, 6 ಕಾಂಕ್ರೀಟ್ ಕಂಬ ತೆರವುಗೊಳಿಸಲಾಗಿದೆ. ಕಾರ್ಯಾಚರಣೆ ವೇಳೆ ಬಿದ್ದ ಸೇತುವೆಯ ಅಲ್ಪ ಭಾಗ ತೆರವು ಕಾರ್ಯ ಮಾತ್ರ ಬಾಕಿ ಉಳಿದಿದೆ.

‘ಕುಸಿದು ಬಿದ್ದ ಸೇತುವೆಯ ಅವಶೇಷಗಳನ್ನು ಏಪ್ರಿಲ್ ಒಳಗೆ ತೆರವುಗೊಳಿಸಲು ಹೆದ್ದಾರಿ ನಿರ್ಮಾಣದ ಗುತ್ತಿಗೆ ಪಡೆದಿರುವ ಐಆರ್‌ಬಿ ಇನ್‌ಫ್ರಾಸ್ಟ್ರಕ್ಚರ್ ಕಂಪನಿಗೆ ಸೂಚಿಸಲಾಗಿತ್ತು. ನಿರೀಕ್ಷಿತ ಅವಧಿಗೂ ಮುನ್ನವೇ ಅವಶೇಷ ತೆರವು ಕೆಲಸ ಮುಗಿಯುವ ಸಾಧ್ಯತೆ ಇದೆ. ಸ್ವಲ್ಪವೇ ಕೆಲಸ ಬಾಕಿ ಉಳಿದಿದೆ’ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಯೋಜನಾ ನಿರ್ದೇಶಕ ಕೆ.ಶಿವಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಕಾರವಾರದಲ್ಲಿ ಕುಸಿದು ಬಿದ್ದಿದ್ದ ಕಾಳಿ ನದಿಯ ಹಳೆ ಸೇತುವೆ ಅವಶೇಷಗಳ ಬಹುತೇಕ ತೆರವುಗೊಂಡಿದ್ದು, ಪಕ್ಕದ ಇನ್ನೊಂದು ಸೇತುವೆ ಮೇಲೆ ವಾಹನಗಳು ಸಂಚರಿಸುತ್ತಿವೆ –ಚಿತ್ರ:ದಿಲೀಪ್ ರೇವಣಕರ್

ಜಾಗ ನೀಡದ ಜಿಲ್ಲಾಡಳಿತ

‘ಸೇತುವೆ ಅವಶೇಷಗಳನ್ನು ದಾಸ್ತಾನು ಮಾಡಲು 8 ಎಕರೆ ಜಾಗ ನೀಡುವಂತೆ ಜಿಲ್ಲಾಡಳಿತಕ್ಕೆ ಕೋರಿದ್ದೆವು. ಜಾಗ ಸಿಗದಿದ್ದಕ್ಕೆ ಸೇತುವೆ ಕುಸಿದು ಬಿದ್ದ ಸ್ಥಳದ ಸಮೀಪದಲ್ಲೇ ಅವಶೇಷಗಳನ್ನು ನದಿ ತೀರದ ಜಟ್ಟಿಗೆ ಹಾಸಲಾಗಿದೆ’ ಎಂದು ಐಆರ್‌ಬಿ ಇನ್‌ಫ್ರಾಸ್ಟ್ರಕ್ಚರ್ ಕಂಪನಿ ಅಧಿಕಾರಿಯೊಬ್ಬರು ಹೇಳಿದರು.

‘ಜಾಗ ಹುಡುಕಾಟಕ್ಕೆ ಸಾಕಷ್ಟು ಪ್ರಯತ್ನಿಸಲಾಗಿದೆ. ಒಂದೇ ಕಡೆ 8 ಎಕರೆ ಸರ್ಕಾರಿ ಜಾಗ ಸಿಗದ ಕಾರಣ ಜಾಗ ಒದಗಿಸಲು ಸಾಧ್ಯವಾಗಿಲ್ಲ’ ಎಂದು ತಹಶೀಲ್ದಾರ್ ನಿಶ್ಚಲ್ ನೊರೋನ್ಹಾ ತಿಳಿಸಿದರು.

> ಹಳೆ ಸೇತುವೆ ಕುಸಿದು ಬಿದ್ದ ಜಾಗದಲ್ಲೇ ಹೊಸದಾಗಿ ಉಕ್ಕಿನ ಕಮಾನಿನ ಸೇತುವೆ ನಿರ್ಮಿಸಲು ಪ್ರಸ್ತಾವ ಕಳಿಸಲು ಯೋಜಿಸಲಾಗಿದೆ
> **ಕೆ.ಶಿವಕುಮಾರ್,** ಯೋಜನಾ ನಿರ್ದೇಶಕ, ಎನ್‌ಎಚ್‌ಎಐ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಗ್ರಾಮೀಣ ಅಭಿವೃದ್ಧಿ ಪಂಚಾಯತ ರಾಜ್ ಇಂಜಿನೀಯರಿಂಗ್ ಯೋಜನಾ ವಿಭಾಗ, ಕಲಬುರಗಿ.
ಸಂಖ್ಯೆ: ಕಾನಿಅ/ಪಂರಾಇಂಯೋವಿಕ/ತಾಶಾ/ಟೆಂಡರ/2024–25/1107 ದಿನಾಂಕ :06.03.2025
ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ
ದ್ವಿ – ಲಕೋಟೆ ಪದ್ದತಿಯಲ್ಲಿ
1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ: Construction of Road and CDs from Narayanpur Main Road (R.K.N Tanda) to NallagundaTanda via Hanuman Mandir in Hunasagi TalukaYadgir District (YAD2415121342) Macro (SCP) for the year 2024-25 Indent No. KRRDA/2024-25 /RD/WORK_INDENT-200 2) ಲೆಕ್ಕ ಶೀರ್ಷಿಕೆ: 2024–25ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ 3) ಟೆಂಡರಿಗಿಟ್ಟ ಅಂದಾಜು ಮೊತ್ತ: Indent No.200 RS. 2,09,37,237.29 4) ಗುತ್ತೆಗೆದಾರರ ಅರ್ಹತೆ: 2ನೇ ದರ್ಜೆ ಮತ್ತು ಮೇಲ್ಪಟ್ಟು 5) ಟೆಂಡರ ಫಾರಂ ಪಡೆಯುವ ದಿನಾಂಕ: 06–03–2025 ರಿಂದ 17–03–2025 ಸಾಯಂಕಾಲ 4:00 ಗಂಟೆವರೆಗೆ6) ಟೆಂಡರ ಅರ್ಜಿ ಬೆಲೆ: ಇ–ಪ್ರೊಕ್ಯೂರಮೆಂಟ್ ನಿಯಮಾನುಸಾರ 7) ಇ.ಎಂ.ಡಿ.:Indent No.200 RS. 3,14,500.00 8) ಟೆಂಡರ ಸಲ್ಲಿಸುವ ದಿನಾಂಕ: 06–03–2025 ರಿಂದ 17–03–2025 ಸಾಯಂಕಾಲ 4:00 ಗಂಟೆವರೆಗೆ 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 18–03–2025 ಸಾಯಂಕಾಲ 4:00 ಗಂಟೆ ನಂತರ 10) ಆರ್ಥಿಕ ಬಿಡ್‌ತೆರೆಯುವ ದಿನಾಂಕ: 21–03–2025 ಬೆಳಿಗ್ಗೆ 11:00 ಗಂಟೆ ನಂತರ 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಗ್ರಾಮೀಣಾಭಿವೃದ್ಧಿ ಪಂಚಾಯತ ರಾಜ್ ಇಂಜಿನೀಯರಿಂಗ್ ಯೋಜನಾ ವಿಭಾಗ ಅಂಬೇಡ್ಕರ ವಸತಿ ನಿಲಯದ ಎದುರಿಗೆ ರಾಜಾಪೂರ ರಸ್ತೆ ಕಲಬುರಗಿ E-mail : kn-gul-1@pmgsy.nic.in 12) ಅಂತರಜಾಲ ತಾಣದ ವಿಳಾಸ: www.kppp. karnataka.gov.in
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಗ್ರಾಮೀಣ ಅಭಿವೃದ್ಧಿ ಪಂಚಾಯತರಾಜ್ ಇಂಜಿನೀಯರಿಂಗ್ ಯೋಜನಾ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಯಾದಗಿರಿ/557/ಕೆ.ಎಸ್.ಎಂ.ಸಿ.ಎ/2024–25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

❦ ಸುಭಾಷಿತ ❦

ಇರುವ ಭಾಗ್ಯವ ನೆನೆದು, ಬಾರೆನೆಂಬುದನು ಬಿಡು,
ಹರುಷಕದೆ ದಾರಿ. -ಡಿ.ವಿ.ಜಿ.

ಭಾರತದ ಕ್ರಿಕೆಟ್ ಸಿರಿಗೆ ಚಾಂಪಿಯನ್ಸ್ ಟ್ರೋಫಿಯ ಗರಿ

ಮರಳುಗಾಡಿನ ಸಮೃದ್ಧ ನಗರ ದುಬೈನಲ್ಲಿ ಭಾರತ ಕ್ರಿಕೆಟ್ ತಂಡದ ಪ್ರತಿಭಾ ಸಿರಿ ಕಂಗೊಳಿಸಿತು. ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ರೋಹಿತ್ ಶರ್ಮಾ ನಾಯಕತ್ವದ ತಂಡವು ಐಸಿಸಿ ಚಾಂಪಿಯನ್ಸ್ ಟ್ರೋಫಿಗೆ ಮುತ್ತಿಕ್ಕಿತು. ಟೂರ್ನಿಯ 27 ವರ್ಷಗಳ ಇತಿಹಾಸದಲ್ಲಿ ಮೂರನೇ ಬಾರಿಗೆ ಭಾರತವು ಕಿರೀಟ ಧರಿಸಿತು. 2002ರಲ್ಲಿ ಶ್ರೀಲಂಕಾದೊಂದಿಗೆ ಜಂಟಿ ಚಾಂಪಿಯನ್ ಆಗಿದ್ದ ತಂಡವು 2013ರಲ್ಲಿ ಮಹೇಂದ್ರಸಿಂಗ್ ಧೋನಿ ನಾಯಕತ್ವದಲ್ಲಿ ಪ್ರಶಸ್ತಿ ಗೆದ್ದಿತ್ತು. 2017ರಲ್ಲಿ ನಡೆದಿದ್ದ ಟೂರ್ನಿಯ ಫೈನಲ್‌ನಲ್ಲಿ ಭಾರತ ತಂಡವು ಪಾಕಿಸ್ತಾನದ ಎದುರು ಸೋತಿತ್ತು. ಇದೀಗ ಮತ್ತೊಮ್ಮೆ ಈ ಪ್ರತಿಷ್ಠಿತ ಟ್ರೋಫಿ ಗಳಿಸುವಲ್ಲಿ ಯಶಸ್ವಿಯಾಗಿದೆ. ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಸಾರ್ವಭೌಮ ತಂಡ ತಾನೆಂಬುದನ್ನು ಭಾರತ ಮತ್ತೊಮ್ಮೆ ಸಾಬೀತು ಮಾಡಿತು. 2023ರಲ್ಲಿ ಏಕದಿನ ವಿಶ್ವಕಪ್, 2024ರಲ್ಲಿ ಟಿ20 ವಿಶ್ವಕಪ್ ಮತ್ತು ಈಗ ಚಾಂಪಿಯನ್ಸ್ ಟ್ರೋಫಿ ಫೈನಲ್‌ನಲ್ಲಿ ಆಡಿದ್ದು ಸಣ್ಣ ಸಾಧನೆಯೇನಲ್ಲ. ಈ ವಿಜಯವು ಭಾರತದ ಕ್ರಿಕೆಟ್ ತಂಡಕ್ಕೆ ಹೊಸ ಚೈತನ್ಯ ತುಂಬುವ ಭರವಸೆ ಮೂಡಿಸಿದೆ. ಏಕೆಂದರೆ, ಕಳೆದ ಆರು ತಿಂಗಳಲ್ಲಿ ರೋಹಿತ್ ಬಳಗವು ವೈಫಲ್ಯಗಳನ್ನು ಅನುಭವಿಸಿದ್ದೇ ಹೆಚ್ಚು. ತವರಿನಲ್ಲಿ ನಡೆದಿದ್ದ ನ್ಯೂಜಿಲೆಂಡ್ ಎದುರಿನ ಟೆಸ್ಟ್ ಸರಣಿ ಮತ್ತು ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಹೀನಾಯ ಸೋಲು ಅನುಭವಿಸಿತ್ತು. ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್ ಪ್ರವೇಶಿಸುವ ಅವಕಾಶ ಕಳೆದುಕೊಂಡಿತ್ತು. ಅದಕ್ಕಾಗಿ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್, ರೋಹಿತ್, ಅನುಭವಿ ಬ್ಯಾಟರ್‌ಗಳಾದ ವಿರಾಟ್ ಕೊಹ್ಲಿ, ಶುಭಮನ್ ಗಿಲ್, ಕೆ.ಎಲ್. ರಾಹುಲ್ ಅವರು ತೀವ್ರ ಟೀಕೆಗಳಿಗೆ ಒಳಗಾಗಿದ್ದರು. ಅಷ್ಟೇ ಅಲ್ಲ, ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಆಡುವ ತಂಡದ ಆಯ್ಕೆಯ ಬಗ್ಗೆಯೂ ಹಲವರು ಅಪಸ್ವರ ಎತ್ತಿದ್ದರು. ಐವರು ಸ್ಪಿನ್ ಬೌಲರ್‌ಗಳಿಗೆ ತಂಡದಲ್ಲಿ ಸ್ಥಾನ ಕೊಟ್ಟಿದ್ದು, ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರನ್ನು ಬಿಟ್ಟು ಸ್ಪಿನ್ನರ್ ವರುಣ್ ಚಕ್ರವರ್ತಿಗೆ ಅವಕಾಶ ನೀಡಿದ್ದು ಚರ್ಚೆಗೆ ಗ್ರಾಸವಾಗಿದ್ದವು. ವಿರಾಟ್ ಕೊಹ್ಲಿಯ ಫಾರ್ಮ್ ಕೊರತೆ, ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ಗಾಯದ ಸಮಸ್ಯೆಯಿಂದಾಗಿ ಟೂರ್ನಮೆಂಟ್‌ಗೆ ಲಭ್ಯವಾಗದೇ ಇದ್ದುದು, ಮೊಹಮ್ಮದ್ ಶಮಿ ಅವರ ಫಿಟ್‌ನೆಸ್ ಕೊರತೆ ಕಾಡಿದ್ದವು. ಈ ಎಲ್ಲ ಸವಾಲುಗಳನ್ನೂ ಮೀರಿ ನಿಂತ ಆಟಗಾರರು ತಂಡವಾಗಿ ಆಡಿ ಗೆದ್ದರು. ರೋಹಿತ್ ಅವರು ನಾಯಕತ್ವದ ಜೊತೆಗೆ ಬ್ಯಾಟಿಂಗ್‌ನಲ್ಲಿಯೂ ಸೈ ಎನಿಸಿಕೊಂಡರು. ವಿರಾಟ್, ಗಿಲ್, ಶ್ರೇಯಸ್ ಅಯ್ಯರ್ ಮರಳಿ ಅರಳಿದರು. ಕನ್ನಡಿಗ ರಾಹುಲ್ ವಿಕೆಟ್‌ಕೀಪಿಂಗ್ ಹಾಗೂ ಆರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಸ್ಪಿನ್ನರ್‌ಗಳ ಆಟವೂ ತಂಡದ ಗೆಲುವಿನಲ್ಲಿ ನಿರ್ಣಾಯಕವಾಯಿತು.

ಈ ವಿಜಯವು ಭಾರತದ ಕ್ರಿಕೆಟ್ ತಂಡಕ್ಕೆ ಹೊಸ ಚೈತನ್ಯ ತುಂಬುವ ಭರವಸೆ ಮೂಡಿಸಿದೆ

ಎಂಟು ತಂಡಗಳು ಸ್ಪರ್ಧಿಸಿದ್ದ ಈ ಟೂರ್ನಿಯಲ್ಲಿ ಇನ್ನೂ ಕೆಲವು ಸಂಗತಿಗಳು ಗಮನ ಸೆಳೆದವು. ಆತಿಥೇಯ ಪಾಕಿಸ್ತಾನ ಮತ್ತು ಭಾರತದ ನಡುವಿನ ರಾಜತಾಂತ್ರಿಕ ಬಿಕ್ಕಟ್ಟಿನ ಕಾರಣಕ್ಕಾಗಿ ಟೂರ್ನಿಯನ್ನು ಹೈಬ್ರಿಡ್ ಮಾದರಿಯಲ್ಲಿ ನಡೆಸಲಾಯಿತು. ಅದರಿಂದಾಗಿ ಭಾರತ ತಂಡವು ಆಡುವ ಎಲ್ಲ ಪಂದ್ಯಗಳನ್ನು ದುಬೈನಲ್ಲಿ ಆಯೋಜಿಸಲಾಯಿತು. ಉಳಿದ ತಂಡಗಳ ಪಂದ್ಯಗಳನ್ನು ಪಾಕಿಸ್ತಾನದ ನಗರಗಳಲ್ಲಿ ಆಡಿಸಲಾಯಿತು. ಉಳಿದ ತಂಡಗಳು ಭಾರತದೊಂದಿಗೆ ಆಡಲು ದುಬೈಗೆ ಪ್ರಯಾಣ ಮಾಡುವ ಒತ್ತಡ ಅನುಭವಿಸಬೇಕಾಯಿತು. ಇದರಿಂದ ಭಾರತಕ್ಕೆ ಹೆಚ್ಚು ಅನುಕೂಲವಾಯಿತು ಎಂಬ ಟೀಕೆಗಳೂ ಕೇಳಿಬಂದವು. ಆದರೆ ಪಾಕಿಸ್ತಾನ ತಂಡದ ಕಳಪೆ ಪ್ರದರ್ಶನ ಬೇಸರ ತರಿಸಿದ್ದು ನಿಜ. ದಶಕದ ಹಿಂದೆ ಬಲಿಷ್ಠವಾಗಿದ್ದ ಪಾಕ್ ಕ್ರಿಕೆಟ್ ತಂಡ ಈಗ ವಿಪರೀತ ಸೊರಗಿದೆ. ಆಂತರಿಕ ಕಲಹ ಮತ್ತು ರಾಜಕೀಯ ಹಸ್ತಕ್ಷೇಪದಿಂದಾಗಿ ಪಾಕ್ ಕ್ರಿಕೆಟ್ ತಂಡ ಬಲ ಕಳೆದುಕೊಂಡಿರುವುದು ಈ ಟೂರ್ನಿಯಿಂದ ಜಗಜ್ಜಾಹೀರಾಗಿದೆ. ರಾವಲ್ಪಿಂಡಿಯಲ್ಲಿ ಮಳೆ ಬಂದಾಗ ಮೈದಾನವನ್ನು ಒಣಗಿಸಲು ಆಧುನಿಕ ಸೌಲಭ್ಯಗಳ ಕೊರತೆ ಇರುವುದು ಕೂಡ ಈ ದೇಶದ ಆಡಳಿತವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಮುಜುಗರಕ್ಕೆ ಈಡುಮಾಡಿತು. ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ ಇದು ಆತ್ಮಾವಲೋಕನ ಮಾಡಿಕೊಳ್ಳುವ ಸಮಯ ಎಂಬುದರಲ್ಲಿ ಎರಡು ಮಾತಿಲ್ಲ. ಬಾಂಗ್ಲಾದೇಶ ಮತ್ತು ಇಂಗ್ಲೆಂಡ್ ತಂಡಗಳೂ ಈ ಬಾರಿ ಮಂಕಾಗಿದ್ದವು. ಆದರೆ ಅಫ್ಗಾನಿಸ್ತಾನ ತಂಡದ ಸಾಧನೆ ಗಮನ ಸೆಳೆಯಿತು. ಹಷ್ಮತ್‌ವುಲ್ಲಾ ಶಹೀದಿ ನಾಯಕತ್ವದ ತಂಡವು ಇಂಗ್ಲೆಂಡ್ ವಿರುದ್ಧ ಜಯಿಸಿ ಅಚ್ಚರಿ ಮೂಡಿಸಿತು. ಕೆಲವು ವರ್ಷಗಳಿಂದ ಅಫ್ಗನ್ ತಂಡವು ಪ್ರಮುಖ ಟೂರ್ನಿಗಳಲ್ಲಿ ದಿಟ್ಟ ಆಟದ ಮೂಲಕ ಗಮನ ಸೆಳೆಯುತ್ತಿದೆ. ಯುದ್ಧ, ಹಿಂಸೆಯಿಂದ ಸೊರಗಿರುವ ಅಫ್ಗನ್ ಪ್ರಜೆಗಳಿಗೆ ಸಂತಸದ ಕ್ಷಣಗಳನ್ನು ಈ ಕ್ರಿಕೆಟ್ ತಂಡ ನೀಡುತ್ತಿದೆ. ಅಫ್ಗನ್ ತಂಡವು ಭವಿಷ್ಯದಲ್ಲಿ ಅತ್ಯುನ್ನತ ಸಾಧನೆ ಮಾಡುವ ಭರವಸೆ ಮೂಡಿಸಿರುವುದು ಈ ಟೂರ್ನಿಯ ಯಶೋಗಾಥೆಗಳಲ್ಲಿ ಒಂದು.

ನವೀಕರಿಸಬಹುದಾದ ಇಂಧನಗಳ ಉತ್ಪಾದನೆ, ವಿತರಣೆಯ ಹೊಣೆ ಸರ್ಕಾರದ್ದಾಗಲಿ

ಹಸಿರು ಇಂಧನ: ಮುಟ್ಟಲಿ ಜನಮನ

ವಿಶ್ಲೇಷಣೆ

ಟಿ.ಎಸ್. ವೇಣುಗೋಪಾಲ್

ಇಂದು ವಾತಾವರಣ ಬಹಳಷ್ಟು ಕಲುಷಿತವಾಗಿದೆ. ಪರಿಸರದಲ್ಲಿ ಇಂಗಾಲದ ಅನಿಲದ ಪ್ರಮಾಣ ವಿಪರೀತವಾಗಿದೆ. ಇದರಿಂದ ಆಗಬಹುದಾದ ಅನಾಹುತಗಳ ಬಗ್ಗೆ ನಿಖರವಾದ ಮಾಹಿತಿ ಇಲ್ಲದಿದ್ದರೂ ಪರಿಣಾಮ ತೀವ್ರವಾಗಿರುತ್ತದೆ ಅನ್ನುವುದಂತೂ ನಿಜ. ಅದನ್ನು ತಪ್ಪಿಸಲು, ಈಗ ಹೊರಹಾಕುತ್ತಿರುವ ಇಂಗಾಲದ ಪ್ರಮಾಣವನ್ನು ಇಳಿಸುತ್ತಾ ಅಂತಿಮವಾಗಿ ಶೂನ್ಯಕ್ಕೆ ತರಬೇಕು ಅನ್ನುವುದು ಎಲ್ಲರ ಕಾಳಜಿಯಾಗಿದೆ. ಅದು ಸಾಧ್ಯವಾಗಬೇಕಾದರೆ ಪಳೆಯುಳಿಕೆ ಇಂಧನದ ಬಳಕೆಯನ್ನು ಸಾಧ್ಯವಾದಷ್ಟೂ ಕೈಬಿಡಬೇಕು. ಈ ಬಗ್ಗೆ ಹಲವು ವೇದಿಕೆಗಳಲ್ಲಿ ಚರ್ಚೆಗಳು ನಡೆದಿವೆ. ಯೋಜನೆಗಳು ತಯಾರಾಗಿವೆ. ಗಂಭೀರ ಪ್ರಯತ್ನಗಳೂ ನಡೆಯುತ್ತಿವೆ.

ನಾವು ಪಳೆಯುಳಿಕೆ ಇಂಧನವನ್ನು, ವಿಶೇಷವಾಗಿ ಕಲ್ಲಿದ್ದಲು ಹಾಗೂ ನೈಸರ್ಗಿಕ ಅನಿಲವನ್ನು ಬಹುತೇಕ ಉರಿಸುತ್ತಿರುವುದು ವಿದ್ಯುತ್ ಉತ್ಪಾದಿಸಲು. ಅದಕ್ಕಿರುವ ಪರ್ಯಾಯ ಮಾರ್ಗವೆಂದರೆ ಸೌರಶಕ್ತಿ ಹಾಗೂ ಪವನ ಶಕ್ತಿಯನ್ನು ಬಳಸುವುದು. ಇದು ತುಂಬಾ ದುಬಾರಿಯಾದ ದಾರಿಯಾಗಿತ್ತು. ಪಳೆಯುಳಿಕೆ ಇಂಧನದಿಂದ ಉತ್ಪಾದನೆ ಆಗುವ ವಿದ್ಯುತ್‌ಗೆ ಹೋಲಿಸಿದರೆ ಸೌರಶಕ್ತಿ ಹಾಗೂ ಪವನ ಶಕ್ತಿಯನ್ನು ಬಳಸಿ ಉತ್ಪಾದಿಸುವ ವಿದ್ಯುತ್‌ನ ಬೆಲೆ ಹಲವು ಪಟ್ಟು ಹೆಚ್ಚಿತ್ತು. ಇದನ್ನು ಆರ್ಥಿಕವಾಗಿ ಲಾಭದಾಯಕವನ್ನಾಗಿ ಮಾಡುವುದು ಆದ್ಯತೆಯ ಸಂಗತಿಯಾಗಿತ್ತು. ಅದರಿಂದಾಗಿಯೇ ಇಂಧನದ ಪ್ರಶ್ನೆಯನ್ನು ಅರ್ಥಶಾಸ್ತ್ರಜ್ಞರು ಬೆಲೆಯ ಸಮಸ್ಯೆಯಾಗಿ ನೋಡುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಇವುಗಳ ಉತ್ಪಾದನಾ ವೆಚ್ಚ ತುಂಬಾ ಕಡಿಮೆಯಾಗಿದೆ. ತಂತ್ರಜ್ಞಾನದ ಅಭಿವೃದ್ಧಿಯಿಂದಾಗಿ ಈ ಹಸಿರು ಕೈಗಾರಿಕೆ ದೊಡ್ಡದಾಗಿ ಬೆಳೆದಿದೆ. ಪಳೆಯುಳಿಕೆ ಇಂಧನ ಬಳಸಿ ಉತ್ಪಾದಿಸುವುದಕ್ಕಿಂತ ಕಡಿಮೆ ಖರ್ಚಿನಲ್ಲಿ ಇಂದು ವಿದ್ಯುತ್ ಉತ್ಪಾದಿಸುವುದಕ್ಕೆ ಸಾಧ್ಯವಾಗಿದೆ. ಈ ಪ್ರವೃತ್ತಿ ಉಕ್ರೇನ್ ಯುದ್ಧಕ್ಕೆ ಮೊದಲೇ ಅಂದರೆ ಪೆಟ್ರೋಲ್ ಬೆಲೆ ಏರುವ ಮೊದಲೇ ಪ್ರಾರಂಭವಾಗಿತ್ತು.

ಬೆಲೆಯೇ ನಿಜವಾದ ಸಮಸ್ಯೆಯಾಗಿದ್ದರೆ ಬೆಲೆ ಇಳಿದ ಕೂಡಲೇ ಜಗತ್ತು ಪಳೆಯುಳಿಕೆ ಇಂಧನವನ್ನು ಬಿಟ್ಟು ಪರ್ಯಾಯ ಕ್ರಮಗಳಿಗೆ ಆತುಕೊಳ್ಳಬೇಕಿತ್ತು. ಆದರೆ ಹಾಗಾಗುತ್ತಿಲ್ಲ. ಪಳೆಯುಳಿಕೆ ಇಂಧನದ ಬಳಕೆ ಕಡಿಮೆ ಆಗುತ್ತಿಲ್ಲ. ಬದಲಿಗೆ ಅದರ ಉತ್ಪಾದನೆಯನ್ನು ಹೆಚ್ಚಿಸುವ ಪ್ರಯತ್ನಗಳೇ ಹೆಚ್ಚುತ್ತಿವೆ. ಅಂತಹ ಉದ್ದಿಮೆಗಳಿಗೆ ಬಂಡವಾಳದ ಮಹಾಪೂರವೇ ಹರಿದುಬರುತ್ತಿದೆ. ಹಾಗಾಗಿ, ಬೆಲೆಯೇ ನಿಜವಾದ ಕಾರಣವೆಂದು ಭಾವಿಸಲಾಗದು. ರಾಜಕಾರಣಿಗಳ ಇಚ್ಛಾಶಕ್ತಿಯ ಸಮಸ್ಯೆ ಇದ್ದರೂ ಅದೇ ಕಾರಣ ಎನ್ನುವುದೂ ಕಷ್ಟ.

ಬ್ರೆಟ್ ಕ್ರಿಸ್ಟೊಫರ್ಸ್ ತಮ್ಮ ಇತ್ತೀಚಿನ 'ದಿ ಪ್ರೈಸ್ ಈಸ್ ರಾಂಗ್...' ಪುಸ್ತಕದಲ್ಲಿ ಈ ಪ್ರಶ್ನೆಯನ್ನು ವಿವರವಾಗಿ ಚರ್ಚಿಸಿದ್ದಾರೆ. ಜಾಗತಿಕ ಮಟ್ಟದಲ್ಲಿ ಅಂಕಿಅಂಶಗಳನ್ನು ಕಲೆಹಾಕಿದ್ದಾರೆ. ನವೀಕರಿಸಬಹುದಾದ ಇಂಧನದ ಬೆಲೆ ವಿಪರೀತ ಇದ್ದುದು ವಾಸ್ತವ. ಪರಿಹಾರವಾಗಿ ಸರ್ಕಾರ ಪರ್ಯಾಯ ಇಂಧನದ ಉತ್ಪಾದನೆಗೆ ಪ್ರೋತ್ಸಾಹ ನೀಡಿತು. ಸಬ್ಸಿಡಿ ನೀಡಿತು. ಈ ಬಗೆಯ ಉತ್ತೇಜನಗಳಿಂದ ಖಾಸಗಿಯವರಿಗೆ ಇಂತಹ ಉದ್ದಿಮೆಗಳಲ್ಲಿ ಬಂಡವಾಳ ಹೂಡಲು ವಿಶ್ವಾಸ ಮೂಡಿತು. ಈ ಪ್ರಕ್ರಿಯೆಯಲ್ಲಿ ತಂತ್ರಜ್ಞಾನ ಬೆಳೆದು ಉತ್ಪಾದನಾ ವೆಚ್ಚ ಗಣನೀಯವಾಗಿ ಇಳಿಯಿತು. ಆದರೂ ಪಳೆಯುಳಿಕೆ ಇಂಧನದ ಪ್ರಭಾವ ತಗ್ಗಿಸಲು ಬೇಕಾದಷ್ಟು ಪ್ರಮಾಣದಲ್ಲಿ ಅವು ಬೆಳೆಯಲಿಲ್ಲ.

ಕ್ರಿಸ್ಟೊಫರ್ಸ್ ಗಮನಿಸಿರುವಂತೆ, ಖಾಸಗಿ ಸಂಸ್ಥೆಗಳು ಉತ್ಪನ್ನದ ಬೆಲೆಯನ್ನು ನೋಡಿ ಹೂಡಿಕೆ ಮಾಡುವುದಿಲ್ಲ. ಬದಲಿಗೆ ಲಾಭವನ್ನು ಗಮನಿಸುತ್ತವೆ. ನವೀಕರಿಸಬಹುದಾದ ಇಂಧನಕ್ಕೆ ಹೋಲಿಸಿದರೆ ಪೆಟ್ರೋಲ್ ಮೂಲದ ಇಂಧನಗಳಿಂದ ಬರುವ ಲಾಭ ಹಲವು ಪಟ್ಟು ಹೆಚ್ಚು. ಪೆಟ್ರೋಲ್ ಉತ್ಪನ್ನಗಳಿಂದ ಶೇಕಡ 15ರಿಂದ 20ರಷ್ಟು ಲಾಭ ಬಂದರೆ, ನವೀಕರಿಸಬಹುದಾದ ಇಂಧನದಿಂದ ಸಿಗುವುದು ಹೆಚ್ಚೆಂದರೆ ಶೇಕಡ 5ರಿಂದ 6ರಷ್ಟು. ಈ ಕೊರತೆಯನ್ನು ಸರ್ಕಾರದ ಸಬ್ಸಿಡಿ ಮತ್ತಿತರ ನೆರವು ತುಂಬಿ ಕೊಡುತ್ತಿತ್ತು. ನಿರೀಕ್ಷಿತ ಪ್ರಮಾಣದ ಲಾಭದ ಖಾತರಿ ಇದ್ದುದರಿಂದ ಖಾಸಗಿಯವರು ಉತ್ಸಾಹದಿಂದಲೇ ಬಂಡವಾಳ ಹೂಡಿದರು. ಪರ್ಯಾಯ ಇಂಧನದ ಬೆಲೆ ಕಡಿಮೆಯಾಯಿತು.

ಸರ್ಕಾರಗಳು ಪರ್ಯಾಯ ಇಂಧನಕ್ಕೆ ಅಡ್ಡಿಯಾಗಿದ್ದ ಆರ್ಥಿಕ ಸಮಸ್ಯೆ ಪರಿಹಾರವಾಯಿತು ಎಂದು ಭಾವಿಸಿದವು. ಸಬ್ಸಿಡಿಯನ್ನು ಕ್ರಮೇಣ ಹಿಂತೆಗೆದುಕೊಳ್ಳಲಾರಂಭಿಸಿದವು. ಇದರಿಂದ ಉದ್ದಿಮೆದಾರರ ಲಾಭದ ಪ್ರಮಾಣ ಕಡಿಮೆಯಾಯಿತು. ಅವರ ಉತ್ಸಾಹವೂ ಕಡಿಮೆಯಾಗತೊಡಗಿತು. ಪಳೆಯುಳಿಕೆ ಇಂಧನದಲ್ಲಿ ಸಿಗುವಷ್ಟೇ ಲಾಭ ಇಲ್ಲಿಯೂ ದೊರಕಿದರಷ್ಟೇ ಅವರು ಹೂಡಿಕೆ ಮಾಡುತ್ತಾರೆ. ಮಾಲಿನ್ಯದಂತಹವೆಲ್ಲಾ ಅವರ ಕಾಳಜಿಯ ವಿಷಯಗಳಲ್ಲ. ಅದಕ್ಕಾಗಿಯೇ ಆ ಉದ್ದಿಮೆಗಳು ನೆರವನ್ನು ಮುಂದುವರಿಸಲು ಸರ್ಕಾರಗಳನ್ನು ಒತ್ತಾಯಿಸುತ್ತವೆ. ನೆರವು ನಿಂತೊಡನೆ ಖಾಸಗಿ ಹೂಡಿಕೆಯೂ ನಿಲ್ಲುತ್ತದೆ ಅನ್ನುವುದು ಸ್ಪಷ್ಟ.

ವಿದ್ಯುತ್‌ನ ಅವಶ್ಯಕತೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಅದಕ್ಕೆ ಅನುಗುಣವಾಗಿ ಉತ್ಪಾದನೆಯೂ ಹೆಚ್ಚಬೇಕು. ಪರ್ಯಾಯ ಇಂಧನದ ಉತ್ಪಾದನೆಗೆ ಈಗ ವರ್ಷಕ್ಕೆ ಹೂಡಿಕೆಯಾಗುತ್ತಿರುವ ಹಣದ ಪ್ರಮಾಣ ಹೆಚ್ಚಬೇಕು. ಲಾಭವೇ ಕೇಂದ್ರವಾಗಿರುವ ಖಾಸಗಿಯವರಿಂದ ಅದನ್ನು ನಿರೀಕ್ಷಿಸುವುದಕ್ಕೆ ಕಷ್ಟವಾಗುತ್ತದೆ. ಎಕ್ಸಾನ್, ಚೆವರಾನ್ ಅಂತಹ ಕಂಪನಿಗಳು ಪಳೆಯುಳಿಕೆ ಇಂಧನಕ್ಕಾಗಿ ನೆಲ ಅಗೆಯುತ್ತಿವೆ. ತಮ್ಮ ಉತ್ಪಾದನೆಯ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುವುದಕ್ಕೆ ಬೇರೆ ಬೇರೆ ಕಂಪನಿಗಳನ್ನು ಕೊಳ್ಳುತ್ತಿವೆ.

ಲೀಥಿಯಂನಿಂದ ವಿದ್ಯುತ್ ಉತ್ಪಾದಿಸುವುದರಿಂದ ಲಾಭ ಹೆಚ್ಚು ಅನ್ನುವ ಕಾರಣಕ್ಕೆ ಕೆಲವು ಕಂಪನಿಗಳು ಅದರ ಉತ್ಪಾದನೆಗೆ ಕೈಹಾಕಿವೆ. ಅವರಿಗಿರುವುದು ತೈಲದ ಮೇಲಿನ ವ್ಯಾಮೋಹ ಅನ್ನುವುದಕ್ಕಿಂತ ಹಣದ ಮೇಲಿನ ಪ್ರೀತಿ. ಪಳೆಯುಳಿಕೆ ಇಂಧನದಿಂದ ಬರುವ ಲಾಭದ ರುಚಿ ಕಂಡ ಅವರು, ಪರ್ಯಾಯ ಇಂಧನದ ಪರವಾದ ನೀತಿಗಳು ಜಾರಿಯಾಗದಂತೆ ನೋಡಿಕೊಳ್ಳುತ್ತಾರೆ. ಹಾಗಾಗಿಯೇ ಪಳೆಯುಳಿಕೆ ಇಂಧನದ ವಿರುದ್ಧದ ನಿರ್ಣಯಗಳು, ನೀತಿಗಳು ಪರಿಣಾಮಕಾರಿಯಾಗಿ ಕೃತಿಗೆ ಇಳಿಯುವುದಿಲ್ಲ. ಇದನ್ನು ಬಹುತೇಕ ದೇಶಗಳ ಚರಿತ್ರೆ ಹೇಳುತ್ತದೆ. ಶೃಂಗಸಭೆಗಳಲ್ಲೂ ಇವರದ್ದೇ ಪ್ರಭಾವವನ್ನು ಕಾಣುತ್ತೇವೆ. ಹವಾಮಾನಕ್ಕೆ ಸಂಬಂಧಿಸಿದ ಸಂಶೋಧನಾ ಸಂಸ್ಥೆಗಳಿಗೆ ಹಣಕಾಸು ನೀಡುವವರೂ ಇವರೆ. ಈ ಸಂಸ್ಥೆಗಳಿಂದ ಹೊರಬರುತ್ತಿರುವ ಬಹುತೇಕ ಸಂಶೋಧನಾ ಪ್ರಬಂಧಗಳು ಪರ್ಯಾಯ ಇಂಧನಗಳ ನ್ಯೂನತೆಯನ್ನು ಹುಡುಕುವುದರಲ್ಲೇ ನಿರತವಾಗಿವೆ.

ಮಾರುಕಟ್ಟೆಯಲ್ಲಿ ಮಾರಾಟವಾಗುವ ಉಳಿದ ಸರಕುಗಳಿಗಿಂತ ವಿದ್ಯುತ್ ತುಂಬಾ ಭಿನ್ನ. ಅದು ಎಲ್ಲರಿಗೂ ಅನಿವಾರ್ಯ. ಅದನ್ನು ಉತ್ಪಾದಿಸುವುದಕ್ಕೆ ದೊಡ್ಡ ಪ್ರಮಾಣದ ಮೂಲ ಸೌಕರ್ಯ ಬೇಕು. ಅದನ್ನು ಶೇಖರಿಸಿಡುವುದು ಕಷ್ಟ. ಅದು ಕೂಡ ಭೂಮಿ, ಶ್ರಮ, ನೀರಿನಂತೆ ಮಾರಾಟಕ್ಕೆಂದು ತಯಾರಾದ ಸರಕಲ್ಲ. ಆಧುನಿಕ ಆರ್ಥಿಕತೆ ಅದನ್ನು ಕೃತಕವಾಗಿ ಸರಕನ್ನಾಗಿಸಿದೆ. ಮಾರುಕಟ್ಟೆಗೆ ತನ್ನಷ್ಟಕ್ಕೆ ನ್ಯಾಯಯುತವಾಗಿ ಅದರ ಬೆಲೆ ನಿರ್ಧರಿಸುವುದಕ್ಕೆ ಅಥವಾ ವಿತರಿಸುವುದಕ್ಕೆ ಸಾಧ್ಯವಿಲ್ಲ. ಸರ್ಕಾರದ ಮಧ್ಯಪ್ರವೇಶ ಅವಶ್ಯ. ಸರ್ಕಾರ ಇದನ್ನೊಂದು ಸಾರ್ವಜನಿಕ ವಸ್ತುವನ್ನಾಗಿಯೇ ನೋಡಬೇಕು. ಅದರ ಉತ್ಪಾದನೆ, ವಿತರಣೆಯ ಜವಾಬ್ದಾರಿ ತೆಗೆದುಕೊಳ್ಳಬೇಕು ಎಂದು ಕ್ರಿಸ್ಟೊಫರ್ಸ್ ವಾದಿಸುತ್ತಾರೆ.

ಜನರಿಗೆ ಅನುಕೂಲಕರವಾಗುವಂತೆ ವಿದ್ಯುತ್‌ನ ಬಳಕೆಯಾಗಬೇಕಾದರೆ ಅದಕ್ಕೂ ನಿಯಮಗಳು, ನಿಯಂತ್ರಣಗಳು ಹಾಗೂ ಸಬ್ಸಿಡಿಗಳು ಬೇಕಾಗುತ್ತವೆ. ಇತ್ತೀಚಿನವರೆಗೂ ಸರ್ಕಾರಗಳೇ ವಿದ್ಯುತ್ತನ್ನು ಉತ್ಪಾದಿಸಿ, ವಿತರಿಸುತ್ತಿದ್ದವು. ಉದಾರವಾದಿ ಆರ್ಥಿಕ ನೀತಿಯಿಂದಾಗಿ ಅದು ಕ್ರಮೇಣ ಖಾಸಗಿಯವರ ಕೈಸೇರುತ್ತಿದೆ. ಅದರ ಉತ್ಪಾದನೆ, ವಿತರಣೆ ಹಾಗೂ ಬಳಕೆ ಎಲ್ಲವೂ ವಾಣಿಜ್ಯೀಕರಣಗೊಂಡಿವೆ. ಹಾಗಾಗಿಯೇ ಇಂಗಾಲದ ಹೊರಸೂಸುವಿಕೆಯ ಪ್ರಮಾಣವನ್ನು ಇಳಿಸುವುದು ದೊಡ್ಡ ಸಮಸ್ಯೆಯಾಗಿದೆ. ಸರ್ಕಾರ ಮತ್ತೆ ನೇರವಾಗಿ ಇದರಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ. ಪ್ರೋತ್ಸಾಹ ನೀಡುತ್ತಾ ನೇಪಥ್ಯದಲ್ಲಿ ಉಳಿಯುವುದಕ್ಕೆ ಸಾಧ್ಯವಿಲ್ಲ. ಸಬ್ಸಿಡಿ ಕೊಡುವುದನ್ನಾಗಲಿ, ಖಾಸಗಿಯವರ ಲಾಭದ ಪ್ರಮಾಣವನ್ನು ರಕ್ಷಿಸುವುದನ್ನಾಗಲಿ ನಿರಂತರವಾಗಿ ಮಾಡಲು ಸಾಧ್ಯವಾಗುವುದಿಲ್ಲ.

ಸರ್ಕಾರವೇ ನವೀಕರಿಸಬಹುದಾದ ಇಂಧನಗಳ ಉತ್ಪಾದನೆ ಹಾಗೂ ವಿತರಣೆಯ ಜವಾಬ್ದಾರಿಯನ್ನು ಹೊರಬೇಕು. ಖಾಸಗಿಯವರಿಗೆ ಹವಾಮಾನವನ್ನು ಕಾಪಾಡಿಕೊಳ್ಳುವುದು ಆದ್ಯತೆಯ ವಿಷಯವಲ್ಲ. ಅದು ಅವರ ಕಾಳಜಿಯ ವಿಷಯವೂ ಅಲ್ಲ. ಸರ್ಕಾರ ಈ ವಾಸ್ತವವನ್ನು ಅರ್ಥಮಾಡಿಕೊಳ್ಳಬೇಕು. ಇಲ್ಲದೇಹೋದರೆ ಹಸಿರು ಇಂಧನದ ಕನಸು ನನಸಾಗದೇ ಉಳಿಯಬಹುದು ಎನ್ನುತ್ತಾರೆ ಕ್ರಿಸ್ಟೊಫರ್ಸ್.

ಚುರುಮುರಿ



ಬೇತಾಳ ಗೀತಂ

• ಡಿ.ಎಸ್.ಲಿಂಗರಾಜು

ನಮ್ಮ ವಿಕ್ರಮಾದಿತ್ಯ ಜನಸಾಮಾನ್ಯನ ಹಂಗೆ ಕರ್ತವ್ಯ ಮರೀದೆ ಬೇತಾಳನ್ನ ಹುಡಿಕ್ಕಂದು ವಿಧಾನಸೌಧದ ಮುಂದುಕ್ಕೆ ಬಂದಾಗ, ಸೌಧದಲ್ಲಿ ಹಲಾಲು-ಗುಲಾಲು, ಚಿನ್ನ-ಡ್ರಗ್ಸ್ ದಂಧೆಯ ಗದ್ದಲದ ಧಗೆ ಏರಿತ್ತು.

'ಓ ಇಲ್ಲಿದ್ದೀಯಾ ರಾಜನ್' ಅಂತ ಬೇತಾಳ ವಿಕ್ರಮಾದಿತ್ಯನ ಹೆಗಲೇರಿಕ್ಯಂತು. ರಸ್ತೆಗುಂಡಿ ತಪ್ಪಿಸಕ್ಕೆ ವಿಕ್ರಮಾದಿತ್ಯನು ಅತ್ತಿತ್ತ ನೆಗೆಯುತ್ತಿರಲು 'ಹುಸಾರು ಕಾ ರಾಜರ್' ಅಂತ ಕಿಸಗುಟ್ಟಿತು. ಕಬ್ಬನ್‌ಪಾರ್ಕಲ್ಲಿ ಅಂಗನವಾಡಿ ಕಾರ್ಯಕರ್ತೆಯರು 'ನ್ಯಾಯ ಕೊಡಿ' ಅಂತ ಕೂಗ್ತಿದ್ದರು. ಫುಟ್‌ಪಾತಿಗೆ ಬೈಕು ಹತ್ತಿಸಿದ ಪೋರ್ಕಿಯೊಬ್ಬ ಬೇತಾಳನಿಗೆ ಲಾಂಗಿನಲ್ಲಿ ಚುಚ್ಚಿ ಹೋದ. 'ಡ್ರಗ್ಸ್ ಬೇಕಾ?' ಅಂತ ಒಬ್ಬ ಬಂದಾಗ ವಿಕ್ರಮಾದಿತ್ಯನು ಸೈಲೆಂಟಾಗಿದ್ದ.

'ರಾಜನೇ ಇದೇನಾ ವಿದ್ಯಾರ್ಥಿಗಳ ವೃತ್ತಿಗೆ ಮಾರ್ಗದರ್ಶನ. ಗಡಿಯಲ್ಲಿ ಶಾಲೆ ಕೇಳೋರೇ ಇಲ್ಲ. ಬಜೆಟ್ಟಲ್ಲಿ ಮೂರು ಲಕ್ಷ ಮನೆ ಕಟ್ಟಸ್ತರಂತೆ. ವಿತ್ತೀಯ ಕೊರತೆ ಮಧ್ಯೆ ಕೋಟಿ ಸಾಲ ಮಾಡಿ ಮೂರೂಮುಕ್ಕಾಲು ಲಕ್ಷ ಕೋಟಿಯ ಆಸೆಯನ್ನ ಆರೂವರೆ ಕೋಟಿ ಜನಗಳ ಮೂಗಿಗೆ ಹಚ್ಚಿಬುಟ್ಟದೆ ಸಿದ್ದಣ್ಣ, ಅಭಿವೃದ್ಧಿ, ಅನುದಾನ, ಆರ್ಥಿಕ ಬಲ, ಸಣ್ಣ ವ್ಯಾಪಾರಿಗಳಿಗೆ ಸಾಲ, ಗೌರವಧನ ಹೆಚ್ಚಳಕ್ಕೂ ಗ್ಯಾರಂಟಿ ಐತಾ ಕಾಣ್ನಲ್ಲ. ಇದೊಂತರಾ ಆರ್ಟಫಿಶಿಯಲ್ ಇಂಟೆಲಿಜನ್ಸ್ ಬಜೆಟ್ ಇದ್ದಂಗಿಲ್ವಾ ರಾಜನ್?' ಅಂತ ಛೇಡಿಸಿತು ಬೇತಾಳ.

'ಬಣ ಬಡಿದಾಟಕ್ಕೆ ಗುಗ್ಗುಳ ಹಾಕಿ 'ಅಹಹಾ ರುದ್ರ, ಅಹಹಾ ದೇವಾ, ಮೂರು ಸಾವಿರ ನಯನ, ಎರಡು ಸಾವಿರ ಭುಜ. ಇಂತಿಪ್ಪ ದೇವರು ಹ್ಯಂಗೆ ಬರುತಾರಂದ್ರೆ...' ಅಂತ ಒಡಪು ಹೇಳಿಕ್ಯಂದು ಕುಣಿಯೋ ರಾಜಕಾರಣಿಗಳು ಇದ್ದಾಗ ಜನ ಏನು ಮಾಡಬಕು ರಾಜನ್?' ಬೇತಾಳ ಚಿಂತೆಗೆ ಬಿತ್ತು.

'ಈಗ ನನ್ನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಕೊಡದೇ ಹೋದರೆ ನಿನ್ನ ತಲೆ ಸರ್ಕಾರಿ ಜಾಲತಾಣದಂಗೆ ಹ್ಯಾಂಗಾಗುವುದು' ಅಂದಿತು.

ವಿಕ್ರಮಾದಿತ್ಯನು ಚುರುಕಾಗಿ 'ಜನರೆಲ್ಲಾ ಜಾಣರಾಗಿರಿ, ಜಾಗರೂಕರಾಗಿರಿ' ಎಂದೊಡನೇ ಬೇತಾಳವು ರಾಜನನ್ನು ಬುಟ್ಟು ಪೇರಿ ಕಿತ್ತಿತು.

ದಿನದ ಟ್ವೀಟ್

ನಿಜವಾದ ಪ್ರಜಾಪ್ರಭುತ್ವವೆಂದರೆ...

ರಾಜಕಾರಣಿಗಳು ಹೀಗೆ ಪರಸ್ಪರ ಬೆರೆಯುವುದನ್ನು ನೋಡಲು ಖುಷಿಯಾಗುತ್ತದೆ. ಅವರು ರಾಜಕೀಯ ಪ್ರತಿಸ್ಪರ್ಧಿಗಳೇ ವಿನಾ ವಿರೋಧಿಗಳಲ್ಲ... ಅವರನ್ನು ಶತ್ರುಗಳಂತೆ ಬಿಂಬಿಸಬೇಡಿ. ಇದನ್ನೇ ನಿಜವಾದ ಪ್ರಜಾಪ್ರಭುತ್ವ ಎನ್ನುವುದು.

(ಸಂಸದ ತೇಜಸ್ವಿ ಸೂರ್ಯ ಅವರ ವಿವಾಹ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪಾಲ್ಗೊಂಡಿದ್ದುದಕ್ಕೆ ಪ್ರತಿಕ್ರಿಯೆ)

ಶ್ರೀನಿವಾಸ್ ಪುಲಿಪಾಟಿ

ಕಿಡಿನುಡಿ

ಅಪರಾಧಿಗಳ ಪೈಕಿ ಶೇ 90ಕ್ಕೂ ಹೆಚ್ಚು ಮಂದಿಗೆ ರಾಜಕಾರಣಿಗಳು ಅಥವಾ ಪೊಲೀಸರ ಸಂಪರ್ಕ ಇರುತ್ತದೆ. ನಾಚಿಕೆಗೇಡು, ನಾಚಿಕೆಗೇಡು! ಭೂಮಿಯ ಮೇಲಿನ ಅತ್ಯಂತ ಭ್ರಷ್ಟ ರಾಷ್ಟ್ರ. ನಮ್ಮ ಮತದಾರರು ಸಹ ಈಗ ಸಂಪೂರ್ಣ ಭ್ರಷ್ಟರಾಗಿದ್ದಾರೆ...

(ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಬಂಧಿತರಾಗಿರುವ ಚಿತ್ರನಟಿ ರನ್ಯಾ ರಾವ್ ಅವರಿಗೆ ರಾಜಕಾರಣಿಗಳ ಸಂಪರ್ಕ ಇದೆ ಎಂಬ ವರದಿಗಳಿಗೆ ಪ್ರತಿಕ್ರಿಯೆ)

ರಾಕೇಶ್ ಕುಮಾರ್ ಬನ್ಸಲ್

25 ವರ್ಷಗಳ ಹಿಂದೆ
ಶನಿವಾರ, 11-3-2000

● **ವಿಶ್ವಾಸಮತ ಎದುರಿಸದೇ ನಿತೀಶ್ ಪದತ್ಯಾಗ**

ಪಟ್ನಾ, ಮಾರ್ಚ್ 10– ವಿಧಾನಸಭೆಯಲ್ಲಿ ವಿಶ್ವಾಸಮತ ಎದುರಿಸದೆಯೇ ಮುಖ್ಯಮಂತ್ರಿ ನಿತೀಶ್ ಕುಮಾರ್ ಇಂದು ರಾಜೀನಾಮೆ ನೀಡಿದರು.

ಇದರೊಂದಿಗೆ, ಬಿಹಾರವನ್ನು 10 ವರ್ಷಗಳ ಕಾಲ ಆಳಿದ ಲಾಲೂ ಪ್ರಸಾದ್ ಅವರ ನಾಯಕತ್ವದ ಪಕ್ಷ ಮೂರನೇ ಬಾರಿಗೆ ಈ ರಾಜ್ಯದ ಚುಕ್ಕಾಣಿ ಹಿಡಿಯುವಂತೆ ಆಗಿದೆ. ಮುಂದಿನ ಸರ್ಕಾರ ರಚನೆಯಾಗುವವರೆಗೆ ಅಧಿಕಾರದಲ್ಲಿ ಮುಂದುವರಿಯಲು ನಿತೀಶ್ ಕುಮಾರ್ ಅವರಿಗೆ ಸೂಚಿಸಲಾಗಿದೆ.

ಸೋಲು ಕಟ್ಟಿಟ್ಟದ್ದು ಎಂಬುದು ಖಚಿತವಾಗಿರುವುದರಿಂದಲೇ ನಿತೀಶ್ ಅವರು ವಿಶ್ವಾಸಮತ ಗೊತ್ತುವಳಿ ಮೇಲಿನ ಚರ್ಚೆಗೆ ಉತ್ತರ ನೀಡಿದರೂ, ಮತದಾನಕ್ಕೆ ಕಾಯದೆ ತಮ್ಮ ಭಾಷಣದಲ್ಲಿ ಆರ್‌ಜೆಡಿ ಹಾಗೂ ಕಾಂಗ್ರೆಸ್ ಪಕ್ಷಗಳನ್ನು ಟೀಕಿಸಿ, ತಾವು ರಾಜೀನಾಮೆ ಸಲ್ಲಿಸಲು ರಾಜಭವನಕ್ಕೆ ಹೋಗುತ್ತಿರುವುದಾಗಿ ಪ್ರಕಟಿಸಿದರು.

● **ಕೃಷ್ಣ ದಿಢೀರ್ ದೆಹಲಿಗೆ: ಭೇಟಿ ಗೋಪ್ಯ**

ನವದೆಹಲಿ, ಮಾರ್ಚ್ 10– ರಾಜ್ಯಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆಗಾಗಿ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರೊಡನೆ ಚರ್ಚಿಸಲು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಇಂದು ರಾತ್ರಿ ದೆಹಲಿಗೆ ದಿಢೀರನೆ ಆಗಮಿಸಿದರು.

ಆದರೆ ಅವರು ತಮ್ಮ ಈ ಭೇಟಿಯನ್ನು ಗೋಪ್ಯವಾಗಿಟ್ಟಿದ್ದಾರೆ. ದೆಹಲಿಗೆ ಆಗಮಿಸಿರುವ ಮುಖ್ಯಮಂತ್ರಿ ಕರ್ನಾಟಕ ಭವನದಲ್ಲಿ ಉಳಿದುಕೊಂಡಿಲ್ಲ. ಅವರು ಎಲ್ಲಿ ಉಳಿದುಕೊಂಡಿದ್ದಾರೆಂಬ ಬಗ್ಗೆ ತಮಗೆ ಮಾಹಿತಿ ಇಲ್ಲವೆಂದು ಇಲ್ಲಿನ ಕರ್ನಾಟಕ ಭವನದ ಮತ್ತು ಮುಖ್ಯಮಂತ್ರಿ ಅವರ ಬೆಂಗಳೂರು ಕಾರ್ಯಾಲಯದ ಮೂಲಗಳು ಹೇಳಿವೆ.

50 ವರ್ಷಗಳ ಹಿಂದೆ
ಮಂಗಳವಾರ, 11-3-1975

● **ರಾಜ್ಯ ವಿಧಾನಮಂಡಲ: ಕಾಂಗ್ರೆಸ್ ನಾಯಕತ್ವ ಬದಲಾವಣೆ ಇಲ್ಲ**

ಬೆಂಗಳೂರು, ಮಾರ್ಚ್ 10– ರಾಜ್ಯದಲ್ಲಿನ ವಿಧಾನಮಂಡಲ ನಾಯಕತ್ವದಲ್ಲಿ ಬದಲಾವಣೆಯೇನೂ ಇಲ್ಲವೆಂದು ಕಾಂಗ್ರೆಸ್ ಅಧ್ಯಕ್ಷ ದೇವಕಾಂತ ಬರೂವ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ಆ ಬಗ್ಗೆ ಪತ್ರಿಕೆಗಳಲ್ಲಿ ಬಂದ ವರದಿಗಳನ್ನು ತಾವು ಓದಿಲ್ಲವೆಂದು ಹೇಳಿ, ಮೊದಲು ಆ ಸಂಬಂಧದಲ್ಲಿ ಕೇಳಲಾದ ಪ್ರಶ್ನೆಗೆ ಪ್ರತಿಕ್ರಿಯೆ ವ್ಯಕ್ತಪಡಿಸಲು ನಿರಾಕರಿಸಿದರು.

ಪ್ರಶ್ನೆ: ಯಾರಾದರೂ ಆ ಬಗ್ಗೆ ಈ ಹಿಂದೆ ಚರ್ಚಿಸಿದರೇ?

ಉತ್ತರ: ನನಗೆ ನೆನಪಿಲ್ಲ.

ದೇವರಾಜ ಅರಸು ಮಂತ್ರಿಮಂಡಲದ ಬಗ್ಗೆ ತಮಗೇನೂ ಖಚಿತವಾದ ಆಪಾದನೆಗಳು ಬಂದಿಲ್ಲವೆಂದು ಬರೂವ ಅವರು ಹೇಳಿದರು.

ವಿವಿಧ ರಾಜ್ಯಗಳಿಂದ ಬರುವ ದೂರುಗಳನ್ನು ಪರಿಶೀಲಿಸಲು ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ಒಂದು ಪರಿಶೀಲನಾ ಸಮಿತಿಯನ್ನು ಹೊಂದಿದೆ. ಅದರಲ್ಲಿ ಹಿರಿಯ ಕಾಂಗ್ರೆಸ್ಸಿಗರಾದ ಸರ್ದಾರ್ ಸ್ವರ್ಣಸಿಂಗ್, ಸಿ. ಸುಬ್ರಹ್ಮಣ್ಯಂ ಮತ್ತು ಗೋಖಲೆ ಅವರು ಸದಸ್ಯರಾಗಿದ್ದಾರೆ. ಖಚಿತವಾದ ಆಪಾದನೆಗಳಿಂದ ಕೂಡಿದ ದೂರುಗಳನ್ನು ಆ ಸಮಿತಿಗೆ ಈಗಾಗಲೇ ಒಪ್ಪಿಸಲಾಗಿದೆಯೆಂದು ಕಾಂಗ್ರೆಸ್ ಅಧ್ಯಕ್ಷರು ಹೇಳಿದರು.

ಸಂಗತ

'ಕಳೆದು'ಹೋಗುತ್ತಿದ್ದಾರೆ ಮಕ್ಕಳು

ಸಾಮಾಜಿಕ ಜಾಲತಾಣಗಳಲ್ಲಿ ಹಗಲಿರುಳೂ ಚಾಟ್ ಮಾಡುವ ಮೂಲಕ ಹದಿಹರೆಯದವರು ವರ್ಚುವಲ್ ಲೋಕದಲ್ಲಿ ತಮ್ಮನ್ನು ತಾವೇ ಕಳೆದುಕೊಳ್ಳುತ್ತಿದ್ದಾರೆ

• ದೀಪಾ ಹಿರೇಗುತ್ತಿ

ಕಲಬುರಗಿ ಜಿಲ್ಲೆಯ ಯಡ್ರಾಮಿ ತಾಲ್ಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ಓದುತ್ತಿದ್ದ ಬಾಲಪ್ರೇಮಿಗಳು ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡ ಸುದ್ದಿ ತಿಳಿದು ದಿಗಿಲಾಯಿತು. ಪ್ರೀತಿ ಎಂಬುದರ ಅರ್ಥವೇ ಗೊತ್ತಿಲ್ಲದ, ಆಕರ್ಷಣೆಯನ್ನೇ ಜೀವನ್ಮರಣ ನಿರ್ಧರಿಸುವ ಮಾನದಂಡ ಎಂದುಕೊಳ್ಳುತ್ತಾರೆ ಇಂತಹ ಅದೆಷ್ಟೋ ಪುಟ್ಟ ಹುಡುಗ– ಹುಡುಗಿಯರು. ಪ್ರೀತಿಯ ಹೆಸರಿನಲ್ಲಿ ಅವರು ತೆಗೆದುಕೊಳ್ಳುವ ದೊಡ್ಡ ದೊಡ್ಡ ನಿರ್ಧಾರಗಳು ಎಳೆಯ ಮನಸ್ಸುಗಳು ಸಾಗುತ್ತಿರುವ ದಾರಿಯ ಕುರಿತು ಸಮಾಜಕ್ಕೆ ಎಚ್ಚರಿಕೆಯ ಗಂಟೆಯಾಗಿವೆ.

ಒಂದೂವರೆ ದಶಕದ ಹಿಂದೆ ನಮ್ಮ ಕೈಗೆ ಸ್ಮಾರ್ಟ್‌ಫೋನ್‌ಗಳು ಬಂದ ಮೇಲೆ ಜಗತ್ತು ಬೇರೆಯದ್ದೇ ದಾರಿಯಲ್ಲಿ ಸಾಗುತ್ತಿದೆ. ಸ್ಮಾರ್ಟ್‌ಫೋನ್‌ನಿಂದ ಹುಟ್ಟಿಕೊಂಡ ಸಾಮಾಜಿಕ ಜಾಲತಾಣಗಳು ಸಮಾಜವನ್ನು ನಾವು ಊಹಿಸದಿರುವಂತಹ ಅಪಾಯದತ್ತ ನೂಕುತ್ತಿವೆ. ಕಣ್ಣಿಗೆ ಬಟ್ಟೆ ಕಟ್ಟಿಕೊಂಡಂತೆ ಅವನತಿಯತ್ತ ದಾಪುಗಾಲು ಇಡುತ್ತಿರುವವರಲ್ಲಿ ಎಲ್ಲ ವಯೋಮಾನದವರು ಇದ್ದರೂ ಹದಿಹರೆಯದ ಮಕ್ಕಳು ಬಹುಬೇಗ ಈ ಇಳಿಜಾರಿನಲ್ಲಿ ಜಾರುತ್ತಿದ್ದಾರೆ. ಶಾಲಾ ಕಾಲೇಜುಗಳಲ್ಲಿ ಒಂದಕ್ಷರ ಮಾತನಾಡದೆ ಇದ್ದರೂ ಸಾಮಾಜಿಕ ಜಾಲತಾಣಗಳಲ್ಲಿ ಹಗಲಿರುಳೂ ಚಾಟ್ ಮಾಡುವ ಮೂಲಕ ತಮ್ಮದೇ ಆದ ವರ್ಚುವಲ್ ಲೋಕವೊಂದನ್ನು ಕಟ್ಟಿಕೊಂಡು, ಆ ಲೋಕದಲ್ಲಿ ತಮ್ಮನ್ನು ತಾವೇ ಕಳೆದುಕೊಳ್ಳುತ್ತಿದ್ದಾರೆ.

ಓದುವಂತೆ ಒತ್ತಾಯಿಸುವ ತಂದೆ, ತಾಯಿ, ಶಿಕ್ಷಕರು ತಮ್ಮ ಬದುಕಿನ ಖಳನಾಯಕರಂತೆ ಭಾಸವಾಗುತ್ತ, ಯಾರ ಅಡೆತಡೆಯೂ ಇಲ್ಲದೆ ಚಾಟ್ ಮಾಡುವುದರಲ್ಲೇ ತಮ್ಮೆಲ್ಲ ಸಮಸ್ಯೆಗಳಿಂದ ದೂರ ಓಡಲು ಪ್ರಯತ್ನಿಸುವ ಹದಿಹರೆಯದ ಮಕ್ಕಳು ಬಹಳ ಸೂಕ್ಷ್ಮ ಸನ್ನಿವೇಶದಲ್ಲಿ ಇದ್ದಾರೆ.

ಆರು, ಏಳನೇ ತರಗತಿಯ ಮಕ್ಕಳನ್ನು ಕೇಳಿದರೆ, ಇನ್‌ಸ್ಟಾಗ್ರಾಂ ಖಾತೆ ಇಲ್ಲದಿದ್ದರೆ ತರಗತಿಯ ಮಕ್ಕಳು ತಮ್ಮನ್ನು ದೂರವಿಡುತ್ತಾರೆ ಎಂದು, ಪಾಲಕರಿಗೆ ಗೊತ್ತಿಲ್ಲದೇ ಖಾತೆ ತೆರೆದದ್ದಕ್ಕೆ ಕಾರಣ ನೀಡುತ್ತಾರೆ. ಹುಡುಗರು ಹುಡುಗಿಯರೊಂದಿಗೆ ಹುಡುಗಿಯರು ಹುಡುಗರೊಂದಿಗೆ ಚಾಟ್ ಮಾಡ ದಿದ್ದರೂ ಆಗಲೂ ಇದೇ ಪರಿಸ್ಥಿತಿಯನ್ನು ಎದುರಿಸ ಬೇಕಾಗುತ್ತದೆ. 'ನನಗೂ ಒಬ್ಬ ಗೆಳೆಯ ಬೇಕು' ಎನ್ನುವ ಆಸೆಗಿಂತ, ಗೆಳೆಯ ಅಥವಾ ಗೆಳತಿ ಇಲ್ಲದಿದ್ದರೆ ತನ್ನ ಸ್ನೇಹಿತರ ಮುಂದೆ ಬೆಲೆ ಕಳೆದುಕೊಳ್ಳುವ ಭಯ ಈ ಮಕ್ಕಳನ್ನು ಕಾಡುತ್ತದೆ. ಐದು, ಆರನೇ ತರಗತಿಯಿಂದ ಹಿಡಿದು ಪಿಯುಸಿಯವರೆಗೂ ಹೀಗೆ ಬಹಿಷ್ಕೃತಗೊಳ್ಳುವ ಭಯವಿದೆ ಎಂದರೆ ಅಚ್ಚರಿಪಡುವ ಅವಶ್ಯಕತೆಯಿಲ್ಲ.

ಕೆಲವು ವರ್ಷಗಳ ಹಿಂದೆ ಮೊಬೈಲ್ ಫೋನ್ ಇಲ್ಲದಿದ್ದ ಮಕ್ಕಳು ಆ ಕಾರಣಕ್ಕಾಗಿ ಈ ಬಗೆಯ ಒತ್ತಡ ಅನುಭವಿಸುತ್ತಿದ್ದರು. ಈಗ ಮೊಬೈಲೂ ಇರಬೇಕು, ಅದರಲ್ಲಿ ಸಾಮಾಜಿಕ ಜಾಲತಾಣದ ಖಾತೆಯೂ ಇರಲೇಬೇಕು! ಅಷ್ಟೇ ಅಲ್ಲ, ಜತೆಗೊಬ್ಬ ಸಂಗಾತಿಯೂ ಬೇಕು! ಪಾಲಕರು ಮತ್ತು ಶಿಕ್ಷಕರಿಗಿಂತ ಸಹಪಾಠಿಗಳ ಪ್ರಭಾವ ಮಕ್ಕಳ ಮೇಲೆ ಎಷ್ಟರಮಟ್ಟಿಗೆ ಇರುತ್ತದೆ ಎಂಬುದಕ್ಕೆ ಇಂತಹ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು. ಇದನ್ನು ಫೋಮೊ (FOMO) ಎಂದು ಕರೆಯುತ್ತಾರೆ. ಅಂದರೆ ಫಿಯರ್ ಆಫ್ ಮಿಸ್ಸಿಂಗ್ ಔಟ್. ಗುಂಪಿನಿಂದ ಹೊರಗುಳಿಯುವ ಭಯ. ತನ್ನ ಇತರ ಸ್ನೇಹಿತರಂತೆ ತಾವು ಇಲ್ಲದಿದ್ದರೆ ಲೆಕ್ಕಕ್ಕೆ ಬಾರದವರಂತೆ ಆಗಿಬಿಡುವ ಭಯ ಈ ಎಳೆಯ ಮನಸ್ಸುಗಳಲ್ಲಿ ಆಳವಾಗಿ ಬೇರೂರಿರುತ್ತದೆ. ಇಂತಹ ಅನಿವಾರ್ಯವನ್ನು ಮಕ್ಕಳಿಗೆ ತಂದಿಟ್ಟವರು ಯಾರು? ಊಟ ಮಾಡಿಸಲು, ತಿಂಡಿ ತಿನ್ನಿಸಲು ಮಕ್ಕಳಿಗೆ ಹುಟ್ಟಿದಾಗಿನಿಂದ ಮೊಬೈಲ್ ಫೋನ್ ಕೊಡುವ, 'ನೋಡ್ರೀ ನನಗೇನೂ ಗೊತ್ತಿಲ್ಲ, ನಮ್ಮ ಮಕ್ಕಳಿಗೆ ಎಲ್ಲಾ ಗೊತ್ತು' ಎಂದು ಕೊಚ್ಚಿಕೊಳ್ಳುವ ನಾವೇ ಅಲ್ಲವೆ?



2019ರಲ್ಲಿ ದೆಹಲಿಯ ಪ್ರತಿಷ್ಠಿತ ಶಾಲೆಗಳ ಹನ್ನೊಂದು, ಹನ್ನೆರಡನೇ ತರಗತಿಯ ಹುಡುಗರು ಬಾಯ್ಸ್ ಲಾಕರ್ ರೂಮ್ ಎನ್ನುವ ಇನ್‌ಸ್ಟಾಗ್ರಾಂ ಗುಂಪೊಂದನ್ನು ಮಾಡಿಕೊಂಡು, ಅದರಲ್ಲಿ ಹೆಣ್ಣುಮಕ್ಕಳ ಅರೆನಗ್ನ ಚಿತ್ರಗಳನ್ನು ಹಂಚಿಕೊಳ್ಳುತ್ತಿದ್ದರು, ತೀರಾ ಅಸಹ್ಯ ಎನಿಸುವಂತಹ ಚಾಟ್‌ಗಳನ್ನು ಮಾಡುತ್ತಿದ್ದರು. ಅವರ ಮಾತುಕತೆಯ ಸ್ಕ್ರೀನ್‌ಶಾಟ್‌ಗಳು ಹೇಗೋ ಹೊರಬಿದ್ದಾಗ ಜನ ಗಾಬರಿಯಾಗಿ ಬೀದಿಗಿಳಿದರು. ಒಬ್ಬ ಹುಡುಗನ ಆತ್ಮಹತ್ಯೆಗೂ ಕಾರಣವಾದ ಈ ಪ್ರಕರಣವು ಚಿಕ್ಕಮಕ್ಕಳ ಮನಸ್ಸಿನಲ್ಲಿ ಇರುವ ನೀಚತನವನ್ನು ಅನಾವರಣಗೊಳಿಸಿತ್ತು.

ತಮ್ಮನ್ನು ಬೇರೆಯವರೊಂದಿಗೆ ಹೋಲಿಸಿಕೊಂಡು ಕೊರಗುವ ಹದಿಹರೆಯದವರ ಮನಃಸ್ಥಿತಿ ಸಾಮಾಜಿಕ ಜಾಲತಾಣಗಳಿಂದ ಇನ್ನಷ್ಟು ಹೆಚ್ಚಾಗಿದೆ. ದಿಢೀರ್ ಶ್ರೀಮಂತರಾಗುವ ಬಯಕೆಯಿಂದ ಆನ್‌ಲೈನ್ ಆಟ ಮತ್ತು ಜೂಜಿನಲ್ಲಿ ತೊಡಗುವ ಮಕ್ಕಳ ಸಂಖ್ಯೆಯೇನೂ ಕಡಿಮೆಯಿಲ್ಲ. ಇನ್ನು ಲೈಂಗಿಕ ಆಕರ್ಷಣೆಯಿಂದ ಹದಿಹರೆಯದ ಗರ್ಭಧಾರಣೆಯೂ ಮುಂಚಿಗಿಂತ ಹೆಚ್ಚಿನ ಪ್ರಮಾಣದಲ್ಲಿ ದಾಖಲಾಗುತ್ತಿದೆ.

ಮಕ್ಕಳ ಅಭಿಪ್ರಾಯವನ್ನು ಗೌರವಿಸುತ್ತಲೇ ಸಾಮಾಜಿಕ ಜಾಲತಾಣಗಳ ದುಷ್ಪರಿಣಾಮಗಳನ್ನು ತಿಳಿಹೇಳುವ ಕೆಲಸ ಶಾಲಾ ಮಟ್ಟದಲ್ಲೇ ಸಾಮೂಹಿಕವಾಗಿ ನಡೆಯಬೇಕು. ತಮ್ಮ ಮಕ್ಕಳು ಬಹಳ ಮುಗ್ಧರು ಎಂಬ ಭ್ರಮೆಯಿಂದ ಎಲ್ಲ ಪಾಲಕರೂ ಹೊರಬರಬೇಕು. ಹಾಗೆಂದು ಬೈದು, ಹೊಡೆದು ಬುದ್ಧಿ ಕಲಿಸುವ ಕಾಲ ಹಿಂದೆಯೇ ಮುಗಿಯಿತು. ಆಕರ್ಷಣೆಯಂತಹ ಸಂಗತಿಗಳು ಸಹಜವೆಂದು ತಿಳಿಹೇಳಿ, ಹೊರಬರುವ ಮಾರ್ಗಗಳನ್ನು ನಾಜೂಕಾಗಿ ಮಕ್ಕಳಿಗೆ ತಿಳಿಯಪಡಿಸಬೇಕು. ಪಾಲಕರು, ಶಿಕ್ಷಕರು ಮತ್ತು ಸಮಾಜದ ಮೇಲೆ ಹಿಂದಿಗಿಂತಲೂ ಗುರುತರವಾದ ಹೊಣೆ ಇಂದಿದೆ. ಎಚ್ಚೆತ್ತುಕೊಳ್ಳದಿದ್ದರೆ ಸಂಭವಿಸಬಹುದಾದ ಪರಿಣಾಮ ಊಹೆಗೂ ಮೀರಿದ್ದಾಗಿರಬಹುದು.

ವಾಚಕರ ವಾಣಿ

ಕೃತಕ ಬಣ್ಣವನ್ನೂ ನಿಷೇಧಿಸಿ

ಉಪಾಹಾರ ಗೃಹಗಳಲ್ಲಿ ಇಡ್ಲಿ ತಯಾರಿಸುವಾಗ ಪ್ಲಾಸ್ಟಿಕ್ ಹಾಳೆ ಬಳಸುವುದನ್ನು ಆರೋಗ್ಯ ಇಲಾಖೆ ನಿಷೇಧಿಸಿರುವುದು ಸ್ವಾಗತಾರ್ಹ ಕ್ರಮ. ಹಾಗೆಯೇ ಆಹಾರ ಪದಾರ್ಥಗಳಲ್ಲಿ ಉಪಯೋಗಿಸುವ ಕೃತಕ ಬಣ್ಣಗಳನ್ನೂ ನಿಷೇಧಿಸಬೇಕು. ಆರೋಗ್ಯಕ್ಕೆ ಮಾರಕವಾದ ಇಂತಹ ಎಲ್ಲ ವಸ್ತುಗಳ ವಿರುದ್ಧವೂ ಆರೋಗ್ಯ ಇಲಾಖೆಯು ಕಠಿಣ ಕ್ರಮ ಕೈಗೊಳ್ಳಬೇಕು.

ಚಿತ್ರಾ ಎಂ. ರಾವ್, ಬೆಂಗಳೂರು

ಜನಪ್ರತಿನಿಧಿಗಳಿಗೆ ಸೌಲಭ್ಯ: ಬೇಕು ಮಾನವೀಯತೆ

ವಿಧಾನಸಭಾ ಕಲಾಪಕ್ಕೆ ಜನಪ್ರತಿನಿಧಿಗಳು ಗೈರುಹಾಜರಾಗುವುದನ್ನು ತಪ್ಪಿಸಲು ಸದನದಲ್ಲಿ ಅವರಿಗೆ ಕೆಲವು ಸೌಲಭ್ಯಗಳನ್ನು ಕಲ್ಪಿಸಲು ಸ್ಪೀಕರ್ ಮುಂದಾಗಿರುವುದಕ್ಕೆ, 'ಶಾಸಕರ ಸೇವೆಯೇ ಸರ್ಕಾರದ ಕರ್ತವ್ಯ ಎಂಬಂತೆ ಭಾಸವಾಗುತ್ತಿದೆ' ಎಂದು ಸುರೇಂದ್ರ ಪೈ ಪ್ರತಿಕ್ರಿಯಿಸಿದ್ದಾರೆ (ವಾ.ವಾ., ಮಾರ್ಚ್ 10). ಇದು ಅಸಂಬದ್ಧವಾಗಿದೆ. ನೀತಿ ನಿರೂಪಿಸುವ ವಿಧಾನಸಭೆಯ ಮುಖ್ಯಸ್ಥರಾಗಿ ಸ್ಪೀಕರ್ ಅವರು, ಸದಸ್ಯರಿಗೆ ತಿಂಡಿ, ಟೀ, ಕಾಫಿಯ ವ್ಯವಸ್ಥೆ ಮಾಡಿರುವುದು ಮಾನವೀಯತೆ. ಮಧ್ಯಾಹ್ನದ ಸಮಯದಲ್ಲಿ ಮನುಷ್ಯ ಒಂದಿಷ್ಟು ವಿಶ್ರಾಂತಿ ಪಡೆದರೆ ಅದು ಆತನ ಕೆಲಸಕ್ಕೆ ಇನ್ನಷ್ಟು ಉತ್ತೇಜನ ನೀಡುತ್ತದೆ ಎನ್ನುವುದು ಅಧ್ಯಯನಗಳಿಂದ ಸಾಬೀತಾಗಿದೆ. ಕೂತ ಸ್ಥಳದಲ್ಲೇ ಕೂರುವುದು ಸ್ಥೂಲಕಾಯಕ್ಕೆ ಸಹ ಕಾರಣವಾಗುತ್ತದೆ. ಹೀಗಿರುವಾಗ, ಜನಪ್ರತಿನಿಧಿಗಳಿಗೆ ಮಾಡಿಕೊಡುವ ಕೆಲವು ಅನುಕೂಲಗಳನ್ನು ವಿರೋಧಿಸಿದರೆ ಮಾನವೀಯತೆಯನ್ನು ಮರೆತಂತೆಯೇ ಸರಿ.

ರಂಗಸ್ವಾಮಿ ಮಾರ್ಲಬಂಡಿ, ದೊಡ್ಡ ಹರಿವಾಣ, ಆದವಾನಿ

ಸಾಲದ ಶೂಲ: ಸರ್ಕಾರ ಹೊಣೆ ಅರಿಯಲಿ

₹1.16 ಲಕ್ಷ ಕೋಟಿ ಸಾಲ ಪಡೆಯುವ ಸರ್ಕಾರದ ನಿರ್ಧಾರಕ್ಕೆ ವಿರೋಧ ವ್ಯಕ್ತಪಡಿಸಿರುವ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರಿಗೆ, ಕೇಂದ್ರ ಸರ್ಕಾರ ಹಾಗೂ ಆರ್‌ಬಿಐ ನಿಯಮಗಳ ಮಿತಿಯಲ್ಲಿಯೇ ಸಾಲದ ಪ್ರಮಾಣ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥಿಸಿಕೊಂಡಿದ್ದಾರೆ. ಆದರೆ ಸರ್ಕಾರಗಳು ಪ್ರತಿವರ್ಷ ಬಜೆಟ್ ಗಾತ್ರವನ್ನು ಏರಿಸುತ್ತಾ ಬರುತ್ತಿರುವುದು ಹೆಚ್ಚು ಸಾಲ ಪಡೆಯಲು ಹುಡುಕಿಕೊಂಡ ಮಾರ್ಗದಂತಿದೆ. ಇದು ಕಳವಳಕಾರಿ ಸಂಗತಿ. ಇನ್ನು ಕೇಂದ್ರ ಸರ್ಕಾರದ ಸಾಲದ ಬಗ್ಗೆ ಕೂಡ ಗಮನ ಸೆಳೆದಿರುವ ಮುಖ್ಯಮಂತ್ರಿ, 'ರಾಜಕೀಯ ಕಾರಣಗಳಿಗಾಗಿ ಟೀಕಿಸುವ ಬದಲು ವಿರೋಧ ಪಕ್ಷಗಳ ನಾಯಕರು ವಸ್ತುಸ್ಥಿತಿಯನ್ನು ಗಮನಿಸಬೇಕು' ಎಂದು ತಿರುಗೇಟು ನೀಡಿದ್ದಾರೆ. ಒಟ್ಟಿನಲ್ಲಿ ಅಪ್ಪ– ಅಮ್ಮನ ಜಗಳದಲ್ಲಿ ಕೂಸು ಬಡವಾಯಿತು ಎಂಬಂತೆ, ದೇಶದ ಜನ ರಾಜ್ಯ-ಕೇಂದ್ರದ ಸಾಲದ ಶೂಲದಲ್ಲಿ ಸಿಲುಕಿರುವುದಂತೂ ನಿಜ.

2004– 05ರಲ್ಲಿ ಸಿದ್ದರಾಮಯ್ಯ ಉಳಿತಾಯ ಬಜೆಟ್ ಮಂಡಿಸಿ ಜನಮೆಚ್ಚುಗೆಗೆ ಪಾತ್ರರಾಗಿದ್ದರು. ಈಗ ವೆಚ್ಚಕ್ಕೆ ಕಡಿವಾಣ ಹಾಕುವ ಪ್ರವೃತ್ತಿಯನ್ನು ಬದಿಗೊತ್ತಿ, ಭಾರಿ ಪ್ರಮಾಣದ ಸಾಲ ಪಡೆಯಲು ಮುಂದಾಗಿರುವುದು, ಸಾಲ ತೀರಿಸಲು ಯೋಜಿಸದಿರುವುದು ದುರಂತವೇ ಸರಿ. ಅಧಿಕಾರಕ್ಕೆ ಬಂದವರೆಲ್ಲಾ ಈ ರೀತಿ ಸಾಲ ಮಾಡುತ್ತಾ ಹೋದರೆ ಭವಿಷ್ಯದಲ್ಲಿ ರಾಜ್ಯದ ಸ್ಥಿತಿಯನ್ನು ನೆನೆದರೆ ಆತಂಕ ಮೂಡುತ್ತದೆ.

ಮುಳ್ಳೂರು ಪ್ರಕಾಶ್, ಮೈಸೂರು

ನದಿಗಳಲ್ಲೂ ಸೋಪು, ಶ್ಯಾಂಪೂ ಬಳಕೆ ಬೇಡ

ಪುಣ್ಯಕ್ಷೇತ್ರಗಳ ನದಿ, ಸರೋವರ, ಕಲ್ಯಾಣಿ, ಸ್ನಾನಘಟ್ಟಗಳ 500 ಮೀಟರ್ ವ್ಯಾಪ್ತಿಯಲ್ಲಿ ಸೋಪು, ಶ್ಯಾಂಪೂ ಮಾರಾಟ ನಿಷೇಧಿಸುವಂತೆ ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಅವರು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿರುವುದು (ಪ್ರ.ವಾ., ಮಾರ್ಚ್ 10) ಒಳ್ಳೆಯ ನಿರ್ಧಾರ. ಆದರೆ ಬರೀ 500 ಮೀಟರ್ ಪರಿಧಿಯಲ್ಲಿ ನಿಷೇಧಿಸಿದರೆ ವ್ಯಾಪಾರಿಗಳು ಹಾಗೂ ಜನ ಅದಕ್ಕೆ ಸುಲಭವಾಗಿ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಹೀಗಾಗಿ, ನದಿಗಳಲ್ಲಿ ಸೋಪು, ಶ್ಯಾಂಪೂಗಳ ಬಳಕೆಯನ್ನೇ ನಿಷೇಧ ಮಾಡುವ ಬಗ್ಗೆ ಯೋಚಿಸಬೇಕಿದೆ. ನೀರು, ಜಲಚರ, ಜನ, ಜಾನುವಾರು ಮತ್ತು ಕೃಷಿಯ ಮೇಲೆ ಆಗುವ ಅಡ್ಡ ಪರಿಣಾಮಗಳ ಬಗ್ಗೆ ಅಧ್ಯಯನ ಮಾಡಿ ತೀರ್ಮಾನ ತೆಗೆದುಕೊಳ್ಳುವ ಅವಶ್ಯಕತೆ ಇದೆ.

ಮೊದಲಿಗೆ, ಹೆಚ್ಚು ಸಾರ್ವಜನಿಕರು ಭೇಟಿ ನೀಡುವ ನದಿ ಪ್ರದೇಶಗಳಲ್ಲಿ, ನದಿಯ ತಟಗಳಲ್ಲಿ ಸ್ನಾನಘಟ್ಟಗಳನ್ನು ನಿರ್ಮಿಸಬೇಕು. ನದಿಯಲ್ಲಿ ಸ್ನಾನ ಮಾಡಿದ ನಂತರ ಅಲ್ಲಿ ಸೋಪು, ಶ್ಯಾಂಪೂ ಬಳಕೆ ಮಾಡಿದ ನೀರನ್ನು ಸಂಸ್ಕರಿಸಿ ನದಿಗೆ ಬಿಡುವ ವ್ಯವಸ್ಥೆ ಮಾಡಬೇಕು. ಆ ಸ್ಥಳದಲ್ಲೂ ಹೆಚ್ಚಿನ ಕಸದ ಬುಟ್ಟಿಗಳನ್ನು ಇಟ್ಟು, ಅಲ್ಲಿ ಮಾತ್ರ ಪ್ಲಾಸ್ಟಿಕ್ ವಸ್ತುಗಳನ್ನು ಹಾಕುವಂತೆ ಸೂಚಿಸಬೇಕು.

ಕಡೂರು ಫಣಿಶಂಕರ್, ಬೆಂಗಳೂರು

ಮಹಿಳಾ ದಿನಾಚರಣೆಗೆ ಅರ್ಥ ಬರಲಿ

ಈ ಬಾರಿಯ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಸ್ನೇಹಿತೆಯರೊಂದಿಗೆ ಸೇರಿ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಿ, ಹಿಂದಿನ ದಿನವೇ ಅದಕ್ಕೆ ಮಾನಸಿಕವಾಗಿ ಸಿದ್ಧಳಾಗಿದ್ದೆ. ಮರುದಿನ ಎದ್ದ ತಕ್ಷಣ, ಸ್ನೇಹಿತೆಯರೊಂದಿಗೆ ಶುಭಾಶಯ ವಿನಿಮಯ ಮಾಡಿಕೊಂಡೆ. ಅದೇ ಖುಷಿಯಲ್ಲಿ ಕಚೇರಿಗೆ ಹೊರಟಿದ್ದಾಗ, ಮಾರ್ಗ ಮಧ್ಯದಲ್ಲಿ ಎದುರಿನಿಂದ ಬಂದ ಪುರುಷನೊಬ್ಬ ನನ್ನ ದೇಹವನ್ನು ಅಸಭ್ಯವಾಗಿ ಸ್ಪರ್ಶಿಸಿ, ತಾನೇನೂ ಮಾಡೇ ಇಲ್ಲವೇನೋ ಎಂಬಂತೆ ಪಕ್ಕಕ್ಕೆ ಸರಿದ. ತಕ್ಷಣ ನಾನು ಗಾಬರಿಗೆ ಒಳಗಾದರೂ ನಂತರ ಎಚ್ಚೆತ್ತು, ಆ ದುಷ್ಟನನ್ನು ಸುಮ್ಮನೆ ಬಿಡಬಾರದು ಎಂದು ನಿರ್ಧರಿಸಿ ಅವನನ್ನು ಹಿಂಬಾಲಿಸತೊಡಗಿದೆ. ಅದನ್ನು ತಿಳಿದ ಆತ ಓಡಲಾರಂಭಿಸಿದ. ನಾನೂ ಆತನ ಬೆನ್ನಟ್ಟಿದೆ. ಆಗ ದಾರಿಯಲ್ಲಿ ಸಿಕ್ಕ ಇಬ್ಬರು ಪರಿಚಿತ ಪುರುಷರು ವಿಷಯ ತಿಳಿದು ಆ ವ್ಯಕ್ತಿಯನ್ನು ಹಿಡಿಯುವ ಪ್ರಯತ್ನಕ್ಕೆ ಸಹಕರಿಸಿದರು. ಆದರೆ, ಅಷ್ಟು ಹೊತ್ತಿಗಾಗಲೇ ಆತ ತಪ್ಪಿಸಿಕೊಂಡಿದ್ದ.

ಒಂದೆಡೆ, ಒಬ್ಬ ಪುರುಷನ ದುಷ್ಟ ವರ್ತನೆ, ಮತ್ತೊಂದೆಡೆ, ನನ್ನ ನೋವಿಗೆ ಸ್ಪಂದಿಸಿದ ಇಬ್ಬರು ಪುರುಷರು. ಒಂದೇ ದಿನದಲ್ಲಿ ಆದ ಈ ವ್ಯತಿರಿಕ್ತ ಅನುಭವವನ್ನು ಕಂಡು, ಪುರುಷರನ್ನು ದ್ವೇಷಿಸುವುದೋ ಅಥವಾ ಅವರಿಂದ ಸುರಕ್ಷತೆಯ ಭಾವ ಹೊಂದುವ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದೋ ಎಂಬ ದ್ವಂದ್ವ ನನ್ನಲ್ಲಿ ಮೂಡಿತು. ಒಟ್ಟಿನಲ್ಲಿ, ಮಹಿಳೆಗೆ ಸುರಕ್ಷಿತ ವಾತಾವರಣ ಕಲ್ಪಿಸುವವರೆಗೆ ಮಹಿಳಾ ದಿನಾಚರಣೆಗೆ ಅರ್ಥ ಬರದು ಎಂಬುದು ಮತ್ತೊಮ್ಮೆ ಸಾಬೀತಾಯಿತು.

ವಂದನಾ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪಾರಂಪರಿಕ ತಾಣ ಹಂಪಿಯಿಂದ 26 ಕಿ.ಮೀ ದೂರದಲ್ಲಿರುವ ಕೊಪ್ಪಳದ ಸಾಣಾಪುರದಲ್ಲಿ ಇಸ್ರೇಲ್ ಪ್ರವಾಸಿ ಮಹಿಳೆ, ಹೋಂ ಸ್ಟೇ ಒಡತಿಯ ಮೇಲೆ ನಡೆದಿರುವ ಸಾಮೂಹಿಕ ಅತ್ಯಾಚಾರ ಮತ್ತು ಒಡಿಶಾ ವ್ಯಕ್ತಿಯ ಕೊಲೆ ಪ್ರಕರಣ ಪ್ರವಾಸಿಗರನ್ನು ಆತಂಕಕ್ಕೆ ದೂಡಿದೆ. ಹಂಪಿ ಮತ್ತು ಸಾಣಾಪುರ ಪ್ರದೇಶಗಳನ್ನು ತುಂಗಭದ್ರಾ ನದಿ ವಿಭಜಿಸುತ್ತದೆ. ಬಲದಂಡೆಯಲ್ಲಿರುವ ಹಂಪಿಗೆ ಹೋಲಿಸಿದರೆ, ಎಡದಂಡೆಯಲ್ಲಿರುವ ಸಾಣಾಪುರ, ವಿರೂಪಾಪುರ ಗಡ್ಡೆ ಪ್ರದೇಶಗಳು ಪ್ರವಾಸಿಗರಿಗೆ ಮೋಜು ಮಸ್ತಿಯ ತಾಣಗಳಾಗಿವೆ. ಭದ್ರತೆಯ ಕೊರತೆಯೂ ಇರುವ ಇಲ್ಲಿ ಅಕ್ರಮ ಚಟುವಟಿಕೆಗಳು ನಡೆಯುತ್ತಿವೆ

ಕತ್ತಲಿನ 'ಮಾಯಾಲೋಕ' ದಾರಿ ತಪ್ಪಿದ ಸುರಕ್ಷಾ ವ್ಯವಸ್ಥೆ

ಸಾಣಾಪುರ, ಆನೆಗೊಂದಿ: ನಿರ್ಜನ, ಅಪಾಯಕಾರಿ ಸ್ಥಳಗಳಲ್ಲಿ ಪ್ರವಾಸಿಗರ ಮೋಜು

• ಪ್ರಮೋದ ಕುಲಕರ್ಣಿ

ದೇಶ ಹಾಗೂ ವಿದೇಶದ ಪ್ರವಾಸಿಗರಿಗೆ ಕೊಪ್ಪಳ ಜಿಲ್ಲೆ ಎಂದಾಕ್ಷಣ ಮೊದಲು ನೆನಪಾಗುವುದು ಗಂಗಾವತಿ ತಾಲ್ಲೂಕಿನ ಸಾಣಾಪುರ ಹಾಗೂ ಸುತ್ತಲಿನ ತುಂಗಭದ್ರಾ ನದಿ ಪಾತ್ರಗಳ ಭಾಗ. ಅಂಜನಾದ್ರಿ ಬೆಟ್ಟ, ರಾಮಾಯಣದ ಐತಿಹ್ಯ ವಿರುವ ಪಂಪಾ ಸರೋವರ, ಕಿಷ್ಕಿಂಧೆ, ಬೆಟ್ಟದ ಮೇಲಿರುವ ಬಾಲಾಂಜನೇಯ ದೇವಸ್ಥಾನ, ಗಿರಿಧಾಮಗಳ ರೀತಿ ಸೆಳೆಯುವ ಪ್ರಕೃತಿ ಪ್ರವಾಸಿಗರನ್ನು ಮಂತ್ರಮುಗ್ಧರನ್ನಾಗಿಸುತ್ತವೆ. ಆದರೆ, ಇತ್ತೀಚೆಗಿನ ವರ್ಷಗಳಲ್ಲಿ ಈ ಸುಂದರ ಪರಿಸರವೇ ಸಾಣಾಪುರದ ಹೆಸರಿಗೆ ಕಪ್ಪುಮಸಿ ಬಳಿಯುತ್ತಿದೆ.

ವಿಜಯನಗರ ಸಾಮ್ರಾಜ್ಯದ ವಿಶ್ವವಿಖ್ಯಾತ ಹಂಪಿ, ಕಮಲಾಪುರ, ಆನೆಗೊಂದಿ ಕಣ್ತುಂಬಿಕೊಂಡು ಬರುವ ದೇಶಿ ಹಾಗೂ ವಿದೇಶಿ ಪ್ರವಾಸಿಗರು ತಮ್ಮ ಮೋಜಿನ ಸಮಯ ಕಳೆಯಲು ಸಾಣಾಪುರ, ಬಸಾಪುರ ಹಾಗೂ ಸುತ್ತಮುತ್ತಲಿನ ತುಂಗಭದ್ರಾ ನದಿಯ ಸಮೀಪದ ಜಾಗ ಆಯ್ಕೆ ಮಾಡಿಕೊಳ್ಳುತ್ತಾರೆ.

ಈ ಕಿಷ್ಕಿಂಧೆ ಪ್ರದೇಶ ಎಷ್ಟು ಸುಂದರವೋ, ಪ್ರಾಣಿಗಳ ಹಾವಳಿ ಕಾರಣಕ್ಕೆ ಅಷ್ಟೇ ಆತಂಕಕಾರಿ. ಹಾಗಿದ್ದರೂ ಹೊರರಾಜ್ಯ ಹಾಗೂ ವಿದೇಶದಿಂದ ಬರುವವರು ಸ್ಥಳೀಯವಾಗಿ ಎದುರಾಗಬಹುದಾದ ಅಪಾಯಗಳನ್ನೂ ಲೆಕ್ಕಿಸದೇ ಹಗಲಿರುಳು ಓಡಾಡುತ್ತಾರೆ. ಹೀಗೆ ಬರುವ ಪ್ರವಾಸಿಗರಲ್ಲಿ ಹಲವರ ಉದ್ದೇಶ ಐತಿಹಾಸಿಕ ತಾಣಗಳನ್ನು ನೋಡುವುದು ಮಾತ್ರ ಆಗಿರುವುದಿಲ್ಲ; ಅಲ್ಲಿನ ಕತ್ತಲಿನ 'ಮಾಯಾಲೋಕ'ದಲ್ಲಿ 'ತೇಲಾಡುವ' ಹಂಬಲವೂ ಇರುತ್ತದೆ.

ಹೆಚ್ಚು ಹಣದ ಆಸೆಗೆ ವಿದೇಶಿಯರಿಗೆ ಸಿಗುವ ಕೆಂಪು ರತ್ನಗಂಬಳಿಯ ಸ್ವಾಗತ, ಮೋಜು ಮಸ್ತಿಯ ಸಂಭ್ರಮ, ನಶೆಯಲ್ಲಿ ತೇಲಾಡುವಂತೆ ಮಾಡುವ ಮದ್ಯದ ಯಥೇಚ್ಛ ಮಾರಾಟದಿಂದಾಗಿ ಈ ಭಾಗ ಪ್ರವಾಸಿಗರಿಗೆ ಸ್ವರ್ಗದಂತೆ ಕಾಣುತ್ತದೆ.



ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನಲ್ಲಿ ಪ್ರವಾಸಿಗರನ್ನು ಸೆಳೆಯುವ ಸಾಣಾಪುರ ಭಾಗದ ವಿಹಂಗಮ ನೋಟ

ವಿಜಯನಗರ ಸಾಮ್ರಾಜ್ಯದ ಇತಿಹಾಸ ತಿಳಿದುಕೊಳ್ಳುವ ಉಮೇದಿಯಿಂದ ಇಲ್ಲಿಗೆ ಬಂದರೂ ಕತ್ತಲಾಗುತ್ತಿದ್ದಂತೆಯೇ ತೆರೆದುಕೊಳ್ಳುವ ಮೋಜಿನ ಲೋಕ ಪ್ರವಾಸಿಗರನ್ನು ಸೆಳೆಯುತ್ತದೆ. ಸ್ಥಳೀಯ ವ್ಯಾಪಾರಿಗಳಿಗೆ ದೇಶಿ ಪ್ರವಾಸಿಗರಿಗಿಂತ ಭರಪೂರವಾಗಿ ಹಣ ಖರ್ಚು ಮಾಡುವ ವಿದೇಶಿ ಪ್ರವಾಸಿಗರು ಬಂದರೆ ಹೆಚ್ಚು ಖುಷಿ. ಸಾಣಾಪುರ, ಆನೆಗೊಂದಿ ಭಾಗದ ಪ್ರವಾಸಿ ತಾಣಗಳ ನಿರ್ಜನ ಮತ್ತು ಅಪಾಯದ ಪ್ರದೇಶಗಳಲ್ಲಿ ಪ್ರವಾಸಿಗರ ಹುಚ್ಚಾಟ ಹೆಚ್ಚಾಗುತ್ತಿದೆ. ಸುಲಭವಾಗಿ ಬೈಕ್‌ಗಳು ಬಾಡಿಗೆಗೆ ಸಿಗುವುದರಿಂದ ವಿದೇಶಿಗರು ಬೈಕ್ ಪಡೆದು ಹಂಪಿ, ಆನೆಗೊಂದಿ, ಪಂಪಾ ಸರೋವರ, ಸಾಣಾಪುರ, ಅಂಜನಾದ್ರಿ ಹೀಗೆ ಅನೇಕ ತಾಣಗಳಲ್ಲಿ ಓಡಾಡುತ್ತಾರೆ.

ಪೊಲೀಸರು, ಸ್ಥಳೀಯ ಆಡಳಿತದ ಕಣ್ಣು ತಪ್ಪಿಸಿ ಮೋಜು, ಗಾಂಜಾ ಸೇವನೆಯಂತಹ ಅಕ್ರಮ ಚಟುವಟಿಕೆಗಳಲ್ಲಿ ಪ್ರವಾಸಿಗರು ತೊಡಗಿಕೊಳ್ಳುತ್ತಾರೆ. ಅಪಾಯ ಅರಿಯದೇ ಕಲ್ಲು ಬಂಡೆ, ನೀರಿನ ಪ್ರದೇಶಗಳಲ್ಲಿ ಸೆಲ್ಫಿ, ರೀಲ್ಸ್, ಕ್ಲಿಪ್ ಜಂಪಿಂಗ್, ಈಜು, ನಿರ್ಜನ ಪ್ರದೇಶದಲ್ಲಿ ಚಾರಣ, ಸಂಗೀತ ಕಾರ್ಯಕ್ರಮ, ನೈಟ್ ಪಾರ್ಟಿಗಳಲ್ಲಿ ಭಾಗವಹಿಸಿ ಸಂಭ್ರಮಿಸುತ್ತಾರೆ. ಹೋಂ ಸ್ಟೇ, ರೆಸಾರ್ಟ್‌ಗಳನ್ನು ನಿರ್ವಹಿಸುವವರು ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಿ ಪ್ರವಾಸಿಗರನ್ನು ಹುರಿದುಂಬಿಸುತ್ತಾರೆ.

ಕೆಲ ಸ್ಥಳೀಯರು ಕಡಿಮೆ ಮೊತ್ತಕ್ಕೆ, ಉಪಾಹಾರ, ವಸತಿ ವ್ಯವಸ್ಥೆ ಮಾಡುವುದರ ಜತೆಗೆ ಅಚ್ಚರಿಯ ಪ್ರದೇಶಗಳನ್ನು ತೋರಿಸುವುದಾಗಿ ಪ್ರವಾಸಿಗರ ಮನವೊಲಿಸುತ್ತಾರೆ.

ಹೋಂ ಸ್ಟೇ ಎಂದು ಹೆಸರು ಹೇಳುತ್ತಾರೆಯಾದರೂ ಮನೆಯಲ್ಲಿಯೇ ಐದಾರು ಬೆಡ್‌ಗಳನ್ನು ಹಾಕಿ ಅದನ್ನೇ ಪ್ರವಾಸಿಗರಿಗೆ ನೀಡಿ ಹಣ ಸಂಪಾದಿಸುತ್ತಾರೆ.

ಭದ್ರತೆ ಹೆಚ್ಚಿಸಲು ಆಗ್ರಹ

ಸಾಣಾಪುರದಲ್ಲಿ ನಡೆದಿರುವ ಸಾಮೂಹಿಕ ಅತ್ಯಾಚಾರ, ಕೊಲೆ ಪ್ರಕರಣವು ಈ ಭಾಗದಲ್ಲಿ ಪೊಲೀಸ್ ಭದ್ರತೆಯನ್ನು ಇನ್ನಷ್ಟು ಹೆಚ್ಚಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದೆ.

ಸಾಣಾಪುರ ಹಾಗೂ ಪ್ರಮುಖ ರಸ್ತೆಗಳಲ್ಲಿ ಮಾತ್ರ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿದೆ. ಸುತ್ತಲೂ ಇರುವ ದೇವಸ್ಥಾನ, ಹೋಟೆಲ್‌ಗಳ ಬಳಿ ಕ್ಯಾಮೆರಾ ಇವೆ. ಆದರೆ, ಪ್ರವಾಸಿಗರು ಹೆಚ್ಚಾಗಿ ತೆರಳುವ ತುಂಗಭದ್ರಾ ನದಿ ಪಾತ್ರದ ದಾರಿಯಲ್ಲಿ ಕ್ಯಾಮೆರಾ ಇಲ್ಲ. ಪೊಲೀಸರ ಓಡಾಟವೂ ಕಡಿಮೆ. ಘಟನೆ ನಡೆದಾಗ ಮಾತ್ರ ಹೆಚ್ಚು ನಿಗಾ ವಹಿಸುತ್ತಾರೆ.

ಪ್ರವಾಸಿಗರ ರಕ್ಷಣೆಗಾಗಿ 2008ರಲ್ಲಿ ಬಿಜೆಪಿ ನೇತೃತ್ವದ ಸರ್ಕಾರವು ಹಂಪಿಯಲ್ಲಿ ಪೊಲೀಸ್ ಉಪವಿಭಾಗಾಧಿಕಾರಿ ಕಚೇರಿ ತೆರೆದು ಡಿವೈಎಸ್‌ಪಿ ಮಟ್ಟದ ಅಧಿಕಾರಿಯನ್ನು ನೇಮಿಸಿತ್ತು. 32 ಪೊಲೀಸ್ ತಂಡಗಳನ್ನು ರಚಿಸಿ ಅವರಿಗೆ ದ್ವಿಚಕ್ರ ವಾಹನವನ್ನು ನೀಡಿ ಹಂಪಿ ಹಾಗೂ ಆನೆಗೊಂದಿ ಭಾಗದಲ್ಲಿ ಅವರನ್ನು ನಿಯೋಜಿಸಿ ಹಂಪಿ, ಆನೆಗೊಂದಿಗೆ ಭೇಟಿ ನೀಡುವ ಪ್ರವಾಸಿಗರ ರಕ್ಷಣೆಗೆ ಕ್ರಮ ವಹಿಸಲಾಗಿತ್ತು. ಈಗ ಈ ವ್ಯವಸ್ಥೆ ಇಲ್ಲ. ಅದನ್ನು ಮರು ಸ್ಥಾಪಿಸಬೇಕು ಎಂಬ ಒತ್ತಾಯ ಈ ಭಾಗದ ಜನರದ್ದು.

ನಿರ್ಜನ, ಅಪಾಯಕಾರಿ ಪ್ರದೇಶಗಳಲ್ಲಿ ಅಕ್ರಮ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ಸ್ಥಳೀಯರೇ ಆರೋಪ ಮಾಡುತ್ತಾರೆ. ಆದರೆ, ಪೊಲೀಸರ ಗಮನಕ್ಕೆ ಬೆರಳೆಣಿಕೆಯ ಪ್ರಕರಣಗಳು ಮಾತ್ರ ಬರುತ್ತಿವೆ.

ಗಾಂಜಾ ಸೇವನೆ ಹಾಗೂ ಅಕ್ರಮ ಚಟುವಟಿಕೆಗಳಿಗೆ ಸಂಬಂಧಿಸಿ ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ 2023ರಲ್ಲಿ 10 ಪ್ರಕರಣಗಳು ದಾಖಲಾಗಿದ್ದರೆ, 2024ರಲ್ಲಿ 12 ದೂರುಗಳು ದಾಖಲಾಗಿವೆ.

ಗಸ್ತು ಹೆಚ್ಚಳ

ಆನೆಗೊಂದಿ, ಸಾಣಾಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಕ್ರಮ ಚಟುವಟಿಕೆಗಳ ಬಗ್ಗೆ ದೂರು ಬಂದಾಗ ಎಫ್‌ಐಆರ್ ದಾಖಲಿಸಿ ಕ್ರಮ ಕೈಗೊಳ್ಳಲಾಗಿದೆ. ಅಕ್ರಮ ಚಟುವಟಿಕೆ ಗಮನಕ್ಕೆ ಬಂದರೆ ಮಾಹಿತಿ ನೀಡುವಂತೆ ಸಾರ್ವಜನಿಕರಿಗೂ ತಿಳಿಸಲಾಗಿದೆ. ಪ್ರವಾಸಿ ಸ್ಥಳಗಳಲ್ಲಿ ಪೊಲೀಸರ ಗಸ್ತು ಹೆಚ್ಚಿಸಲಾಗಿದೆ

ಡಾ.ರಾಮ್ ಎಲ್. ಅರಸಿದ್ದಿ, ಕೊಪ್ಪಳ ಎಸ್‌ಪಿ

ಹೋಂ ಸ್ಟೇಗಳಿಗೆ ಅನುಮತಿಯೇ ಇಲ್ಲ

ಕೊಪ್ಪಳ ಜಿಲ್ಲೆಯಲ್ಲಿ ಸಾಣಾಪುರ ಹಾಗೂ ಸುತ್ತಮುತ್ತಲಿನ ಭಾಗದಲ್ಲಿ ಹಲವು ಹೋಂ ಸ್ಟೇಗಳು ಇವೆ. ಆದರೆ ಬಹಳಷ್ಟು ಕಡೆ ಅವುಗಳ ಮುಂದೆ ನಾಮಫಲಕವನ್ನೇ ಹಾಕಿಲ್ಲ. ಹೇಗೋ ಸಂಪರ್ಕ ಸಾಧಿಸಿ ಅಲ್ಲಿಗೆ ಬರುವ ವಿದೇಶಿಯರು ಉಳಿದುಕೊಂಡು ತಮ್ಮ ದೇಶದವರು ಮತ್ತಷ್ಟು ಜನ ಬಂದರೆ ಅವರು ಅಲ್ಲಿಯೇ ಉಳಿದುಕೊಳ್ಳಲು ಶಿಫಾರಸು ಮಾಡುತ್ತಾರೆ. ಆದರೆ ಜಿಲ್ಲೆಯಲ್ಲಿ ನಡೆಯುತ್ತಿರುವ ಹೋಂ ಸ್ಟೇಗಳಿಗೆ ಪ್ರವಾಸೋದ್ಯಮ ಇಲಾಖೆಯಿಂದ ಅನುಮತಿಯೇ ಇಲ್ಲ ಎನ್ನುವ ಅಚ್ಚರಿಯ ಅಂಶವೂ ಬೆಳಕಿಗೆ ಬಂದಿದೆ. ಸಾಣಾಪುರದಲ್ಲಿ ಪ್ರವಾಸಿಗರ ಮೇಲೆ ಗಲಾಟೆ ನಡೆದ ಬಳಿಕ ಪರಿಶೀಲನೆ ನಡೆಸಿದ ಅಧಿಕಾರಿಗಳೇ ದಂಗಾಗಿದ್ದರು. ಹೊರ ರಾಜ್ಯಗಳಿಂದ ಬರುವ ಉದ್ಯಮಿಗಳು/ವ್ಯಾಪಾರಿಗಳು ಸಾಣಾಪುರ, ಆನೆಗೊಂದಿ ಭಾಗದಲ್ಲಿ ಭೂಮಿ ಲೀಸ್‌ಗೆ ಪಡೆದು ರೆಸಾರ್ಟ್, ಹೋಂ ಸ್ಟೇ ಆರಂಭಿಸುತ್ತಾರೆ. ಸಾಣಾಪುರ ಹಾಗೂ ವಿರೂಪಾಪುರ ಗಡ್ಡೆ ಭಾಗದಲ್ಲಿದ್ದ ಅಕ್ರಮ ರೆಸಾರ್ಟ್‌ಗಳನ್ನು ಐದು ವರ್ಷಗಳ ಹಿಂದೆ ತೆರವು ಗೊಳಿಸಲಾಗಿತ್ತು. ಈಗ ಮತ್ತೆ ಅಕ್ರಮ ರೆಸಾರ್ಟ್ ತಲೆಎತ್ತಿವೆ.

'ವಿದೇಶಿಯರಿಂದ ದೂರು ಬಂದಿಲ್ಲ'

ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್‌ಐ) ಒಳಪಟ್ಟ ಹಂಪಿ ಸುತ್ತಮುತ್ತಲಿನ ಸ್ಮಾರಕಗಳ ಬಳಿ ಪ್ರವಾಸಿಗರಿಗೆ ಯಾವುದೇ ಭಯ ಇಲ್ಲ. ನಮ್ಮ ಇಲಾಖೆಯಿಂದ 85 ಭದ್ರತಾ ಸಿಬ್ಬಂದಿ ಕಣ್ಣಿನ ಮೇಲೆ ಕಣ್ಣಿಟ್ಟು ಸ್ಮಾರಕಗಳ ಜತೆಗೆ ಪ್ರವಾಸಿಗರ ಮೇಲೆ ನಿಗಾ ಇಟ್ಟು ಕಾಯುತ್ತಿದ್ದಾರೆ. 120ರಷ್ಟು ಕಾರ್ಮಿಕರು ಅಗತ್ಯದ ಕೆಲಸ ಮಾಡುತ್ತಿದ್ದಾರೆ. ಪ್ರವಾಸಿಗರು, ಸ್ಮಾರಕಗಳ ರಕ್ಷಣೆಗೆ ಸುಮಾರು 200 ಮಂದಿ ನಮ್ಮ ಇಲಾಖೆಯ ಪರವಾಗಿ ಕೆಲಸ ಮಾಡುತ್ತಿದ್ದಾರೆ. ನಮಗೆ ಅಭದ್ರತೆಯ ಭಾವನೆ ಇದೆ ಎಂದು ಇದುವರೆಗೆ ಒಬ್ಬನೇ ಒಬ್ಬ ವಿದೇಶಿ ಪ್ರವಾಸಿ ನಮ್ಮ ಬಳಿ ದೂರು ನೀಡಿಲ್ಲ

ನಿಹಿಲ್ ದಾಸ್, ಸೂಪರಿಂಟೆಂಡೆಂಟ್, ಎಎಸ್‌ಐ ಹಂಪಿ ವೃತ್ತ

ಹಂಪಿಯಲ್ಲೂ ಹೆಚ್ಚಬೇಕಿದೆ ಭದ್ರತೆ

• ಎಂ.ಜಿ.ಬಾಲಕೃಷ್ಣ

ಪ್ರವಾಸಿ ತಾಣವಾಗಿರುವ ವಿಜಯನಗರ ಜಿಲ್ಲೆಯ ಹಂಪಿಗೆ ಸಮೀಪದ ಸಾಣಾಪುರದಲ್ಲಿ ನಡೆದಿರುವ ಸಾಮೂಹಿಕ ಅತ್ಯಾಚಾರ, ಕೊಲೆ ಪ್ರಕರಣವು ಹಂಪಿಯಲ್ಲಿ ಪ್ರವಾಸಿಗರ ಸುರಕ್ಷತೆಯ ಬಗ್ಗೆಯೂ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಸಾಣಾಪುರ, ಆನೆಗೊಂದಿ ನೆರೆಯ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕು ವ್ಯಾಪ್ತಿಗೆ ಬರುತ್ತವೆ. ಹಂಪಿಗೆ ಭೇಟಿ ನೀಡುವ ಪ್ರವಾಸಿಗರೇ ಅಲ್ಲಿನ ಪ್ರವಾಸಿ ತಾಣಗಳಿಗೂ ಭೇಟಿ ನೀಡುತ್ತಾರೆ. ಆ ಭಾಗದಲ್ಲಿ ನಡೆದಿರುವ ಕೃತ್ಯವು ಈಗ ಹಂಪಿಗೂ ತಳಕುಹಾಕಿಕೊಂಡಿದೆ. ಆದರೆ, ಹಂಪಿ ಸ್ಮಾರಕ ಪ್ರದೇಶದಲ್ಲಿ 20 ವರ್ಷಗಳಿಂದ ಗಂಭೀರ ಅಪರಾಧ ಕೃತ್ಯಗಳು ನಡೆದಿಲ್ಲ ಎಂದು ಹೇಳುತ್ತಾರೆ ಪೊಲೀಸರು.

'ಹಂಪಿ ಸ್ಮಾರಕ ಪ್ರದೇಶದಲ್ಲಿ ಮದ್ಯ, ಮಾಂಸ ಮಾರಾಟಕ್ಕೆ ಈಗ ನಿರ್ಬಂಧವಿದೆ. ಬಹಳ ಹಿಂದೆ ಹಂಪಿಯಲ್ಲೂ ಗಾಂಜಾ ಮಾರಾಟ, ರೇವ್ ಪಾರ್ಟಿಯಂತಹ ಪ್ರಕರಣಗಳು ನಡೆಯುತ್ತಿದ್ದವು. ವಿದೇಶಿಯರೂ ಸೇರಿದಂತೆ ಪ್ರವಾಸಿಗರು ಮೋಜು ಮಸ್ತಿಯಲ್ಲಿ ತೊಡಗುತ್ತಿದ್ದರು. ಆದರೆ, ಸ್ಥಳೀಯ ಜನರೇ ಇದರ ವಿರುದ್ಧ ಆಂದೋಲನವನ್ನು ಹುಟ್ಟುಹಾಕಿ ಮದ್ಯ, ಡ್ರಗ್ಸ್ ಅಕ್ರಮ ಚಟುವಟಿಕೆಗಳನ್ನು ಬಂದ್ ಮಾಡಿಸಿದರು' ಎಂದು ಹೇಳುತ್ತಾರೆ ಇಲ್ಲಿನ ಪ್ರವಾಸಿ ಮಾರ್ಗದರ್ಶಿಗಳು.

ಈಗಲೂ ಅಲ್ಲಲ್ಲಿ ಕದ್ದುಮುಚ್ಚಿ ಅಕ್ರಮ ಚಟುವಟಿಕೆಗಳು ನಡೆಯುತ್ತಿರುತ್ತವೆ. ಆದರೆ, ಮೊದಲಿನಷ್ಟು ಇಲ್ಲ ಎಂಬುದು ಅವರ ಹೇಳಿಕೆ.

2023ರಲ್ಲಿ ಹಂಪಿಯ ಪುರಂದರ ಮಂಟಪದಲ್ಲಿ ವಿದೇಶಿ ಪ್ರವಾಸಿಗರು ಸಿಗರೇಟ್, ಮದ್ಯಸೇವನೆ ಮಾಡಿದ್ದು ದೊಡ್ಡ ಸುದ್ದಿಯಾಗಿತ್ತು. ನಂತರ ಪೊಲೀಸ್ ಮತ್ತು ಪುರಾತತ್ವ ಇಲಾಖೆಗಳು ಪ್ರಮುಖ ಸ್ಥಳಗಳಲ್ಲಿ ಅತ್ಯಾಧುನಿಕ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆಗೆ ಕ್ರಮ ವಹಿಸಿದ್ದವು.



ಹಂಪಿಯ ಕಲ್ಲು ಬಂಡೆಗಳನ್ನು ಕರಡಿ, ಚಿರತೆಗಳು ಆವಾಸವನ್ನಾಗಿ ಮಾಡಿಕೊಂಡಿದ್ದು, ಸಂಜೆಯ ನಂತರ ಸ್ಮಾರಕ ಪ್ರದೇಶದಲ್ಲಿ ಇವುಗಳ ಓಡಾಟ ಹೆಚ್ಚಿರುತ್ತದೆ. ಹಾಗಾಗಿ, ಸಂಜೆಯ ನಂತರ ಈ ಭಾಗದಲ್ಲಿ ಸ್ಥಳೀಯರು, ಪ್ರವಾಸಿಗರ ಓಡಾಟ ಕಡಿಮೆ ಇರುತ್ತದೆ.

ಅನಧಿಕೃತ ಹೋಂ ಸ್ಟೇ: ಹಂಪಿ ಠಾಣಾ ವ್ಯಾಪ್ತಿಯಲ್ಲಿ 140ರಷ್ಟು ಹೋಂ ಸ್ಟೇ ಮತ್ತು 20 ರೆಸಾರ್ಟ್‌ಗಳಿವೆ. ಆದರೆ, ಹೋಂ ಸ್ಟೇಗಳ ಪೈಕಿ ಬಹುತೇಕ ಅನಧಿಕೃತ. ಪ್ರವಾಸೋದ್ಯಮ ಇಲಾಖೆಯ ಪ್ರಕಾರ, ಜಿಲ್ಲೆಯಲ್ಲಿ ಅಧಿಕೃತ ಹೋಂ ಸ್ಟೇ ಇರುವುದು ಒಂದೇ ಒಂದು; ಅದು ಹೊಸಪೇಟೆಯಲ್ಲಿದೆ.

ಹಂಪಿ ಪರಿಸರದಲ್ಲಿ ಪ್ರವಾಸಿಗರಿಗೆ ಸುರಕ್ಷಿತ ವಾತಾವರಣ ಕಲ್ಪಿಸಲು ಗಮನ ಹರಿಸಲಾಗಿದೆ. ಹೋಂ ಸ್ಟೇ, ರೆಸಾರ್ಟ್ ಮಾಲೀಕರ ಸಭೆ ನಡೆಸಲಾಗಿದೆ. 8 ಚೀತಾ ವಾಹನಗಳು 24 ಗಂಟೆ ಗಸ್ತು ತಿರುಗುತ್ತಿವೆ

ಶ್ರೀಹರಿಬಾಬು ಬಿ.ಎಲ್., ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಸ್ಮಾರಕ ಪ್ರದೇಶಗಳನ್ನು ಒತ್ತುವರಿ ಮಾಡಿಕೊಂಡ ಆರೋಪದ ಕಾರಣಕ್ಕಾಗಿ ಕೋರ್ಟ್ ಆದೇಶದಂತೆ ಹಲವು ಹೋಂಸ್ಟೇಗಳನ್ನು ತೆರವು ಮಾಡಿದ್ದು ಬಿಟ್ಟರೆ ಇತರ ಹೋಂ ಸ್ಟೇಗಳನ್ನು ತೆರವು ಮಾಡುವ ಕ್ರಮಕ್ಕೆ ಜಿಲ್ಲಾಡಳಿತ ಮುಂದಾಗಿಲ್ಲ.

ಭದ್ರತೆಗೆ ಆಗ್ರಹ: 'ಸ್ಮಾರಕಗಳು ಇರುವ ಪ್ರದೇಶಗಳಲ್ಲಿ ಭದ್ರತೆಗೆ ಸಿಬ್ಬಂದಿ ನಿಯೋಜಿಸಲಾಗಿದ್ದರೂ ಹಲವು ಪ್ರದೇಶಗಳ ವೀಕ್ಷಣೆಗೆ ಪ್ರವಾಸಿಗರು ನಡೆದುಕೊಂಡೇ ಹೋಗಬೇಕು. ಈ ದಾರಿ ನಿರ್ಜನವಾಗಿರುತ್ತವೆ. ಪ್ರವಾಸಿಗರು ಗುಂಪಾಗಿ ಅಷ್ಟೇ ಹೋಗಬಹುದು. ಒಬ್ಬಿಬ್ಬರಾಗಿ, ವಿಶೇಷವಾಗಿ ಮಹಿಳೆಯರಿಗೆ ಹೋಗಲು ಸಾಧ್ಯವಾಗದ ಸ್ಥಿತಿ ಇದೆ. ಅಂತಹ ಪ್ರದೇಶದಲ್ಲಿ ಪೊಲೀಸ್ ಭದ್ರತೆ ಹೆಚ್ಚಿಸಬೇಕು' ಎಂದು ಆಗ್ರಹಿಸುತ್ತಾರೆ ಸ್ಥಳೀಯರು.

'8'ರ ಮೂಲಕ ಕನ್ನಡಕ್ಕೆ ಅನುರಾಗ್ ಕಶ್ಯಪ್

ಅನುರಾಗ್ ಕಶ್ಯಪ್

ಬಾಲಿವುಡ್ ನಿರ್ದೇಶಕ, ನಟ ಅನುರಾಗ್ ಕಶ್ಯಪ್ '8' ಎಂಬ ಸಿನಿಮಾ ಮೂಲಕ ಕನ್ನಡಕ್ಕೆ ಕಾಲಿಡುತ್ತಿದ್ದಾರೆ. ಸುಜಯ್ ಶಾಸ್ತ್ರಿ ನಿರ್ದೇಶನದ ಈ ಚಿತ್ರದ ಶೀರ್ಷಿಕೆ ಅನಾವರಣ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

ಅನುರಾಗ್ ಕಶ್ಯಪ್ ತಮಿಳಿನ 'ಮಹಾರಾಜ' ಚಿತ್ರದಲ್ಲಿ ನಟಿಸಿದ್ದರು. ಬಳಿಕ ತೆಲುಗು ಚಿತ್ರವೊಂದರಲ್ಲಿ ಪೊಲೀಸ್ ಅಧಿಕಾರಿಯಾಗಿ ಬಣ್ಣಹಚ್ಚಿದ್ದರು. ಇದೀಗ ಎವಿಆರ್ ಎಂಟರ್‌ಟೈನ್‌ಮೆಂಟ್ ಬ್ಯಾನರ್ ಅಡಿಯಲ್ಲಿ ಅರವಿಂದ್ ವೆಂಕಟೇಶ್ ರೆಡ್ಡಿ ನಿರ್ಮಾಣ ಮಾಡುತ್ತಿರುವ ಕನ್ನಡ ಚಿತ್ರವನ್ನು ಅನುರಾಗ್ ಒಪ್ಪಿಕೊಂಡಿದ್ದಾರೆ. ಫುಟ್‌ಬಾಲ್ ಆಟದ ಸುತ್ತ ನಡೆಯುವ ಕಥೆ '8' ಚಿತ್ರದಲ್ಲಿದೆ.

'ಇದೊಂದು ಭಾವನಾತ್ಮಕ ಕಥೆ. ಈ ಸಿನಿಮಾ ಜೀವನದಲ್ಲಿ ಸಿಗುವ ಎರಡನೇ ಅವಕಾಶದ ಕುರಿತಾಗಿದೆ. ಕಥೆ ಅದ್ಭುತವಾಗಿದೆ. ನನಗೆ ಹಲವು ಭಿನ್ನ ಪಾತ್ರಗಳನ್ನು ನಿರ್ದೇಶಕರು ಬರೆಯುತ್ತಿರುವುದು ಖುಷಿಯ ವಿಚಾರ. ನಾನು ಕಥೆ ಹೇಳಲೆಂದೇ ಚಿತ್ರರಂಗಕ್ಕೆ ಬಂದೆ. ಅದ್ಭುತವಾದ ಕಥೆಗಳನ್ನು ಹೇಳುವವರ ಅವಶ್ಯಕತೆ ಇಂದಿಗಿದೆ. ಕನ್ನಡ ಸಿನಿಮಾಗಳ ಬಗ್ಗೆ ನಿರಂತರವಾಗಿ ತಿಳಿದುಕೊಳ್ಳುತ್ತಿದ್ದೇನೆ. ರಾಜ್ ಬಿ.ಶೆಟ್ಟಿಗೆ ನಿರ್ದೇಶನ ಮಾಡಬೇಕು ಎಂಬ ಆಸೆಯಿದೆ' ಎಂದರು ಅನುರಾಗ್ ಕಶ್ಯಪ್.

'ಇದೊಂದು ವಿರಳವಾದ ಕಥೆ. ಈ ವಿಷಯ ಎಲ್ಲಾ ಪ್ರದೇಶಕ್ಕೂ ಹೋಗುವ ಸಾಮರ್ಥ್ಯ ಹೊಂದಿದೆ. ಪ್ಯಾನ್ ಇಂಡಿಯಾ ಸಿನಿಮಾ ಮಾಡಲು ಸಾಧ್ಯವಿಲ್ಲ. ಅದು ಆಗಬೇಕು' ಎಂದರು ಸುಜಯ್.

ಡೆವಿಲ್ ಶೂಟಿಂಗ್ ಪುನರಾರಂಭ

ದರ್ಶನ್

ಪ್ರಕಾಶ್ ವೀರ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸುತ್ತಿರುವ, ದರ್ಶನ್ ನಟನೆಯ 'ಡೆವಿಲ್-ದಿ ಹೀರೊ' ಚಿತ್ರದ ಎರಡನೇ ಹಂತದ ಚಿತ್ರೀಕರಣ ಬೆಂಗಳೂರಿನಲ್ಲಿ ಆರಂಭವಾಗಿದೆ.

ಶ್ರೀ ಜೈಮಾತ ಕಂಬೈನ್ಸ್ ಲಾಂಛನದಲ್ಲಿ ಜೆ.ಜಯಮ್ಮ ನಿರ್ಮಾಣದ ಈ ಚಿತ್ರದ ಚಿತ್ರೀಕರಣ 2024ರಲ್ಲಿ ಆರಂಭವಾಗಿತ್ತು. 'ಕೆಲದಿನಗಳಲ್ಲಿ ದರ್ಶನ್ ಚಿತ್ರೀಕರಣದಲ್ಲಿ ಭಾಗಿಯಾಗಲಿದ್ದಾರೆ. ಅವರಿಗೆ ಬೆನ್ನು ನೋವಿನ ಸಮಸ್ಯೆ ಇರುವುದರಿಂದ ಈ ಹಂತದಲ್ಲಿ ಬರೀ ಮಾತಿನ ಭಾಗದ ಚಿತ್ರೀಕರಣ ಮಾಡಲಾಗುವುದು. ಸಾಹಸ ಸನ್ನಿವೇಶಗಳ ಚಿತ್ರೀಕರಣ ಸದ್ಯಕ್ಕಿಲ್ಲ. ಬೆಂಗಳೂರು, ಮೈಸೂರು, ಹೈದರಾಬಾದ್ ಹಾಗೂ ರಾಜಸ್ಥಾನದಲ್ಲಿ ಎರಡನೇ ಹಂತದ ಚಿತ್ರೀಕರಣ ಮಾಡುವ ಯೋಜನೆ ಹಾಕಿಕೊಂಡಿದ್ದೇವೆ' ಎಂದಿದ್ದಾರೆ ಪ್ರಕಾಶ್ ವೀರ್.

ಚಿತ್ರದಲ್ಲಿ ನಾಯಕಿಯಾಗಿ ರಚನ ರೈ ನಟಿಸಿದ್ದು, ತುಳಸಿ, ಅಚ್ಯುತ್ ಕುಮಾರ್, ಮಹೇಶ್ ಮಂಜ್ರೇಕರ್, ಶ್ರೀನಿವಾಸಪ್ರಭು, ಶೋಭರಾಜ್ ಮುಂತಾದವರು ಎರಡನೇ ಹಂತದ ಚಿತ್ರೀಕರಣದಲ್ಲಿ ಭಾಗವಹಿಸಿದ್ದಾರೆ. ಸುಧಾಕರ್ ಎಸ್.ರಾಜ್ ಛಾಯಾಚಿತ್ರಗ್ರಹಣ, ಬಿ. ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ಮೋಹನ್ ಬಿ. ಕೆರೆ ಕಲಾ ನಿರ್ದೇಶನ ಹಾಗೂ ರಾಮ್ ಲಕ್ಷ್ಮಣ್ ಸಾಹಸ ನಿರ್ದೇಶನ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಮಾರ್ಚ್ 11, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ದ್ವಾದಶಿ ಗಂ. 08-15 ನಕ್ಷತ್ರ: ಆಶ್ಲೇಷ ಗಂ. 26-16 ಯೋಗ: ಅತಿಗಂಡ ಗಂ. 13-18 ಕರಣ: ಬಾಲವ ಗಂ. 08-15, ಕುಂಭ ಮಾಸದ 27 ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 3.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-45 ಸೂರ್ಯಾಸ್ತ : 06-37
ಮುಸ್ಲಿಂ ದಿನಾಂಕ : 10 ರಂಜಾನ್
ಅದೃಷ್ಟ ಸಂಖ್ಯೆ : 3, 8

ಮೇಷ: ಸಾಧ್ಯವಾದಷ್ಟು ಸಮಾಧಾನ, ತಾಳ್ಮೆಯಿಂದ ಮುಂದುವರಿದಲ್ಲಿ ಮಾನಸಿಕ ನೆಮ್ಮದಿ ಕಾಣುವಿರಿ. ಮೊದಲ ಪ್ರಯತ್ನ ಸಫಲವಾಗಿದ್ದರಿಂದ ಉತ್ಸಾಹ ಗರಿಗೆದರಿದೆ. ಸರಳ ಸ್ವಭಾವದಿಂದ ಮೆಚ್ಚುಗೆಯನ್ನು ಪಡೆಯಬಹುದು.

ವೃಷಭ: ವಿಶಾಲ ಮನೋಭಾವದ ಗುಣದಿಂದಾಗಿ ರಕ್ಷಣೆ ಪ್ರಾಪ್ತಿಯಾಗುವುದು. ಸಹೋದರನ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು. ಒಳ್ಳೆಯ ಪಾಲುದಾರರೊಬ್ಬರು ದೊರೆಯಲಿದ್ದಾರೆ.

ಮಿಥುನ: ವಿಶೇಷ ವ್ಯಕ್ತಿಗಳ ಭೇಟಿ ಸಂತೋಷ ತರುವುದಲ್ಲದೆ, ಯೋಜನೆಗಳಿಗೆ ಚೈತನ್ಯ ತುಂಬುವುದು. ಗೃಹದಲ್ಲಿ ಮಂಗಳ ಕಾರ್ಯಗಳ ತಯಾರಿಕಾ ಚಟುವಟಿಕೆಗಳು ತೋರಿ ಬರುತ್ತವೆ.

ಕರ್ಕಾಟಕ: ಕಟ್ಟಡ ಗುತ್ತಿಗೆದಾರರಿಗೆ ಆರ್ಥಿಕವಾಗಿ ನಷ್ಟ ಮತ್ತು ಕಾರ್ಮಿಕರ ಕೊರತೆ ಉಂಟಾಗುವುದು. ಲೆಕ್ಕಾಚಾರದ ಕಾಗದ-ಪತ್ರಗಳ ನಿರ್ವಹಣೆಯಲ್ಲಿ ಎಚ್ಚರಿಕೆ ಇರಲಿ. ಅವಿವಾಹಿತರು ಬಾಳ ಸಂಗಾತಿಯನ್ನು ಪಡೆಯುವಂತಾಗಲಿದೆ.

ಸಿಂಹ: ರಫ್ತು ಮಾರಾಟದಲ್ಲಿ ಸ್ವಲ್ಪ ಮಟ್ಟಿನ ಹಿನ್ನಡೆ ಎದುರಾದರೂ, ಆದಾಯಕ್ಕೇನೂ ತೊಂದರೆಯಿಲ್ಲ. ರೈತರಿಗೆ ಕಾಡುಪ್ರಾಣಿಗಳ ಕಾಟದಿಂದಾಗಿ ನಷ್ಟ ಸಂಭವಿಸಬಹುದು. ಸಗಟು ವ್ಯಾಪಾರಿಗಳಿಗೆ ಹೇರಳ ಲಾಭ ದೊರಕಲಿದೆ.

ಕನ್ಯಾ: ಗೃಹ ನಿರ್ಮಾಣ ಮತ್ತು ಸ್ವತ್ತು ಸಂಪಾದನೆಯಂಥ ಕಾರ್ಯಗಳ ಸಂಭವವಿದೆ. ಈ ತರಹದ ವಿಷಯದಲ್ಲಿ ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಬೇಕಾದ ಕಾಲ ಒದಗಿ ಬಂದಿದೆ. ಶುಭಕ್ಕಾಗಿ ಗಣಪತಿಯನ್ನು ಆರಾಧಿಸಿ.

ತುಲಾ: ವ್ಯಾಪಾರ ಕ್ಷೇತ್ರದಲ್ಲಿ ಬೇಸರದ ದಿನವಾಗಲಿದೆ. ದೈವಾನುಗ್ರಹ ಇರುವುದರಿಂದ ಹಿಡಿದ ಕೆಲಸಗಳು ದಡ ಸೇರಲಿವೆ. ಮನೆಯಲ್ಲಿ ನೆಮ್ಮದಿಯ ವಾತಾವರಣ ಅನುಭವಿಸುವಿರಿ.

ವೃಶ್ಚಿಕ: ಬದುಕಿನ ತಿರುವಿಗೆ ಸ್ನೇಹಿತರ ಕೊಡುಗೆ ಬಹಳವಾದುದು ಎಂದು ತಿಳಿದುಕೊಳ್ಳುವಿರಿ. ಉದ್ಯೋಗದಲ್ಲಿ ಅನಿಶ್ಚಿತತೆ ದೂರಾಗುವುದು. ಕೆಲಸದ ನಿಮಿತ್ತ ಮಗಳನ್ನು ವಿದೇಶಕ್ಕೆ ಕಳುಹಿಸುವಿರಿ.

ಧನು: ಜೀವನದಲ್ಲಿ ಬಯಸಿದ ನೆಲೆಯನ್ನು ಗಟ್ಟಿಗೊಳಿಸಿಕೊಂಡ ಸಂತೃಪ್ತಿ ತುಂಬಿರುತ್ತದೆ. ಗೃಹಕ್ಕೆ ಅನಿರೀಕ್ಷಿತವಾಗಿ ಅಪರೂಪದ ವ್ಯಕ್ತಿಯ ಆಗಮನ ಆಗಬಹುದು. ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವಿರಿ.

ಮಕರ: ಬದುಕಿನ ಸಾರ ತಿಳಿಯುವುದು ಬಹಳ ಕಷ್ಟಕರ ವಿಷಯವಾದರೂ ಅದರ ಬಗ್ಗೆ ಹೆಚ್ಚಿನ ಆಲೋಚನೆಯಲ್ಲಿ ತೊಡಗುವಿರಿ. ಆಹಾರ ಶೈಲಿಯು ಆರೋಗ್ಯ ಹದಗೆಡಲು ಕಾರಣವಾಗುತ್ತದೆ.

ಕುಂಭ: ಪರಿಸ್ಥಿತಿಗಳನ್ನು ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಳ್ಳುವ ಪ್ರಯತ್ನದಲ್ಲಿ ಸಫಲರಾಗುವಿರಿ. ಹಲವು ದಿನಗಳ ಬಳಿಕ ಹಣಕಾಸು ಪರಿಸ್ಥಿತಿ ಸುಧಾರಣೆಗೊಳ್ಳುವುದು. ವ್ಯವಹಾರಿಕ ತಯಾರಿ ಸದಾಕಾಲ ಸಿದ್ಧವಿರಲಿ.

ಮೀನ: ಮಿತ್ರರಿಂದ ಉತ್ತಮ ಸಹಾಯ ದೊರೆಯುವ ಶುಭ ಸೂಚನೆಯೊಂದಿಗೆ ಪ್ರಾರಂಭವಾಗುವ ದಿನವು ಜೀವನದಲ್ಲಿ ಮಹತ್ವಪೂರ್ಣ ದಿನವಾಗಿ ಪರಿಣಮಿಸಲಿದೆ. ಮಾತು ಮಿತವಾಗಿ ಮತ್ತು ಸತ್ಯವಾಗಿರಲಿ.

ದೇವರು ಎಂಬ ರೈತ!

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

149

ಹಸಿವು ಮತ್ತು ಬಡತನ ಕಲಿಸುವ ಪಾಠವನ್ನು ಯಾವ ವಿಶ್ವವಿದ್ಯಾಲಯಗಳೂ ಕಲಿಸುವುದಿಲ್ಲ. ನಮಗೆ ಏನಾದರೂ ಕೊರತೆ ಇದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದು ಪರಿಹಾರ ಅಲ್ಲ. ನಮ್ಮ ದೇಶಕ್ಕೆ ಒಳಗೆ ಗುಹೆಯೊಳಗೆ ಕುಳಿತು ಪೂಜೆ ಮಾಡುವ ತಪಸ್ವಿಗಳು ಅಷ್ಟೇ ಅಲ್ಲ. ಕಾಯಕ ತಪಸ್ವಿಗಳು, ಜ್ಞಾನ ತಪಸ್ವಿಗಳು, ಸೇವಾ ತಪಸ್ವಿಗಳು ಬೇಕು. ಈ ಎಲ್ಲಾ ತಪಸ್ವಿಗಳು ಇದ್ದರೆ ದೇಶ ಸಮೃದ್ಧಿಯಾಗುತ್ತದೆ.

ಕಷ್ಟ ಸಹಿಸಿಕೊಳ್ಳುವುದು, ಕಷ್ಟಪಡುವುದು ಎರಡನ್ನೂ ಕಲಿಯಬೇಕು. ನಾವು ಏನಾದರೂ ಹೆಚ್ಚುಕಮ್ಮಿ ಆದರೆ ಹೋಗಿ ದೇವರಿಗೆ ಕೈಮುಗಿದು 'ನಮ್ಮ ಕಷ್ಟ ಪರಿಹಾರ ಮಾಡು' ಎಂದು ಕೇಳಿಕೊಳ್ಳುತ್ತೇವೆ. ಆದರೆ ದೇವರಲ್ಲಿ ಹೀಗೆ ಬೇಡುವುದಲ್ಲ. ದೇವರಲ್ಲಿ, ಕಷ್ಟ ಕೊಡಬೇಡ ಎಂದು ಬೇಡಿಕೊಳ್ಳಬಾರದು. ನೀನು ಎಷ್ಟೇ ಕಷ್ಟಕೊಟ್ಟರೂ ಅದನ್ನು ತಾಳಿಕೊಳ್ಳುವ ಸಾಮರ್ಥ್ಯ ಕೊಡು ಎಂದು ಕೇಳಿಕೊಳ್ಳಬೇಕು. ನಾವು ದೇವರ ಬಳಿಗೆ ಹೋಗಿ ಕಷ್ಟ ಹೇಳಿಕೊಳ್ಳುವುದು ಅಲ್ಲ. ಕಷ್ಟಗಳಿಗೆ ಹೇಳಬೇಕು. ನಮ್ಮ ಹತ್ರ ದೇವರಿದ್ದಾನೆ. ನೀನು ಹೇಗೆ ಬರುತ್ತೀಯಾ ಅಂತ ಕೇಳಬೇಕು. ಎಲ್ಲಾ ಕಳಕೊಂಡು ಬಿಟ್ಟೀವಿ. ಜೀವನದಲ್ಲಿ ಇನ್ನು ಏನೂ ಉಳಿದಿಲ್ಲ ಎಂದು ಯಾವುದೇ ಮನುಷ್ಯ ಹೇಳಬಾರದು. ಎಲೆಗಳನ್ನು ಸಂಪೂರ್ಣ ಉದುರಿಸಿದ ಗಿಡ, 'ನಾನು ಎಲ್ಲಾ ಕಳಕೊಂಡೇನಿ' ಅಂದಿಲ್ಲ. 'ಮುಂದೆ ಮಳೆಗಾಲ ಬಂದಾಗ ನಾನು ಚಿಗುರುತ್ತೇನೆ' ಎಂಬ ಭರವಸೆಯೊಂದಿಗೆ ಅದು ಬದುಕತ್ತೈತಿ. ಮನುಷ್ಯ ಕೂಡ ಇಂತಹ ಭರವಸೆಯೊಂದಿಗೆ ಬದುಕಬೇಕು. ನೀವು ಆಸ್ಪತ್ರೆಯಲ್ಲಿ ಐಸಿಯು ನೋಡಿರುತ್ತೀರಿ. ಅಲ್ಲಿ ಮಾನಿಟರ್ ಇರುತ್ತದೆ. ಅದರಲ್ಲಿನ ರೇಖೆಗಳು ಮೇಲೆ ಕೆಳಗೆ ಓಡುತ್ತಿರುತ್ತವೆ. ರೇಖೆಗಳು ಮೇಲೆ ಕೆಳಗೆ ಓಡುತ್ತಿದ್ದರೆ ಮನುಷ್ಯ ಬದುಕಿದ್ದಾನೆ ಎಂದು ಅರ್ಥ. ರೇಖೆಗಳು ನೇರವಾಗಿದ್ದರೆ ಅವ ಸತ್ತ ಎಂದೇ ಅರ್ಥ. ಮನುಷ್ಯ ಬದುಕಿದ್ದಾನೆ ಎಂಬುದರ ಅರ್ಥವೇ ಏರಿಳಿತಗಳು. ಏರಿಳಿತಗಳು ಇಲ್ಲ ಅಂದರೆ ಅವ ಬದುಕಿಲ್ಲ ಅಂತ ಅರ್ಥ.

ದೇವರು ನಮಗೆ ಬಹಳ ಕಷ್ಟ ಕೊಟ್ಟಾನೆ ಅಂತಿರ್ತೀವಿ. ಆದರೆ ರೈತರನ್ನು ನೋಡಿ. ಒಬ್ಬ ರೈತ ಹೂವುಗಳನ್ನು ಬೆಳೆಸಲು ಹಸಿರು ಮನೆ ಮಾಡಿರುತ್ತಾನೆ. ಒಂದಿಷ್ಟು ಹೂವುಗಳನ್ನು ಹಸಿರು ಮನೆಯಲ್ಲಿ ಮತ್ತು ಇನ್ನೊಂದಿಷ್ಟು ಹೂವುಗಳನ್ನು ಹೊರಗೆ ಹಾಕುತ್ತಾನೆ. ಯಾವ ಹೂವು ನೆರಳಲ್ಲಿ ಬೆಳೆಯುತ್ತದೆ, ಯಾವ ಹೂವು ಬಿಸಿಲಿನಲ್ಲಿ ಬೆಳೆಯುತ್ತದೆ ಎನ್ನುವುದು ಅವನಿಗೆ ಗೊತ್ತು. ಬಿಸಿಲಿನಲ್ಲಿ ಹಾಕಿದ ಹೂವು ಎಂದೂ ರೈತನ ಬಳಿ ಬಂದು 'ನನಗೆ ಯಾಕೆ ಬಿಸಿಲಿನಲ್ಲಿ ಹಾಕಿದಿ' ಎಂದು ದೂರು ಹೇಳಿಲ್ಲ. ಬಿಸಿಲಿನಲ್ಲಿ ಹಾಕುವ ಹೂವನ್ನು ಹಸಿರು ಮನೆಯಲ್ಲಿ ಹಾಕಿದರೆ ಅದು ಬೆಳೆಯುವುದಿಲ್ಲ. ಅದೇ ರೀತಿ ಹಸಿರು ಮನೆಯಲ್ಲಿ ಬೆಳೆಸುವ ಹೂವುಗಳನ್ನು ಬಿಸಿಲಿನಲ್ಲಿ ಹಾಕಿದರೂ ಬೆಳೆಯುವುದಿಲ್ಲ. ಹಾಗೆಯೇ ಈ ಜಗತ್ತು ಎನ್ನುವುದು ಹಸಿರುಮನೆ.

ದೇವರು ಎನ್ನುವವ ಒಬ್ಬ ರೈತ. ಯಾರನ್ನು ಹೇಗೆ ಬೆಳೆಸಬೇಕು ಎನ್ನುವುದು ಅವನಿಗೆ ಗೊತ್ತು. ಯಾರಿಗೆ ತಾಪ ಕೊಡಬೇಕು, ಯಾರನ್ನು ನೆರಳಿನಲ್ಲಿ ಬೆಳೆಸಬೇಕು ಎನ್ನುವುದು ಅವನಿಗೆ ಗೊತ್ತು. ತಾಪದಲ್ಲಿಯೂ ಅರಳುವಿಕೆ ಇದೆ. ನೆರಳಿನಲ್ಲಿಯೂ ಅರಳುವಿಕೆ ಇದೆ. ಅದಕ್ಕೆ ದೇವರಲ್ಲಿ ಯಾವುದೇ ದೂರು ಹೇಳಬಾರದು. ದೇವರು ಈ ಬದುಕು ಕೊಟ್ಟಿದ್ದಾನೆ. ಅದನ್ನು ಚೆನ್ನಾಗಿಯೇ ಅನುಭವಿಸಬೇಕು. ಅರಿತು ಬದುಕಬೇಕು. ಅರಿತು ಶರಣರಾಗಬೇಕು.

ಪದಬಂಧ 5978

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅತೀ ಕಠಿಣವಾದ ನವರತ್ನ (2)
3.ಓಟನ್ನು ನೀಡುವುದು (4)
5.ಪ್ರಸ್ತುತವಲ್ಲದ್ದು ಇದು (4)
8.ಒಬ್ಬರಿಂದ ಒಬ್ಬರಿಗೆ ಹರಡುವ ಕಾಯಿಲೆ (6)
11.ತಾನಾಗಿ ಕಲ್ಪಿಸಿಕೊಡದ್ದು (6)
13.ಇದೊಂದು ಚರ್ಮವಾದ್ಯ (4)
15.ಪೀಳಿಗೆ ಈ ತರ ಬಂದಿದೆ (4)
16.ಅಬಲೆ ಹಿಡಿದಿರುವ ಗಾಳ (2)

ಮೇಲಿಂದ ಕೆಳಕ್ಕೆ

1.ಯೌವ್ವನದಲ್ಲಿ ನೋಡಿದ ಅರಣ್ಯ (2)
2.ವಸ್ತು ಹಿಡಿದಾಗ ಈ ರೀತಿ ಆಯಾಸ! (2)
4.ಸದ್ಯದ ಸಮಯ ಉಲ್ಟಾ ಆಗಿಬಿಟ್ಟಿದೆ (3)
6.ಇದು ಕನ್ನಡಿಗನ ಎಕ್ವಿಪ್ಮೆಂಟ್ (3)
7.ಶಿರದಲ್ಲಿ ಉಂಟಾಗುವ ಬೇನೆ (4)
9.ಕಪಾಟಿನ ಹತ್ತಿರವಿರುವ ತಲೆಬುರುಡೆ (3)
10.ಅವನ ತೊಂದರೆ ಹೀಗೆ ಬಂದಿದೆ (4)
11.ಕದಿಯುವಾಗ ಕಾಣಿಸಿದ ಕಿರಣ (3)
12.ಧಾತುವಲ್ಲದ ಪ್ರಕೃತಿಗಳಿಗೆ ಹತ್ತುವ ಪ್ರತ್ಯಯ (3)
14.ಬಟ್ಟೆ ನೇಯುವ ಸಾಧನ (2)
15.ತರಲೆಯ ಶಿರ (2)



5977ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚಕ್ಷುಃಪ್ರೀತಿ 4.ರುಚಿಕಟ್ಟು
6.ವಿಚಾರ 7.ಕಡತ
8.ದಳ್ಳುರಿ 10.ನಗದು
12.ಯಾಚಕ 14.ಒಲುಮೆ
15.ನಹೀತಿಮ 17.ತ್ತುಸರಪು

ಮೇಲಿಂದ ಕೆಳಕ್ಕೆ:
1.ಚತುರ 2.ತರು
3.ಸಟ್ಟುಗ 5.ಚಿರಂತನ
6.ವಿಷಾದ 7.ಕನಕ
9.ರಿಯಾಯಿತಿ 11.ದುಡಿಮೆ
13.ವಾನರಿ 14.ಒನಪು
16.ಮತ್ತು

ಸುಡೊಕು 6363

	7			5		2		8
5		4	1		8			
	8			7			5	
	6		9	3		1		2
2		5					8	
	3			8	2	5		6
			5		6		2	
3		2					6	
	5			2		4		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6362 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ಮುಂಬೈ ಧಾರಣೆ (ಶೇಂಗಾ)

10-03-2025

ಜಾವಾ 70/80(ಹೊಸ)	9800-9900
ಜಾವಾ 80/90(ಹೊಸ)	9300-9400
ದಪ್ಪ ಮಧ್ಯಪ್ರದೇಶ(ಹೊಸ)	7700-7800
ದಪ್ಪ ಗುಜರಾತ್(ಹೊಸ)	8000-8100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1425 (1425)
ಒಂದು ವಾರದ ಡೆಲಿವರಿ	1420 (1420)
ಪಾಮ್ ವಾರದ ಡೆಲಿವರಿ	1363 (1368)
ಸೂರ್ಯಕಾಂತಿ ಎಣ್ಣೆ ಕಚ್ಚಾ	1375 (1380)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಷೇರುಪೇಟೆ ವಹಿವಾಟು

217



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,552
ಇಂದಿನ ಅಂತ್ಯ	22,460
▼	92
ದಿನದ ಕನಿಷ್ಠ	22,429

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹435
12 ಕ್ಕೆ	₹60
ಮೈಸೂರು	
100ಕ್ಕೆ	₹430

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹450-678
ದ್ವಿತಳಿ (ಬಿ.ವಿ)	₹286-825

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹190
ಆರ್‌ಎಸ್‌ಎಸ್-5	₹185
ಗುಡ್ ಲಾಟ್	₹179

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1415 (1415)
ಸೋಯಾ (ರಿಫೈನ್ಡ್)	₹1330 (1335)
ಸೂರ್ಯಕಾಂತಿ (ರಿಫೈನ್ಡ್)	₹1420 (1425)
ಪಾಮೋಲಿನ್	₹1365 (1370)

ವಿನಿಮಯ ದರ

$ ಡಾಲರ್	87.31
£ ಪೌಂಡ್	112.73
€ ಯುರೊ	94.75
¥ ಯೆನ್ (100ಕ್ಕೆ)	59

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-39500
ಹಳತು	45200-49200
ಕುಮಟ	
ಚಾಲಿ	33689-37100
ಚಿಪ್ಪು	18089-25999
ಕೋಕ	6589-17009
ಫ್ಯಾಕ್ಟರಿ	4569-24400
ಹೊಸಚಾಲಿ	32299-36609
ಸಾಗರ	
ಬಿಳಿಗೋಟು	8000-19300
ಚಾಲಿ	21699-33619
ಕೋಕ	7699-20199
ಕೆಂಪುಗೋಟು	10569-24499
ರಾಶಿ	21999-51889
ಸಿಪ್ಪೆಗೋಟು	6010-16700
ಶಿವಮೊಗ್ಗ	
ಬೆಟ್ಟೆ	43299-56529
ಗೊರಬಲು	16168-28009
ರಾಶಿ	33699-51899
ಸರಕು	55199-89999
ಸಿದ್ದಾಪುರ	
ಬಿಳಿಗೋಟು	21000-25699
ಚಾಲಿ	32819-35599
ಕೋಕ	12319-17699
ಹೊಸಚಾಲಿ	30509-35079
ಕೆಂಪುಗೋಟು	20119-28000
ರಾಶಿ	41099-49239
ತಟ್ಟಿಬೆಟ್ಟೆ	28709-38099
ಶಿರಸಿ	
ಬೆಟ್ಟೆ	22299-34689
ಬಿಳಿಗೋಟು	16899-28299
ಚಾಲಿ	32643-37499
ಕೆಂಪುಗೋಟು	12799-24389
ರಾಶಿ	41699-46371
ಯಲ್ಲಾಪುರ	
ಬಿಳಿಗೋಟು	12899-25699
ಚಾಲಿ	28000-37099
ಕೋಕ	5609-16212
ಕೆಂಪುಗೋಟು	13299-23499
ರಾಶಿ	38300-55195
ತಟ್ಟಿಬೆಟ್ಟೆ	27819-37999

ಬೇಸಿಗೆ ಬಿಸಿಲು, ತೊಂಡೆ ರೋಗದಿಂದ ತಗ್ಗಿದ ಉತ್ಪಾದನೆ

ರೇಷ್ಮೆಗೂಡು ಧಾರಣೆ ಹೆಚ್ಚಳ

• ಓದೇಶ ಸಕಲೇಶಪುರ

ರಾಮನಗರ: ಇಲ್ಲಿನ ರೇಷ್ಮೆಗೂಡು ಮಾರುಕಟ್ಟೆಯಲ್ಲಿ ಕಳೆದ ಒಂದೂವರೆ ತಿಂಗಳಿಂದ ರೇಷ್ಮೆಗೂಡು ಧಾರಣೆ ಹೆಚ್ಚಾಗಿದ್ದು ರೈತರ ಮೊಗದಲ್ಲಿ ಸಂತಸ ಮೂಡಿದೆ.

ಮತ್ತೊಂದೆಡೆ ಮಾರುಕಟ್ಟೆಗೆ ಬರುವ ಗೂಡಿನ ಪ್ರಮಾಣದಲ್ಲಿ ಇಳಿಕೆಯಾಗಿದೆ. ಧಾರಣೆ ಏರುಗತಿಯಲ್ಲಿದ್ದಾಗ ಗೂಡಿನ ಉತ್ಪಾದನೆ ತಗ್ಗಿರುವುದು ರೈತರಲ್ಲಿ ಆತಂಕ ಮೂಡಿಸಿದೆ.

ಮಾರುಕಟ್ಟೆಯಲ್ಲಿ ಸೋಮವಾರ ಮಿಶ್ರತಳಿ (ಸಿ.ಬಿ) ರೇಷ್ಮೆಗೂಡು ಪ್ರತಿ ಕೆ.ಜಿ.ಗೆ ಕನಿಷ್ಠ ₹450ರಿಂದ ಗರಿಷ್ಠ ₹678ರಂತೆ ಸರಾಸರಿ ₹614 ದರಕ್ಕೆ ಮಾರಾಟವಾಗಿದೆ. ಉತ್ತಮ ಗುಣಮಟ್ಟದ ಬೈವೋಲ್ಟಿನ್ (ಬಿ.ವಿ) ಗೂಡು ಕನಿಷ್ಠ ₹286ರಿಂದ ಗರಿಷ್ಠ ₹825ರಂತೆ ಸರಾಸರಿ ₹724 ದರಕ್ಕೆ ಮಾರಾಟವಾಗಿದೆ. ಮಾರುಕಟ್ಟೆಗೆ ಮಿಶ್ರತಳಿ ಗೂಡು 147 ಲಾಟು (7,552.480 ಕೆ.ಜಿ) ಹಾಗೂ ಬಿ.ವಿ ಗೂಡು 388 ಲಾಟು (33,374.570 ಕೆ.ಜಿ) ಆವಕವಾಗಿದೆ.

ರೇಷ್ಮೆಗೂಡಿಗೆ ಇಲ್ಲಿನ ಮಾರುಕಟ್ಟೆಯು ರಾಜ್ಯದಲ್ಲೇ ಪ್ರಮುಖವಾದುದು. ರಾಜ್ಯದ ವಿವಿಧ ಭಾಗಗಳ ರೈತರಷ್ಟೇ ಅಲ್ಲದೆ ಪಕ್ಕದ ತಮಿಳನಾಡು, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರದ ರೈತರೂ ಇಲ್ಲಿನ ಮಾರುಕಟ್ಟೆಗೆ ಗೂಡು ತಂದು ಮಾರಾಟ ಮಾಡುತ್ತಾರೆ. ಗೂಡು ಖರೀದಿಸುವ ರೀಲರ್ಸ್‌ಗಳು ಸ್ಥಳೀಯವಾಗಷ್ಟೇ ಅಲ್ಲದೆ ದೇಶ–ವಿದೇಶಗಳಿಗೆ ಮಾರಾಟ ಮಾಡುತ್ತಾರೆ.

ರಾಮನಗರ ರೇಷ್ಮೆ ಮಾರುಕಟ್ಟೆ

> ಒಂದೂವರೆ ತಿಂಗಳಿಂದ ಮಾರುಕಟ್ಟೆಗೆ ಬರುತ್ತಿರುವ ಸಿ.ಬಿ, ಬಿ.ವಿ ರೇಷ್ಮೆಗೂಡು 450ರಿಂದ 500 ಲಾಟು ದಾಟುತ್ತಿಲ್ಲ. ಹಿಪ್ಪುನೇರಳೆ ಸೊಪ್ಪಿನ ಇಳುವರಿಯೂ ತಗ್ಗಿದೆ
>
> **ಭೀಮಪ್ಪ,** ಉಪ ನಿರ್ದೇಶಕ, ರೇಷ್ಮೆಗೂಡು ಮಾರುಕಟ್ಟೆ, ರಾಮನಗರ

ಹೆಚ್ಚಿದ ಬಿಸಿಲು: ‘ಹವಾಮಾನ ವೈಪರೀತ್ಯದ ಕಾರಣಕ್ಕೆ ಬೆಳೆ ಉತ್ಪಾದನೆ ಕುಸಿತವಾಗಿದೆ. ಬೇಸಿಗೆ ಕಾರಣಕ್ಕೆ ದಿನದಿಂದ ದಿನಕ್ಕೆ ಬಿಸಿಲು ಝಳ ಹೆಚ್ಚಾಗುತ್ತಿದ್ದು ಉಷ್ಣಾಂಶವೂ ಏರಿಕೆಯಾಗುತ್ತಿದೆ. ಜೊತೆಗೆ ಬೆಳೆಯಲ್ಲಿ ಹಾಲು ತೊಂಡೆ ರೋಗ ಕಾಣಿಸಿಕೊಳ್ಳುತ್ತಿದೆ’ ಎಂದು ರಾಮನಗರ ಜಿಲ್ಲಾ ರೇಷ್ಮೆ ಬೆಳೆಗಾರರ ಸಂಘದ ಅಧ್ಯಕ್ಷ ಕೆ.ರವಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಇತ್ತೀಚೆಗೆ ರೇಷ್ಮೆ ಚಾಕಿ ಸಾಕಾಣಿಕೆ ಕೇಂದ್ರಗಳಲ್ಲಿ ಗುಣಮಟ್ಟ ಕುಸಿಯುತ್ತಿದೆ. ಮುಂಚೆ ಇದೂ ಸಹ ರೇಷ್ಮೆ ಉತ್ಪಾದನೆ ಕುಸಿತಕ್ಕೆ ಕಾರಣವಾಗಿದೆ. ಈ ಮೊದಲು ಮಿಶ್ರತಳಿ ಗೂಡು 10 ಟನ್‌ಗೂ ಹೆಚ್ಚು ಮಾರುಕಟ್ಟೆಗೆ ಬರುತ್ತಿತ್ತು. ಬಿ.ವಿ ಗರಿಷ್ಠ 50 ಟನ್ ಇರುತ್ತಿತ್ತು. ಇದೀಗ ಎರಡರ ಉತ್ಪಾದನೆಯೂ ಕುಸಿತವಾಗಿದೆ. ರೇಷ್ಮೆ ಇಲಾಖೆ ಅಧಿಕಾರಿಗಳು ಈ ಕುರಿತು ಗಮನ ಹರಿಸಬೇಕು’ ಎಂದರು.

‘ಜಿಲ್ಲೆಯಲ್ಲಿ ರೇಷ್ಮೆ ಉತ್ಪಾದನೆ ಚೆನ್ನಾಗಿದೆ. ಬೆಳೆಗಳಲ್ಲಿ ಕಾಣಿಸಿಕೊಂಡಿದ್ದ ರೋಗಗಳು ನಿಯಂತ್ರಣಕ್ಕೆ ಬಂದಿದ್ದು, ಇಲಾಖೆಯೂ ಅಗತ್ಯ–ಸಲಹೆ ಸೂಚನೆಗಳನ್ನು ಬೆಳೆಗಾರರಿಗೆ ನೀಡುತ್ತಿದೆ. ರೇಷ್ಮೆಗೂಡು ಧಾರಣೆ ಹೆಚ್ಚಳವಾಗಿರುವುದರಿಂದ ರೈತರ ಆದಾಯವೂ ಹೆಚ್ಚಿದೆ’ ಎಂದು ರೇಷ್ಮೆ ಇಲಾಖೆ ಉಪ ನಿರ್ದೇಶಕ ಬಸವರಾಜ ಹೇಳಿದ್ದಾರೆ.

ಮಾರುಕಟ್ಟೆಗೆ ಬರುವ ಲಾಟು ಇಳಿಕೆ

ಈ ಮೊದಲು ಮಾರುಕಟ್ಟೆಗೆ ಸಿ.ಬಿ ಮತ್ತು ಬಿ.ವಿ ರೇಷ್ಮೆಗೂಡು ಎರಡೂ ಸೇರಿ ಕನಿಷ್ಠ 600 ಲಾಟು ಬರುತ್ತಿತ್ತು. ಒಂದೂವರೆ ತಿಂಗಳಿಂದ ಹಂತ ಹಂತವಾಗಿ ಕಡಿಮೆಯಾಗಿ ಇದೀಗ 450–500 ಲಾಟಿಗೆ ಇಳಿಕೆಯಾಗಿದೆ. ಬೇಸಿಗೆಯಲ್ಲಾಗುವ ಹವಾಮಾನ ವೈಪರೀತ್ಯ ಹಾಗೂ ರೋಗಗಳ ಕಾರಣಕ್ಕೂ ಉತ್ಪಾದನೆಯಲ್ಲಿ ಈ ರೀತಿ ಕುಸಿತವಾಗುವುದುಂಟು ಎನ್ನುತ್ತಾರೆ ಇಲ್ಲಿನ ರೇಷ್ಮೆಗೂಡು ಮಾರುಕಟ್ಟೆಯ ಅಧಿಕಾರಿಗಳು.

‘ಕೇಂದ್ರ ರೇಷ್ಮೆ ಮಂಡಳಿಯಿಂದ ರೈತರಿಗೆ ಶೇ 15ರಷ್ಟು ಹಾಗೂ ರಾಜ್ಯ ಸರ್ಕಾರದಿಂದ ಶೇ 5ರಷ್ಟು ಮೊಟ್ಟೆ ಕೊಡುತ್ತಾರೆ. ಇವೆರಡರ ಗುಣಮಟ್ಟ ಚೆನ್ನಾಗಿರುತ್ತದೆ. ಆದರೆ, ಸ್ಥಳೀಯ ಚಾಕಾಣಿಕೆ ಕೇಂದ್ರದಿಂದ ರೈತರು ಖರೀದಿಸುವ ಮೊಟ್ಟೆಗಳು ಅಷ್ಟಾಗಿ ಗುಣಮಟ್ಟದಿಂದ ಕೂಡಿರುವುದಿಲ್ಲ. ಇಲ್ಲಿ ಮೊಟ್ಟೆ ಖರೀದಿಸುವ ರೈತರು ಸತತ ನಷ್ಟ ಅನುಭವಿಸಿದ ಬಳಿಕ ಉತ್ಪಾದನೆಯನ್ನೇ ನಿಲ್ಲಿಸುತ್ತಿದ್ದಾರೆ. ಇದರೊಂದಿಗೆ ಬೆಳೆಯಲ್ಲಿ ಕಾಣಿಸಿಕೊಳ್ಳುವ ರೋಗವೂ ಉತ್ಪಾದನೆ ಕುಸಿತಕ್ಕೆ ಕಾರಣ. ಜಿಲ್ಲೆಯಲ್ಲಿ 27 ಸಾವಿರ ರೇಷ್ಮೆ ಬೆಳೆಗಾರರಿದ್ದು, ಅವರಿಗೆ ಬೆಳೆ ಸಂರಕ್ಷಣೆ ಹಾಗೂ ಗುಣಮಟ್ಟ ಕುರಿತು ಅಧಿಕಾರಿಗಳು ಸೂಕ್ತ ಸಲಹೆ–ಸೂಚನೆ ನೀಡಿ ನಿಗಾ ವಹಿಸಬೇಕು’ ಎಂದು ರಾಮನಗರ ಜಿಲ್ಲಾ ರೀಲರ್ಸ್ ಅಸೋಸಿಯೇಷನ್ ಅಧ್ಯಕ್ಷ ಪರ್ವೇಜ್ ಪಾಷಾ ‘ಪ್ರಜಾವಾಣಿ’ಗೆ ತಿಳಿಸಿದರು.

ರೇಷ್ಮೆಗೆ ಮಾರುಕಟ್ಟೆಯೇ ಇಲ್ಲ

ರಾಯಚೂರು: ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿ ಪ್ರಸ್ತುತ 368 ರೇಷ್ಮೆ ಬೆಳೆಗಾರರು 998 ಎಕರೆ ಪ್ರದೇಶದಲ್ಲಿ ರೇಷ್ಮೆ ಬೆಳೆಯುತ್ತಿದ್ದಾರೆ. ರೈತ ಉತ್ಪಾದಿಸಿದ ರೇಷ್ಮೆಗೆ ಸಮೀಪದಲ್ಲಿ ಮಾರುಕಟ್ಟೆ ಇಲ್ಲ. ಹೀಗಾಗಿ ಲಿಂಗಸುಗೂರಿನಿಂದ ರಾಮನಗರ ಮಾರುಕಟ್ಟೆಗೆ ಹೋಗಬೇಕಾದ ಸ್ಥಿತಿ ಇದೆ. ರೇಷ್ಮೆ ಮಾರಾಟ ಮಾಡಬೇಕೆಂದರೆ ಸಾಗಣೆಯ ವೆಚ್ಚವೇ ಹೊರೆಯಾಗುತ್ತಿದೆ. ಜಿಲ್ಲೆಯಲ್ಲಿ ರೇಷ್ಮೆ ಕೃಷಿ ಆರಕ್ಕೆ ಏರಿಲ್ಲ. ಮೂರಕ್ಕೆ ಇಳಿದಿಲ್ಲ ಎಂದು ಲಿಂಗಸುಗೂರಿನ ರೇಷ್ಮೆ ಬೆಳೆಗಾರ ಭೀಮಸೇನ ಉದ್ದಾರ ಪ್ರತಿಕ್ರಿಯಿಸಿದ್ದಾರೆ.

ಇಳುವರಿ ಕುಸಿತ: ದರ ಏರಿಕೆ

ಮೈಸೂರು: ಮೈಸೂರು ಭಾಗದಲ್ಲಿ ಸದ್ಯ ದ್ವಿತಳಿ (ಬೈವೋಲ್ಟಿನ್) ಗೂಡನ್ನು ರೈತರು ಹೆಚ್ಚು ಬೆಳೆಯುತ್ತಿದ್ದು, ಬೇಸಿಗೆಯ ಕಾರಣಕ್ಕೆ ಉತ್ಪಾದನೆ ಹಾಗೂ ಇಳುವರಿ ಗಣನೀಯವಾಗಿ ಕುಸಿದಿದೆ.

ಮೈಸೂರಿನ ಎಪಿಎಂಸಿ ಆವರಣದಲ್ಲಿರುವ ರೇಷ್ಮೆಗೂಡು ಮಾರುಕಟ್ಟೆಗೆ ಸದ್ಯ ಪ್ರತಿದಿನ 1.5ರಿಂದ 2 ಟನ್‌ನಷ್ಟು ದ್ವಿತಳಿ ಗೂಡು ಆವಕ ಆಗುತ್ತಿದ್ದು, ಸರಾಸರಿ 1 ಟನ್‌ನಷ್ಟು ಗೂಡು ಕಡಿಮೆ ಆಗಿದೆ. ಪ್ರತಿ ಕೆ.ಜಿ.ಗೆ ಕನಿಷ್ಠ ₹650ರಿಂದ ಗರಿಷ್ಠ ₹900ರವರೆಗೆ ಮಾರಾಟ ನಡೆದಿದ್ದು, ರೈತರಿಗೆ ಉತ್ತಮ ದರ ಸಿಗುತ್ತಿದೆ.

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದಲ್ಲಿರುವ ರೇಷ್ಮೆಗೂಡು ಮಾರುಕಟ್ಟೆಗೆ ಮಂಡ್ಯ, ಮಳವಳ್ಳಿ, ಕನಕಪುರ ಭಾಗದಿಂದಲೂ ಗೂಡಿನ ಆವಕವಾಗುತ್ತಿದೆ. ಬೆಲೆ ಹೆಚ್ಚಳದ ಕಾರಣಕ್ಕೆ ದ್ವಿತಳಿ ಗೂಡನ್ನು ನೇರವಾಗಿ ವರ್ತಕರೇ ರೈತರಿಂದ ಖರೀದಿಸಿ ತಮಿಳುನಾಡಿಗೆ ಕೊಂಡೊಯ್ಯುತ್ತಿದ್ದಾರೆ. ಹೀಗಾಗಿ ಮಿಶ್ರ ತಳಿ ಗೂಡಷ್ಟೇ ಹೆಚ್ಚು ಆವಕ ಆಗುತ್ತಿದೆ. ನಿತ್ಯ ಸರಾಸರಿ 12– 13 ಟನ್‌ನಷ್ಟು ಗೂಡು ಬರುತ್ತಿದೆ. ಸೋಮವಾರ ಪ್ರತಿ ಕೆ.ಜಿ.ಗೆ ಕನಿಷ್ಠ ₹570 ಹಾಗೂ ಗರಿಷ್ಠ ₹730ರ ದರದಲ್ಲಿ ಹರಾಜು ನಡೆಯಿತು.

ಚಾಮರಾಜನಗರ ಜಿಲ್ಲೆಯ ಯಳಂದೂರಿನ ಗೂಡಿನ ಮಾರುಕಟ್ಟೆಯಲ್ಲಿ ಸೋಮವಾರ ದ್ವಿತಳಿ ಸರಾಸರಿ ₹650 ಹಾಗೂ ಮಿಶ್ರತಳಿ ಗೂಡು ₹455ರ ದರದಲ್ಲಿ ಹರಾಜು ನಡೆಯಿತು.

ಎಸ್‌ಎಂಇ ಐಪಿಒ ನಿಯಮ ಬಿಗಿಗೊಳಿಸಿದ ಸೆಬಿ

ನವದೆಹಲಿ (ಪಿಟಿಐ): ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳು (ಎಸ್‌ಎಂಇ) ಸಾರ್ವಜನಿಕ ಷೇರು ಹಂಚಿಕೆಯ (ಐಪಿಒ) ಮೂಲಕ ಬಂಡವಾಳ ಸಂಗ್ರಹಿಸಲು ಇರುವ ನಿಯಮಗಳನ್ನು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಬಿಗಿಗೊಳಿಸಿದೆ.

ಷೇರು ಹಂಚಿಕೆ ಮಾಡಲು ಬಯಸುವ ಎಸ್‌ಎಂಇಗಳು ಲಾಭದಲ್ಲಿ ಇರಬೇಕು ಎಂಬ ಷರತ್ತನ್ನು ವಿಧಿಸಲಾಗಿದೆ. ಹಾಗೆಯೇ ಸಾರ್ವಜನಿಕರಿಗೆ ಹಂಚುವ ಷೇರುಗಳ ಪ್ರಮಾಣವು ಶೇ 20ರಷ್ಟನ್ನು ಮೀರುವಂತಿಲ್ಲ ಎಂಬ ನಿಯಮವನ್ನೂ ರೂಪಿಸಿದೆ.

ಐಪಿಒ ಆರಂಭಿಸಲು ಬಯಸುವ ಎಸ್‌ಎಂಇಗಳು ಕಳೆದ ಮೂರು ವರ್ಷಗಳ ಪೈಕಿ ಎರಡು ವರ್ಷಗಳಲ್ಲಿ ಕನಿಷ್ಠ ಒಂದು ಕೋಟಿ ರೂಪಾಯಿ ಲಾಭ (ಬಡ್ಡಿ, ಸವಕಳಿ ಮತ್ತು ತೆರಿಗೆ ಪಾವತಿಗೆ ಮೊದಲು) ಗಳಿಸಿರಬೇಕು.

ಐಪಿಒದಿಂದ ಬಂದ ಮೊತ್ತವನ್ನು ಪ್ರವರ್ತಕರು, ಪ್ರವರ್ತಕ ಸಮೂಹಗಳು ಅಥವಾ ಸಂಬಂಧಪಟ್ಟವರಿಂದ ಪಡೆದ ಸಾಲ ಮರುಪಾವತಿಗೆ ಬಳಸುವಂತಿಲ್ಲ ಎಂದೂ ಹೊಸ ನಿಯಮ ಹೇಳುತ್ತದೆ. ಹೂಡಿಕೆದಾರರ ಹಿತಾಸಕ್ತಿಗಳನ್ನು ರಕ್ಷಿಸುವ ಉದ್ದೇಶವನ್ನು ಈ ನಿಯಮಗಳು ಹೊಂದಿವೆ. ಎಸ್‌ಎಂಇಯಲ್ಲಿ ಹೂಡಿಕೆದಾರರ ಪಾಲ್ಗೊಳ್ಳುವಿಕೆ ಗಮನಾರ್ಹವಾಗಿ ಹೆಚ್ಚುವ ನಿರೀಕ್ಷೆಯನ್ನು ಹೊಸ ನಿಯಮಗಳು ಮೂಡಿಸಿವೆ.

ಬ್ಯಾಡಗಿ: ಮೆಣಸಿನಕಾಯಿ ಆವಕ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬ್ಯಾಡಗಿ: ಇಲ್ಲಿಯ ಅಂತರರಾಷ್ಟ್ರೀಯ ಮಾರುಕಟ್ಟೆಗೆ ಸೋಮವಾರ 2.68 ಲಕ್ಷ ಚೀಲ (67,088 ಕ್ವಿಂಟಲ್) ಮೆಣಸಿನಕಾಯಿ ಮಾರಾಟಕ್ಕೆ ತರಲಾಗಿದ್ದು, ಆವಕದಲ್ಲಿ ಮತ್ತೆ ಹೆಚ್ಚಳ ಕಂಡು ಬಂದಿದೆ.

ಪ್ರಸಕ್ತ ಹಂಗಾಮಿನಲ್ಲಿ ಮೊದಲ ಬಾರಿಗೆ 2.68 ಲಕ್ಷ ಚೀಲ ಆವಕವಾಗಿದೆ. ಕಳೆದ ಶುಕ್ರವಾರ ಮಾರುಕಟ್ಟೆಗೆ 2.24 ಲಕ್ಷ ಚೀಲ (56,118 ಕ್ವಿಂಟಲ್) ಮೆಣಸಿನಕಾಯಿ ಆವಕವಾಗಿತ್ತು. ಸೋಮವಾರ ಒಟ್ಟಾರೆ 21,236 ಲಾಟ್ ಮೆಣಸಿನಕಾಯಿ ಚೀಲಗಳನ್ನು ಟೆಂಡರ್‌ಗೆ ಇಡಲಾಗಿತ್ತು.

ಡಬ್ಬಿ ಮೆಣಸಿನಕಾಯಿ ಕ್ವಿಂಟಲ್‌ಗೆ ₹34,249 ರಂತೆ, ಕಡ್ಡಿ ಮೆಣಸಿನಕಾಯಿ ₹27,559 ರಂತೆ ಹಾಗೂ ಗುಂಟೂರು ತಳಿ ಮೆಣಸಿನಕಾಯಿ ₹15,609ರಂತೆ ಗರಿಷ್ಠ ಬೆಲೆಗೆ ಮಾರಾಟವಾಗಿದೆ.

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹14000-14450
ತಿಪಟೂರು	₹14000-14700
ತುರುವೇಕೆರೆ	₹14000-14400

ಸೌದಿಯಲ್ಲಿ ಉಕ್ರೇನ್–ಅಮೆರಿಕ ಮಾತುಕತೆ

ಕೀವ್ (ಎಎಫ್‌ಪಿ): ‘ಮೂರು ವರ್ಷಗಳಿಂದ ನಡೆಯುತ್ತಿರುವ ಉಕ್ರೇನ್–ರಷ್ಯಾ ಯುದ್ಧವನ್ನು ಅಂತ್ಯಗಾಣಿಸುವ ಸಂಬಂಧ ಉಕ್ರೇನ್ ಮತ್ತು ಅಮೆರಿಕ ಮಧ್ಯೆ ಸೌದಿ ಅರೇಬಿಯಾದಲ್ಲಿ ಮಂಗಳವಾರ ಮಾತುಕತೆ ನಡೆಯಲಿದೆ’ ಎಂದು ಉಕ್ರೇನ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಮಾತುಕತೆ ವೇಳೆ ಉಕ್ರೇನ್ ತನ್ನ ಪರವಾಗಿ ಕೆಲವು ಒತ್ತಾಯಗಳನ್ನು ಮುಂದಿಡಲಿದೆ’ ಎಂದು ಅವರು ಮಾಹಿತಿ ನೀಡಿದ್ದಾರೆ. ‘ಯುದ್ಧ ಅಂತ್ಯಗೊಳಿಸುವ ಬಗ್ಗೆ ರಷ್ಯಾದೊಂದಿಗೆ ಮಾತುಕತೆ ಆರಂಭ ಮಾಡಬೇಕು ಎಂದರೆ, ಮೊದಲು ಆ ದೇಶವು ವಾಯು ಹಾಗೂ ನೌಕಾ ದಾಳಿಗಳಿಗೆ ಕದನವಿರಾಮ ಘೋಷಿಸಬೇಕು’ ಎನ್ನುವುದು ಉಕ್ರೇನ್‌ನ ವಾದವಾಗಿರಲಿದೆ.

ಜೆದ್ದಾಗೆ ಬಂದಿಳಿದ ಝೆಲೆನ್‌ಸ್ಕಿ: ಅಮೆರಿಕದ ಉನ್ನತ ಅಧಿಕಾರಿಗಳ ಜತೆಗಿನ ಮಾತುಕತೆಗೆ ಝೆಲೆನ್‌ಸ್ಕಿ ಅವರು ಸೋಮವಾರ ರಾತ್ರಿ ಸೌದಿ ಅರೇಬಿಯಾದ ಜೆದ್ದಾಗೆ ಬಂದಿಳಿದರು. ಅಮೆರಿಕದ ಜತೆಗಿನ ಮಾತುಕತೆಗೂ ಮುನ್ನ ಅವರು ಸೌದಿ ಯುವರಾಜ ಮೊಹಮ್ಮದ್ ಬಿನ್ ಸಲ್ಮಾನ್ ಅವರನ್ನು ಭೇಟಿಯಾಗಲಿದ್ದಾರೆ ಎಂದು ಉಕ್ರೇನ್‌ನ ನಿಯೋಗದಲ್ಲಿರುವ ಅಧಿಕಾರಿಯೊಬ್ಬರು ತಿಳಿಸಿದರು.

ಸಿರಿಯಾ: ಸೇನಾ ಕಾರ್ಯಾಚರಣೆ ಅಂತ್ಯ

ದುಬೈ (ರಾಯಿಟರ್ಸ್): ಪದಚ್ಯುತ ಅಧ್ಯಕ್ಷ ಬಶರ್ ಅಲ್ ಅಸಾದ್ ಅವರ ಬೆಂಬಲಿಗರ ವಿರುದ್ಧದ ಸೇನಾ ಕಾರ್ಯಾಚರಣೆ ಕೊನೆಗೊಂಡಿದೆ ಎಂದು ಸಿರಿಯಾದ ರಕ್ಷಣಾ ಸಚಿವಾಲಯ ಸೋಮವಾರ ತಿಳಿಸಿದೆ.

ಎರಡು ದಿನಗಳ ಘರ್ಷಣೆಯಲ್ಲಿ 1,000ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ.

‘ಭದ್ರತಾ ಪಡೆಯ ಕಾರ್ಯಾಚರಣೆ ಕೊನೆಗೊಂಡಿದ್ದು, ಘರ್ಷಣೆ ನಡೆದ ಪ್ರದೇಶಗಳಲ್ಲಿ ಜನಜೀವನವನ್ನು ಸಹಜ ಸ್ಥಿತಿಗೆ ತರುವ ಪ್ರಯತ್ನ ಆರಂಭಿಸಲಾಗಿದೆ’ ಎಂದು ರಕ್ಷಣಾ ಸಚಿವಾಲಯದ ವಕ್ತಾರ ಅಬ್ದುಲ್ ಘನಿ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

₹51,463 ಕೋಟಿ ವೆಚ್ಚಕ್ಕೆ ಅನುಮೋದನೆ ಕೋರಿದ ಕೇಂದ್ರ

ನವದೆಹಲಿ (ಪಿಟಿಐ): 2024–25ರ ಆರ್ಥಿಕ ವರ್ಷದ ಮಾರ್ಚ್ ಅಂತ್ಯದ ವೇಳೆಗೆ ವಿವಿಧ ಯೋಜನೆಗಳಿಗೆ ₹51,463 ಕೋಟಿ ಮೊತ್ತದ ಹೆಚ್ಚುವರಿ ವೆಚ್ಚಕ್ಕೆ ಅನುಮೋದನೆ ನೀಡುವಂತೆ ಕೇಂದ್ರ ಸರ್ಕಾರವು ಸಂಸತ್ ಅನ್ನು ಸೋಮವಾರ ಕೋರಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸರ್ಕಾರದ ಹೆಚ್ಚುವರಿ ವೆಚ್ಚ ₹6.78 ಲಕ್ಷ ಕೋಟಿಯಾಗಿದೆ. ಈ ಪೈಕಿ ₹6.27 ಲಕ್ಷ ಕೋಟಿಯನ್ನು ಉಳಿತಾಯ ಮತ್ತು ಪಾವತಿಯಿಂದ ಪಡೆದುಕೊಳ್ಳಲಾಗಿದೆ. ಬಾಕಿ ಉಳಿದ ₹51,462 ಕೋಟಿ ಪಾವತಿಸಬೇಕಿದೆ.

ಹೆಚ್ಚುವರಿ ವೆಚ್ಚದಲ್ಲಿ ಪ್ರಮುಖವಾಗಿ ರಸಗೊಬ್ಬರಕ್ಕೆ ₹12 ಸಾವಿರ ಕೋಟಿ, ಸರ್ಕಾರಿ ಉದ್ಯೋಗಿಗಳ ಪಿಂಚಣಿಗೆ ₹13,449 ಕೋಟಿ, ದೂರಸಂಪರ್ಕ ಇಲಾಖೆಗೆ ₹5,332 ಕೋಟಿ ವೆಚ್ಚ ಮಾಡಬೇಕಿದೆ ಎಂದು ಸರ್ಕಾರ ತಿಳಿಸಿದೆ.

₹107 ಕೋಟಿ ವಂಚನೆ: ಡಿಜಿಟಲ್ ಪಾವತಿ (ಇಂಟರ್‌ನೆಟ್ ಬ್ಯಾಂಕಿಂಗ್, ಕಾರ್ಡ್ ಮೂಲಕ ನಡೆದ ಪಾವತಿ) ಮೂಲಕ ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್–ಡಿಸೆಂಬರ್ ಅವಧಿಯಲ್ಲಿ 13,384 ವಂಚನೆ ಪ್ರಕರಣಗಳು ನಡೆದಿವೆ. ಜನರು ₹107 ಕೋಟಿ ಕಳೆದುಕೊಂಡಿದ್ದಾರೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

2023–24ರ ಪೂರ್ಣ ಆರ್ಥಿಕ ವರ್ಷದಲ್ಲಿ 29,082 ವಂಚನೆ ಪ್ರಕರಣ ನಡೆದಿದ್ದವು. ಇದರ ಮೊತ್ತ ₹177 ಕೋಟಿಯಾಗಿದೆ ಎಂದು ತಿಳಿಸಿದೆ.

ರೂಪಾಯಿ ಮೌಲ್ಯ 36 ಪೈಸೆ ಇಳಿಕೆ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 36 ಪೈಸೆ ಇಳಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯವು ₹87.31 ಆಗಿದೆ.

ದೇಶದ ಷೇರು ಸೂಚ್ಯಂಕಗಳ ಇಳಿಕೆ, ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರುಪೇಟೆಯಿಂದ ಬಂಡವಾಳ ಹಿಂಪಡೆಯುತ್ತಿರುವುದರಿಂದ ರೂಪಾಯಿ ಮೌಲ್ಯ ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಸೂಚ್ಯಂಕ ಇಳಿಕೆ: ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 217 ಅಂಶ ಇಳಿಕೆಯಾಗಿ, 74,115 ಆಗಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 92 ಅಂಶ ಕಡಿಮೆಯಾಗಿ, 22,460 ಆಗಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಸೋಮವಾರದ ವಹಿವಾಟಿನಲ್ಲಿ ₹485 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಜೊಮಾಟೊ ಹೆಸರು ಬದಲಾವಣೆಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಆನ್‌ಲೈನ್ ಮೂಲಕ ಆಹಾರ ಪದಾರ್ಥ ಪೂರೈಸುವ ಜೊಮಾಟೊ ತನ್ನ ಹೆಸರನ್ನು ‘ಇಟರ್ನಲ್’ ಎಂದು ಬದಲಾವಣೆ ಮಾಡಲು ಕಂಪನಿಯ ಷೇರುದಾರರು ಒಪ್ಪಿಗೆ ನೀಡಿದ್ದಾರೆ ಎಂದು ಕಂಪನಿ ಷೇರುಪೇಟೆಗೆ ಸೋಮವಾರ ತಿಳಿಸಿದೆ.

ಜೊಮಾಟೊದ ಆಹಾರ ಪೂರೈಕೆ ಬ್ರ್ಯಾಂಡ್ ಹೆಸರು ಹಾಗೂ ಆ್ಯಪ್ ಮೊದಲಿನಂತೆ ಇರಲಿವೆ. ಜೊಮಾಟೊ, ಬ್ಲಿಂಕಿಟ್, ಡಿಸ್ಟ್ರಿಕ್ಟ್ ಮತ್ತು ಹೈಪರ್‌ಪ್ಯೂರ್ ವಹಿವಾಟುಗಳು ಇಟರ್ನಲ್ ಅಡಿ ಕಾರ್ಯನಿರ್ವಹಿಸಲಿವೆ. ಕಂಪನಿಯ ಹೆಸರಿನ ಬದಲಾವಣೆಗೆ ಷೇರುದಾರರು ವಿಶೇಷ ನಿರ್ಣಯದ ಮೂಲಕ ಅಂಗೀಕಾರ ನೀಡಿದ್ದಾರೆ ಎಂದು ಕಂಪನಿ ತಿಳಿಸಿದೆ.

ಕೆನಡಾ: ಮುಂದಿನ ಪ್ರಧಾನಿ ಕಾರ್ನಿ

ಒಂದನೇ ಪುಟದಿಂದ

ಭಾರತದ ಜತೆ ಸಂಬಂಧ ಮರುಸ್ಥಾಪನೆಗೆ ಒತ್ತು: ಭಾರತದೊಂದಿಗೆ ತಮ್ಮ ದೇಶದ ಸಂಬಂಧವನ್ನು ಪುನರ್ ಸ್ಥಾಪಿಸುವುದಾಗಿ ಕಾರ್ನಿ ಅವರು ಈಚೆಗೆ ಹೇಳಿದ್ದರು.

‘ಭಾರತದ ಜತೆಗಿನ ಸಂಬಂಧವನ್ನು ಪುನರ್ ಸ್ಥಾಪಿಸಲು ನಮಗೆ ಸಾಕಷ್ಟು ಅವಕಾಶಗಳಿವೆ. ಆ ವಾಣಿಜ್ಯ ಸಂಬಂಧದಲ್ಲಿ ಪರಸ್ಪರ ತಿಳಿವಳಿಕೆ ಮುಖ್ಯ. ನಾನು ಪ್ರಧಾನಿಯಾದರೆ, ಭಾರತದ ಜತೆಗಿನ ಸಂಬಂಧ ಮರುಸ್ಥಾಪಿಸುವ ಅವಕಾಶವನ್ನು ಎದುರು ನೋಡುತ್ತಿದ್ದೇನೆ’ ಎಂದು ಕ್ಯಾಲ್ಗರಿಯಲ್ಲಿ ಕಳೆದ ಮಂಗಳವಾರ ಹೇಳಿದ್ದರು.

ಖಾಲಿಸ್ತಾನಿ ಪರ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತೀಯ ಏಜೆಂಟರ್ ಕೈವಾಡವಿದೆ ಎಂದು ಟ್ರುಡೊ ಆರೋಪ ಮಾಡಿದ ನಂತರ ಉಭಯ ದೇಶಗಳ ನಡುವಿನ ಸಂಬಂಧ ಹದಗೆಟ್ಟಿದೆ.

ಟ್ರಂಪ್‌ಗೆ ತಿರುಗೇಟು

ಒಂದನೇ ಪುಟದಿಂದ

‘ಅಮೆರಿಕನ್ನರು ನಮ್ಮ ಸಂಪನ್ಮೂಲಗಳು, ನೀರು, ಭೂಮಿ ಮತ್ತು ನಮ್ಮ ದೇಶವನ್ನು ಬಯಸುತ್ತಿದ್ದಾರೆ. ಟ್ರಂಪ್ ನೇತೃತ್ವದ ಸರ್ಕಾರ ಕೆನಡಾ ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ನಮ್ಮ ದೇಶದ ಕಾರ್ಮಿಕರು, ಕುಟುಂಬಗಳು ಮತ್ತು ವ್ಯವಹಾರಗಳ ಮೇಲೆ ದಾಳಿ ಮಾಡುತ್ತಿದೆ. ಆದರೆ, ನಾವು ಅವರನ್ನು ಯಶಸ್ವಿಯಾಗಲು ಬಿಡುವುದಿಲ್ಲ’ ಎಂದರು.

ಬಾಂಬ್ ಬೆದರಿಕೆ: ಮುಂಬೈಗೆ ಮರಳಿದ ವಿಮಾನ

ಮುಂಬೈ (ಪಿಟಿಐ): ನ್ಯೂಯಾರ್ಕ್‌ಗೆ ಸೋಮವಾರ ತೆರಳುತ್ತಿದ್ದ ಏರ್ ಇಂಡಿಯಾ ವಿಮಾನವು, ಬಾಂಬ್ ಬೆದರಿಕೆಯಿಂದಾಗಿ ಮತ್ತೆ ಮುಂಬೈಗೆ ಮರಳಿದೆ.

‘19 ಸಿಬ್ಬಂದಿ ಸೇರಿದಂತೆ 322 ಪ್ರಯಾಣಿಕರಿದ್ದ ವಿಮಾನವು ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬೆಳಿಗ್ಗೆ 10.25ಕ್ಕೆ ಸುರಕ್ಷಿತವಾಗಿ ಇಳಿದಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ವಿಮಾನದಲ್ಲಿ ಯಾವುದೇ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಿಲ್ಲ. ಈ ಬಗ್ಗೆ ತನಿಖೆ ನಡೆಯುತ್ತಿದೆ’ ಎಂದು ಹೇಳಿದ್ದಾರೆ.

ವನುವಾಟು ಪ್ರಧಾನಿ ಜೋಥಮ್ ನಪಾಟ್ ಸೂಚನೆ

‘ಲಲಿತ್ ಪಾಸ್‌ಪೋರ್ಟ್ ರದ್ದು ಮಾಡಿ’

ಪೋರ್ಟ್ ವಿಲಾ (ಪಿಟಿಐ): ಭಾರತದ ಉದ್ಯಮಿ ಲಲಿತ್ ಮೋದಿ ಅವರಿಗೆ ನೀಡಲಾಗಿರುವ ಪಾಸ್‌ಪೋರ್ಟ್ ಅನ್ನು ರದ್ದು ಮಾಡುವಂತೆ ವನುವಾಟು ಪ್ರಧಾನಿ ಜೋಥಮ್ ನಪಾಟ್ ಅವರು ತಮ್ಮ ಪೌರತ್ವ ಸಮಿತಿಗೆ ಸೋಮವಾರ ಸೂಚನೆ ನೀಡಿದರು.

ಲಲಿತ್ ಮೋದಿ

ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ (ಐಪಿಎಲ್) ಅವ್ಯವಹಾರ ನಡೆಸಿದ ಆರೋಪ ಹೊತ್ತಿರುವ ಲಲಿತ್ ಮೋದಿ ಅವರು 2010ರಲ್ಲೇ ದೇಶವನ್ನು ತೊರೆದಿದ್ದಾರೆ.

‘ಭಾರತಕ್ಕೆ ಮರಳುವುದನ್ನು ತಪ್ಪಿಸಿ ಕೊಳ್ಳಲು ಅವರು ನಮ್ಮ ಪೌರತ್ವ ಪಡೆದುಕೊಂಡಿದ್ದರು’ ಎಂದು ನಪಾಟ್ ಮಾಹಿತಿ ನೀಡಿದ್ದಾರೆ. ‘ನನ್ನ ಭಾರತೀಯ ಪಾಸ್‌ಪೋರ್ಟ್ ಅನ್ನು ವಾಪಸು ಕೊಡಿ’ ಎಂದು ಲಲಿತ್ ಅವರು ಲಂಡನ್‌ನಲ್ಲಿರುವ ಭಾರತ ರಾಯಭಾರ ಕಚೇರಿಗೆ ಮಾರ್ಚ್ 7ರಂದು ಅರ್ಜಿ ಸಲ್ಲಿಸಿದ್ದರು.

‘ಅಂತರರಾಷ್ಟ್ರೀಯ ಮಾಧ್ಯಮದ ಮೂಲಕ ಲಲಿತ್ ಮೋದಿ ಅವರ ವಿಚಾರ ತಿಳಿಯಿತು. ಇಂಟರ್‌ಪೋಲ್ ಪರಿಶೀಲನೆ ಸೇರಿ ಎಲ್ಲ ರೀತಿಯ ಪರಿಶೀಲನೆಗಳನ್ನು ನಡೆಸಿಯೇ ನಾವು ಪೌರತ್ವ ನೀಡಿದ್ದೆವು. ಆದರೆ, ಇಂಟಲ್‌ಪೋಲ್‌ನವರು ಲಲಿತ್ ಅವರಿಗೆ ಇರುವ ಅಪರಾಧ ಹಿನ್ನೆಲೆಯ ಮಾಹಿತಿ ನೀಡಿರಲಿಲ್ಲ’ ಎಂದು ಪ್ರಧಾನಿ ಹೇಳಿದರು.

‘ಲಲಿತ್ ಅವರ ಬಗ್ಗೆ ಭಾರತ ಸರ್ಕಾರ ಎರಡು ಬಾರಿ ಎಚ್ಚರಿಕೆ ನೀಡಿದೆ. ಆದರೆ ‘ಲಲಿತ್ ಅವರು ಅಪರಾಧದ ಬಗ್ಗೆ ಗಮನಾರ್ಹ ಸಾಕ್ಷ್ಯಗಳಿಲ್ಲ’ ಎಂದು ಹೇಳಿದ ಇಂಟರ್‌ಪೋಲ್, ಭಾರತದ ಮನವಿಯನ್ನು ತಿರಸ್ಕರಿಸಿತು’ ಎಂದರು.

‘ಪೌರತ್ವ ಪಡೆದುಕೊಳ್ಳುವ ಲಲಿತ್ ಅವರ ಮನವಿಯನ್ನು ತಿರಸ್ಕರಿಸುವಂತೆ ಭಾರತ ಸರ್ಕಾರ ವನುವಾಟು ಸರ್ಕಾರಕ್ಕೆ ಮನವಿ ಮಾಡಿತ್ತು’ ಎಂದು ಮೂಲಗಳು ತಿಳಿಸಿವೆ.

ಹೂಡಿಕೆ ಮಾಡಿ, ಪೌರತ್ವ ಪಡೆಯಿರಿ

ಹೂಡಿಕೆ ಮಾಡುವ ಮೂಲಕ ಪೌರತ್ವ ಪಡೆದುಕೊಳ್ಳುವ ಯೋಜನೆಯೊಂದು ವನುವಾಟು ದೇಶದಲ್ಲಿದೆ. ವ್ಯಕ್ತಿಯೊಬ್ಬರ ಪೌರತ್ವ ಅರ್ಜಿಗೆ 1.30 ಲಕ್ಷ ಡಾಲರ್ (ಸುಮಾರು ₹1.13 ಕೋಟಿ) ಪಾವತಿಸಬೇಕು. ಪೌರತ್ವ ಪಡೆದುಕೊಳ್ಳಲು ಕುಟುಂಬದ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಒಂದೊಂದು ಮೊತ್ತವನ್ನು ನಿಗದಿಪಡಿಸ ಲಾಗಿದೆ. ಹಣ ಪಡೆದುಕೊಂಡು ಪೌರತ್ವ ನೀಡುವುದೇ ಈ ದೇಶದ ಪ್ರಮುಖ ಆದಾಯ ಮೂಲವಾಗಿದೆ. ದಕ್ಷಿಣ ಪೆಸಿಫಿಕ್ ಸಾಗರದಲ್ಲಿರುವ ಈ ದೇಶವು 80 ದ್ವೀಪಗಳನ್ನು ಒಳಗೊಂಡಿವೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀಮತಿ ಅರಸಮ್ಮ ನವರು

ಇವರು ದಿ: 02.03.2025ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ವೈಕುಂಠ ಸಮಾ ರಾಧನೆ ದಿ: 12.03.2025ರಂದು ದೊಡ್ಡಬಳ್ಳಾಪುರದ ದೇವರಾಜ ನಗರದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಲಿದೆ. ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವಂತೆ ವಿನಂತಿ.

ಇಂತಿ ದುಃಖತಪ್ತರು: ಶ್ರೀ ಕೆ.ಎಂ. ಹನುಮಂತರಾಯಪ್ಪ, ಮಾಜಿ ಅಧ್ಯಕ್ಷರು, ಕೇಂದ್ರ ರೇಷ್ಮೆ ಮಂಡಲಿ, ಭಾರತ ಸರ್ಕಾರ. ಅಧ್ಯಕ್ಷರು ದೊಡ್ಡಬಳ್ಳಾಪುರ ಲಯನ್ಸ್ ಚಾರಿಟೀಸ್ ಟ್ರಸ್ಟ್(ರಿ.) ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬಸ್ಥರು.

21ನೇ ವರ್ಷದ ಪುಣ್ಯಸ್ಮರಣೆ

ಡಾ|| ಬಿ.ಸಿ. ಸಗನೇ ಗೌಡರು, ಎಂ.ಎಸ್.
ನಿವೃತ್ತ ಜಿಲ್ಲಾ ಸರ್ಜನರು,
ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ದ.ಕ.ಜಿಲ್ಲೆ.
ಜನನ : 05-04-1935 ನಿಧನ : 11-03-2004
ನೀವು ನಮ್ಮನ್ನಗಲಿ ಇಪ್ಪತ್ತೊಂದು ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಾಳದಲ್ಲಿದೆ. ನಿಮ್ಮ ದಿವ್ಯಾತ್ಮವು ಭಗವಂತನ ಪದತಳದಲ್ಲಿ ಚಿರಶಾಂತಿ ಪಡೆಯಲೆಂದು ಪ್ರಾರ್ಥಿಸುವ
ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಎಲ್ಲಾ ಕುಟುಂಬಸ್ಥರು, ಬೇಲೂರು–573115
ಫೋನ್: 6362934108, 9845689500 9844436598, 9686405825

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

ಸಾರ್ವಜನಿಕ ಪ್ರಕಟಣೆ

PUBLIC NOTICE

Notice is hereby given to General Public, on behalf of My Client, SRI KISHORE J. S/o Sri Janardhan Reddy, Aged about 37 Years, R/at #2, 2nd Main, 2nd Cross, OMBR Layout, Chikka Banasawadi, Bengaluru North, Kalyananagar Post, Bengaluru-560 043, that my clients intend to purchase the Schedule Property, which is morefully described in the schedule hereunder, from its Owners Sri GOMA @ RAMLAL S/o Late Babhutji, Aged about 69 Years & SRI TEJARAM S/o Ramlal Aged about 44 Years, Both are residing at No.5, Bilal Nagar, Venkateshpuram Main Road, Arabic College Post, Bengaluru- 560 045.
Therefore, any Person/s having an Claim in respect of the Schedule Property or part thereof by way of Sale, Exchange, Mortgage, Charge, Gift, Rent, Lease, Maintenance, inheritance, Possession, lien, Hypothecation, Transfer of Title, Beneficial, interest under any Trust right of prescription or Pre-emption or Under any Agreement or Other disposition or Under any Decree, order or Award Otherwise Claiming howsoever are hereby requested to make the same Known in writing together with the supporting documents to the Undersigned at his office at No.3, E-4, M.M.Building, Bhattarahalli Main Road, Virgonagar Post, Bengaluru-560049, within a period of **14 days** (both days inclusive) of the Publication hereof failing which the claim of Such Person(S) will deemed to have been waived and/or abandoned.
SCHEDULE PROPERTY
ALL THAT PIECE AND PARCEL OF THE Agricultural landed Property bearing Old Sy.No.48, New Sy.No.97, and Thathkal Phodi Sy.No.97/2, Measuring to and Extent of 2 Acre 26.1/2 Guntas, Situated at Bellavi Village, Kasaba Hobli, Malur Taluk, Kolar District, and bounded on the **East by:** Road, **West by:** Property belonging to Nuccchu Basappa, **North by:** Remaining land in same Sy. No belonging to B M Nanjundiah, **South by:** Property belonging to Basamma and Now belongs to Vendor No.1 Rathanamma.
Pradeep T S
PRADEEP ASSOCIATES
No. 3, E-4, M.M.Building, Bhattarahalli Main Road, Virgonagar Post, Bengaluru-560049.
Mobile No: 9916535030
Date-10-03-2025 Bengaluru

PUBLIC NOTICE

The general public is hereby informed that, on behalf of our Client, we are investigating the right, title and interest in relation to the property described in the Schedule below ("Schedule Property") which is owned by K. N. Balakrishna, son of Narayanaswamy K. B. The Owner has represented that he is the absolute owner of the Schedule Property having unrestricted rights of alienation over the same.
Any person, including any individuals, corporate bodies, partnership firms, banks, financial institutions, other lenders and government bodies having any right, title , interest, claim, benefit, demand or interest in the Schedule Property or any portion thereof by way of sale, lease, mortgage, charge, lien, possession, assignment, attachment, exchange, gift or transfer in any manner, tenancy, license, inheritance, easement, succession, right of way, agreements, settlement, maintenance, decree or order of any Court of Law or in any other manner is hereby called upon to intimate their objections and/or claims in writing along with documentary proof to the undersigned at the address mentioned below within Fifteen (15) days from the date of this notice. If no such objection or claim is received, it would be deemed that no person, except the Owner, has any right, interest or claim in or in relation to the Schedule Property and all rights, interest and claims, if any, which are not notified as stated above shall be treated as waived and not enforceable or binding on our Client and the title of the Owner to the Schedule Property shall be treated as clear and marketable.
SCHEDULE PROPERTY
All that piece and parcel of the land bearing Survey No. 374/6 (Old Survey No. 374/1) measuring 24 Guntas, duly converted for industrial purpose vide Official Memorandum dated 14.12.2020, bearing No. 174094, issued by the office of the Deputy Commissioner, Kandaya Bhavana, Ramanagara, situated at Cheeluru Village, Maralavadi Hobli, Kanakapura Taluk, Ramanagara District and bounded on:
East by : Kanakapura-Bangalore Main Road
West by : Survey No. 191
North by : Survey No. 192
South by : Survey No. 374/4.
Trust Law Advocates & Solicitors
No.29/11, 1st Floor, Udaya Sahakara Bhavana, Mount Joy Road, 1st Main Road, Bengaluru-560004
Phone No. 080 – 29913089
E-mail Id: narayan@trustlaw.in

ಭವಿಷ್ಯ

Astrology

★ಓಂ ದುರ್ಗಾಂಜನಂ★ ಇಚ್ಛಾಸಿದ್ಧಿ ಶಕ್ತಿಪೀಠ,ಭಾರತದ ಪ್ರಖ್ಯಾತ ಲಕ್ಷಾಂತರ ಗ್ರಾಹಕರ ಪರಮಶ್ರೇಷ್ಠ ಬಾಬಾ ಶ್ರೀದೇವಾನಂದ ಮಹಾರಾಜ,ನಿಮ್ಮೆಲ್ಲಾ ಸಂಕಷ್ಟಗಳಿಗೆ ಪರಿಹಾರ, ಬೆಂಗಳೂರು.9845005009

ಪ್ರವಾಸ

Travel Agencies

ಮಹಿಳಾ ದಿನಾಚರಣೆ ವಿಶೇಷ ರಿಯಾಯಿತಿ 11 ದಿನಗಳು ಸಿಂಗಪೂರ್ ಮಲೇಶಿಯಾ ಥೈಲ್ಯಾಂಡ್, 6 ದಿನಗಳು ಬಾಲಿ 10 ದಿನಗಳು ಕಾಂಬೋಡಿಯಾ & ವಿಯೆಟ್ನಾಂ, 12 ದಿನಗಳು ಲಂಡನ್ ಸ್ಕಾಟ್ಲಾಂಡ್ ಐರ್ಲ್ಯಾಂಡ್ ವೇಲ್ಸ್. ಭಟ್ ಟ್ರಾವೆಲ್ಸ್: 9844037295

Travel

21.04.2025 10ದಿನಗಳು ದೆಹಲಿ,ಅಗ್ರ,ಅಲಹಾಬಾದ್, ಕಾಶಿ,ಗಯಾ,ಅಯೋಧ್ಯಾ ಹರಿದ್ವಾರ,ಇತ್ಯಾದಿ (ಕೆಲವೇ ಸೀಟುಗಳಿವೆ). 12.05.2025 6ದಿನಗಳು ಕಾಶಿ,ಗಯಾ`ಅಯೋಧ್ಯಾ ಅಲಹಾಬಾದ್.9.06.2025 ಮತ್ತು`16.09.2025 13/17ದಿನಗಳು`ರೈಲು ವಿಮಾನದಲ್ಲಿ ಚಾರ್‌ಧಾಮ್ ಯಾತ್ರೆ. 12.07.2025 13/17ದಿನಗಳು ಅಮರನಾಥ್ ವೈಷ್ಣೋದೇವಿ`ಕಾಶ್ಮೀರ ದೆಹಲಿ`ಇತ್ಯಾದಿ. ಏಪ್ರಿಲ್/ಮೇನಲ್ಲಿ ಅಂಡಮಾನ್`ಹವಳದ್ವೀಪ. ''ಶ್ರೀಸಾಯಿ`ರಾಘವೇಂದ್ರ ಟ್ರಾವೆಲ್ಸ್'' 9739847429/ 9845560219

ರಿಯಾಯಿತಿ ದರದಲ್ಲಿ ಪ್ರವಾಸಗಳು 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 6 ದಿನಗಳ ಇಂಡೋನೇಷ್ಯಾ,ಬಾಲಿ ಪ್ರವಾಸಗಳು. 8 ದಿನಗಳ ನೇಪಾಳ (ಶ್ರೀಮುಕ್ತಿನಾಥ).9 ದಿನಗಳ ಕಾಶಿ ಅಯೋಧ್ಯೆ,ಗಯಾ ಪ್ರವಾಸಗಳು. ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ 9900099252 9900080793

20.3.2025 ರಿಂದ 9 ದಿನಗಳು ಅಂಡಮಾನ್ ಪ್ರವಾಸ ಹಡಗು ಮತ್ತು ವಿಮಾನದಲ್ಲಿ, ಜುಲೈ 1 ರಿಂದ 12 ದಿನಗಳು ಅಮರನಾಥ್, ವೈಷ್ಣೋದೇವಿ ಅಮೃತಸರ, ಶ್ರೀನಗರ. ಶ್ರೀಗಂಗಾ ಟೂರಿಸ್ಟ್. 9480253807

ಪ್ರಜಾವಾಣಿ ಕ್ಲಾಸಿಫೈಡ್ಸ್ ಶಿಕ್ಷಣ
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರಾಜಕೀಯ ಕಾರಣಕ್ಕೆ ತಮಿಳುನಾಡು ಸರ್ಕಾರ ಯೂಟರ್ನ್: ಶಿಕ್ಷಣ ಸಚಿವರ ಹೇಳಿಕೆಗೆ ಆಕ್ಷೇಪ, ಪ್ರತಿಭಟನೆ

ಎನ್‌ಇಪಿ: ಪ್ರಧಾನ್–ಡಿಎಂಕೆ ಜಟಾಪಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜಕೀಯ ಕಾರಣಕ್ಕಾಗಿ ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ) ಜಾರಿಯಲ್ಲಿ ತಮಿಳುನಾಡು ಸರ್ಕಾರ ಯೂಟರ್ನ್ ಮಾಡಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಲೋಕಸಭೆಯಲ್ಲಿ ಆರೋಪಿಸಿದರು. ಈ ಹೇಳಿಕೆಯಿಂದ ಕುಪಿತಗೊಂಡ ಡಿಎಂಕೆ ಸದಸ್ಯರು ಪ್ರತಿಭಟಿಸಿದರು. ಇದರಿಂದಾಗಿ, ಕಲಾಪಕ್ಕೆ ಅಡ್ಡಿಯಾಯಿತು.

ಪಿಎಂ ಸ್ಕೂಲ್ ಫಾರ್ ರೈಸಿಂಗ್ ಇಂಡಿಯಾ (ಪಿಎಂ–ಶ್ರೀ) ಯೋಜನೆಗೆ ಕೇಂದ್ರವು ಹಣ ಬಿಡುಗಡೆ ಮಾಡಿಲ್ಲ ಎಂದು ಸದಸ್ಯರೊಬ್ಬರು ಪ್ರಶ್ನೋತ್ತರ ಅವಧಿಯಲ್ಲಿ ಸೋಮವಾರ ಪ್ರಶ್ನೆ ಕೇಳಿದರು. ಅದಕ್ಕೆ ಉತ್ತರಿಸಿದ ಪ್ರಧಾನ್, 'ಅವರು ಅಪ್ರಾಮಾಣಿಕರು ಮತ್ತು ಅವರು ತಮಿಳುನಾಡಿನ ವಿದ್ಯಾರ್ಥಿಗಳ ಭವಿಷ್ಯವನ್ನು ಹಾಳು ಮಾಡುತ್ತಿದ್ದಾರೆ ... ಅವರು ಜನರನ್ನು ದಾರಿ ತಪ್ಪಿಸುತ್ತಿದ್ದಾರೆ' ಎಂದು ಕಿಡಿಕಾರಿದರು.

ಇದಕ್ಕೆ ತಿರುಗೇಟು ನೀಡಿದ ಡಿಎಂಕೆ ಸದಸ್ಯರು, 'ನಾವು ಎನ್‌ಇಪಿಯನ್ನು ಪೂರ್ಣವಾಗಿ ಸ್ವೀಕರಿಸುವುದಿಲ್ಲ ಹಾಗೂ ತ್ರಿಭಾಷಾ ಸೂತ್ರ ತಮಿಳುನಾಡಿಗೆ ಸ್ವೀಕಾರಾರ್ಹವಲ್ಲ ಎಂಬುದನ್ನು

ಸಚಿವರಿಗೆ ಸ್ಪಷ್ಟವಾಗಿ ತಿಳಿಸಿದ್ದೇವೆ' ಎಂದರು.

ಇದಕ್ಕೂ ಮುನ್ನ ಉತ್ತರ ನೀಡಿದ ಪ್ರಧಾನ್, 'ಕೇಂದ್ರ, ರಾಜ್ಯ ಅಥವಾ ಸ್ಥಳೀಯ ಸಂಸ್ಥೆಗಳಿಂದ ನಿರ್ವಹಣೆಗೆ ಒಳಪಡುವ ಹಾಗೂ ಶಾಲೆಗಳನ್ನು ಬಲಪಡಿಸುವ ಪಿಎಂ ಶ್ರೀ ಯೋಜನೆ ಅನುಷ್ಠಾನದ ವಿಷಯದಲ್ಲಿ ಡಿಎಂಕೆ ನೇತೃತ್ವದ ತಮಿಳುನಾಡು ಸರ್ಕಾರವು ತನ್ನ ನಿಲುವನ್ನು ಬದಲಿಸಿದೆ' ಎಂದು ದೂರಿದರು.

ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತರಲು ಸಂಬಂಧಿಸಿದ್ದಂತೆ ರಾಜ್ಯ ಸರ್ಕಾರವು ಕೇಂದ್ರದೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕು. ಪ್ರತಿಯಾಗಿ ಕೇಂದ್ರ ಸರ್ಕಾರವು ಅನುದಾನ ಒದಗಿಸುತ್ತದೆ. ಆರಂಭದಲ್ಲಿ ಸಹಿ ಹಾಕಲು ತಮಿಳುನಾಡು ಸರ್ಕಾರ ಒಪ್ಪಿಕೊಂಡಿತ್ತು. ರಾಜಕೀಯ ಕಾರಣಕ್ಕೆ ನಿಲುವು ಬದಲಿಸಿತು. ಕರ್ನಾಟಕ, ಹಿಮಾಚಲ

ಧರ್ಮೇಂದ್ರ ಪ್ರಧಾನ್

ಕನಿಮೊಳಿ

ಪ್ರದೇಶ, ಪಂಜಾಬ್ ಸೇರಿದಂತೆ ಬಿಜೆಪಿಯೇತರ ಸರ್ಕಾರಗಳು ಇರುವ ರಾಜ್ಯಗಳು ಒಪ್ಪಂದಕ್ಕೆ ಸಹಿ ಹಾಕಿವೆ' ಎಂದು ಅವರು ಹೇಳಿದರು.

'ಒಂದು ಹಂತದಲ್ಲಿ ಪಿಎಂ ಶ್ರೀ ಯೋಜನೆಗೆ ತಮಿಳುನಾಡು ಸರ್ಕಾರ ಒಪ್ಪಿಕೊಂಡಿತ್ತು. ತಮ್ಮನ್ನು ಭೇಟಿಯಾಗಲು ಬಂದಿದ್ದ ಹಲವು ಸಂಸದರು ಈ ವಿಷಯವನ್ನು ತಿಳಿಸಿದ್ದರು. ಆದರೆ, ರಾಜ್ಯಕ್ಕೆ ಹಿಂತಿರುಗಿದ ಬಳಿಕ ಯೂಟರ್ನ್ ಮಾಡಿದರು. ಅವರು ಜನರ ದಿಕ್ಕು ತಪ್ಪಿಸುತ್ತಿದ್ದಾರೆ. ಅವರು ಪ್ರಜಾಪ್ರಭುತ್ವ ವಿರೋಧಿಗಳು' ಎಂದು ಕಿಡಿಕಾರಿದರು.

'ಎನ್‌ಇಪಿ ಜಾರಿಗೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಕುರುಡಿ ನಲ್ಲಿ ಒಪ್ಪಿದ್ದರು. ಆದರೆ, ಇದಕ್ಕಿದ್ದಂತೆ ಕೆಲವು ಸೂಪರ್ ಸಿಎಂಗಳು ಹಾಜರಿ ಕೊಂಡ ಬಳಿಕ ರಾಜಕೀಯ ಮಾಡಲಾರಂಭಿಸಿದರು' ಎಂದು ಅವರು ಆರೋಪಿಸಿದರು. 'ಇವತ್ತು ಮಾರ್ಚ್ 10. ಒಪ್ಪಂದಕ್ಕೆ ಸಹಿ ಹಾಕಲು ತಮಿಳುನಾಡು ಸರ್ಕಾರಕ್ಕೆ ಇನ್ನೂ 20 ದಿನಗಳ ಕಾಲಾವಕಾಶ ಇದೆ' ಎಂದು ತಿಳಿಸಿದರು.

ಸಚಿವರ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಡಿಎಂಕೆ ಸದಸ್ಯರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಪ್ರತಿಭಟನೆ ಕೈಬಿಡುವಂತೆ ಸದಸ್ಯರಿಗೆ ಲೋಕಸಭಾಧ್ಯಕ್ಷ ಓಂ ಬಿರ್ಲಾ ಮನವಿ ಮಾಡಿದರು. 'ಸಂಸದೀಯ ಕಾರ್ಯವಿಧಾನವನ್ನು ಉಲ್ಲಂಘಿಸಬೇಡಿ' ಎಂದು ಕಿವಿಮಾತು ಹೇಳಿದರು. ಸದಸ್ಯರು ಪ್ರತಿಭಟನೆ ಮುಂದುವರಿಸಿದರು. ಕಾಂಗ್ರೆಸ್ ಹಾಗೂ ವಿಪಕ್ಷಗಳ ಸದಸ್ಯರು ಪ್ರತಿಭಟನೆಯಲ್ಲಿ ಕೈಜೋಡಿಸಿದರು. ಬಳಿಕ ಕಲಾಪವನ್ನು ಮಧ್ಯಾಹ್ನ 12ರವರೆಗೆ ಮುಂದೂಡಲಾಯಿತು.

ಕಲಾಪ ಪುನರಾರಂಭಗೊಂಡಾಗ ಡಿಎಂಕೆ ಸದಸ್ಯೆ ಕನಿಮೊಳಿ, 'ಸಚಿವರು ಬಳಸಿದ ನಿರ್ದಿಷ್ಟ ಪದದಿಂದ ನನಗೆ ನೋವಾಗಿದೆ' ಎಂದರು.

ಶಿಕ್ಷಣ ಯೋಜನೆಗಳ ಅಡಿಯಲ್ಲಿ ರಾಜ್ಯಕ್ಕೆ ಅನುದಾನ ಬಿಡುಗಡೆ ಮಾಡುವಂತೆ ವಿನಂತಿಸಲು ತಮಿಳುನಾಡು ಶಿಕ್ಷಣ ಸಚಿವರ ಜತೆಗಿದ್ದ ಸಂಸದರು ಪ್ರಧಾನ್ ಅವರನ್ನು ಭೇಟಿ ಮಾಡಿದ್ದೆವು ಎಂದು ಅವರು ಹೇಳಿದರು.

'ಎನ್‌ಇಪಿಯಲ್ಲಿ ಸಮಸ್ಯೆಗಳಿವೆ ಮತ್ತು ಅದನ್ನು ಪೂರ್ಣವಾಗಿ ಸ್ವೀಕರಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೇವೆ. ತ್ರಿಭಾಷಾ ಸೂತ್ರವು ತಮಿಳುನಾಡಿಗೆ ಸ್ವೀಕಾರಾರ್ಹವಲ್ಲ ಎಂದು ನಾವು ಹೇಳಿದ್ದೇವೆ. ರಾಜ್ಯದ ಸಂಸದರು ಎನ್‌ಇಪಿಯನ್ನು ಒಪ್ಪಿಲ್ಲ. ಜತೆಗೆ, ರಾಜ್ಯದ ಮುಖ್ಯಮಂತ್ರಿಯವರು ಪ್ರಧಾನಿ ಹಾಗೂ ಪ್ರಧಾನ್ ಅವರಿಗೆ ಪತ್ರ ಬರೆದಿದ್ದಾರೆ' ಎಂದು ತಿಳಿಸಿದರು.

'ನನ್ನ ಹೇಳಿಕೆಯಿಂದ ನೋವಾಗಿದ್ದರೆ ಅದನ್ನು ವಾಪಸ್ ಪಡೆಯುತ್ತೇನೆ' ಎಂದು ಪ್ರಧಾನ್ ತಿಳಿಸಿದರು.

ರಾಜ್ಯದ ಸಂಸದರು ಹಲವು ಸಲ ನನ್ನನ್ನು ಭೇಟಿ ಮಾಡಿದ್ದರು. ತಮಿಳುನಾಡಿನ ಶಿಕ್ಷಣ ಸಚಿವರ ಸಹ ನಿಯೋಗದ ಭಾಗವಾಗಿದ್ದರು. ಇದಕ್ಕೆ ಪರಿಹಾರ ಕಂಡುಕೊಳ್ಳಬೇಕು ಎಂಬ ಮನೋಭಾವದಿಂದ ಅವರು ಬಂದಿದ್ದರು. ಕೆಲವೊಂದು ವಿಷಯಗಳನ್ನು ಒಪ್ಪಿಕೊಂಡಿದ್ದರು. ಈ ವಿಷಯವನ್ನು ಮುಖ್ಯಮಂತ್ರಿ ಗಮನಕ್ಕೆ ತಂದರು. ಕೆಲವೊಂದು ಸಮಸ್ಯೆಗಳು ಸೃಷ್ಟಿಯಾಗಿವೆ ಎಂದು ಸಂಸದರು ಅಸ್ವೀಕಾರಿಕವಾಗಿ ನನಗೆ ತಿಳಿಸಿದರು. ಇದು ದುರದೃಷ್ಟಕರ' ಎಂದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕನಿಮೊಳಿ, 'ರಾಜ್ಯದ ಮೇಲೆ ಯಾವುದೇ ವಿಷಯವನ್ನು ಹೇರಲು ಸಾಧ್ಯವಿಲ್ಲ. ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿದೆ. ನೀವೇ ತೀರ್ಮಾನಿಸಿ ಅದನ್ನು ರಾಜ್ಯದ ಮೇಲೆ ಹೇರುವುದು ಏಕೆ' ಎಂದು ಪ್ರಶ್ನಿಸಿದರು.

'ಪ್ರಧಾನ್ ನಾಲಿಗೆ ಬಿಗಿ ಹಿಡಿದು ಮಾತನಾಡಲಿ'

ಚೆನ್ನೈ (ಪಿಟಿಐ): 'ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಾನು ರಾಜನೆಂದು ಭಾವಿಸಿಕೊಂಡು ದುರಹಂಕಾರದಿಂದ ಮಾತನಾಡುತ್ತಿದ್ದಾರೆ. ಅವರು ತಮ್ಮ ನಾಲಿಗೆಯನ್ನು ಬಿಗಿಹಿಡಿದು ಮಾತನಾಡಲಿ' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಸೋಮವಾರ ಹರಿಹಾಯ್ದಿದ್ದಾರೆ.

ಸ್ಟಾಲಿನ್

ತಮಿಳುನಾಡು ಸರ್ಕಾರವು ಕೇಂದ್ರದ 'ಪಿಎಂ ಶ್ರೀ' ಯೋಜನೆಯನ್ನು ಅನುಷ್ಠಾನಗೊಳಿಸುವುದಿಲ್ಲ. ಈ ವಿಷಯದಲ್ಲಿ ಯಾರೂ ತಮ್ಮನ್ನು ಮನವೊಲಿಸಲು ಸಾಧ್ಯವಿಲ್ಲ ಎಂದು ಸ್ಟಾಲಿನ್ ಖಡಕ್ ಆಗಿ ಹೇಳಿದ್ದಾರೆ.

'ನೀವು ನಮ್ಮಿಂದ ಸಂಗ್ರಹಿಸಿರುವ ಮತ್ತು ತಮಿಳುನಾಡಿನ ವಿದ್ಯಾರ್ಥಿಗಳಿಗಾಗಿ ಮೀಸಲಾದ ನಿಧಿಯನ್ನು ಬಿಡುಗಡೆ ಮಾಡುತ್ತೀರೋ ಅಥವಾ ಇಲ್ಲವೋ ಉತ್ತರಿಸಿ' ಎಂದು ಸ್ಟಾಲಿನ್ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪ್ರಶ್ನಿಸಿದ್ದಾರೆ.

ಹೊಸ ಶಿಕ್ಷಣ ನೀತಿ, ತ್ರಿಭಾಷಾ ನೀತಿ ಮತ್ತು ಪಿಎಂ ಶ್ರೀ ಯೋಜನೆ ಒಪ್ಪಿಕೊಳ್ಳಬೇಕೆಂದು ತಮಿಳುನಾಡು ಶಿಕ್ಷಣ ಸಚಿವರು ಒತ್ತಾಯಿಸಲು ಬಂದಿರುವುದಕ್ಕೆ ವಿರುದ್ಧ ಸಚಿವ ಪ್ರಧಾನ್ ಅವರಿಗೆ ಬರೆದ ಪತ್ರವನ್ನು ಉಲ್ಲೇಖಿಸಿ, 'ಡಿಎಂಕೆ ಸರ್ಕಾರವು, ನಾಗ್ಪುರದ ಮಾತುಗಳಿಗೆ ಕಟ್ಟುಬದ್ಧವಾಗಿರುವ ಬಿಜೆಪಿ ನಾಯಕರಿಗಿಂತ ಭಿನ್ನವಾಗಿ ಜನರ ಅಭಿಪ್ರಾಯಗಳನ್ನು ಗೌರವಿಸುವ ಮೂಲಕ ಕಾರ್ಯನಿರ್ವಹಿಸಿದೆ' ಎಂದು ಸ್ಟಾಲಿನ್ ತಿರುಗೇಟು ನೀಡಿದ್ದಾರೆ.

ಡಿಎಂಕೆ ಸಂಸದರನ್ನು ಗುರಿಯಾಗಿಸಿ ಪ್ರಧಾನ್ ಅವರು ಬಳಸಿದ್ದ ಪದಕ್ಕೆ ತಿರುಗೇಟು ನೀಡಿರುವ ಅವರು, 'ಕೇಂದ್ರ ಸಚಿವರು ಹಣ ಬಿಡುಗಡೆ ಮಾಡದೆ ತಮಿಳುನಾಡಿಗೆ ವಂಚಿಸಿದ್ದಾರೆ. ನೀವು ತಮಿಳುನಾಡಿನ ಜನರನ್ನು ಅವಮಾನಿಸುತ್ತಿದ್ದೀರಿ. ಪ್ರಧಾನಿ ಮೋದಿ ಇದನ್ನು ಒಪ್ಪುತ್ತಾರೆಯೇ' ಎಂದು ಪ್ರಶ್ನಿಸಿದ್ದಾರೆ.

'ಎಪಿಕ್' ಚರ್ಚೆಗೆ ವಿಪಕ್ಷ ಪಟ್ಟು

ದೋಷಪೂರಿತ ಮತದಾರರ ಪಟ್ಟಿ ಕುರಿತು ಉಭಯ ಸದನಗಳಲ್ಲಿ ಚರ್ಚೆ ನಡೆಸಬೇಕು ಎಂದು ವಿರೋಧ ಪಕ್ಷದ ಸದಸ್ಯರು ಸೋಮವಾರ ಪಟ್ಟು ಹಿಡಿದರು.

ಲೋಕಸಭೆಯಲ್ಲಿ ವಿಪಕ್ಷ ನಾಯಕ ರಾಹುಲ್ ಗಾಂಧಿ ಈ ವಿಷಯ ಪ್ರಸ್ತಾಪಿಸಿದರು. 'ಎಪಿಕ್' ಕುರಿತು ಕೂಡಲೇ ಚರ್ಚೆಯಾಗಬೇಕು ಎಂದು ರಾಜ್ಯಸಭೆಯಲ್ಲಿ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಆಗ್ರಹಿಸಿದರು. ಈ ಬೇಡಿಕೆಯನ್ನು ಸಭಾಪತಿ ತಿರಸ್ಕರಿಸಿದರು. ಖರ್ಗೆ ನೇತೃತ್ವದಲ್ಲಿ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು.

ಲೋಕಸಭೆಯಲ್ಲಿ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಟಿಎಂಸಿ ಸಂಸದ ಸೌಗತ ರಾಯ್, 'ಮತದಾರರ ಪಟ್ಟಿಯಲ್ಲಿ ದೋಷಗಳಿವೆ' ಎಂದು ದೂರಿದರು. 'ಮುರ್ಷಿದಾಬಾದ್ ಮತ್ತು ಬುರ್ದ್ವಾನ್ ಲೋಕಸಭಾ ಕ್ಷೇತ್ರಗಳು ಹಾಗೂ ಹರಿಯಾಣದಲ್ಲಿ ಒಂದೇ ರೀತಿಯ ಎಪಿಕ್ ಸಂಖ್ಯೆಗಳನ್ನು ಹೊಂದಿರುವ ಮತದಾರರು ಇದ್ದಾರೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಬೊಟ್ಟು ಮಾಡಿ ತೋರಿಸಿದ್ದಾರೆ' ಎಂದರು.

'ಈ ಪಟ್ಟಿಯಲ್ಲಿ ಗಂಭೀರ ನ್ಯೂನತೆಗಳಿವೆ. ಮಹಾರಾಷ್ಟ್ರ ಹಾಗೂ ಹರಿಯಾಣದಲ್ಲಿ ಇಂತಹ ಘಟನೆಗಳು ನಡೆದಿವೆ. ಮುಂದಿನ ವರ್ಷ ಚುನಾವಣೆ ನಡೆಯಲಿರುವ ಅಸ್ಸಾಂ ಹಾಗೂ ಪಶ್ಚಿಮ ಬಂಗಾಳದಲ್ಲಿ ಇದೇ ರೀತಿ ನಡೆಯುವ ಸಂಭವ ಇದೆ. ಒಟ್ಟು ಮತದಾರರ ಪಟ್ಟಿಯನ್ನು ಸಂಪೂರ್ಣವಾಗಿ ಪರಿಷ್ಕರಿಸಲಿ. ಪಟ್ಟಿಯಲ್ಲಿ ಆಗಿರುವ ತಪ್ಪುಗಳ ಬಗ್ಗೆ ಚುನಾವಣಾ ಆಯೋಗ ಉತ್ತರಿಸಬೇಕು' ಎಂದು ಆಗ್ರಹಿಸಿದರು.

ಆಗ ಮಧ್ಯಪ್ರವೇಶಿಸಿ ಮಾತನಾಡಿದ ರಾಹುಲ್ ಗಾಂಧಿ, 'ಮತದಾರರ ಪಟ್ಟಿಗಳ ಕುರಿತು ಇಡೀ ವಿರೋಧ ಪಕ್ಷವು ಚರ್ಚೆಗೆ ಒತ್ತಾಯಿಸುತ್ತಿದೆ' ಎಂದರು.

'ಮತದಾರರ ಪಟ್ಟಿಯನ್ನು ಸರ್ಕಾರ ಸಿದ್ಧಪಡಿಸುವುದಿಲ್ಲ ಎಂಬ ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರ ಹೇಳಿಕೆಯನ್ನು ನಾವು ಒಪ್ಪುತ್ತೇವೆ. ಆದರೆ, ಈ ವಿಷಯದ ಕುರಿತು ವಿಸ್ತೃತ ಚರ್ಚೆಯಾಗಬೇಕು. ಇಡೀ ದೇಶದಲ್ಲಿ ಈ ಬಗ್ಗೆ ಚರ್ಚೆಯಾಗುತ್ತಿದೆ. ಮಹಾರಾಷ್ಟ್ರ ಸೇರಿದಂತೆ ಪ್ರತಿಯೊಂದು ರಾಜ್ಯದಲ್ಲಿ ವಿರೋಧ ಪಕ್ಷಗಳು ಏಕ ಧ್ವನಿಯಲ್ಲಿ ಪ್ರಶ್ನೆಗಳನ್ನು ಕೇಳುತ್ತಿವೆ' ಎಂದು ಗಮನ ಸೆಳೆದರು.

ಟಿಎಂಸಿ ಸದಸ್ಯ ಕಲ್ಯಾಣ್ ಬ್ಯಾನರ್ಜಿ, 'ದೇಶದಲ್ಲಿ ಪಾರದರ್ಶಕ ಹಾಗೂ ನ್ಯಾಯಸಮ್ಮತ ಚುನಾವಣೆಗಳು ನಡೆಯುತ್ತಿಲ್ಲ' ಎಂದರು.

ಎಪಿಕ್ ವಿಷಯದ ಬಗ್ಗೆ ಕೂಡಲೇ ಚರ್ಚೆಯಾಗಬೇಕು ಎಂದು ವಿಪಕ್ಷ ಸದಸ್ಯರು ರಾಜ್ಯಸಭೆಯಲ್ಲಿ ಆಗ್ರಹಿಸಿದರು. ಇದಕ್ಕೆ ಸಭಾಪತಿ ಅನುಮತಿ ನೀಡಲಿಲ್ಲ. ಇದರಿಂದ ಕುಪಿತಗೊಂಡ ಸದಸ್ಯರು ಸಭಾತ್ಯಾಗ ಮಾಡಿದರು. 'ಯಾವುದೇ ವಿಷಯದ ಬಗ್ಗೆ ಚರ್ಚೆಗೆ ಸರ್ಕಾರ ಸಿದ್ಧವಿದೆ. ಆದರೆ, ಸದನದಲ್ಲಿ ಚರ್ಚೆಗೆ ಕೆಲವು ನಿಯಮಗಳಿವೆ. ಅವರು ಚರ್ಚೆ ನಡೆಸಲು ಆಸಕ್ತರಾಗಿಲ್ಲ. ನಿಯಮ 267ರಡಿ ಸದನದ ವ್ಯವಹಾರಗಳನ್ನು ಸ್ಥಗಿತಗೊಳಿಸಿ ನಿರ್ದಿಷ್ಟ ವಿಷಯದ ಬಗ್ಗೆ ಚರ್ಚೆ ನಡೆಸಬೇಕು ಎಂದು ನೋಟಿಸ್ ನೀಡುವುದು ಸರಿಯಲ್ಲ. ಇದು ಕಲಾಪವನ್ನು ಹಾಳು ಮಾಡುವ ದುಷ್ಟ ಸಂಚು ಎಂದು ಸಭಾನಾಯಕ ಜೆ.ಪಿ.ನಡ್ಡಾ ಕಿಡಿಕಾರಿದರು. ಆರಂಭದಲ್ಲಿ ಖರ್ಗೆ ಅವರಿಗೆ ಮಾತನಾಡಲು ಅವಕಾಶ ನೀಡಲಾಯಿತು. ಆಗ ಅವರು ಎಪಿಕ್ ಬಗ್ಗೆ ಪ್ರಸ್ತಾಪಿಸಿದರು. ಉಪಸಭಾಪತಿ ಹರಿವಂಶ್ ಅವಕಾಶ ನಿರಾಕರಿಸಿದರು. ನೋಟಿಸ್‌ಗಳನ್ನು ತಿರಸ್ಕರಿಸಿದ್ದಕ್ಕೆ ವಿಪಕ್ಷ ಸದಸ್ಯರು ಘೋಷಣೆಗಳನ್ನು ಕೂಗಿದರು.

ಚುನಾವಣಾ ಆಯೋಗದ ಲೋಪಗಳ ಬಗ್ಗೆ ಚರ್ಚೆಗೆ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿ ಟಿಎಂಸಿಯ ಸಾಕೇತ್ ಗೋಖಲೆ, ಸಾಗರಿಕಾ ಘೋಷ್, ಕಾಂಗ್ರೆಸ್‌ನ ಪ್ರಮೋದ್ ತಿವಾರಿ ಹಾಗೂ ಅಜಯ್ ಮಾಕನ್ ನೋಟಿಸ್ ನೀಡಿದರು.

'ಕೇಂದ್ರೀಯ ವಿದ್ಯಾಲಯ: ಸಂಸದರ ಕೋಟಾ ಮರು ಜಾರಿ ಇಲ್ಲ'

ನವದೆಹಲಿ (ಪಿಟಿಐ): ಕೇಂದ್ರೀಯ ವಿದ್ಯಾಲಯಗಳ ಪ್ರವೇಶಾತಿಯಲ್ಲಿ ಸಂಸದರ ಕೋಟಾವನ್ನು ಮರು ಜಾರಿಗೊಳಿಸುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಲೋಕಸಭೆಯಲ್ಲಿ ಲಿಖಿತ ಪ್ರಶ್ನೆಗೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಈ ವಿಷಯ ತಿಳಿಸಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿ–2020ರ ದೂರದೃಷ್ಟಿಯಂತೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಅನುಪಾತ (ಪಿಟಿಆರ್) ಮತ್ತು ಕಲಿಕೆಯ ಗುಣಮಟ್ಟ ಕಾಪಾಡಲು ಕೇಂದ್ರ ಸರ್ಕಾರ 2022ರಲ್ಲೇ ಸಂಸದರ ಕೋಟಾ ರದ್ದು ಮಾಡಿದೆ ಎಂದು ತಿಳಿಸಿದ್ದಾರೆ.

ಈ ಹಿಂದೆ ಕೇಂದ್ರೀಯ ವಿದ್ಯಾಲಯಗಳಲ್ಲಿ ಲೋಕಸಭೆ ಸದಸ್ಯರ ಕೋಟಾದಡಿ ಪ್ರವೇಶ ಅವಕಾಶ ಇತ್ತು. ಸಂಸದರು 10 ಮಕ್ಕಳ ಪ್ರವೇಶಕ್ಕೆ ಶಿಫಾರಸು ಮಾಡುವ ವಿವೇಚನಾಧಿಕಾರ ಹೊಂದಿದ್ದರು. ಜಿಲ್ಲಾಧಿಕಾರಿಗಳು 17 ವಿದ್ಯಾರ್ಥಿಗಳ ಪ್ರವೇಶಕ್ಕೆ ಶಿಫಾರಸು ಮಾಡಬಹುದಿತ್ತು.

ಲೋಕಸಭೆಯ 543 ಸದಸ್ಯರು, ರಾಜ್ಯಸಭೆಯ 245 ಸದಸ್ಯರು ಸೇರಿ ವರ್ಷಕ್ಕೆ 7,880 ಮಕ್ಕಳ ಪ್ರವೇಶಕ್ಕೆ ಈ ಕೋಟಾದಡಿ ಶಿಫಾರಸು ಮಾಡಬಹುದಿತ್ತು.

ಇದು ಮಂಜೂರಾದ ಮಕ್ಕಳ ಸಂಖ್ಯೆಯನ್ನು ಮೀರುತ್ತದೆ ಮತ್ತು ಮಕ್ಕಳ ಕಲಿಕೆ ಮೇಲೆ ಪರಿಣಾಮ ಬೀರುತ್ತದೆ ಎನ್ನುವ ಕಾರಣ ನೀಡಿ ಕೇಂದ್ರೀಯ ವಿದ್ಯಾಲಯ ಸಂಘಟನೆಯು ಈ ವಿಶೇಷ ಅವಕಾಶವನ್ನು 2022ರಲ್ಲಿ ಸ್ಥಗಿತಗೊಳಿಸಿತ್ತು.

ರಂಜಾನ್ ತಿಂಗಳಲ್ಲಿ ಫ್ಯಾಷನ್ ಶೋ ಆಯೋಜನೆ: ತೀವ್ರ ಆಕ್ಷೇಪ

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ/ನವದೆಹಲಿ: ಜಮ್ಮು ಮತ್ತು ಕಾಶ್ಮೀರದ ಗುಲ್ಮಾರ್ಗ್‌ನಲ್ಲಿನ 'ಸ್ಕೈ ರೆಸಾರ್ಟ್'ನಲ್ಲಿ ರಂಜಾನ್ ತಿಂಗಳಲ್ಲಿ ಫ್ಯಾಷನ್ ಶೋ ಆಯೋಜಿಸಿದ್ದು ವಿವಾದದ ಸ್ವರೂಪ ಪಡೆದುಕೊಂಡಿದೆ. ಶೋ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಟೀಕೆಗಳು ವ್ಯಕ್ತವಾಗುತ್ತಿವೆ. ವಿರೋಧ ಪಕ್ಷಗಳು ವಿಧಾನಸಭೆಯಲ್ಲಿಯೂ ಈ ಬಗ್ಗೆ ಸೋಮವಾರ ಪ್ರಸ್ತಾಪಿಸಿ, ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡವು.

ಕಾಶ್ಮೀರದ ಧರ್ಮಗುರು ಮಿರ್ವೈಜ್ ಉಮರ್ ಫಾರೂಕ್ ಶೋ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದು, 'ಸೂಫಿ– ಸಂತರ ಸಂಸ್ಕೃತಿ ಇರುವ, ಆಳವಾದ ಧಾರ್ಮಿಕ ಭಾವನೆ ಹೊಂದಿರುವ ಜನರಿರುವ ಕಾಶ್ಮೀರದಲ್ಲಿ ಇಂಥ ಕಾರ್ಯಕ್ರಮವನ್ನು ಹೇಗೆ ಸಹಿಸಿಕೊಳ್ಳುವುದು. ಪ್ರವಾಸೋದ್ಯಮ ಹೆಸರಿನಲ್ಲಿ ಇಂಥ ಅಶ್ಲೀಲತೆ ಸಹಿಸಲು ಸಾಧ್ಯವಿಲ್ಲ' ಎಂದು 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

ತನಿಖೆಗೆ ಆದೇಶ: ಒಮರ್

'ಕಾರ್ಯಕ್ರಮದ ಬಗ್ಗೆ ಈಗಾಗಲೇ ತನಿಖೆಗೆ ಆದೇಶಿಸಲಾಗಿದೆ. ಖಾಸಗಿ ಹೋಟೆಲ್‌ವೊಂದರಲ್ಲಿ ಮಾರ್ಚ್ 7ರಿಂದ ನಡೆದ ನಾಲ್ಕು ದಿನಗಳ ಖಾಸಗಿ ಕಾರ್ಯಕ್ರಮ ಇದಾಗಿತ್ತು. ಇದರಲ್ಲಿ ಸರ್ಕಾರದ ಪಾಲುದಾರಿಕೆ ಇರಲಿಲ್ಲ. ಶೋ ಬಗ್ಗೆ ಜನರಲ್ಲಿ ಆಕ್ರೋಶ ಮೂಡಿದೆ. ಇದರಲ್ಲಿ ತಪ್ಪೇನಿಲ್ಲ. 24 ಗಂಟೆಗಳ ಒಳಗೆ ವರದಿ ನೀಡುವಂತೆ ಸ್ಥಳೀಯ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು. ರಂಜಾನ್‌ನಲ್ಲಿ ಮಾತ್ರವಲ್ಲ ವರ್ಷದ ಬೇರೆ ಯಾವ ತಿಂಗಳಲ್ಲಿಯೂ ಇಂಥ ಕಾರ್ಯಕ್ರಮಗಳಿಗೆ ಅನುಮತಿ ನೀಡಲು ಸಾಧ್ಯವಿಲ್ಲ

ಒಮರ್ ಅಬ್ದುಲ್ಲಾ, ಮುಖ್ಯಮಂತ್ರಿ
(ವಿರೋಧ ಪಕ್ಷಗಳ ಪ್ರಶ್ನೆಗಳಿಗೆ ವಿಧಾನಸಭೆಯಲ್ಲಿ ನೀಡಿದ ಉತ್ತರ)

ಕ್ಷಮೆಯಾಚನೆ

ಫ್ಯಾಷನ್ ಶೋದ ವಸ್ತ್ರವಿನ್ಯಾಸಕರಾದ ಶಿವನ್ ಭಾಟಿಯಾ ಮತ್ತು ನರೇಶ್ ಕುಕ್‌ರೆಜಾ ಅವರು ಕ್ಷಮೆ ಕೇಳಿದ್ದಾರೆ. ಈ ಬಗ್ಗೆ ಇಬ್ಬರು 'ಎಕ್ಸ್'ನಲ್ಲಿ ಕ್ಷಮಾಪಣಾ ಪತ್ರವನ್ನು ಹಂಚಿಕೊಂಡಿದ್ದಾರೆ.

'ನಮ್ಮ ಹೃದಯದಲ್ಲಿ ಎಲ್ಲ ಸಂಸ್ಕೃತಿ ಮತ್ತು ಸಂಪ್ರದಾಯಗಳಿಗೆ ಗೌರವವಿದೆ. ಶೋ ಬಗ್ಗೆ ಎದ್ದಿರುವ ಆಕ್ಷೇಪದ ಬಗ್ಗೆ ತಿಳಿಯಿತು. ನಮ್ಮ ಕಾರ್ಯಕ್ರಮದಿಂದಾಗಿ ನೋವಾಗಿದ್ದರೆ ಕ್ಷಮೆ ಯಾಚಿಸುತ್ತೇವೆ. ನಮ್ಮ ಬ್ರ್ಯಾಂಡ್‌ಗೆ 15 ವರ್ಷ ತುಂಬಿದ ಸಂಭ್ರಮಕ್ಕಾಗಿಯಷ್ಟೇ ನಾವು ಶೋ ಆಯೋಜಿಸಿದ್ದೆವು. ಯಾರಿಗೂ ನೋವುಂಟು ಮಾಡುವ ಉದ್ದೇಶ ಇರಲಿಲ್ಲ. ಇನ್ನಷ್ಟು ಸೂಕ್ಷ್ಮತೆಯೊಂದಿಗೆ ಗೌರವದೊಂದಿಗೆ ಮುಂದೆ ಕೆಲಸ ಮಾಡುತ್ತೇವೆ' ಎಂದು ಹೇಳಿದ್ದಾರೆ.

ತೆಲಂಗಾಣ: ಆರು ಮಂದಿಗೆ ಜೀವಾವಧಿ ಶಿಕ್ಷೆ • ಅಳಿಯನನ್ನು ಕೊಲ್ಲಿಸಿದ್ದ ಮಾವ

ಮರ್ಯಾದೆಗೇಡು ಹತ್ಯೆ: ಮರಣದಂಡನೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಹೈದರಾಬಾದ್: ತೆಲಂಗಾಣದ ನಲ್ಗೊಂಡ ಜಿಲ್ಲೆಯಲ್ಲಿ 2018ರಲ್ಲಿ ನಡೆದಿದ್ದ ಮರ್ಯಾದೆಗೇಡು ಹತ್ಯೆ ಪ್ರಕರಣದ ಅಪರಾಧಿಗೆ ಇಲ್ಲಿನ ಎಸ್‌ಸಿ/ಎಸ್‌ಟಿ ಎರಡನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ ಮರಣದಂಡನೆ ವಿಧಿಸಿದೆ. ಈ ಪ್ರಕರಣದಲ್ಲಿ ದಲಿತ ವ್ಯಕ್ತಿ ಪ್ರಣಯ್ (23) ಎಂಬುವರ ಹತ್ಯೆಯಾಗಿತ್ತು.

ನ್ಯಾಯಾಲಯವು ಪ್ರಕರಣದ ಎರಡನೇ ಆರೋಪಿಯಾದ ಸುಭಾಷ್ ಕುಮಾರ್ ಶರ್ಮಾಗೆ ಮರಣದಂಡನೆ ಮತ್ತು ಇತರ ಆರು ಜನರಿಗೆ ಜೀವಾವಧಿ ಶಿಕ್ಷೆ ವಿಧಿಸಿ ಆದೇಶಿಸಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಕೊಲೆ ಸಂಚನ್ನು ಕಾರ್ಯರೂಪಕ್ಕೆ ತಂದಿದ್ದ ಸುಭಾಷ್ ಬಿಹಾರ ಮೂಲದ ವ್ಯಕ್ತಿ.

ಮೇಲ್ಜಾತಿಯ ಯುವತಿಯನ್ನು ಪ್ರೀತಿಸಿ ಪ್ರಣಯ್ ವಿವಾಹವಾಗಿದ್ದರು. ಇದಕ್ಕೆ ಯುವತಿಯ ಪೋಷಕರಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ಪತಿಯ ಕೊಲೆಯಲ್ಲಿ ತನ್ನ ತಂದೆ ಮಾರುತಿ ರಾವ್ ಪಾತ್ರ ಇದೆ ಎಂದು ಯುವತಿ ಆರೋಪಿಸಿದ್ದರು.

ಕೊಲೆಗೆ ಸುಪಾರಿ: ಅಳಿಯನ ಕೊಲೆಗೆ ಸಂಚು ರೂಪಿಸಿ, ಸುಪಾರಿ ನೀಡಿದ್ದ ಯುವತಿಯ ತಂದೆ ಮಾರುತಿ ರಾವ್, ಚಿಕ್ಕಪ್ಪ ಸೇರಿದಂತೆ ಎಂಟು ಜನರನ್ನು ಪೊಲೀಸರು 2018ರ ಸೆಪ್ಟೆಂಬರ್ 18ರಂದು ಬಂಧಿಸಿದ್ದರು. ಕೊಲೆಗೆ ₹1 ಕೋಟಿ ರೂಪಾಯಿ ಸುಪಾರಿಗೆ ಮಾತುಕತೆ ನಡೆಸಿದ್ದ ಯುವತಿಯ ತಂದೆ, ₹15 ಲಕ್ಷವನ್ನು ಮುಂಗಡ ಪಾವತಿಸಿದ್ದರು.

ಪ್ರಕರಣದಲ್ಲಿ ಮಾರುತಿ ರಾವ್ ಮೊದಲ ಆರೋಪಿಯಾಗಿದ್ದರೆ, ಸುಭಾಷ್ ಕುಮಾರ್ ಶರ್ಮಾ ಎರಡನೇ ಆರೋಪಿ. ಇವರೂ ಸೇರಿದಂತೆ ಇತರ ಆರೋಪಿಗಳಾದ ಅಸ್ಗರ್ ಅಲಿ, ಬಾರಿ, ಕರೀಂ, ಶ್ರವಣ ಕುಮಾರ್ (ಯುವತಿಯ ಚಿಕ್ಕಪ್ಪ), ಶಿವ, ನಿಜಾಂ ವಿರುದ್ಧ ಪೊಲೀಸರು 2019ರಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಬಂಧಿತರಲ್ಲಿ ಇಬ್ಬರು, ಗುಜರಾತಿನ ಮಾಜಿ ಗೃಹ ಸಚಿವ ಹರೇನ್ ಪಾಂಡ್ಯ ಹತ್ಯೆ ಪ್ರಕರಣದಲ್ಲಿ ಖುಲಾಸೆಗೊಂಡಿದ್ದವರು ಎಂದು ಪೊಲೀಸರು ತಿಳಿಸಿದ್ದಾರೆ. 2020ರಲ್ಲಿ ಲಾಡ್ಜ್‌ವೊಂದರಲ್ಲಿ ಮಾರುತಿ ರಾವ್ ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದು ಅವರು ತಿಳಿಸಿದ್ದಾರೆ.

'ಇಂಥ ಕೃತ್ಯಗಳು ನಿಲ್ಲಲಿ'

'ಪ್ರಣಯ್ ಕೊಲೆಯಿಂದ ನಾವು ಸಾಕಷ್ಟು ಕಳೆದುಕೊಂಡಿದ್ದೇವೆ. ನಾನು ಮಗನನ್ನು, ಸೊಸೆ ಗಂಡನನ್ನು, ಮೊಮ್ಮಗ ಅಪ್ಪನನ್ನು ಕಳೆದುಕೊಂಡಿದ್ದಾನೆ. ಈಗ ಒಬ್ಬರಿಗೆ ಮರಣದಂಡನೆ, ಆರು ಜನರಿಗೆ ಜೀವಾವಧಿ ಶಿಕ್ಷೆಯಾಗಿದೆ. ಇದರಿಂದ ಅವರ ಕುಟುಂಬದವರೂ ಸಾಕಷ್ಟನ್ನು ಕಳೆದುಕೊಳ್ಳುತ್ತಾರೆ. ಯಾವುದೇ ಸಮಸ್ಯೆ ಇದ್ದರೆ ಮಾತುಕತೆ ಮೂಲಕ ಪರಿಹಾರ ಕಂಡುಕೊಳ್ಳಬೇಕು. ಈ ರೀತಿಯ ಮಾರ್ಯಾದೆಗೇಡು ಹತ್ಯೆಗಳಿಗೆ ಈ ಆದೇಶ ಅಂತ್ಯವಾಡುತ್ತದೆ ಎಂಬ ನಂಬಿಕೆಯಿದೆ' ಎಂದು ಪ್ರಣಯ್ ತಂದೆ ಪ್ರತಿಕ್ರಿಯಿಸಿದರು.

ಏನಾಗಿತ್ತು?

ಮಿರ್ಯಾಲಗೂಡದಲ್ಲಿ 2018ರ ಸೆಪ್ಟೆಂಬರ್ 14ರಂದು ತನ್ನ ತಾಯಿಯ ಜತೆಗೆ ಪತ್ನಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ವಾಪಸ್ ಬರುತ್ತಿದ್ದ ಪ್ರಣಯ್ ಮೇಲೆ ದುಷ್ಕರ್ಮಿಗಳು ದಾಳಿ ಮಾಡಿ, ಚಾಕುವಿನಿಂದ ಹತ್ಯೆ ಮಾಡಿದ್ದರು. ಈ ಪ್ರಕರಣ ತೆಲಂಗಾಣದಲ್ಲಿ ಭಾರಿ ಸಂಚಲನ ಮೂಡಿಸಿತ್ತು.



ಅತ್ಯಾಚಾರ: 1984ರ ಶಿಕ್ಷೆ ಎತ್ತಿಹಿಡಿದ 'ಸುಪ್ರೀಂ'

ನವದೆಹಲಿ: ವಿದ್ಯಾರ್ಥಿನಿಯೊಬ್ಬಳ ಮೇಲೆ 1984ರಲ್ಲಿ ಅತ್ಯಾಚಾರ ಎಸಗಿದ್ದ ವ್ಯಕ್ತಿಯೊಬ್ಬನಿಗೆ ಐದು ವರ್ಷಗಳ ಜೈಲು ಶಿಕ್ಷೆ ವಿಧಿಸಿದ್ದನ್ನು ಎತ್ತಿಹಿಡಿದಿರುವ ಸುಪ್ರೀಂ ಕೋರ್ಟ್, ಸಂತ್ರಸ್ತೆಯ ಗುಪ್ತಾಂಗಗಳ ಮೇಲೆ ಗಾಯಗಳು ಇರಲಿಲ್ಲ ಎಂಬುದು ಪ್ರಾಸಿಕ್ಯೂಷನ್ ವಾದವನ್ನು ತಳ್ಳಿಹಾಕುವುದಕ್ಕೆ ಕಾರಣವಾಗುವುದಿಲ್ಲ ಎಂದಿದೆ.

ಸಂತ್ರಸ್ತೆಯು ಒದಗಿಸಿದ್ದ ಸಾಕ್ಷ್ಯವು 'ಪೂರ್ತಿಯಾಗಿ ನಂಬಬಹುದಾದುದು, ವಿಶ್ವಾಸ ಮೂಡಿಸುವಂಥದ್ದು' ಎಂದು ನ್ಯಾಯಮೂರ್ತಿಗಳಾದ ಸಂದೀಪ್ ಮೆಹ್ತಾ ಮತ್ತು ಪ್ರಸನ್ನ ಬಿ. ವರಾಳೆ ಅವರು ಇರುವ ವಿಭಾಗೀಯ ಪೀಠ ಹೇಳಿದೆ.

ಲೋಕ್ ಮಾಲ್ ಎನ್ನುವವ ಅತ್ಯಾಚಾರ ಎಸಗಿದ್ದಾನೆ ಎಂದು ಹೇಳಿ ಆತನಿಗೆ ಐದು ವರ್ಷಗಳ ಜೈಲು ಶಿಕ್ಷೆ ವಿಧಿಸಿ ವಿಚಾರಣಾ ನ್ಯಾಯಾಲಯವು 1986ರ ಆಗಸ್ಟ್‌ನಲ್ಲಿ ನೀಡಿದ್ದ ಆದೇಶವನ್ನು ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠವು 2010ರ ಜುಲೈನಲ್ಲಿ ಎತ್ತಿಹಿಡಿದಿದೆ. ಹೈಕೋರ್ಟ್ ಆದೇಶದಲ್ಲಿ ಮಧ್ಯಪ್ರವೇಶಿಸಬೇಕಾದ ಅಗತ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಪರೀಕ್ಷೆಯ ಪಾವಿತ್ರ್ಯ ಹಾಳು: ಜಾಮೀನು ರದ್ದುಪಡಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಸರ್ಕಾರಿ ಹುದ್ದೆ ಭರ್ತಿಗೆ ನಡೆದ ಪರೀಕ್ಷೆಯಲ್ಲಿ ನಕಲಿ ಅಭ್ಯರ್ಥಿಯನ್ನು ಬಳಸಿದ ಪ್ರಕರಣದ ಇಬ್ಬರು ಆರೋಪಿಗಳಿಗೆ ನೀಡಿದ್ದ ಜಾಮೀನನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ. ಈ ಬಗೆಯ ಅಪರಾಧಗಳು, ಜನರು ಆಡಳಿತದ ಮೇಲೆ ಮತ್ತು ಕಾರ್ಯಾಂಗದ ಮೇಲೆ ಇರಿಸಿರುವ ವಿಶ್ವಾಸಕ್ಕೆ ಧಕ್ಕೆ ತರುತ್ತವೆ ಎಂದು ಹೇಳಿದೆ.

ಜಾಮೀನು ನೀಡಿ ರಾಜಸ್ಥಾನ ಹೈಕೋರ್ಟ್ ಹೊರಡಿಸಿದ್ದ ಆದೇಶ ಪ್ರಶ್ನಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರು ಇರುವ ವಿಭಾಗೀಯ ಪೀಠವು ಮಾನ್ಯ ಮಾಡಿದೆ.

ಶ್ರಮಿಕರು ಬಂದರು, ಸ್ವಚ್ಛತೆ ತಂದರು

ಒಂದನೇ ಪುಟದಿಂದ...

ಬಿಡುವಿನ ವೇಳೆ ಶಾಲೆಗಳಿಗೆ ತೆರಳುವ ತಂಡದ ಸ್ವಯಂ ಸೇವಕರು, ಹಾರೆ, ಗುದ್ದಲಿ ಹಿಡಿದು, ಸುತ್ತಮುತ್ತಲಿನ ಗಿಡಗಂಟಿಗಳನ್ನು ತೆರವುಗೊಳಿಸಿ, ಶೌಚಾಲಯವನ್ನು ನಿರ್ಮಲಗೊಳಿಸುತ್ತಾರೆ. ಗೋಡೆಗೆ ಅಂಟಿಕೊಂಡ ಪಾಚಿಯನ್ನು ತೆಗೆದು, ಬಣ್ಣ ಬಳಿಯುತ್ತಾರೆ. ವಿದ್ಯುತ್ ಸಂಪರ್ಕ, ಬಾಗಿಲು ದುರಸ್ತಿ ಮಾಡಿ, ಕಿತ್ತ ಟೈಲ್ಸ್ ನಡುವೆ ಸಿಮೆಂಟ್ ಮೆತ್ತಿ ಶೌಚಾಲಯವನ್ನು ಒಪ್ಪಗೊಳಿಸುತ್ತಾರೆ.

'ಸರ್ಕಾರಿ ಶಾಲೆ ಮಕ್ಕಳ ಆರೋಗ್ಯ, ಹಕ್ಕು ಸಂರಕ್ಷಣೆಯ ಉದ್ದೇಶದಿಂದ ಈ ಅಭಿಯಾನ ನಡೆಸುತ್ತಿದ್ದೇವೆ. ನಾಲ್ಕು ತಿಂಗಳುಗಳಲ್ಲಿ ಮಂಗಳೂರು, ಬೆಳ್ತಂಗಡಿ, ಬಂಟ್ವಾಳ ತಾಲ್ಲೂಕುಗಳ ಒಟ್ಟು 13 ಶಾಲೆಗಳ ಶೌಚಾಲಯಗಳನ್ನು ಸ್ವಚ್ಛಗೊಳಿಸಿ, ನವೀಕರಿಸಲಾಗಿದೆ. ನಾವೆಲ್ಲರೂ ದುಡಿದು ತಿನ್ನುವವರು. ವೃತ್ತಿಯಲ್ಲಿ ಬಿಡುವು ಸಿಕ್ಕಾಗ ಸೇವಾ ಕಾರ್ಯದಲ್ಲಿ ತೊಡಗುತ್ತೇವೆ. ಬೆಳಕಿನ ವ್ಯವಸ್ಥೆ ಇದ್ದಲ್ಲಿ ರಾತ್ರಿ 10ರವರೆಗೂ ಶೌಚಾಲಯ ದುರಸ್ತಿ ಕೆಲಸ ಮಾಡಿದ್ದಿದೆ' ಎನ್ನುತ್ತಾರೆ ಕಾರು ಚಾಲಕರಾಗಿರುವ ಯೋಜನೆಯ ರೂವಾರಿ ಸಂತೋಷ್ ಕೊಲ್ಯ.

> **'ರಾಜಕೇಸರಿ'ಯ ಕಾರ್ಯಕರ್ತರು ಶೌಚಾಲಯ ದುರಸ್ತಿಗೊಳಿಸಿ ಕೊಟ್ಟಿದ್ದು, ಮಕ್ಕಳಿಗೆ ಉಪಕಾರಿಯಾಗಿದೆ. ಕಟ್ಟಡದ ಆವರಣ ಶುಚಿಗೊಳಿಸಿ, ಶೌಚಾಲಯದ ಚಿತ್ರಣವನ್ನೇ ಬದಲಿಸಿದ್ದಾರೆ**
> **ಸಾಧನಾ ನಾರಾಯಣನ್,** ಬಾಬುಗುಡ್ಡೆ ಸರ್ಕಾರಿ ಕಿ.ಪ್ರಾ. ಶಾಲೆಯ ಮುಖ್ಯ ಶಿಕ್ಷಕಿ

'ಹಲವಾರು ವರ್ಷಗಳಿಂದ ಬಳಕೆಯಾಗದೇ ಇದ್ದ ಶೌಚಾಲಯಗಳೂ ಕೆಲವೆಡೆ ಇದ್ದವು. ಅವುಗಳನ್ನು ನವೀಕರಿಸಿ, ಮಕ್ಕಳ ಬಳಕೆಗೆ ಮುಕ್ತ ಮಾಡಲಾಗಿದೆ. ಚಿಕ್ಕಮಕ್ಕಳಲ್ಲಿ ಅರಿವು ಮೂಡಿಸಿದರೆ ಭವಿಷ್ಯದಲ್ಲಿ ಅವರು ಜವಾಬ್ದಾರಿಯುತ ನಾಗರಿಕರಾಗಬಹುದೆಂಬ ನಿರೀಕ್ಷೆಯಲ್ಲಿ ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳನ್ನೇ ಅಭಿಯಾನಕ್ಕೆ ಆಯ್ದುಕೊಳ್ಳಲಾಗಿದೆ. 3 ವರ್ಷಗಳಲ್ಲಿ 1,000 ಶೌಚಾಲಯಗಳನ್ನು 'ಸ್ವಚ್ಛಾಲಯ'ವಾಗಿ ರೂಪಿಸುವ ಯೋಜನೆ ಇದೆ' ಎನ್ನುತ್ತಾರೆ ಅವರು.

'ಕಾರ್ಯಕ್ರಮ ಅನುಷ್ಠಾನಕ್ಕೆ ಶಿಕ್ಷಣ ಇಲಾಖೆಯ ಅನುಮತಿ ದೊರೆತಿದೆ. ಮೊದಲ ಹಂತದಲ್ಲಿ ಶಾಲೆಗೆ ಭೇಟಿ ನೀಡಿ ಅಂದಾಜು ವೆಚ್ಚ, ಕೆಲಸ ಕೈಗೊಳ್ಳಬೇಕಾದ ದಿನಗಳನ್ನು ಲೆಕ್ಕ ಹಾಕಿ, ಯೋಜನೆ ರೂಪಿಸಲಾಗುತ್ತದೆ. ಈವರೆಗೆ ನಡೆದಿರುವ ಅಭಿಯಾನವನ್ನು ಗಮನಿಸಿರುವ ಹಲವಾರು ಶಿಕ್ಷಕರು, ತಮ್ಮ ಶಾಲೆಯಲ್ಲೂ ಶ್ರಮದಾನ ನಡೆಸುವಂತೆ ಪ್ರೀತಿಯ ಆಹ್ವಾನ ನೀಡುತ್ತಿದ್ದಾರೆ' ಎಂದು ಸಂಘಟನೆಯ ಸಂಸ್ಥಾಪಕ ಅಧ್ಯಕ್ಷ ದೀಪಕ್ ಜಿ. ಬೆಳ್ತಂಗಡಿ ಹೇಳುತ್ತಾರೆ.



ಹೋಳಿಗೂ ಮುನ್ನ... ಪಶ್ಚಿಮ ಬಂಗಾಳದ ನಾಡಿಯಾದಲ್ಲಿ ಹೋಳಿ ಹಬ್ಬಕ್ಕೂ ಮುನ್ನ ಮಹಿಳೆಯರು ಸೋಮವಾರ ಬಣ್ಣಗಳೊಂದಿಗೆ ಆಟವಾಡಿದರು – ಪಿಟಿಐ ಚಿತ್ರ

ಇ.ಡಿಗೆ ಸಿಕ್ಕಿರುವುದು ₹32–₹33 ಲಕ್ಷ: ಭೂಪೇಶ್

ಬಘೇಲ್ ಮನೆ ಮೇಲೆ ಇ.ಡಿ ದಾಳಿ

ಪ್ರಜಾವಾಣಿ ವಾರ್ತೆ/ ಪಿಟಿಐ

ರಾಯ್‌ಪುರ: ಛತ್ತೀಸ್‌ಗಢದ ಮಾಜಿ ಮುಖ್ಯಮಂತ್ರಿ ಮತ್ತು ಕಾಂಗ್ರೆಸ್ ನಾಯಕ ಭೂಪೇಶ್ ಬಘೇಲ್ ಮತ್ತು ಅವರ ಪುತ್ರನ ಮನೆ ಹಾಗೂ ಅವರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಸೋಮವಾರ ದಾಳಿ ನಡೆಸಿದ್ದಾರೆ.

ಬಘೇಲ್ ಅವರ ಪುತ್ರ ಚೈತನ್ಯ ಬಘೇಲ್ ಅವರ ವಿರುದ್ಧದ ಅಬಕಾರಿ ಹಗರಣದ ನಂಟಿನ ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಈ ದಾಳಿ ನಡೆದಿದೆ. ರಾಜ್ಯದಲ್ಲಿ 14ರಿಂದ 15 ಸ್ಥಳಗಳಲ್ಲಿ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ಇ.ಡಿ. ದಾಳಿ ನಡೆದಿದೆ.


ಭೂಪೇಶ್ ಬಘೇಲ್

ಭೂಪೇಶ್ ಮತ್ತು ಚೈತನ್ಯ ಅವರು ಒಟ್ಟಿಗೆ ವಾಸವಿರುವ ಭಿಲಾಯ್‌ನಲ್ಲಿನ ನಿವಾಸ, ಚೈತನ್ಯ ಅವರ ಆಪ್ತರಾದ ಲಕ್ಷ್ಮಿ ನಾರಾಯಣ್ ಬನ್ಸಾಲ್ ಅಲಿಯಾಸ್ ಪಪ್ಪು ಬನ್ಸಾಲ್ ಮತ್ತು ಇತರ ಕೆಲವರ ನಿವಾಸದಲ್ಲಿ ಶೋಧ ಕಾರ್ಯ ನಡೆಯಿತು ಎಂದು ಮೂಲಗಳು ತಿಳಿಸಿವೆ.

ಹಲವು ಮಂದಿ ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರು ಬಘೇಲ್ ಅವರ ನಿವಾಸದ ಬಳಿ ಜಮಾಯಿಸಿ, ಇ.ಡಿ ವಿರುದ್ಧ ಪ್ರತಿಭಟನೆ ನಡೆಸಿದರು.

'ನನ್ನ ಮನೆಯಲ್ಲಿ ಇ.ಡಿಗೆ ಸಿಕ್ಕಿರುವುದು ₹32 ಲಕ್ಷದಿಂದ ₹33 ಲಕ್ಷ. ನನ್ನದು ದೊಡ್ಡ ಕುಟುಂಬ. ನಾವು 140 ಎಕರೆ ಭೂಮಿಯಲ್ಲಿ ಕೃಷಿ ಮಾಡುತ್ತಿದ್ದೇವೆ ಮತ್ತು ಇತರ ಆದಾಯದ ಮೂಲಗಳನ್ನು ಹೊಂದಿದ್ದೇವೆ. ಅದರ ವಿವರಗಳನ್ನು ಒದಗಿಸುತ್ತೇವೆ' ಎಂದು ಭೂಪೇಶ್ ಬಘೇಲ್ ಪ್ರತಿಕ್ರಿಯಿಸಿದ್ದಾರೆ.

'ಬಿಜೆಪಿ ನಾಯಕರಿಗೆ ಸಂಬಂಧಿಸಿದ ಪ್ರಕರಣಗಳ ಕೆಲವು ದಾಖಲೆಗಳನ್ನು ಹೊರತುಪಡಿಸಿ ಇ.ಡಿಗೆ ನನ್ನ ಮನೆಯಲ್ಲಿ ಬೇರೆ ಏನೂ ಸಿಕ್ಕಿಲ್ಲ. ಪಂಜಾಬ್‌ನ ಕಾಂಗ್ರೆಸ್ ಉಸ್ತುವಾರಿಯನ್ನಾಗಿ ಮಾಡಿದ ನಂತರ ನಡೆದಿರುವ ಈ ದಾಳಿಗಳು ನನ್ನನ್ನು ನಿರುತ್ಸಾಹಗೊಳಿಸುವ ಗುರಿ ಹೊಂದಿವೆ' ಎಂದು ಅವರು ಆರೋಪಿಸಿದ್ದಾರೆ.

ಅಂತರರಾಷ್ಟ್ರೀಯ ಡ್ರಗ್ ಪೆಡ್ಲರ್ ಬಂಧನ

ಚಂಡೀಗಢ (ಪಿಟಿಐ): ಅಂತರರಾಷ್ಟ್ರೀಯ ಮಾದಕವಸ್ತು ಕಳ್ಳಸಾಗಣೆ ಜಾಲದ ಪ್ರಮುಖ ಆರೋಪಿ ಹಾಗೂ ಅಮೆರಿಕದ ಎಫ್‌ಬಿಐಗೆ (ಫೆಡರಲ್ ತನಿಖಾ ಸಂಸ್ಥೆ) ಬೇಕಾಗಿದ್ದ ಡ್ರಗ್ ಪೆಡ್ಲರ್‌ನನ್ನು ಪಂಜಾಬ್ ಪೊಲೀಸರು ಬಂಧಿಸಿದ್ದಾರೆ.

'ಕೊಲಂಬಿಯಾ, ಅಮೆರಿಕ ಹಾಗೂ ಕೆನಡಾಗಳಲ್ಲಿ ಮಾದಕವಸ್ತು ಕಳ್ಳಸಾಗಣೆ ಮಾಡುತ್ತಿದ್ದ ಡ್ರಗ್ ಪೆಡ್ಲರ್, ಭಾರತ ಮೂಲದ ಶೆಹನಾಜ್ ಸಿಂಗ್ ಅಲಿಯಾಸ್ ಶಾನ್ ಭಿಂದರ್‌ನನ್ನು ತರನ್ ತಾರನ್ ಜಿಲ್ಲೆಯ ಪೊಲೀಸರು ಲೂಧಿಯಾನದಲ್ಲಿ ಬಂಧಿಸಿದ್ದಾರೆ' ಎಂದು ಪೊಲೀಸ್ ಮಹಾನಿರ್ದೇಶಕರಾದ ಗೌರವ್ ಯಾದವ್ ಅವರು 'ಎಕ್ಸ್' ಖಾತೆಯಲ್ಲಿ ತಿಳಿಸಿದ್ದಾರೆ.

ಅಮೆರಿಕದಲ್ಲಿ ಬೃಹತ್ ಪ್ರಮಾಣದ ಮಾದಕವಸ್ತು ವಶಪಡಿಸಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಬಿಐ, ಶೆಹನಾಜ್‌ನಿಗಾಗಿ ಹುಡುಕಾಟ ನಡೆಸುತ್ತಿತ್ತು.

ಹಾಸನದಲ್ಲಿ ಜಿಆರ್‌ಟಿ ಜ್ಯುವೆಲರ್ಸ್

ಬೆಂಗಳೂರು: ಜ್ಯುವೆಲರಿ ಕ್ಷೇತ್ರದ ಖ್ಯಾತ GRT ಜ್ಯುವೆಲರ್ಸ್ ತನ್ನ 62ನೇ ಶೋರೂಮ್ ಅನ್ನು ಹಾಸನದಲ್ಲಿ ತೆರೆಯುವ ಮೂಲಕ ಆರು ದಶಕಗಳ ತನ್ನ ಪ್ರಯಾಣದಲ್ಲಿ ನೂತನ ಮೈಲಿಗಲ್ಲನ್ನು ಸ್ಥಾಪಿಸಿದೆ.

1964ರಿಂದಲೂ ಕಲಾತ್ಮಕತೆ, ನಂಬಿಕೆ ಮತ್ತು ನಾವಿನ್ಯತೆಗೆ ಹೆಸರುವಾಸಿಯಾದ ಜಿಆರ್‌ಟಿ ಬ್ರ್ಯಾಂಡ್ ಗ್ರಾಹಕರ ಅಚ್ಚುಮೆಚ್ಚಿನ ಆಭರಣಗಳನ್ನು ನೀಡುತ್ತಾ ಬಂದಿದೆ. ದಕ್ಷಿಣ ಭಾರತ ಹಾಗೂ ಸಿಂಗಾಪುರದಲ್ಲಿ ಗ್ರಾಹಕ ಜಾಲವನ್ನು ಹೊಂದಿರುವ ಜಿಆರ್‌ಟಿ, ಸಾಂಪ್ರದಾಯಿಕ ಮತ್ತು ಆಧುನಿಕ ಆಭರಣಗಳ ಖರೀದಿಗೆ ಅತ್ಯುತ್ತಮ ಸ್ಥಳವಾಗಿದೆ.

ಈಗ ಹಾಸನದ ಆಭರಣ ಪ್ರಿಯರಿಗೆ ತನ್ನ ಕರಕುಶಲತೆ ಮೂಲಕ ಸೆಳೆಯುವ ಕೆಲಸ ಮಾಡಿದೆ. ಚಿನ್ನ, ವಜ್ರ, ಪ್ಲಾಟಿನಂ, ಬೆಳ್ಳಿ ಸಾಮಗ್ರಿ, ಬೆಳ್ಳಿ ಆಭರಣ ಹಾಗೂ ಅಮೂಲ್ಯ ರತ್ನದ ಹರಳುಗಳ ವೈವಿಧ್ಯಮಯ ಸಂಗ್ರಹವನ್ನು ಪರಿಚಯಿಸಿದೆ.

ಬೆಂಗಳೂರಿನಿಂದ ಮಂಗಳೂರು ಕಡೆಗೆ ಹೋಗುವ ರಸ್ತೆಯ ಹಾಸನ ಕ್ಲಬ್ ಬಳಿ ಇರುವ ಹೊಸ ಮಳಿಗೆ, ಸುಸಜ್ಜಿತ ಹಾಗೂ ಆಕರ್ಷಕ ವಿನ್ಯಾಸಗಳ ವ್ಯಾಪಕ ಶ್ರೇಣಿ ಒಡವೆಗಳನ್ನು ಹೊಂದಿರುವ ಶೋರೂಮ್ ಆಗಿದೆ. ಗ್ರಾಹಕರಿಗೆ ಪ್ರೀಮಿಯಂ ಶಾಪಿಂಗ್ ಅನುಭವವನ್ನು ಒದಗಿಸಲು ಸಿದ್ಧವಾಗಿರುವ ಬೃಹತ್ ಮಳಿಗೆ ಇದಾಗಿದೆ.

ಹಾಸನದಲ್ಲಿ ಜಿಆರ್‌ಟಿ ಜ್ಯುವೆಲರ್ಸ್‌ನ 62ನೇ ಶೋರೂಮ್ ಆರಂಭ

ಶುಭಾರಂಭದ ಕೊಡುಗೆಗಳು: ಹಾಸನದಲ್ಲಿ ಜಿಆರ್‌ಟಿ ಜ್ಯುವೆಲರ್ಸ್ ಶುಭಾರಂಭದ ಪ್ರಯುಕ್ತ ಸೀಮಿತ ಅವಧಿಯ ಕೊಡುಗೆಗಳನ್ನು ಘೋಷಿಸಿದೆ. ಗ್ರಾಹಕರು ಖರೀದಿಸುವ ಚಿನ್ನದ ಆಭರಣ ಮೇಲಿನ ಪ್ರತಿ ಗ್ರಾಂಗೆ 300 ರೂಪಾಯಿ ರಿಯಾಯಿತಿ ಹಾಗೂ ವೇಸ್ಟೇಜ್ (VA) ಶುಲ್ಕದ ಮೇಲೆ 20% ರಿಯಾಯಿತಿ ಕೊಡುಗೆ ಪಡೆಯಬಹುದಾಗಿದೆ. ಹಳೆಯ ಚಿನ್ನದ ಆಭರಣಗಳನ್ನು ವಿನಿಮಯ ಮಾಡಿಕೊಳ್ಳುವವರು ಪ್ರತಿ ಗ್ರಾಂಗೆ 75 ರೂ. ಹೆಚ್ಚುವರಿ ಲಾಭ ಹಾಗೂ ವಜ್ರಾಭರಣ ಖರೀದಿದಾರರು ಪ್ರತಿ ಕ್ಯಾರೆಟ್ ಮೇಲೆ ₹10,000 ರಿಯಾಯಿತಿ ಮತ್ತು ಅನ್‌ಕಟ್ ಡೈಮಂಡ್ ಮೌಲ್ಯದ ಮೇಲೆ 10% ರಿಯಾಯಿತಿ ಪಡೆಯಲಿದ್ದಾರೆ.

ಇಷ್ಟೇ ಅಲ್ಲದೆ, ಜಿಆರ್‌ಟಿ ಬ್ರ್ಯಾಂಡ್ ತನ್ನ ಆಭರಣ ಖರೀದಿ ಯೋಜನೆ ಮೂಲಕ ವಿಶೇಷ ಉಡುಗೊರೆ ಹಾಗೂ ಗಿಫ್ಟ್ ಬೊನಾನ್ಜವನ್ನು ಸಹ ಪರಿಚಯಿಸಿದೆ. ಗ್ರಾಹಕರಿಗೆ ಡಬಲ್ ಉಡುಗೊರೆಗಳನ್ನು ಪಡೆಯುವ ಅವಕಾಶ ಸಂಸ್ಥೆ ಕಲ್ಪಿಸಿದೆ. ಮಾ.9 ರಿಂದ ಆರಂಭವಾಗಿರುವ ಕೊಡುಗೆಗಳು ಮಾ.23 ರವರೆಗೆ ಈ ನೂತನ ಶೋರೂಮ್‌ನಲ್ಲಿ ಲಭ್ಯ.

ಜಿಆರ್‌ಟಿ ಜುವೆಲರ್ಸ್ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ಆನಂದ್ ಅನಂತಪದ್ಮನಾಭನ್ ಮಾತನಾಡಿ, 'ಸುಂದರವಾದ, ಬೆಳೆಯುತ್ತಿರುವ ಸಮುದಾಯದ ಭಾಗವಾಗಲು ನಾವು ಈ ಶೋರೂಂ ಉದ್ಘಾಟನೆಯನ್ನು ಮತ್ತೊಂದು ಅವಕಾಶವೆಂದು ಪರಿಗಣಿಸುತ್ತೇವೆ. ಹಾಸನದ ಶ್ರೀಮಂತ ಪರಂಪರೆ ಮತ್ತು ಸಂಪರ್ಕವು ನಮ್ಮ ವಿಶಿಷ್ಟ ವಿನ್ಯಾಸಗಳನ್ನು ಗ್ರಾಹಕರಿಗೆ ಪರಿಚಯಿಸಲು ಇದು ಸೂಕ್ತ ಸ್ಥಳವಾಗಿದೆ' ಎಂದು ಹೇಳಿದ್ದಾರೆ.

ಜಿಆರ್‌ಟಿಯ ಮತ್ತೊಬ್ಬ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ರಾಧಾಕೃಷ್ಣನ್ ಅವರು, 'ದಶಕಗಳಿಂದ ಕಾಲಕಾಲಕ್ಕೆ ತಕ್ಕಂತ ಉತ್ತಮ ಮುಂಚೂಣಿ ಆಭರಣಗಳನ್ನು ತಯಾರಿಸಲು ನಾವು ಬದ್ಧರಾಗಿದ್ದೇವೆ. ಈ ನೂತನ ಶೋರೂಮ್ ಅದರ ಪ್ರತಿಬಿಂಬವಾಗಿದೆ. ಕರ್ನಾಟಕದ ಶ್ರೀಮಂತ ಕಲಾತ್ಮಕತೆ ಮತ್ತು ಕರಕುಶಲತೆಯನ್ನು ಇನ್ನಷ್ಟು ಹೊರತರಲು ಆಶಿಸುತ್ತೇವೆ' ಎಂದಿದ್ದಾರೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಕಳೆದ ಮೂರು ಐಸಿಸಿ ಟ್ರೋಫಿ ಟೂರ್ನಿಗಳಲ್ಲಿ ರೋಹಿತ್ ಶರ್ಮಾ ಬಳಗದ ದಾಖಲೆ

ಸೀಮಿತ ಓವರ್‌ಗಳ ಕ್ರಿಕೆಟ್: ಭಾರತದ ಪಾರಮ್ಯ

• ಆರ್. ಕೌಶಿಕ್

ದುಬೈ: ಇಪ್ಪತ್ತೂರು ಪಂದ್ಯಗಳಲ್ಲಿ ಜಯ.. ಒಂದರಲ್ಲಿ ಸೋಲು..

ಭಾರತ ಕ್ರಿಕೆಟ್ ತಂಡವು ಕಳೆದ ಮೂರು ಐಸಿಸಿ ಟ್ರೋಫಿ ಟೂರ್ನಿಗಳಲ್ಲಿ (ಸೀಮಿತ ಓವರ್‌ಗಳ ಮಾದರಿ) ಮಾಡಿರುವ ದಾಖಲೆ ಇದು. ಇದನ್ನು ಶ್ವೇತವರ್ಣದ ಚೆಂಡಿನ ಕ್ರಿಕೆಟ್‌ನಲ್ಲಿ ಶ್ರೇಷ್ಠ ಸಾಧನೆ ಎಂದೇ ಹೇಳಬೇಕು ಅಲ್ಲವೇ?

ಇಷ್ಟೆಲ್ಲದರಲ್ಲಿ ಆ ಒಂದು ಸೋಲು ಕ್ರಿಕೆಟ್ ಪ್ರೇಮಿಗಳ ಹೃದಯವನ್ನು ಛಿದ್ರಗೊಳಿಸಿತ್ತು. 2023ರ ನವೆಂಬರ್‌ನಲ್ಲಿ ಅಹಮದಾಬಾದಿನಲ್ಲಿ ನಡೆದಿದ್ದ ಏಕದಿನ ವಿಶ್ವಕಪ್ ಟೂರ್ನಿಯ ಫೈನಲ್ ಅದಾಗಿತ್ತು. ಹಳೆಯ ವೈರಿ ಆಸ್ಟ್ರೇಲಿಯಾ ಎದುರಿನ ಸೋಲು ಅದು. ಆ ಭವ್ಯ ಕ್ರೀಡಾಂಗಣದಲ್ಲಿದ್ದ ಸುಮಾರು ಒಂದು ಲಕ್ಷ ಪ್ರೇಕ್ಷಕರನ್ನು ಆಸ್ಟ್ರೇಲಿಯಾ ಸ್ತಬ್ಧ ಗೊಳಿಸಿತ್ತು. ತಮ್ಮ ನೆಚ್ಚಿನ ಆಟಗಾರರು ಮುಖ್ಯವಾದ ದಿನ ಈ ರೀತಿ ಮಂಡಿಯೂರಿದ್ದನ್ನು ನೋಡಿದ್ದ ಭಾರತದ ಅಭಿಮಾನಿಗಳ ಸಂತಸವೆಲ್ಲ ಕರಗಿಹೋಗಿತ್ತು. ಆದರೆ ಆ ಕಣ್ಣೀರ ಹಿಂದೆಯೇ ದೃಢ ಸಂಕಲ್ಪವೊಂದು ರೂಪತಳೆಯಿತು. ರೋಹಿತ್ ಶರ್ಮಾ ಬ್ಯಾಟಿಂಗ್ ಮತ್ತು ತಮ್ಮ ನಾಯಕತ್ವದ ಮೂಲಕ ತಂಡವನ್ನು ಯಶಸ್ಸಿನತ್ತ ಮುನ್ನಡೆಸುವ ಗಟ್ಟಿ ನಿರ್ಧಾರ ಕೈಗೊಂಡರು.

ಇದಾಗಿ 15 ತಿಂಗಳುಗಳ ಅವಧಿಯಲ್ಲಿ ಎರಡು ಐಸಿಸಿ ಟ್ರೋಫಿಗಳನ್ನು ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ಗೆದ್ದು ತಂದರು. ಮೊದಲನೆಯದ್ದು ಹೋದ ವರ್ಷ ಜೂನ್ ತಿಂಗಳಲ್ಲಿ ಅಮೆರಿಕದಲ್ಲಿ ಜಯಿಸಿದ್ದ ಟಿ20 ವಿಶ್ವಕಪ್. ಆ ಟೂರ್ನಿಯಲ್ಲಿ ಭಾರತ ತಂಡವು 9–0 ಗೆಲುವಿನ ಅಜೇಯ ದಾಖಲೆ ಮಾಡಿತ್ತು.

ಇನ್ನೊಂದು ದುಬೈನಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ನ್ಯೂಜಿಲೆಂಡ್ ಎದುರು 4 ವಿಕೆಟ್‌ಗಳಿಂದ ಜಯಿಸಿದ ಭಾರತ ಏಕದಿನ ಮಾದರಿಯಲ್ಲಿ ಹೆಜ್ಜೆಗುರುತು ಮೂಡಿಸಿತು. ಅಹಮದಾಬಾದ್‌ನ ದುಃಖವನ್ನು ಬಹುಮಟ್ಟಿಗೆ ಮರೆಸುವತ್ತ ಸಾಗಿತು.

ಈ ಮೂರು ಅಭಿಯಾನಗಳಲ್ಲಿಯೂ ರೋಹಿತ್ ಶರ್ಮಾ ಅವರ ಪಾತ್ರ ಢಾಳಾಗಿದೆ. ಪ್ರತಿ ಬಾರಿ ಭಾರತ ತಂಡವು ಸಂಕಷ್ಟದಲ್ಲಿದ್ದಾಗ ನಾಯಕನಾಗಿ ಅಥವಾ ಬ್ಯಾಟರ್ ಆಗಿ ರಕ್ಷಿಸಲು ಧಾವಿಸಿದವರು ರೋಹಿತ್. ನ್ಯೂಜಿಲೆಂಡ್ ಎದುರಿನ ಫೈನಲ್‌ನಲ್ಲಿ ರೋಹಿತ್ ಬ್ಯಾಟಿಂಗ್ ಮಹತ್ವದ್ದಾಯಿತು. ದಶಕಗಳ ಹಿಂದಿನ ರೋಹಿತ್ ಅವರ ಆಟ ಕಣ್ಮುಂದೆ ಬಂದಿತು. ಅವರು ಗಳಿಸಿದ 76 ರನ್‌ಗಳು ಅಭಿಮಾನಿಗಳ ಮನದಲ್ಲಿ ಬಹುಕಾಲದವರೆಗೆ ಹಸಿರಾಗಿರಲಿವೆ.

ನಾಯಕ ರೋಹಿತ್ ಶರ್ಮಾ ಅವರೊಂದಿಗೆ ವರುಣ್ ಚಕ್ರವರ್ತಿ ಪಿಟಿಐ ಚಿತ್ರ

ದೀರ್ಘ ವೇಳಾಪಟ್ಟಿಯ ವಿಶ್ವಕಪ್ ಟೂರ್ನಿಗಳಲ್ಲಿ ಹಲವು ಸವಾಲುಗಳು ಎದುರಾಗಿದ್ದವು. ಟೂರ್ನಿಯ ಮಧ್ಯದಲ್ಲಿ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಗಾಯಗೊಂಡರು. ಇದರಿಂದಾಗಿ ಭಾರತ ತಂಡವು ಸ್ವಲ್ಪಮಟ್ಟಿಗೆ ಆಲ್‌ರೌಂಡರ್ ವಿಭಾಗದಲ್ಲಿ ಸಮಸ್ಯೆಯತ್ತ ವಾಲಿತು. ಬ್ಯಾಟರ್ ಸೂರ್ಯಕುಮಾರ್ ಯಾದವ್ ಮತ್ತು ವೇಗಿ ಮೊಹಮ್ಮದ್ ಶಮಿ ಅವರು ಮಿಶ್ರ ಫಲಿತಾಂಶ ನೀಡಿದರು. ಟಿ20 ವಿಶ್ವಕಪ್‌ನಲ್ಲಿ ತಮ್ಮ ನಿರೀಕ್ಷೆಗೆ ತಕ್ಕಂತೆ ತಂಡ ಕಟ್ಟಿಕೊಳ್ಳುವ ಅವಕಾಶ ಒದಗಿತು. ಆದರೆ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಜಸ್‌ಪ್ರೀತ್ ಬೂಮ್ರಾ ಅವರ ಅಲಭ್ಯತೆ ಕಾಡಿತು. ಹೋದ ವರ್ಷ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಬೂಮ್ರಾ ಸರಣಿಶ್ರೇಷ್ಠರಾಗಿದ್ದರು. ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿಯೂ ಬೂಮ್ರಾ ಅವರ ಬೌಲಿಂಗ್ ಮಟ್ಟ ಉತ್ತುಂಗದಲ್ಲಿತ್ತು.

ಕ್ರಿಕೆಟಿಗ ವಿರಾಟ್ ಕೊಹ್ಲಿ ಮತ್ತು ನಟಿ ಅನುಷ್ಕಾ ಶರ್ಮಾ ದಂಪತಿಯೊಂದಿಗೆ ಭಾರತ ತಂಡದ ಥ್ರೋಡೌನ್ ಸ್ಪೆಷಲಿಸ್ಟ್, ಉತ್ತರ ಕನ್ನಡ ಜಿಲ್ಲೆಯ ರಾಘವೇಂದ್ರ ದಿವಗಿ

ಈ ಪರಿಸ್ಥಿತಿಯಲ್ಲಿಯೂ ಭಾರತ ತಂಡವು ಪ್ರಬಲವಾಗಿ ರೂಪುಗೊಂಡಿದ್ದು ಅಮೋಘ. ಆದರೆ ಈ ಟೂರ್ನಿಯಲ್ಲಿ ಶಮಿ ಅವರು ಮೊದಲಿನಷ್ಟು ಪರಿಣಾಮಕಾರಿಯಾಗಿ ಕಾಣಲಿಲ್ಲ. ಭಾರತವು ತನ್ನ ಇದುವರೆಗಿನ ಏಕದಿನ ಕ್ರಿಕೆಟ್ ಇತಿಹಾಸದಲ್ಲಿ ಮೊದಲ ಸಲ ನಾಲ್ವರು ಸ್ಪಿನ್ನರ್‌ಗಳನ್ನು ಕಣಕ್ಕಿಳಿಸಿತು. ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದ ಪಿಚ್‌ಗೆ ತಕ್ಕಂತೆ ತಂಡವನ್ನು ಸಂಯೋಜನೆ ಮಾಡಿದ್ದರು. ಟೂರ್ನಿಯ ಎಲ್ಲ ಐದು ಪಂದ್ಯಗಳಲ್ಲಿಯೂ ಟಾಸ್ ಸೋತ ನಿರಾಸೆಯನ್ನು ಮೀರಿ ನಿಂತಿತು. ಕೊನೆ ಕ್ಷಣದಲ್ಲಿ ತಮ್ಮ ತಂಡಕ್ಕೆ ಸೇರ್ಪಡೆ ಮಾಡಿಕೊಂಡ ಮ್ಯಾನೇಜ್‌ಮೆಂಟ್ ನಿರ್ಧಾರವನ್ನು ವರುಣ್ ಚಕ್ರವರ್ತಿ ಅವರು ಗಟ್ಟಿಯಾಗಿ ಸಮರ್ಥಿಸಿಕೊಂಡರು.

ಹೈಬ್ರಿಡ್ ಮಾದರಿಯ ಕಾರಣಕ್ಕಾಗಿ ದುಬೈ ಒಂದೇ ತಾಣದಲ್ಲಿ ಭಾರತ ತಂಡವು ಎಲ್ಲ ಪಂದ್ಯಗಳನ್ನು ಆಡಿತು. ಇದು ತಂಡಕ್ಕೆ ಅಜೇಯವಾಗುಳಿಯಲು ಅನುಕೂಲವಾಯಿತೆ? ಇದರಿಂದಾಗಿ ಸತತ ಎರಡನೇ ಐಸಿಸಿ ಪ್ರಶಸ್ತಿ ಗೆದ್ದಿತೇ?

ಈ ಪ್ರಶ್ನೆಗಳಿಗೆ ಹೌದು ಎನ್ನುವವರು ಕಣ್ಣು ತೆರೆಯಿರಿ ಮತ್ತು ನೈಜ ಸಂಗತಿ ಅರಿಯಿರಿ. ಏಕೆಂದರೆ; ‘ಭಾರತ ಶ್ರೇಷ್ಠ ತಂಡ. ಸಂದೇಹವೇ ಇಲ್ಲ’ ಎಂದು ನಾಯಕ ಹೇಳುತ್ತಾರೆ.

ಪಾಕ್ ಪ್ರತಿನಿಧಿಯ ಕಡೆಗಣನೆ: ಪಿಸಿಬಿ ಸಿಡಿಮಿಡಿ

ಲಾಹೋರ್ (ಪಿಟಿಐ): ದುಬೈನಲ್ಲಿ ಚಾಂಪಿಯನ್ಸ್ ಟ್ರೋಫಿಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಿಇಒ ಮತ್ತು ಟೂರ್ನಿಯ ನಿರ್ದೇಶಕ ಸುಮೇರ್ ಅಹ್ಮದ್ ಸೈಯ್ಯದ್ ಅವರನ್ನು ಕಡೆಗಣಿಸಲಾಗಿದೆ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿಯು (ಪಿಸಿಬಿ) ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಗೆ ತನ್ನ ಪ್ರತಿಭಟನೆ ದಾಖಲಿಸಿದೆ.ಅಹ್ಮದ್ ಅವರನ್ನು ಟ್ರೋಫಿ ಪ್ರದಾನ ಸಮಾರಂಭದ ವೇಳೆ ವೇದಿಕೆಗೆ ಕರೆಯದ ಸಂಬಂಧ ಐಸಿಸಿ ನೀಡಿರುವ ವಿವರಣೆಯಿಂದ ಪಿಸಿಬಿ ಅಧ್ಯಕ್ಷ ಮೊಹ್ಸಿನ್ ನಖ್ವಿ ಸಮಾಧಾನಗೊಂಡಿಲ್ಲ ಎಂದು ಪಿಸಿಬಿಯ ಮೂಲ ತಿಳಿಸಿದೆ.

‘ನಖ್ವಿ ಅವರನ್ನು ವೇದಿಕೆಗೆ ಆಮಂತ್ರಿಸಲು ಐಸಿಸಿ ಸಿದ್ಧತೆ ನಡೆಸಿತ್ತು. ಆದರೆ ಅವರು ಫೈನಲ್‌ಗೆ ಬಂದಿಲ್ಲದ ಕಾರಣ ಅದು ತನ್ನ ಯೋಜನೆ ಬದಲಾಯಿಸಿತು’ ಎಂದು ಮೂಲವೊಂದು ತಿಳಿಸಿದೆ. ಈ ಸಮಜಾಯಿಸಿ ತಿರಸ್ಕರಿಸಿರುವ ಪಿಸಿಬಿ, ತನಗೆ ಆತಿಥೇಯ ಸ್ಥಾನಮಾನ ಇದ್ದರೂ ಟೂರ್ನಿಯ ವೇಳೆ ಐಸಿಸಿ ಹಲವು ತಪ್ಪುಗಳನ್ನು ಎಸಗಿದೆ ಎಂದಿದ್ದಾರೆ.

ಭಾರತ– ಬಾಂಗ್ಲಾ ಪಂದ್ಯದ ನೇರ ಪ್ರಸಾರದ ವೇಳೆ ಸಿಟಿ2025 ಲೋಗೊ ಬದಲಾವಣೆ, ಲಾಹೋರಿನಲ್ಲಿ ಆಸ್ಟ್ರೇಲಿಯಾ–ಇಂಗ್ಲೆಂಡ್ ಪಂದ್ಯದ ವೇಳೆ ಭಾರತದ ರಾಷ್ಟ್ರಗೀತೆಯನ್ನು ಕೆಲವು ಸೆಕೆಂಡುಗಳ ಕಾಲ ನುಡಿಸಿದ್ದೂ ಇದರಲ್ಲಿ ಸೇರಿದೆ ಎಂದು ಅದು ಹೇಳಿದೆ. ಪಟ್ಟಿಯಲ್ಲಾದ ವ್ಯತ್ಯಾಸದಿಂದ ಈ ಅಚಾತುರ್ಯ ನಡೆದಿದೆ ಎಂದು ಐಸಿಸಿ ಹೇಳಿತ್ತು.

ಶೋಯಬ್ ಅಖ್ತರ್ ಅಸಮಾಧಾನ

ಕರಾಚಿ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದ ನಂತರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಕಿಸ್ತಾನ ಕ್ರಿಕೆಟ್ ಮಂಡಳಿಯ ಪದಾಧಿಕಾರಿಗಳು ಹಾಜರಾಗದಿರುವುದಕ್ಕೆ ಮಾಜಿ ವೇಗದ ಬೌಲರ್ ಶೋಯಬ್ ಅಖ್ತರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



‘ಭಾರತ ತಂಡವು ಚಾಂಪಿಯನ್ಸ್ ಟ್ರೋಫಿ ಜಯಿಸಿತು. ಆದರೆ ನಾನು ಗಮನಿಸಿದಂತೆ ಪಿಸಿಬಿಯ ಯಾವುದೇ ಪ್ರತಿನಿಧಿಯು ಟ್ರೋಫಿ ಪ್ರದಾನ ಸಮಾರಂಭದಲ್ಲಿ ಹಾಜರಾಗಿರಲಿಲ್ಲ. ಪಾಕಿಸ್ತಾನ್ ಈ ಟೂರ್ನಿಗೆ ಆತಿಥ್ಯ ವಹಿಸಿತ್ತು. ಆದರೂ ಯಾಕೆ ಯಾವ ಪ್ರತಿನಿಧಿಯೂ ಇರಲಿಲ್ಲ? ಇದೊಂದು ವಿಶ್ವಮಟ್ಟದ ವೇದಿಕೆ. ನೀವು (ಪಿಸಿಬಿ) ಅಲ್ಲಿ ಇರಬೇಕಿತ್ತು. ಇದು ನನ್ನ ಯೋಚನೆಗೆ ಮೀರಿದ್ದು. ಆದರೆ ಇದರ ಬಗ್ಗೆ ಗಂಭೀರವಾಗಿ ಚಿಂತಿಸಬೇಕು. ಈ ಪ್ರಕರಣದಿಂದ ನನಗೆ ಬೇಸರವಾಗಿದೆ’ ಎಂದು ಶೋಯಬ್ ‘ಎಕ್ಸ್’ನಲ್ಲಿ ಸಂದೇಶ ಹಾಕಿದ್ದಾರೆ.

ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಅವರು ಭಾರತದ ಆಟಗಾರರಿಗೆ ವೈಟ್ ಜಾಕೆಟ್ ಮತ್ತು ಅಂಪೈರ್‌ಗಳು ಮತ್ತು ರೆಫ್ರಿಗಳಿಗೆ ಪದಕ ಪ್ರದಾನ ಮಾಡಿದರು. ಐಸಿಸಿ ಅಧ್ಯಕ್ಷ ಜಯ್ ಶಾ ಅವರು ನಾಯಕ ರೋಹಿತ್ ಶರ್ಮಾ ಅವರಿಗೆ ಟ್ರೋಫಿ ಪ್ರದಾನ ಮಾಡಿದರಲ್ಲದೇ, ಆಟಗಾರರಿಗೆ ಪದಕ ಪ್ರದಾನ ಮಾಡಿದ್ದರು. ಬಿಸಿಸಿಯ ಕಾರ್ಯದರ್ಶಿ ದೇವಜಿತ್ ಸೈಕಿಯಾ ಮತ್ತು ನ್ಯೂಜಿಲೆಂಡ್ ಕ್ರಿಕೆಟ್ ಸಿಇಒ ರೋಜರ್ ಟೂಸ್ ಅವರೂ ವೇದಿಕೆಯಲ್ಲಿದ್ದರು.

ಭಾರತ ಚಾಂಪಿಯನ್ಸ್ ಟ್ರೋಫಿ 2025 ಪ್ರಶಸ್ತಿ ಮುಡಿಗೇರಿಸಿಕೊಂಡಿದೆ!

ಆಲ್ ಇಂಗ್ಲೆಂಡ್ ಟೂರ್ನಿ ಇಂದಿನಿಂದ ಭಾರತದ ಸ್ಪರ್ಧಿಗಳಿಗೆ ಕಠಿಣ ಸವಾಲು

ಬರ್ಮಿಂಗ್‌ಹ್ಯಾಮ್ (ಪಿಟಿಐ): ಗಾಯದ ಸಮಸ್ಯೆ, ಲಯಕ್ಕೆ ಪರದಾಟ– ಇವೆಲ್ಲದರ ಮಧ್ಯೆ ಭಾರತದ ಬ್ಯಾಡ್ಮಿಂಟನ್‌ಪಟುಗಳು, ಮಂಗಳವಾರ ಇಲ್ಲಿ ಆರಂಭವಾಗಲಿರುವ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್ಸ್‌ನಲ್ಲಿ ಸತ್ವಪರೀಕ್ಷೆ ಎದುರಿಸುತ್ತಿದ್ದಾರೆ.

1980ರಲ್ಲಿ ಪ್ರಕಾಶ್ ಪಡುಕೋಣೆ ಮತ್ತು 2001ರಲ್ಲಿ ಪಿ.ಗೋಪಿಚಂದ್ ಅವರನ್ನು ಬಿಟ್ಟರೆ ಭಾರತದ ಯಾರೂ ಈ ಪ್ರತಿಷ್ಠಿತ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದಿಲ್ಲ. ಒಲಿಂಪಿಕ್ಸ್ ಮತ್ತು ವಿಶ್ವ ಚಾಂಪಿಯನ್‌ಷಿಪ್ ನಂತರದ ಸ್ಥಾನ ಈ ಟೂರ್ನಿಗಿದೆ.

ಹಿಂದಿನ ಎರಡು ದಶಕಗಳಲ್ಲಿ ದೇಶದ ಬ್ಯಾಡ್ಮಿಂಟನ್ ಕ್ಷೇತ್ರದಲ್ಲಿ ಪಿ.ವಿ. ಸಿಂಧು, ಸೈನಾ ನೆಹ್ವಾಲ್ ಮತ್ತು ಕಿದಂಬಿ ಶ್ರೀಕಾಂತ್ ಅವರಂಥ ತಾರೆಗಳು ಉದಯಿಸಿದ್ದಾರೆ. ಈ ತಾರೆಗಳು ಹಲವು ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನೂ ಗೆದ್ದಿದ್ದಾರೆ. ಆದರೆ ಇದುವರೆಗೆ ಯಾರಿಗೂ ಆಲ್ ಇಂಗ್ಲೆಂಡ್ ಪ್ರಶಸ್ತಿ ಗೆಲ್ಲಲು ಸಾಧ್ಯವಾಗಿಲ್ಲ.

ಲಕ್ಷ್ಯ ಸೇನ್

ಈ ಬಾರಿಯೂ ಭಾರತದ ಸ್ಪರ್ಧಿಗಳು ಗಾಯದ ಆತಂಕ ಮತ್ತು ಫಾರ್ಮಿನ ಕೊರತೆ ಮಧ್ಯೆ ಬಂದಿಳಿದಿದ್ದಾರೆ. ಸಿಂಧು ಅವರಿಗೆ ಗಾಯದ ಸಮಸ್ಯೆಯಿದೆ. ಪ್ರಣಯ್ ಅವರು ಚಿಕುನ್‌ಗುನ್ಯಾ ನಂತರ ಎಂದಿನ ಲಯಕ್ಕೆ ಹಿಂದಿರುಗಿಲ್ಲ. ಲಕ್ಷ್ಯ ಸೇನ್ ಅವರೂ ಪರದಾಡುತ್ತಿದ್ದಾರೆ. ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಅವರ ತಂದೆ ಕಳೆದ ತಿಂಗಳು ನಿಧನರಾಗಿದ್ದು, ಅವರೂ ಹಿಂದಿನ ವೈಭವ ಕಾಣುತ್ತಿಲ್ಲ.

ಸ್ನೂಕರ್ ಕ್ಲಾಸಿಕ್: ಪಂಕಜ್‌ಗೆ ಪ್ರಶಸ್ತಿ

ಮುಂಬೈ (ಪಿಟಿಐ): ಹಿನ್ನಡೆಯಿಂದ ಚೇತರಿಸಿಕೊಂಡ ಅನುಭವಿ ಕ್ಯೂಯಿಸ್ಟ್ ಪಂಕಜ್ ಅಡ್ವಾಣಿ, ಸಿಸಿಐ ಸ್ನೂಕರ್ ಕ್ಲಾಸಿಕ್ ಟೂರ್ನಿಯಲ್ಲಿ 8–6 ಫ್ರೇಮ್‌ಗಳಿಂದ ಈಶ್‌ಪ್ರೀತ್ ಛಡ್ಡಾ ಅವರನ್ನು ಸೋಲಿಸಿ ಪ್ರಶಸ್ತಿಗಳ ಹ್ಯಾಟ್ರಿಕ್ ಪೂರೈಸಿದರು.

ಪ್ರಸ್ತುತ ರಾಷ್ಟ್ರೀಯ ಹಾಗೂ ಏಷ್ಯನ್ ಸ್ನೂಕರ್ ಚಾಂಪಿಯನ್ ಆಗಿರುವ ಪಂಕಜ್, ಭಾನುವಾರ ತಡರಾತ್ರಿ ಮುಗಿದ ಫೈನಲ್‌ನಲ್ಲಿ ಒಂದು ಹಂತದಲ್ಲಿ 1–4 ರಿಂದ ಹಿಂದಿದ್ದರು. ಆದರೆ ಅಂತಿಮವಾಗಿ 15–57, 26–101, 18–75, 100–25, 36–93, 118–0, 59–68, 45–77, 64–47, 93–72, 70–60, 75–32, 73–32, 75–47 ರಿಂದ ಈಶ್‌ಪ್ರೀತ್ ಅವರನ್ನು ಸೋಲಿಸಿದರು.

ಮುಂಬೈಗೆ ಮಣಿದ ಗುಜರಾತ್ ಜೈಂಟ್ಸ್

ಮುಂಬೈ (ಪಿಟಿಐ): ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರ ಅರ್ಧಶತಕ (54; 33ಎ, 4X9)ಮತ್ತು ಬೌಲರ್‌ಗಳ ಪರಿಣಾಮಕಾರಿ ದಾಳಿಯ ನೆರವಿನಿಂದ ಮುಂಬೈ ಇಂಡಿಯನ್ಸ್ ತಂಡವು ಸೋಮವಾರ ಮಹಿಳಾ ಪ್ರೀಮಿಯರ್ ಲೀಗ್‌ನ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು 9 ರನ್‌ಗಳಿಂದ ಮಣಿಸಿತು.

ಈ ಗೆಲುವಿನೊಂದಿಗೆ ಮುಂಬೈ ತಂಡವು 10 ಅಂಕಗಳೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಏರಿತು. ಅಷ್ಟೇ ಅಂಕ ಗಳಿಸಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಉತ್ತಮ ರನ್‌ರೇಟ್ ಆಧಾರದಲ್ಲಿ ಅಗ್ರ-ಸ್ಥಾನದಲ್ಲಿ ಮುಂದುವರಿದಿದೆ. ಜೈಂಟ್ಸ್ ಮೂರನೇ ಸ್ಥಾನದಲ್ಲಿದೆ.

ಅಗ್ರಸ್ಥಾನ ಪಡೆಯುವ ತಂಡವು ಫೈನಲ್‌ಗೆ ನೇರ ಅರ್ಹತೆ ಪಡೆಯಲಿದೆ. ಮುಂಬೈ ಇಂಡಿಯನ್ಸ್ ತಂಡವು ಮಂಗಳವಾರ ನಡೆಯುವ ಲೀಗ್‌ನ ಕೊನೆಯ ಪಂದ್ಯದಲ್ಲಿ ರಾಯಲ್‌ಚಾಲೆಂಜರ್ಸ್‌ಬೆಂಗಳೂರುತಂಡವನ್ನುಎದುರಿಸಲಿದೆ. ಈ ಪಂದ್ಯವನ್ನು ಗೆದ್ದು ಅಗ್ರಸ್ಥಾನ ಪಡೆಯುವ ಅವಕಾಶ ಮುಂಬೈ ತಂಡದ ಮುಂದಿದೆ. ಎರಡು ಮತ್ತು ಮೂರನೇ ಸ್ಥಾನ ಪಡೆಯುವ ತಂಡಗಳು ಪ್ಲೇ ಆಫ್‌ನಲ್ಲಿ ಸೆಣಸಲಿವೆ.

ಮಹಿಳಾ ಪ್ರೀಮಿಯರ್ ಲೀಗ್

ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಕೌರ್ ಅವರ ಬ್ಯಾಟಿಂಗ್ ನೆರವಿನಿಂದ ಮುಂಬೈ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 179 ರನ್ ಗಳಿಸಿತು. ಈ ಗುರಿಯನ್ನು ಬೆನ್ನತ್ತಿದ ಜೈಂಟ್ಸ್ ತಂಡವು 20 ಓವರ್‌ಗಳಲ್ಲಿ 170 ರನ್ ಗಳಿಸಿ ಹೋರಾಟ ಮುಗಿಸಿತು.

ಮುಂಬೈ ಬೌಲರ್‌ಗಳ ದಾಳಿಗೆ ಜೈಂಟ್ಸ್ ತಂಡವು ಆರಂಭದಲ್ಲೇ ತತ್ತರಿಸಿತು. 54 ರನ್‌ಗೆ ನಾಲ್ಕು ಪ್ರಮುಖ ವಿಕೆಟ್‌ಗಳನ್ನು ಕಳೆದುಕೊಂಡಿತು. ಈ ಹಂತದಲ್ಲಿ ಭಾರತಿ ಫುಲ್ಮಾಲಿ (61;25ಎ) ಅಬ್ಬರಿಸಿ ತಂಡಕ್ಕೆ ಕೊಂಚ ಚೇತರಿಕೆ ನೀಡಿದರೂ ಗೆಲುವಿಗೆ ಸಾಕಾಗಲಿಲ್ಲ. ಅವರ ಇನಿಂಗ್ಸ್ ಎಂಟು ಬೌಂಡರಿ ಮತ್ತು ನಾಲ್ಕು ಭರ್ಜರಿ ಸಿಕ್ಸರ್ ಒಳಗೊಂಡಿತ್ತು. ಅವರಿಗೆ ಉಳಿದ ಆಟಗಾರ್ತಿಯರಿಂದ ಸಹಕಾರ ಸಿಗಲಿಲ್ಲ. ಹೆಲಿ ಮ್ಯಾಥ್ಯೂಸ್ ಮತ್ತು ಅಮೆಲಿಯಾ ಕೆರ್ ತಲಾ ಮೂರು ವಿಕೆಟ್ ಪಡೆದು ಜೈಂಟ್ಸ್‌ಗೆ ಕಡಿವಾಣ ಹಾಕಿದರು.

ಹರ್ಮನ್‌ಪ್ರೀತ್ ಕೌರ್ ಬ್ಯಾಟಿಂಗ್ –ಪಿಟಿಐ ಚಿತ್ರ

ಇದಕ್ಕೂ ಮೊದಲು ಟಾಸ್ ಗೆದ್ದ ಜೈಂಟ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ಅಮೆಲಿಯಾ ಕೆರ್ ಅವರನ್ನು ಗುಜರಾತ್ ತಂಡದ ನಾಯಕಿ ಆ್ಯಷ್ಲೆ ಗಾರ್ಡನರ್ ರನ್‌ಔಟ್ ಮಾಡಿದರು. 3 ಓವರ್‌ಗಳ ನಂತರ ಹೆಲಿ ಮ್ಯಾಥ್ಯೂಸ್ (27; 22ಎ, 4X3, 6X2) ಅವರನ್ನು ಪ್ರಿಯಾ ಮಿಶ್ರಾ ಔಟ್ ಮಾಡಿದರು. ಈ ಹಂತದಲ್ಲಿ ಕ್ರೀಸ್‌ನಲ್ಲಿದ್ದ ನ್ಯಾಟ್ ಶಿವರ್ ಬ್ರಂಟ್ (38; 31ಎ, 4X6) ಅವರೊಂದಿಗೆ ಸೇರಿಕೊಂಡ ಹರ್ಮನ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 59 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 6ಕ್ಕೆ179(ಹೆಲಿ ಮ್ಯಾಥ್ಯೂಸ್ 27, ನ್ಯಾಟ್ ಶಿವರ್ ಬ್ರಂಟ್ 38, ಹರ್ಮನ್‌ಪ್ರೀತ್ ಕೌರ್ 54, ಅಮನ್ಜೋತ್ ಕೌರ್ 27, ತನುಜಾ ಕನ್ವರ್ 41ಕ್ಕೆ1, ಆ್ಯಷ್ಲೆ ಗಾರ್ಡನರ್ 27ಕ್ಕೆ1). ಗುಜರಾತ್ ಜೈಂಟ್ಸ್: 20 ಓವರ್‌ಗಳಲ್ಲಿ 170 (ಹರ್ಲೀನ್ ಡಿಯೋಲ್ 24, ಭಾರತಿ ಫುಲ್ಮಾಲಿ 61; ಶಬ್ನಿಮ್ ಇಸ್ಮಾಯಿಲ್ 17ಕ್ಕೆ 2, ಹೆಲಿ ಮ್ಯಾಥ್ಯೂಸ್ 38ಕ್ಕೆ 3, ಅಮೆಲಿಯಾ ಕೆರ್ 34ಕ್ಕೆ 3). ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ 9 ರನ್‌ಗಳ ಜಯ. ಪಂದ್ಯದ ಆಟಗಾರ್ತಿ: ಹರ್ಮನ್‌ಪ್ರೀತ್ ಕೌರ್

ಪಾಯಿಂಟ್ಸ್ ಪಟ್ಟಿ

ತಂಡಗಳು	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಡೆಲ್ಲಿ	8	5	3	10	+0.396
ಮುಂಬೈ	7	5	2	10	+0.298
ಗುಜರಾತ್	8	4	4	8	+0.228
ಯು.ಪಿ	8	3	5	6	-0.625
ಆರ್‌ಸಿಬಿ	7	2	5	4	-0.305

ಇಂದಿನ ಪಂದ್ಯ

ರಾಯಲ್ ಚಾಲೆಂಜರ್ಸ್ ಬೆಂಗಳೂರು Vs ಮುಂಬೈ ಇಂಡಿಯನ್ಸ್

ರಾತ್ರಿ:7.30

ಲೈವ್ ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ಯೂತ್ ಅಥ್ಲೆಟಿಕ್ಸ್ ಚಿರಂತ್‌ಗೆ ಸ್ವರ್ಣ

ಬೆಂಗಳೂರು: ಕರ್ನಾಟಕದ ಚಿರಂತ್ ಪಿ. ಅವರು ಇಲ್ಲಿ ಸೋಮವಾರ ಆರಂಭಗೊಂಡ ರಾಷ್ಟ್ರೀಯ ಯೂತ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಬಾಲಕರ 100 ಮೀಟರ್ ಓಟದಲ್ಲಿ ಚಿನ್ನ ಗೆದ್ದರು.

ಚಿರಂತ್ 10.89 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿದರು. ತಮಿಳುನಾಡಿನ ಫ್ರೆಡ್ರಿಕ್ ರಸೆಲ್ (11.04ಸೆ) ಮತ್ತು ಬಿಹಾರದ ದಿವ್ಯಾಂಶ್ ಕುಮಾರ್ ರಾಜ್ (11.08ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಬಾಲಕರ 400 ಮೀಟರ್ ಓಟದಲ್ಲಿ ಕರ್ನಾಟಕದ ಸಯ್ಯದ್ ಸಬೀರ್ (48.06ಸೆ) ಬೆಳ್ಳಿ ಸಾಧನೆ ಮಾಡಿದರು. ಜಾರ್ಖಂಡ್‌ನ ಸಾಕೇತ್ ಮಿಂಜ್ (47.63ಸೆ) ಮತ್ತು ಉತ್ತರ ಪ್ರದೇಶದ ಕದಿರ್ ಖಾನ್ (48.54ಸೆ) ಕ್ರಮವಾಗಿ ಚಿನ್ನ ಮತ್ತು ಕಂಚಿನ ಪದಕ ತಮ್ಮದಾಗಿ-ಸಿಕೊಂಡರು.

ನಿತಿನ್ ದಾಖಲೆ: ಉತ್ತರಪ್ರದೇಶದ ನಿತಿನ್ ಗುಪ್ತಾ ಅವರು ಬಾಲಕರ 5 ಸಾವಿರ ಮೀಟರ್ ನಡಿಗೆಯಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು.

ಐಎಸ್‌ಎಲ್: ಪ್ರವಾಸಿ ತಂಡಕ್ಕೆ ನಿರ್ಣಾಯಕ ಪಂದ್ಯ

ಬಿಎಫ್‌ಸಿಗೆ ಇಂದು ಮುಂಬೈ ಎದುರಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಲೇ ಆಫ್ ಸ್ಥಾನವನ್ನು ಈಗಾಗಲೇ ಖಚಿತಪಡಿಸಿಕೊಂಡಿರುವ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ಮಂಗಳವಾರ ಕಂಠೀರವ ಕ್ರೀಡಾಂಗಣದಲ್ಲಿ ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ ಮುಂಬೈ ಸಿಟಿ ಎಫ್‌ಸಿ ತಂಡವನ್ನು ಎದುರಿಸಲಿದೆ.

ಪಾಯಿಂಟ್ಸ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಸುನಿಲ್ ಚೆಟ್ರಿ ಬಳಗವು ತವರಿನಲ್ಲಿ ಪಾರಮ್ಯ ಮುಂದುವರಿಸಿ, ಮೂರನೇ ಸ್ಥಾನಕ್ಕೆ ಬಡ್ತಿ ಪಡೆಯವತ್ತ ಚಿತ್ತ ಹರಿಸಿದೆ. ಕಳೆದ ನಾಲ್ಕು ಪಂದ್ಯಗಳಲ್ಲಿ ಅಜೇಯವಾಗಿರುವ (3 ಗೆಲುವು, 1 ಡ್ರಾ) ಬಿಎಫ್‌ಸಿ ತಂಡವು ಗುಂಪು ಹಂತದ ಅಭಿಯಾನವನ್ನು ಗೆಲುವಿನೊಂದಿಗೆ ಮುಗಿಸುವ ಛಲದಲ್ಲಿದೆ.

ಏಳನೇ ಸ್ಥಾನದಲ್ಲಿರುವ ಮುಂಬೈ ತಂಡಕ್ಕೆ ಇದು ನಿರ್ಣಾಯಕ ಪಂದ್ಯವಾಗಿದೆ. ಪ್ಲೇ ಆಫ್‌ಗೆ ಅರ್ಹತೆ ಪಡೆಯಲು ಒಂದು ಅಂಕದ ಕೊರತೆಯಿದೆ. ಹೀಗಾಗಿ, ಲೀಗ್‌ನ ಕೊನೆಯ ಪಂದ್ಯದಲ್ಲಿ ಗೆಲುವು ಇಲ್ಲವೇ ಡ್ರಾ ಸಾಧಿಸುವ ಒತ್ತಡದಲ್ಲಿದೆ. ಇದು ಸಾಧ್ಯವಾದರೆ ಆರನೇ ಸ್ಥಾನದಲ್ಲಿರುವ ಒಡಿಶಾ ತಂಡವನ್ನು ಹಿಂದಿಕ್ಕಿ ಮುಂಬೈ ತಂಡವು ನಾಕೌಟ್‌ಗೆ ಮುನ್ನಡೆಯಲಿದೆ.

ಪಾಯಿಂಟ್ಸ್ ಪಟ್ಟಿಯಲ್ಲಿ ಮೊದಲೆರಡು ಸ್ಥಾನದಲ್ಲಿರುವ ಮೋಹನ್ ಬಾಗನ್ ಮತ್ತು ಗೋವಾ ಎಫ್‌ಸಿ ಈಗಾಗಲೇ ಸೆಮಿಫೈನಲ್‌ಗೆ ನೇರ ಅರ್ಹತೆ ಪಡೆದಿವೆ. ಉಳಿದ ಎರಡು ಸ್ಥಾನಕ್ಕಾಗಿ ಮೂರರಿಂದ ಆರನೇ ಸ್ಥಾನದಲ್ಲಿರುವ ತಂಡಗಳ ಮಧ್ಯೆ ಪೈಪೋಟಿ ಏರ್ಪಡಲಿದೆ. ಟೂರ್ನಿಯಲ್ಲಿ ಒಟ್ಟು 13 ತಂಡಗಳು ಸ್ಪರ್ಧೆಯಲ್ಲಿದ್ದವು.

ಬಿಎಫ್‌ಸಿ ನಾಯಕ ಸುನಿಲ್ ಚೆಟ್ರಿ

ಐಎಸ್‌ಎಲ್‌ನಲ್ಲಿ ಈತನಕ ಬಿಎಫ್‌ಸಿ ಮತ್ತು ಮುಂಬೈ ತಂಡಗಳು ಒಟ್ಟು 17 ಬಾರಿ ಮುಖಾಮುಖಿಯಾಗಿದ್ದು, ಒಂಬತ್ತು ಬಾರಿ ಮುಂಬೈ ಜಯಗಳಿಸಿದೆ. ಬೆಂಗಳೂರು ತಂಡವು ಆರು ಬಾರಿ ಗೆಲುವು ಕಂಡಿದೆ. ಎರಡು ಪಂದ್ಯಗಳು ಡ್ರಾ ಆಗಿವೆ. ಕೊನೆಯ ನಾಲ್ಕು ಮುಖಾಮುಖಿಯಲ್ಲಿ ಬೆಂಗಳೂರು ಮೂರರಲ್ಲಿ ಸೋತಿದೆ.

ಅಂತರರಾಷ್ಟ್ರೀಯ ಫುಟ್‌ಬಾಲ್‌ಗೆ ಘೋಷಿಸಿದ್ದ ನಿವೃತ್ತಿಯಿಂದ ಹೊರಬಂದಿರುವ 40 ವರ್ಷ ವಯಸ್ಸಿನ ಸುನಿಲ್ ಚೆಟ್ರಿ ಉತ್ತಮ ಲಯದಲ್ಲಿದ್ದು, ಈ ಆವೃತ್ತಿಯಲ್ಲಿ ಒಟ್ಟು 12 ಗೋಲು ಗಳಿಸಿದ್ದಾರೆ. ಗರಿಷ್ಠ ಗೋಲು ದಾಖಲಿಸಿದವರ ಪಟ್ಟಿಯಲ್ಲಿ ಅವರು ಎರಡನೇ ಸ್ಥಾನದಲ್ಲಿದ್ದಾರೆ. ಮುಂಬೈ ವಿರುದ್ಧ ಇನ್ನು ಒಂದು ಗೋಲು ಹೊಡೆದರೆ, ಐಎಸ್‌ಎಲ್‌ನಲ್ಲಿ ಆ ತಂಡದ ಎದುರು 10 ಗೋಲು ಗಳಿಸಿದ ಮೊದಲ ಆಟಗಾರ ಎಂಬ ಹೆಗ್ಗಳಿಕೆ ಅವರದಾಗಲಿದೆ.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಪೋರ್ಟ್ಸ್ 18

ಇಂಡಿಯನ್ ಸೂಪರ್ ಲೀಗ್: ಪಾಯಿಂಟ್ಸ್ ಪಟ್ಟಿ (ಅಗ್ರ 7 ತಂಡಗಳು)

ತಂಡ	ಪಂದ್ಯ	ಗೆಲುವು	ಡ್ರಾ	ಸೋಲು	ಪಾಯಿಂಟ್ಸ್
ಮೋಹನ್ ಬಾಗನ್	24	17	5	2	56
ಗೋವಾ ಎಫ್‌ಸಿ	24	14	6	4	48
ನಾರ್ತ್‌ಈಸ್ಟ್	24	10	8	6	38
ಬೆಂಗಳೂರು ಎಫ್‌ಸಿ	23	11	5	7	38
ಜೆಮ್‌ಶೆಡ್‌ಪುರ	24	12	2	10	38
ಒಡಿಶಾ ಎಫ್‌ಸಿ	24	8	9	7	33
ಮುಂಬೈ ಸಿಟಿ	23	8	9	6	33

ಸಂಕ್ಷಿಪ್ತ ಸುದ್ದಿ

ಸುಕಾಂತ್, ನಿತೇಶ್‌ಗೆ ಚಿನ್ನದ ಪದಕ

ನವದೆಹಲಿ (ಪಿಟಿಐ): ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ಚಾಂಪಿಯನ್ ನಿತೇಶ್ ಕುಮಾರ್ ಮತ್ತು ಸುಕಾಂತ್ ಕದಂ ಅವರು ಸ್ಪ್ಯಾನಿಷ್ ಪ್ಯಾರಾ ಬ್ಯಾಡ್ಮಿಂಟನ್ ಇಂಟರ್‌ನ್ಯಾಷನಲ್ ಟೂರ್ನಿಯಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ನಿತೇಶ್ ಅವರು ಎಸ್‌ಎಲ್ 3 ವಿಭಾಗದ ಫೈನಲ್‌ನಲ್ಲಿ 21–19, 21–19 ರಿಂದ ಜಪಾನ್‌ನ ದೈಸುಕೆ ಫುಜಿಹಾರ ಅವರನ್ನು ಸೋಲಿಸಿದರು. ಸುಕಾಂತ್ ಅವರು ಎಸ್‌ಎಲ್‌4 ವಿಭಾಗದ ಫೈನಲ್‌ನಲ್ಲಿ 21–13, 21–10 ರಿಂದ ಸ್ವದೇಶದ ತರುಣ್ ಅವರನ್ನು ಹಿಮ್ಮೆಟ್ಟಿಸಿದರು.

ಎಸ್‌ಎಚ್ 6 ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ನಿತ್ಯಶ್ರೀ ಅವರು ಪೋಲೆಂಡ್‌ನ ಸ್ಮಿಜೀಲ್ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದರು.

ನಾಯಕನ ರೇಸ್‌ನಲ್ಲಿ ಅಕ್ಷರ್, ರಾಹುಲ್

ನವದೆಹಲಿ (ಪಿಟಿಐ): ಮುಂಬರುವ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕನ ಪಟ್ಟಕ್ಕಾಗಿ ಆಲ್‌ರೌಂಡರ್ ಅಕ್ಷರ್ ಪಟೇಲ್ ಮತ್ತು ವಿಕೆಟ್ ಕೀಪರ್ ಕೆ.ಎಲ್.ರಾಹುಲ್ ನಡುವೆ ಪೈಪೋಟಿಯಿದೆ.

ಚಾಂಪಿಯನ್ಸ್ ಟ್ರೋಫಿ ಮುಕ್ತಾಯಕ್ಕೆ ಕಾಯುತ್ತಿದ್ದ ಡೆಲ್ಲಿ ಕ್ಯಾಪಿಟಲ್ಸ್ ಇನ್ನು ಕೆಲವೇ ದಿನಗಳಲ್ಲಿ ತಂಡದ ನೂತನ ನಾಯಕನನ್ನು ಘೋಷಿಸಲಿದೆ.

ಡೆಲ್ಲಿ ತಂಡದಲ್ಲಿ ಏಳನೇ ವರ್ಷ ಆಡುತ್ತಿರುವ ಅಕ್ಷರ್ ಪಟೇಲ್, ಐಪಿಎಲ್‌ನಲ್ಲಿ 150 ಪಂದ್ಯಗಳನ್ನು ಆಡಿದ್ದಾರೆ. ರಾಹುಲ್ ಐಪಿಎಲ್‌ನಲ್ಲಿ ಈ ಹಿಂದೆ ನಾಯಕನಾಗಿ ತಂಡವನ್ನು ಮುನ್ನಡೆಸಿದ ಅನುಭವ ಹೊಂದಿದ್ದಾರೆ.

ತಂಬಾಕು, ಮದ್ಯ ಜಾಹೀರಾತುಗಳಿಗೆ ಕಡಿವಾಣ

ನವದೆಹಲಿ: ಐಪಿಎಲ್ ಟೂರ್ನಿಯ ವೇಳೆ ಎಲ್ಲಾ ರೀತಿಯ ತಂಬಾಕು, ಮದ್ಯ ಜಾಹೀರಾತುಗಳನ್ನು ನಿಷೇಧಿಸುವಂತೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಟೂರ್ನಿಯ ಆಯೋಜಕರಿಗೆ ನಿರ್ದೇಶಿಸಿದೆ. ಮಾರ್ಚ್ 22ರಿಂದ ಐಪಿಎಲ್ ಪಂದ್ಯಾವಳಿಗಳು ಪ್ರಾರಂಭವಾಗಲಿವೆ.

ಈ ಸಂಬಂಧ ಐಪಿಎಲ್ ಅಧ್ಯಕ್ಷ ಅರುಣ್ ಧುಮಾಲ್ ಅವರಿಗೆ ಆರೋಗ್ಯ ಸೇವೆಗಳ ಮಹಾನಿರ್ದೇಶಕ ಅತುಲ್ ಗೋಯೆಲ್ ಪತ್ರ ಬರೆದಿದ್ದಾರೆ.

ಆದಾಯ ತೆರಿಗೆ ಎಫ್‌ಸಿಗೆ ಗೆಲುವು

ಬೆಂಗಳೂರು: ಆದಾಯ ತೆರಿಗೆ ಎಫ್‌ಸಿ ತಂಡ ಎ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ 2–1 ಗೋಲುಗಳಿಂದ ಜವಾಹರ್ ಯುನಿಯನ್ ಎಫ್‌ಸಿ ತಂಡವನ್ನು ಮಣಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆದಾಯ ತೆರಿಗೆ ಎಫ್‌ಸಿ ತಂಡದ ಪಾಂಡ್ಯನ್ ಎಂ. (38ನೇ ನಿ.), ಪ್ರಶಾಂತ್ ಕಳಿಂಗ (73ನೇ ನಿ.) ಗೋಲು ಗಳಿಸಿದರು. ಜವಾಹರ್ ತಂಡದ ಕಾಮ್ಮಿನಿಲಿಯಾನ್ ವಾಯ್‌ಫಿ (36ನೇ ನಿ.) ಗೋಲು ಬಾರಿಸಿದರು.

ಇನ್ನೊಂದು ಪಂದ್ಯದಲ್ಲಿ ಬಿಟಿಎಂಎಫ್‌ಸಿ 3–0 ಗೋಲುಗಳಿಂದ ಯಂಗ್ ಚಾಲೆಂಜರ್ಸ್ ಎಫ್‌ಸಿ ವಿರುದ್ಧ ಭರ್ಜರಿ ಗೆಲುವು ದಾಖಲಿಸಿತು.

mahindra with you hamesha 1800-209-6006 xmart UDAY ಹತ್ತು ಲಕ್ಷ ರೂಪಾಯಿಗಳ ಅಪಘಾತ ವಿಮೆ

ತೋರಿಸಿರುವ ಆ್ಯಕ್ಸೆಸರೀಸ್, ಸ್ಟ್ಯಾಂಡರ್ಡ್ ಎಕ್ವಿಪ್‌ಮೆಂಟ್‌ನ ಭಾಗಗಳಲ್ಲ. ನಿಬಂಧನೆಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ.

SIDDHANTH MOTORS: GARVE BHAVI PAYLA, SINGSANDRA, ANEKAL, ATTIBELE, HOSKOTE, BANGARPET, YESHWANTHPUR, DABBASPET - 8448481362, ANANT CARS AUTO PVT LTD.: MYSORE ROAD, K R PURAM, RAMNAGAR, MALUR, H CROSS, HUNASAMARANAHALLI - 9900077177, PPS MOTORS: KENGERI, KANAKAPURA TOWN, DEVANAHALLI, CHINTAMANI, HBR LAYOUT, KANAKAPURA ROAD, NELMANGALA, TAVAREKERE - 630955517, INDIA GARAGE BANGALORE: LALBAGH ROAD, YESHWANTPUR, KOLAR, CHIKKABALLAPURA, PEENYA, BIDADI, NELAMANGALA - 8073158096.